Date:06.03.2023

**Finance Section**

**7.1.19 The Institution Maintains complete transparency in its Financial, Academic, Administrative & Auxiliary functions.**

| Sl.No. | Particular's | Links |
|---|---|---|
| 01. | Financial | SBICollect https://www.onlinesbi.sbi/sbicollect/payment/listcategory.htm |
| 02. | Academic | E-office-eofficeuni.karnataka.gov.in |
| 03. | Administrative | UUCMS-uucms.karnataka.gov.in |
| 04. | Auxiliary Function | PFMS-pfms.nic.in |

**Response-**

Our institution, in its working ensures complete transparency in all its functions. We undertake the following measuresin the various fields of work to ensure transparency:

**1.Financial Functions:**

In the office, we have computerized financial account automation software system which has been activated since 2010 to ensure transparency in financial functions. We conducted internal audit from the state audit officers and submitted to the state audit Office.

For ensuring transparency in purchase, we have a purchase committee. After receiving requirements from the concerned department, the university published tender in the daily newspaper and scrutinized the quotation. The requireditems are purchased through the purchase committee.

Financial transaction is done through the Cheques and RTGS facilities. Daily Fee Collection is credited in bank account regularly. Cashbook, Ledger Book and Vouchers File are maintained. University has joint bank accounts with the signature authority of the finance officer. All the bills are paid only through the NEFT & RTGS.

**2.Academic Functions:**

The university constituted different committees for smooth academic function i.e. IQAC, Academic Audit Committee, Admission Committee, Examination Committee and Time-Table Committee. The main responsibility of these committees is to ensure transparency in academic functions in addition to the heads of the Faculty and Departments. Admission process is completely transparent. Merit lists are displayed on notice board and university website. The reservation policy is followed as per the government norms.

DEPUTY FINANCE OFFICER
KARNATAKA SAMSKRIT UNIVERSITY
BANGALORE-560018

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2018-19 ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬಂದ ಆಕ್ಷೇಪಣೆಗಳು ಹಾಗೂ ವಸೂಲಾತಿ ಪ್ರಕರಣಗಳ ತಃಖ್ತೆ.**

| ಕ್ರ. ಸಂ | ಕಂಡಿಕೆ | ವಿವರಗಳು | ಆಕ್ಷೇಪಣೆ ಮೊತ್ತ (ರೂ.ಗಳಲ್ಲಿ) | ವಸೂಲಾತಿ (ರೂ.ಗಳಲ್ಲಿ) |
|---|---|---|---|---|
| 1. | 6 | ಬೇಡಿಕೆ ಹುಂಡಿಗಳನ್ನು ನಗದೀಕರಿಸಿಕೊಳ್ಳದೇ ಉಳಿಸಿಕೊಂಡಿರುವುದು. | – | 4,66,289.00 |
| 2. | 7 | ನಗದೀಕರಣಗೊಳ್ಳದಿರುವ ಧನಾದೇಶಗಳನ್ನು ಪರಿಶೀಲಿಸಿ, ಲೆಕ್ಕ ಸಮನ್ವಯಗೊಳಿಸದಿರುವುದು. | 1,37,053.00 | – |
| 3. | 12 | ಹೂಡಿಕೆಗಳಿಂದ ಅರ್ಜಿಸಿರುವ ಬಡ್ಡಿಗಳ ಮೇಲಿನ ಆದಾಯ ತೆರಿಗೆಯ ಮೊತ್ತವು ಜಮೆಯಾಗದಿರುವುದು. | – | 6396.00 |
| 4. | 13 | ಅಮಾನತು ಖಾತೆಯಲ್ಲಿ (Suspense Account) ಲಭ್ಯವಿರುವ ಮೊತ್ತ. | 15,635.00 | – |
| 5. | 24 | ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳ ಪ್ರವೇಶ ಶುಲ್ಕ ಮರುಭರಣ ಮಾಡಿಕೊಳ್ಳದೇ ಇರುವುದು. | – | 7,45,695.00 |
| 6. | 26 | ವಿಳಂಬವಾಗಿ ಆಸ್ತಿ ತೆರಿಗೆಯ ಮೇಲಿನ ದಂಡ ಮತ್ತು ಬಡ್ಡಿಯ ಮೊತ್ತವನ್ನು ಪಾವತಿಸಿರುವುದು. | – | 30,181.00 |
| 7. | 27 | ಕಾನೂನು ಸಲಹೆಗಾಗಿ ವಕೀಲರಿಗೆ ಮೊತ್ತವನ್ನು ಪಾವತಿಸಿರುವುದು. | 2,80,000.00 | – |
| 8. | 28 | ಆಸ್ತಿಗಳ ಸೃಜನೆಗೆ ಬಿಡುಗಡೆಯಾದ ಸಹಾಯಾನುದಾನವನ್ನು ಮಾರ್ಗ ಪಲ್ಲಟ (Diversion of fund)ಮಾಡಿ ಇತರೆ ಖರ್ಚುಗಳಿಗೆ ಬಳಸಿಕೊಂಡಿರುವುದು. | 2,20,83,714.00 | – |
| 9. | 29(ii) | ಪಾಠಶಾಲೆಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವೇತನ ಹಾಗೂ ಭತ್ಯೆಗಳನ್ನು ಪಾವತಿಸಿರುವ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸದಿರುವ ಮೊತ್ತ ಆಕ್ಷೇಪಣೆ. | 46,49,631.00 | – |
| 10. | 30 | "ಶ್ರೀ ದೊರೆಸ್ವಾಮಿ, ಮುಖ್ಯ ಶಿಕ್ಷಕರು, ಶ್ರೀ ಚಂದ್ರಮೌಳೀಶ್ವರ ಮಲ್ಲಿಕಾರ್ಜುನಸ್ವಾಮಿ ಸಂಸ್ಕೃತ ಪಾಠಶಾಲೆ ಇವರಿಗೆ ಹಿಂಬಾಕಿ ಮೊತ್ತವನ್ನು ಪಾವತಿಸಿರುವುದು. | – | 6,58,845.00 |
| 11. | 31 | ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಬಿಡುಗಡೆಯಾದ ಮೊತ್ತವನ್ನು ಬಳಕೆ ಮಾಡದಿರುವುದು. | 16,80,923.00 | – |
| 12. | 32 | ಡಾ. ಶ್ರೀನಿವಾಸ ವರಖೇಡಿ, ಪ್ರಾಧ್ಯಾಪಕರು ಇವರ ಪಿಂಚಣಿ ವಂತಿಗೆ ಮತ್ತು ರಜಾ ವೇತನ ವಂತಿಗೆಯನ್ನು ವಸೂಲಿಸಿ ವಿಶ್ವವಿದ್ಯಾಲಯದ ಖಾತೆಗೆ ಜಮೆ ಮಾಡದಿರುವುದು. | – | 2,74,609.00 |

| | | | | |
|---|---|---|---|---|
| 13. | 33 | ಶ್ರೀಮತಿ ಹೆಚ್.ಪಿ. ಜ್ಯೋತಿ, ಯೋಜನಾ ಸಹಾಯಕರು ಇವರಿಗೆ ರಜಾ ಅವಧಿಯಲ್ಲಿ ವಾರ್ಷಿಕ ವೇತನ ಬಡ್ತಿಯ ಆರ್ಥಿಕ ಸೌಲಭ್ಯಗಳನ್ನು ನೀಡಿರುವುದು. | – | 5,910.00 |
| 14. | 34 | ಆರ್ಥಿಕ ಪರಿನಿಯಮಗಳನ್ನು ರಚಿಸಿಕೊಳ್ಳದೇ ಕುಲಸಚಿವರಿಗೆ ಹಾಗೂ ಹಣಕಾಸು ಅಧಿಕಾರಿಗಳಿಗೆ ಗೃಹ ಪರಿಚಾರಿಕೆ ಭತ್ಯೆ ಪಾವತಿಸಿರುವುದು. | 72,000.00 | – |
| 15. | 35 | ಅವಶ್ಯವಿಲ್ಲದೇ ಅಡುಗೆ ಸಹಾಯಕರನ್ನು ನೇಮಕಾತಿ ಮಾಡಿ ಮೊತ್ತವನ್ನು ಪಾವತಿಸಿರುವುದು. | – | 2,39,935.00 |
| 16. | 36 | ಶ್ರೀ ಸಿದ್ದಯ್ಯ ಎಸ್. ವಿಶ್ರಾಂತಿ ಗೃಹ ಮೇಲ್ವಿಚಾರಕ ಇವರಿಗೆ ನಿಯಮಬಾಹಿರವಾಗಿ ವೇತನ ಮತ್ತು ವೇತನ ಶ್ರೇಣಿಯನ್ನು ಪರಿಷ್ಕರಿಸಿ ಮೊತ್ತವನ್ನು ಪಾವತಿಸಿರುವುದು. | – | 1,39,192.00 |
| 17. | 37 | ಪರೀಕ್ಷಾ ಸಂಬಂಧಿ ಕಾರ್ಯಗಳನ್ನು ನಿರ್ವಹಿಸಿದ ಅಧ್ಯಾಪಕರುಗಳಿಗೆ ಮತ್ತು ಸಿಬ್ಬಂದಿಗಳು ಸಲ್ಲಿಸಿರುವ ಪ್ರಯಾಣಭತ್ಯೆ, ದಿನಭತ್ಯೆ ಹಾಗೂ ಸಂಭಾವನೆಯ ಬಿಲ್ಲುಗಳನ್ನು ಸೂಕ್ತವಾಗಿ ಪರಿಶೀಲಿಸದೇ ಪಾವತಿಸಿರುವುದು. | 7,25,079.00 | – |
| 18. | 38 | ವಿಶ್ವವಿದ್ಯಾಲಯವು ಅಧಿಕಾರಿ/ ಸಿಬ್ಬಂದಿಗಳಿಗೆ ಪಾವತಿಸಿರುವ ಪ್ರಯಾಣ ಭತ್ಯೆ ಬಿಲ್ಲುಗಳನ್ನು ಸೂಕ್ತವಾಗಿ ಪರಿಶೀಲಿಸದೇ ಪಾವತಿಸಿರುವುದು. | 5,84,992.00 | – |
| 19. | 39 | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮಗಳನ್ವಯ ಟೆಂಡರ್ ಕರೆಯದೇ ಪರೀಕ್ಷಾ ಮುದ್ರಣಾ ಕಾರ್ಯಗಳಿಗೆ ಸಂಬಂಧಿಸಿದಂತೆ M/s Mehra computers, Chennai ಇವರಿಗೆ ಮೊತ್ತವನ್ನು ಪಾವತಿಸಿರುವುದು. | 66,86,903.00 | – |
| 20. | 40 | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮಗಳನ್ವಯ ಟೆಂಡರ್ ಕರೆಯದೇ ವಿಶ್ವವಿದ್ಯಾಲಯದ ಕಂಪ್ಯೂಟರ್, ಲ್ಯಾಪ್‌ಟಾಪ್ ಹಾಗೂ ಪ್ರಿಂಟರ್‌ಗಳ ವಾರ್ಷಿಕ ನಿರ್ವಹಣೆಯ ಮೊತ್ತವನ್ನು ಪಾವತಿಸಿರುವುದು. | 2,05,519.00 | – |
| 21. | 41 | ವಿಶ್ವವಿದ್ಯಾಲಯದಲ್ಲಿ ಲೆಕ್ಕ ನಿರ್ವಹಣೆಗೆ ಲೆಕ್ಕತಜ್ಞರನ್ನು ನೇಮಿಸಿಕೊಂಡು ಭದ್ರತಾ ಠೇವಣಿಯನ್ನು ಕಟಾಯಿಸದಿರುವುದು. | – | 19,250.00 |
| 22. | 42 | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮಗಳನ್ವಯ ಟೆಂಡರ್ ಕರೆಯದೇ ಕರ್ನಾಟಕ ಆಫ್‌ಸೆಟ್ ಪ್ರಿಂಟರ್ಸ್‌ರವರಿಗೆ ಮೊತ್ತ ಪಾವತಿಸಿರುವುದು. | 3,50,488.00 | – |
| 23. | 43 | ಸರ್ಕಾರದ ಆದೇಶಗಳು ಹಾಗೂ ಮಾರ್ಗಸೂಚಿಗಳನ್ನು ಉಲ್ಲಂಘಿಸಿ, ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ನೂತನ ಕಾರನ್ನು ಖರೀದಿಸಿರುವುದು. | 11,63,768.00 | – |

| | | | | |
|---|---|---|---|---|
| 24. | 44 | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮಗಳನ್ವಯ ಟೆಂಡರ್ ಕರೆಯದೇ "SA manpower services Pvt Ltd" ಬೆಂಗಳೂರು ಇವರಿಂದ ಹೊರಗುತ್ತಿಗೆ ಅಧಾರದಲ್ಲಿ ಸಿಬ್ಬಂದಿ ಸೇವೆ ಪಡೆದು ಮೊತ್ತವನ್ನು ಪಾವತಿಸಿರುವುದು. | 8,54,650.00 | 6,288.00 |
| 25. | 45 | ವಿವಿಧ ಸಂಸ್ಥೆಗಳಿಂದ ಸರಕುಗಳನ್ನು ಮತ್ತು ಸೇವೆಗಳನ್ನು ಪಡೆದುಕೊಂಡು ಬಿಲ್ಲಿನಲ್ಲಿ GST ಮೊತ್ತವನ್ನು ಕಟಾವಣೆ ಮಾಡದಿರುವುದು. | – | 62,607.00 |
| 26. | 46 | ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳ ಮುದ್ರಣ ಮತ್ತು ವಿತರಣೆಯನ್ನು ನಿಯಮಾನುಸಾರ ಕೈಗೊಳ್ಳದಿರುವುದು.<br>(ರೂ: 7676+23800+9000) | – | 40476.00 |
| 27. | 47 | "Construction of College Building at Karnataka Sanskrit Univerisity" Bengaluru ಈ ಕಾಮಗಾರಿಯನ್ನು ನಿಯಮಾನುಸಾರ ಕೈಗೊಳ್ಳದಿರುವುದು. | 40,00,000.00 | – |
| 28. | 48 | ವಿದ್ಯಾರ್ಥಿ ನಿಲಯ ನಿರ್ಮಾಣ, ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು ಈ ಕಾಮಗಾರಿಯ ಪಾವತಿಯ ನ್ಯೂನತೆಗಳು. | 60,00,000.00 | 1,20,000.00 |
| 29. | 49 | "ಪ.ಜಾ/ಪ.ಪಂ ವಿದ್ಯಾರ್ಥಿಗಳ ವಿದ್ಯಾರ್ಥಿನಿಲಯ ನಿರ್ಮಾಣ ಶ್ರೀ ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು ಈ ಕಾಮಗಾರಿಯ ನ್ಯೂನತೆಗಳ ಮೊತ್ತ ಆಕ್ಷೇಪಣೆ ಮತ್ತು ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತ ವಸೂಲಾತಿ. | 50,00,000.00 | 90,000.00 |
| 30. | 50 | "Construction of meeting hall & V.C. Chamber Building (1st Floor) ಈ ಕಾಮಗಾರಿಯ ಪಾವತಿಯ ನ್ಯೂನತೆಗಳ ಮೊತ್ತ ಆಕ್ಷೇಪಣೆ ಮತ್ತು ವಸೂಲಾತಿ. | 40,00,000.00 | 80,000.00 |
| 31. | 51 | ಕಾಮಗಾರಿಯ ವಿಳಂಬಕ್ಕೆ ದಂಡ ಶುಲ್ಕ ವಿಧಿಸದಿರುವ ಮೊತ್ತ ವಸೂಲಾತಿ. | – | 15,00,000.00 |
| 32. | 52 | ಶ್ರೀ ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು ಇಲ್ಲಿ ನಿರ್ಮಿಸುತ್ತಿರುವ ನೂತನ ವಿದ್ಯಾರ್ಥಿನಿಲಯದ ಸಂಬಂಧ ಕಾರ್ಮಿಕ ಕಲ್ಯಾಣ ಕರವನ್ನು ವಿಶ್ವವಿದ್ಯಾಲಯದಿಂದ ಪಾವತಿಸಿರುವುದು. | – | 1,62,162.00 |
| 33. | 56 | ವಿದ್ಯಾರ್ಥಿ ವೇತನದ ಮೊತ್ತವನ್ನು ಪೂರ್ಣವಾಗಿ ಹಂಚಿಕೆ ಮಾಡದೇ ಬಾಕಿ ಉಳಿಸಿಕೊಂಡಿರುವುದು. | 27,52,900.00 | – |

| | | | | |
|---|---|---|---|---|
| 34. | 60 (i) | ಸಂಸ್ಕೃತ ಸಂಶೋಧನಾ ಅಕಾಡೆಮಿಯು ಮುಂಗಡ ಪಾವತಿಸಿರುವ ಮೊತ್ತ ಆಕ್ಷೇಪಣೆ. | 85,000.00 | – |
| 35. | 61 | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮಗಳನ್ವಯ ಟೆಂಡರ್ ಕರೆಯದೇ ಎಸ್.ಎ ಮ್ಯಾನ್‌ಪವರ್ ಸರ್ವಿಸ್ ಲಿ. ಸಂಸ್ಥೆಯಿಂದ ಪಡೆದ ಹೊರಗುತ್ತಿಗೆ ಸೇವೆಯ ಪಾವತಿ ಮೊತ್ತ ಆಕ್ಷೇಪಣೆ ಹಾಗೂ ಜಿ.ಎಸ್.ಟಿ. ಕಟಾಯಿಸದ ಮೊತ್ತ ವಸೂಲಾತಿ. | 13,78,096.00 | 16,095.00 |
| 36. | 62 | ಸಂಸ್ಕೃತ ಸಂಶೋಧನಾ ಸಂಸತ್, ಮೇಲುಕೋಟೆ ಸಂಸ್ಥೆಯ ನಿರ್ದೇಶಕರಾದ ಡಾ॥ ವೀರನಾರಾಯಣ ಎನ್.ಕೆ. ಪಾಂಡುರಂಗಿ ಇವರಿಗೆ ದಿನಭತ್ಯೆ ಮೊತ್ತವನ್ನು ಪಾವತಿಸಿರುವುದು. | 17,824.00 | – |
| 37. | 63 | ಬೋಧಕರ ಸಂಶೋಧನಾ ಯೋಜನೆಗಳಿಗಾಗಿ ಸ್ವೀಕೃತವಾದ ಅನುದಾನವನ್ನು ನಿರ್ವಹಿಸಿದ ಖಾತೆಯ ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಒದಗಿಸದಿರುವುದು. | 12,94,652.00 | |
| 38. | 64 | ವಿಶ್ವವಿದ್ಯಾಲಯವು ಅತಿಥಿ ಉಪನ್ಯಾಸಕರ ಸೇವೆಯನ್ನು ಪಡೆದುಕೊಂಡಿರುವುದು | 40,000.00 | |
| | | **ಒಟ್ಟು ರೂ.** | **6,40,58,827.00** | **46,63,930.00** |

ಅಪರ ನಿರ್ದೇಶಕರು
ಬೆಂಗಳೂರು ಪ್ರಾಂತೀಯ ಕಛೇರಿ
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು
ಲೆಕ್ಕಪತ್ರ ಇಲಾಖೆ,
ಬೆಂಗಳೂರು

## ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2018–19 ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ

**1. ಪೀಠಿಕೆ :**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮ 2009ರ ಕಾಲಂ 41, ಕಾಲಂ 7(iv) ರನ್ವಯ 2010 ರಿಂದ ಅಸ್ತಿತ್ವಕ್ಕೆ ಬಂದಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ಶಾಸ್ತ್ರೀಯವಾಗಿ ಸಂಸ್ಕೃತ ಕಲಿಕೆ ಪದ್ಧತಿಯನ್ನು ಉಳಿಸಿಕೊಳ್ಳಲು, ಸಾಂಪ್ರದಾಯಿಕ ಹಾಗೂ ಆಧುನಿಕ ಕಲಿಕೆ ಪದ್ಧತಿ ನಡುವಿನ ಅಂತರ ಕಡಿಮೆಗೊಳಿಸುವುದು, ಸಂಸ್ಕೃತ ಭಾಷೆ, ಸಾಹಿತ್ಯ, ವೇದಿಕ ಅಧ್ಯಯನ ಮತ್ತು ಶಾಸ್ತ್ರಗಳ ಅಧ್ಯಯನಗಳ ಬಗ್ಗೆ ಸೂಕ್ತ ಮತ್ತು ವ್ಯವಸ್ಥಿತವಾದ ಶಿಕ್ಷಣ, ತರಬೇತಿ ಮತ್ತು ಸಂಶೋಧನೆಗಳನ್ನು ನಡೆಸುವ ಉದ್ದೇಶವನ್ನು ವಿಶ್ವವಿದ್ಯಾಲಯವು ಹೊಂದಿರುತ್ತದೆ.

**ಅ) 2018–19ನೇ ಸಾಲಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಯೋಜನೆಗೆ ಒಳಪಟ್ಟ ಕಾಲೇಜುಗಳು ಹಾಗೂ ಪಾಠಶಾಲೆಗಳ ವಿವರ:**

- ವಿಶ್ವವಿದ್ಯಾಲಯದ ಘಟಕ ಸ್ನಾತಕ/ಸ್ನಾತಕೋತ್ತರ ಕಾಲೇಜುಗಳು – 02
- ಸರ್ಕಾರಿ ಸಂಸ್ಕೃತ ಕಾಲೇಜು, ಮೇಲುಕೋಟೆ – 01
- ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ಅನುದಾನಿತ ಸ್ನಾತಕ/ಸ್ನಾತಕೋತ್ತರ ಸಂಸ್ಕೃತ ಕಾಲೇಜುಗಳು–10
- ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ಅನುದಾನಿತ ಇಂಟಿಗ್ರೇಟೆಡ್ ಕನ್ನಡ ಪಂಡಿತ ಕಾಲೇಜು– 01
- ವಿಶ್ವವಿದ್ಯಾಲಯ ಮಾನ್ಯತೆ ಪಡೆದ ಅನುದಾನ ರಹಿತ ಸ್ನಾತಕ/ಸ್ನಾತಕೋತ್ತರ ಸಂಸ್ಕೃತ ಕಾಲೇಜುಗಳು– 18
- ಒಟ್ಟು ವಿದ್ಯಾರ್ಥಿಗಳು – 2598
- **ಪಾಠಶಾಲೆಗಳು:** ಅನುದಾನಿತ ಸಂಸ್ಕೃತ ಪಾಠಶಾಲೆಗಳು – 281
  ಅನುದಾನರಹಿತ ಸಂಸ್ಕೃತ ಪಾಠಶಾಲೆಗಳು – 349
  ಒಟ್ಟು ವಿದ್ಯಾರ್ಥಿಗಳ ಸಂಖ್ಯೆ – 42,820
- **ವಲಯಗಳು:**
  1. ಬೆಂಗಳೂರು ವಲಯ
  2. ಮೈಸೂರು ವಲಯ
  3. ಗುಲ್ಬರ್ಗಾ ವಲಯ
  4. ಚಿತ್ರದುರ್ಗ ವಲಯ
  5. ಧಾರವಾಡ ವಲಯ
  6. ಬೆಳಗಾವಿ ವಲಯ
- **ವಿಶ್ವವಿದ್ಯಾಲಯದಲ್ಲಿ ನಡೆಯುವ ತರಗತಿಗಳು**
  1. ಪಿ.ಜಿ. ಡಿಪ್ಲೋಮಾ ಇನ್ ಹಸ್ತಪ್ರತಿ ಶಾಸ್ತ್ರ
  2. ಡಿಪ್ಲೋಮಾ ಇನ್ ಸಂಸ್ಕೃತ
  3. ಸರ್ಟಿಫಿಕೇಟ್ ಕೋರ್ಸ್ ಇನ್ ಸಂಸ್ಕೃತ
  4. ಬಿ.ಎ. (ಸಂಸ್ಕೃತ) ತರಗತಿಗಳು
  5. **ಎಂ.ಎ. ತರಗತಿಗಳು – ವಿಭಾಗವಾರು**
     ಭಾಷಾ ನಿಕಾಯ – ಭಾಷೆ ಮತ್ತು ಸಾಹಿತ್ಯ, ಹಸ್ತಪ್ರತಿ ಶಾಸ್ತ್ರ
     ಶಾಸ್ತ್ರ ನಿಕಾಯ – ವ್ಯಾಕರಣ ಶಾಸ್ತ್ರ, ಅಲಂಕಾರ ಶಾಸ್ತ್ರ, ನ್ಯಾಯ ಶಾಸ್ತ್ರ
     ವೇದಾಂತ ನಿಕಾಯ – ವೇದಾಂತ ವಿಭಾಗ
  6. ಪಿ.ಜಿ. ಡಿಪ್ಲೋಮಾ ಇನ್ ಶಾಬ್ದಬೋಧ
  7. ಎಂ. ಫಿಲ್. ತರಗತಿಗಳು (ವಿಶಿಷ್ಟಾಚಾರ್ಯ)
  8. ಪಿ.ಹೆಚ್.ಡಿ. (ವಿದ್ಯಾವಾರಿಧಿ)

- **ನಿಕಾಯಗಳ ವಿವರ:**
    1. ಭಾಷಾ ನಿಕಾಯ
    2. ಶಾಸ್ತ್ರ ನಿಕಾಯ
    3. ವೇದಾಂತ ನಿಕಾಯ
- **ವಿಶ್ವವಿದ್ಯಾಲಯ ನೀಡುವ ಪದವಿಗಳು:**
    1. ಬಿ.ಎ. (ಸಂಸ್ಕೃತ) ಪಠ್ಯಕ್ರಮದ ಅವಧಿ 03 ವರ್ಷಗಳು
    2. ಎಂ.ಎ. (ಸಂಸ್ಕೃತ) ಪಠ್ಯಕ್ರಮದ ಅವಧಿ 02 ವರ್ಷಗಳು (4 ಸೆಮಿಸ್ಟರ್)
- 1) ಮಾನ್ಯತೆ ಪಡೆದ ಸಂಶೋಧನ ಕೇಂದ್ರಗಳು – 17

  2) ಯೋಗ ಕೇಂದ್ರಗಳು – 04

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಮಂಜೂರಾದ/ಭರ್ತಿಯಾದ ಹಾಗೂ ಖಾಲಿ ಇರುವ ಹುದ್ದೆಗಳ ವಿವರ :**

ವಿಶ್ವವಿದ್ಯಾಲಯವು ನೀಡಿರುವ ದೃಢೀಕೃತ ಮಾಹಿತಿಯಂತೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಮಂಜೂರಾದ/ಭರ್ತಿಯಾದ ಹಾಗೂ ಖಾಲಿ ಇರುವ ಹುದ್ದೆಗಳ ವಿವರಗಳು ಕೆಳಕಂಡಂತಿರುತ್ತವೆ.

| ಕ್ರ. ಸಂ. | ವಿವರಗಳು | ಮಂಜೂರಾದ ಹುದ್ದೆಗಳು | | | ಭರ್ತಿಯಾಗಿರುವ ಹುದ್ದೆಗಳು | | | ಖಾಲಿ ಇರುವ ಹುದ್ದೆಗಳು | | |
|---|---|---|---|---|---|---|---|---|---|---|
| | | ಯುಜಿಸಿ | ರಾಜ್ಯವೇತನ | ಒಟ್ಟು | ಯುಜಿಸಿ | ರಾಜ್ಯವೇತನ | ಒಟ್ಟು | ಯುಜಿಸಿ | ರಾಜ್ಯವೇತನ | ಒಟ್ಟು |
| 1 | ಬೋಧಕ | 45 | 26 | 71 | 23 | 17 | 40 | 22 | 9 | 31 |
| 2 | ಬೋಧಕೇತರ | 11 | 51 | 62 | 03 | 33 | 36 | 8 | 18 | 26 |
| | ಒಟ್ಟು | **56** | **77** | **133** | **26** | **50** | **76** | **30** | **27** | **57** |

ವಿಶ್ವವಿದ್ಯಾಲಯವು ಮಂಜೂರಾದ ಹುದ್ದೆಗಳು, ಭರ್ತಿಯಾಗಿರುವ ಹುದ್ದೆಗಳು ಹಾಗೂ ಖಾಲಿ ಇರುವ ಹುದ್ದೆಗಳು ಹಾಗೂ ಸದರಿ ಹುದ್ದೆಗಳಿಗೆ ನಿಗದಿಪಡಿಸಿರುವ ವೇತನ ಶ್ರೇಣಿಯನ್ನು ಒಳಗೊಂಡ, ಶ್ರೇಣಿ ವಹಿಯನ್ನು ನಿರ್ವಹಿಸಿರುವುದಿಲ್ಲ. ಆದ್ದರಿಂದ ಇನ್ನು ಮುಂದೆ ಸದರಿ ವಹಿಯನ್ನು ನಿರ್ವಹಿಸಿ, ಮುಂದಿನ ಲೆಕ್ಕಪರಿಶೋಧನೆಗೆ ಒದಗಿಸುವಂತೆ ತಿಳಿಸಿದೆ.

## 2. ಲೆಕ್ಕ ಪರಿಶೋಧನಾ ವ್ಯಾಪ್ತಿ:

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009 ರ ಕಲಂ 57 (3) ರನ್ವಯ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲು ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನಾ ಇಲಾಖೆ, ಬೆಂಗಳೂರು ಇವರಿಗೆ ಅಧಿಕಾರ ವಹಿಸಲಾಗಿರುತ್ತದೆ.

ಅದರಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2018–19 ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಹಣಕಾಸು ಸಮಿತಿ ಪರಿಶೀಲಿಸಿ, ದಿನಾಂಕ: 07.06.2019 ರಂದು ಅನುಮೋದಿಸಿ ಶಿಫಾರಸ್ಸು ಮಾಡಿರುವುದನ್ನು ದಿನಾಂಕ: 12.06.2019 ರಂದು ಸಿಂಡಿಕೇಟ್ ಸಭೆ ಅಂಗೀಕರಿಸಿರುತ್ತದೆ. ಸದರಿ ಅನುಮೋದಿತ ವಾರ್ಷಿಕ ಲೆಕ್ಕಪತ್ರಗಳನ್ನು ಸಂಸ್ಕೃತ ವಿಶ್ವವಿದ್ಯಾಲಯದ ವಿತ್ತಾಧಿಕಾರಿಗಳ ಪತ್ರ ಸಂಖ್ಯೆ: ಕಸಂವಿ/ಲೆಪಕ/13/2019–20, ದಿನಾಂಕ: 23.08.2019 ರಂದು ಅಪರ ನಿರ್ದೇಶಕರು, ಬೆಂಗಳೂರು ಪ್ರಾಂತೀಯ ಕಛೇರಿ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು ಕಛೇರಿಗೆ ಸಲ್ಲಿಸಲಾಗಿರುತ್ತದೆ. ಅದರಂತೆ ಅಪರ ನಿರ್ದೇಶಕರು, ಬೆಂಗಳೂರು ಪ್ರಾಂತೀಯ ಕಛೇರಿ, ಇವರ ಪತ್ರ ಸಂ:ಅನಿ/ಬೆಂಪ್ರಾಕ/ಸಿ4/ಸಂ.ವಿ.ವಿ.ಲೆ.ಪ/2019–

20/278, ದಿನಾಂಕ: 03.09.2019ರಂತೆ ಸದರಿ ವಿಶ್ವವಿದ್ಯಾಲಯದ 2018–19 ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಂಡು ವರದಿಯನ್ನು ಸಿದ್ಧಪಡಿಸಿ ಸಲ್ಲಿಸಲಾಗಿರುತ್ತದೆ.

ಲೆಕ್ಕಪರಿಶೋಧನಾ ಕಾರ್ಯದಲ್ಲಿ ಮೈಸೂರು ಸ್ಥಳೀಯ ನಿಧಿ ಲೆಕ್ಕಪರಿಶೋಧನಾ ಕೈಪಿಡಿ (ಕೈಪಿಡಿ) ಅಧ್ಯಾಯ–1 ನಿಯಮ 4 ರಿಂದ 72 ಮತ್ತು ಅಧ್ಯಾಯ–4, ನಿಯಮ 217 ರಿಂದ 242ರಲ್ಲಿ ನೀಡಿರುವ ನಿರ್ದೇಶನಗಳನ್ನು ಪಾಲಿಸಲಾಗಿದೆ. ಕೈಪಿಡಿಯ ನಿಯಮ 217ರಲ್ಲಿ ನೀಡಿರುವ ನಿರ್ದೇಶನದನ್ವಯ, ಕಾಯಿದೆಯ ಕಲಂ 4 ರಲ್ಲಿ ವಿಶ್ವವಿದ್ಯಾಲಯಕ್ಕೆ ಪ್ರದತ್ತವಾದ ಅಧಿಕಾರಗಳು, ಕಲಂ 29 ಮತ್ತು ಕಲಂ 31 ರಲ್ಲಿ ಅನುಕ್ರಮವಾಗಿ ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿಗೆ ಪ್ರದತ್ತವಾದ ಅಧಿಕಾರಗಳು, ಕಲಂ 32 ರಲ್ಲಿ ಹಣಕಾಸು ಸಮಿತಿಗೆ ವಹಿಸಲಾದ ಪ್ರಕಾರ್ಯಗಳು ಮತ್ತು ಕಲಂ 15 ರಲ್ಲಿ ಕುಲಪತಿಗಳಿಗೆ ಪ್ರದತ್ತವಾದ ಅಧಿಕಾರಗಳನ್ನು ಗಮನದಲ್ಲಿಟ್ಟುಕೊಂಡು ಲೆಕ್ಕಪರಿಶೋಧನೆ ಮಾಡಲಾಗಿದೆ.

**ಲೆಕ್ಕ ಪರಿಶೋಧನಾ ಕಾರ್ಯದಲ್ಲಿ ಆಧಾರವಾಗಿರುವ ಇತರೆ ನಿಯಮಾವಳಿಗಳು:**

ಅ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ – 2009, ಪರಿನಿಯಮಗಳು, ಆಧ್ಯಾದೇಶಗಳು, ವಿನಿಯಮಗಳು ಮತ್ತು ನಿಯಮಗಳು.

ಆ. ಕರ್ನಾಟಕ ನಾಗರಿಕ ಸೇವಾ ನಿಯಮಗಳು.

ಇ. ಕರ್ನಾಟಕ ಆರ್ಥಿಕ ಸಂಹಿತೆ–1958.

ಈ. ಸಾದಿಲ್ವಾರು ವೆಚ್ಚ ಕೈಪಿಡಿ–1958.

ಉ. ಆಯವ್ಯಯ ಕೈಪಿಡಿ.

ಊ. ಕರ್ನಾಟಕ ಲೋಕೋಪಯೋಗಿ ಇಲಾಖೆ ಸಂಹಿತೆ ಸಂಪುಟ 1 ಮತ್ತು 2.

ಋ. ಕರ್ನಾಟಕ ಲೋಕೋಪಯೋಗಿ ಲೆಕ್ಕಪತ್ರ ಸಂಹಿತೆ 1 ಮತ್ತು 2.

ಎ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮ 2000.

## 3. ವಾರ್ಷಿಕ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನಾ ವರದಿಗಳಿಗೆ ತೆಗೆದುಕೊಳ್ಳಬೇಕಾದ ಕ್ರಮಗಳು.

ವಾರ್ಷಿಕ ಲೆಕ್ಕ ಪತ್ರಗಳು ಮತ್ತು ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಗಳ ಅಧಿನಿಯಮ 2009 ರ ನಿಯಮ–57(3) ರನ್ವಯ ವರ್ಷಕ್ಕೊಮ್ಮೆ ಏಪ್ರಿಲ್ ತಿಂಗಳಲ್ಲಿ ವಿಶ್ವವಿದ್ಯಾಲಯದ ಲೆಕ್ಕಪತ್ರಗಳನ್ನು ರಾಜ್ಯ ಲೆಕ್ಕಪತ್ರ ನಿಯಂತ್ರಕರು ಪರಿಶೋಧಿಸತಕ್ಕದ್ದು. ನಿಯಮ–57(4) ರನ್ವಯ ಹಾಗೆ ಪರಿಶೋಧಿಸಿದ ಲೆಕ್ಕಪತ್ರಗಳನ್ನು ವಿದ್ಯಾವಿಷಯಕ ಪರಿಷತ್ತಿನ ಮುಂದೆ ಮತ್ತು ಸಿಂಡಿಕೇಟಿನ ಮುಂದೆ ಮಂಡಿಸತಕ್ಕದ್ದು ಹಾಗೂ ತದನಂತರ ಪ್ರತಿ ವರ್ಷ ಸೆಪ್ಟೆಂಬರ್ ಕೊನೆಯೊಳಗೆ ತನ್ನ ಆಕ್ಷೇಪಣೆಗಳೊಡನೆ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು, ರಾಜ್ಯ ಸರ್ಕಾರವು ಅದನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು. 2018–19 ನೇ ಸಾಲಿನ ಲೆಕ್ಕ

ಪರಿಶೋಧನೆಯಲ್ಲಿ ಕಂಡುಬಂದಂತಹ ಆಕ್ಷೇಪಣೆ ಕಂಡಿಕೆಗಳಿಗೆ ಸೂಕ್ತವಾದ ಕ್ರಮ ವಹಿಸುವುದು ಮತ್ತು ವಸೂಲಾತಿ ಕಂಡಿಕೆಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟವರಿಂದ ಕೂಡಲೇ ವಸೂಲಾತಿ ಮಾಡುವುದು.

**4. 2018–19 ನೇ ಸಾಲಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸಿದ ಅಧಿಕಾರಿಗಳ ವಿವರಗಳು:**

| ಪದನಾಮ | ಹೆಸರು ಮತ್ತು ಸೇವಾ ಅವಧಿ |
|---|---|
| **ಕುಲಪತಿಗಳು** | ಪ್ರೊ॥ ಪದ್ಮ ಶೇಖರ್<br>ದಿನಾಂಕ: 01.04.2018 ರಿಂದ 31.03.2019 |
| **ಕುಲಸಚಿವರು** | ಶ್ರೀಮತಿ. ಶಿಲ್ಪ . ಎಂ ದಿನಾಂಕ: 01.04.2018 ರಿಂದ 06.01.2019<br>ಪ್ರೊ॥ ಗಿರೀಶ್ ಚಂದ್ರ. ವಿ.(ಪ್ರ), ದಿನಾಂಕ: 07.01.2019 ರಿಂದ 25.03.2019,<br>ಶ್ರೀಮತಿ. ಶಿಲ್ಪ . ಎಂ, ದಿನಾಂಕ: 26.03.2018 ರಿಂದ 31.03.2019 |
| **ಪರೀಕ್ಷಾ ನಿಯಂತ್ರಕರು** | ಡಾ. ಬಿ.ವಿ. ವೆಂಕಟರಮಣ<br>ದಿನಾಂಕ: 01.04.2018 ರಿಂದ 31.03.2019 |
| **ವಿತ್ತಾಧಿಕಾರಿಗಳು** | ವಿದ್ವಾನ್ ಪಿ.ಆರ್. ಪಾಗೋಜಿ<br>ದಿನಾಂಕ: 01–04–2018 ರಿಂದ 31–03–2019 |
| **ನಿರ್ದೇಶಕರು** | ಪ್ರೊ॥ ಗಿರೀಶ್ ಚಂದ್ರ. ವಿ.(ಪ್ರ)<br>ದಿನಾಂಕ: 01.04.2018 ರಿಂದ 31.03.2019 |
| **ಲೆಕ್ಕಪರಿಶೋಧನಾ ಅವಧಿ** | ದಿನಾಂಕ: 01.04.2018 ರಿಂದ 31.03.2019 |
| **ವಾರ್ಷಿಕ ಲೆಕ್ಕಪತ್ರ ಪರಿಶೋಧನೆ ಪ್ರಾರಂಭ ದಿನಾಂಕ ಮತ್ತು ಮುಕ್ತಾಯದ ದಿನಾಂಕ** | ದಿನಾಂಕ: 04.09.2019 ರಿಂದ 22.10.2019 |
| **ಲೆಕ್ಕಪರಿಶೋಧನೆಗೆ ಬಳಸಿದ ಮಾನವ ದಿನಗಳು** | 100 ಮಾನವ ದಿನಗಳು (ತರಬೇತಿ ಅವಧಿ ಮತ್ತು ರಜಾದಿನಗಳನ್ನು ಹೊರತು ಪಡಿಸಿ) |
| **ಲೆಕ್ಕಪರಿಶೋಧನಾ ತಂಡ** | ಶ್ರೀಮತಿ. ಪ್ರೇಮಲತಾ ಎಂ.ಕೆ, ಲೆಕ್ಕಾಧೀಕ್ಷಕರು<br>ಶ್ರೀ ಭಗತ್ ಬಾಪಟ್, ಪರೀಕ್ಷತಾ ಲೆಕ್ಕಪರಿಶೋಧನಾಧಿಕಾರಿ<br>ಕು॥ ಮಾಲಾಶ್ರೀ ಹೊಸಕೋಟಿ, ಪರೀಕ್ಷತಾ ಲೆಕ್ಕಪರಿಶೋಧನಾಧಿಕಾರಿ<br>ಕು॥ ಚೈತ್ರಾ, ಪರೀಕ್ಷತಾ ಲೆಕ್ಕಪರಿಶೋಧನಾಧಿಕಾರಿ<br>ಶ್ರೀ ವೀರಾಸ್ವಾಮಿ.ಬಿ.ಎಸ್, ಲೆಕ್ಕಪರಿಶೋಧಕರು<br>ಶ್ರೀ ಮಂಜುನಾಥ್.ಟಿ.ಎನ್, ಲೆಕ್ಕಪರಿಶೋಧಕರು<br>ಶ್ರೀಮತಿ. ಸುಮ. ಎಲ್. ಲೆಕ್ಕಪರಿಶೋಧಕರು |
| **ಲೆಕ್ಕಪರಿಶೋಧನಾ ವರದಿಯ ಪುನರ್ ಪರಿಶೀಲನಾಧಿಕಾರಿಗಳು** | **ಶ್ರೀ ಎನ್. ಬಿ. ಶಿವರುದ್ರಪ್ಪ**<br>ಅಪರ ನಿರ್ದೇಶಕರು<br>ಬೆಂಗಳೂರು ಪ್ರಾಂತೀಯ ಕಛೇರಿ<br>ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು<br>ಲೆಕ್ಕಪತ್ರ ಇಲಾಖೆ, ಬೆಂಗಳೂರು |
| **ಲೆಕ್ಕ ಪರಿಶೋಧನಾ ವರದಿಯ ಪುನರ್ ಪರಿಶೀಲನಾ ದಿನಾಂಕ** | 23.10.2019 |

## ಭಾಗ–1

### 5. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳಲ್ಲಿ ಕಂಡು ಬಂದ ಪ್ರಮುಖ ನ್ಯೂನ್ಯತೆಗಳು:

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಗಳ ಅಧಿನಿಯಮ 2009 ನಿಯಮ–57 ರಂತೆ ವಿಶ್ವವಿದ್ಯಾಲಯವು ವಾರ್ಷಿಕ ಲೆಕ್ಕ ಪತ್ರಗಳು ಮತ್ತು ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ, ಕೆಳಕಂಡ ನಿಯಮಗಳನ್ನು ಅನುಸರಿಸಬೇಕಾಗಿರುತ್ತದೆ.

1) ಸಿಂಡಿಕೇಟಿನ ನಿರ್ದೇಶನದ ಮೇರೆಗೆ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸತಕ್ಕದ್ದು.
2) ಹಾಗೆ ತಯಾರಿಸಿದ ವಾರ್ಷಿಕ ಲೆಕ್ಕಪತ್ರಗಳನ್ನು ವಿದ್ಯಾವಿಷಯಕ ಪರಿಷತ್ತು ತನ್ನ ಮುಂದಿನ ನಿಕಟ ಸಭೆಯಲ್ಲಿ ಪರಿಗಣಿಸತಕ್ಕದ್ದು, ವಿದ್ಯಾವಿಷಯಕ ಪರಿಷತ್ತು ಆ ಸಂಬಂಧವಾಗಿ ಒಂದು ನಡವಳಿಯನ್ನು ಅಂಗೀಕರಿಸಬಹುದು ಮತ್ತು ಅದನ್ನು ಸಿಂಡಿಕೇಟಿಗೆ ತಿಳಿಸತಕ್ಕದ್ದು, ವಿದ್ಯಾವಿಷಯಕ ಪರಿಷತ್ತು ಮಾಡಿದ ಸಲಹೆಗಳನ್ನು ಸಿಂಡಿಕೇಟು ಪರಿಗಣಿಸತಕ್ಕದ್ದು ಮತ್ತು ಅದರ ಮೇಲೆ ತಾನು ಸೂಕ್ತವೆಂದು ಭಾವಿಸುವಂಥ ರೀತಿಯಲ್ಲಿ ಕ್ರಮ ಕೈಗೊಳ್ಳತಕ್ಕದ್ದು ಮತ್ತು ತಾನು ಕೈಗೊಂಡ ಕ್ರಮದ ಬಗ್ಗೆ ಅಥವಾ ಕ್ರಮ ಕೈಗೊಳ್ಳದಿರಲು ಇರುವ ಕಾರಣಗಳನ್ನು ತನ್ನ ಮುಂದಿನ ಸಭೆಯಲ್ಲಿ ವಿದ್ಯಾ ವಿಷಯಕ ಪರಿಷತ್ತಿಗೆ ತಿಳಿಸತಕ್ಕದ್ದು.
3) ವರ್ಷಕ್ಕೊಮ್ಮೆ ಏಪ್ರಿಲ್ ತಿಂಗಳಲ್ಲಿ ವಿಶ್ವವಿದ್ಯಾಲಯದ ಲೆಕ್ಕಪತ್ರಗಳನ್ನು ರಾಜ್ಯ ಲೆಕ್ಕಪತ್ರ ನಿಯಂತ್ರಕರು ಪರಿಶೋಧಿಸತಕ್ಕದ್ದು.

ಮೇಲ್ಕಂಡ ನಿಯಮಗಳನ್ವಯ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ವಿಶ್ವವಿದ್ಯಾಲಯವು ದಿನಾಂಕ: 31.03.2019 ರ ಅಂತ್ಯಕ್ಕೆ ಒದಗಿಸಿರುವ ಅಡಾವೆ ಪತ್ರ, ಸ್ವೀಕೃತಿ ಮತ್ತು ಪಾವತಿ, ಆದಾಯ ಮತ್ತು ವೆಚ್ಚ ತಃಖ್ತೆಗಳನ್ನೊಳಗೊಂಡ ವಾರ್ಷಿಕ ಹಣಕಾಸು ಲೆಕ್ಕಪತ್ರಗಳನ್ನು, ವಿಶ್ವವಿದ್ಯಾಲಯವು ಅಳವಡಿಸಿಕೊಂಡಿರುವ ಲೆಕ್ಕಪತ್ರ ನಿರ್ವಹಣಾ ನೀತಿಗಳು ಮತ್ತು ಲೆಕ್ಕಪತ್ರಗಳ ಕುರಿತು ನೀಡಲಾಗಿರುವ ವಿವರಣೆಗಳನ್ನಾಧರಿಸಿ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲಾಗಿದೆ.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ದ್ವಿನಮೂದು ಪದ್ಧತಿಯಲ್ಲಿ ಲೆಕ್ಕಪತ್ರಗಳನ್ನು ತಯಾರಿಸಿದ್ದು, ಇದಕ್ಕಾಗಿ Tally ತಂತ್ರಾಂಶವನ್ನು ಬಳಸಿಕೊಂಡಿದೆ. ಲೆಕ್ಕಪತ್ರ ನಿರ್ವಹಣೆಗಾಗಿ M/s D.N. Joshi & Co., ಬೆಂಗಳೂರು ಸಂಸ್ಥೆಯನ್ನು ನೇಮಿಸಿಕೊಳ್ಳಲಾಗಿದೆ. ವಿಶ್ವವಿದ್ಯಾಲಯದ ವಿವಿಧ ಇಲಾಖೆಯಿಂದ ಮಾಹಿತಿಯು ಹಣಕಾಸು ಅಧಿಕಾರಿಗಳ ಕಛೇರಿಯ ಮೂಲಕ ಸದರಿ ಸಂಸ್ಥೆಯ ಸಿಬ್ಬಂದಿಯಿಂದ Tally ತಂತ್ರಾಂಶದಲ್ಲಿ ಕ್ರೋಢೀಕರಿಸಿ ಲೆಕ್ಕಪತ್ರವನ್ನು ನಿರ್ವಹಿಸಲಾಗಿದೆ.

2018–19ನೇ ಸಾಲಿಗೆ ವಿಶ್ವವಿದ್ಯಾಲಯವು ಒಟ್ಟು 9 ಮುಖ್ಯ ಬ್ಯಾಂಕ್ ಖಾತೆಗಳಲ್ಲಿ ವಹಿವಾಟುಗಳನ್ನು ನಡೆಸಿದ್ದು, ಅವುಗಳ ಒಟ್ಟು ಸ್ವೀಕೃತಿ ಮತ್ತು ಪಾವತಿಯ ವಿವರಗಳು ಕೆಳಕಂಡಂತಿರುತ್ತವೆ :

**(ರೂ. ಗಳಲ್ಲಿ)**

| | |
|---|---|
| ಪ್ರಾರಂಭ ಶಿಲ್ಕು ದಿ: 01.04.2018 ರಂತೆ | 5,62,73,619.00 |
| ಸ್ವೀಕೃತಿಗಳು | 43,59,23,764.00 |
| ಆಂತರಿಕ ವರ್ಗಾವಣೆಗಳು (Contra Entries) | 2,69,35,647.00 |
| **ಒಟ್ಟು** | **51,91,33,030.00** |
| ವೆಚ್ಚಗಳು | 45,34,72,035.00 |
| ಆಂತರಿಕ ವರ್ಗಾವಣೆಗಳು (Contra Entries) | 2,69,35,647.00 |
| **ಅಂತಿಮ ಶಿಲ್ಕು** | **3,87,25,348.00** |

ಬ್ಯಾಂಕ್‌ನ ವಿವಿಧ ಖಾತೆಗಳ ವಹಿವಾಟುಗಳ ವಿವರಗಳನ್ನು **ಅನುಬಂಧ** –1 ರಲ್ಲಿ ನೀಡಲಾಗಿದೆ.

**6. ಬೇಡಿಕೆ ಹುಂಡಿಗಳನ್ನು ನಗದೀಕರಿಸಿಕೊಳ್ಳದೇ ಉಳಿಸಿಕೊಂಡಿರುವುದು.**

ಅಡಾವೆ ಪಟ್ಟಿಯಲ್ಲಿ ಎಲ್ಲಾ ಬ್ಯಾಂಕ್ ಖಾತೆಗಳ ಅಂತಿಮ ಶಿಲ್ಕು ಎಂದು ರೂ. 3,87,25,347.70 ಗಳನ್ನು ತೋರಿಸಿರುತ್ತಾರೆ. ಈ ಬಗ್ಗೆ ಬ್ಯಾಂಕ್ ಖಾತೆಯೊಂದಿಗೆ ಸಮನ್ವಯ ಪಟ್ಟಿಯನ್ನು ಪರಿಶೀಲಿಸಲಾಗಿ, ಹಿಂದಿನ ಸಾಲಿನ ಹಲವು ಜಮೆ ರೂ. 4,66,289.00 ನಗದಾಗದೇ ಇರುವುದು ಕಂಡುಬಂದಿರುತ್ತದೆ. ಈ ಬಗ್ಗೆ ವಿಚಾರಣಾ ಪತ್ರ ಸಂಖ್ಯೆ: 13/2018–19, ದಿನಾಂಕ: 12.09.2019ನ್ನು ನೀಡಿದ್ದು, ವಿಶ್ವವಿದ್ಯಾಲಯವು ದಿನಾಂಕ: 18.09.2019 ರಂದು ನೀಡಿರುವ ಅನುಪಾಲನಾ ವರದಿಯಲ್ಲಿ ಈ ಬಗ್ಗೆ ಬ್ಯಾಂಕ್ ಅಧಿಕಾರಿಗಳೊಂದಿಗೆ ಪತ್ರ ವ್ಯವಹಾರವನ್ನು ನಡೆಸಿದ್ದು, ಯಾವುದೇ ರೀತಿಯ ಕ್ರಮ ಕೈಗೊಂಡಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಆದ್ದರಿಂದ ನಗದೀಕರಣವಾಗಬಹುದಾದ ಬೇಡಿಕೆ ಹುಂಡಿಗಳನ್ನು ಬ್ಯಾಂಕ್ ಅಧಿಕಾರಿಗಳೊಂದಿಗೆ ಮತ್ತೊಮ್ಮೆ ಪತ್ರ ವ್ಯವಹಾರ ನಡೆಸಿ, ಕೂಡಲೇ ನಗದೀಕರಣಗೊಳಿಸಿಕೊಳ್ಳುವುದು ಮತ್ತು ನಗದೀಕರಿಸಲು ಸಾಧ್ಯವಾಗದ ಬೇಡಿಕೆ ಹುಂಡಿಗಳನ್ನು ಸೂಕ್ತ ಲೆಕ್ಕ ನಮೂದಿನಿಂದ ಸಮನ್ವಯಗೊಳಿಸುವುದು ಅತ್ಯವಶ್ಯವಾಗಿದೆ. ಈ ಬಗ್ಗೆ ಆಡಳಿತಾತ್ಮಕ ಕ್ರಮ ಕೈಗೊಂಡು, ರೂ. 4,66,289.00 ಗಳನ್ನು ಬ್ಯಾಂಕುಗಳಿಂದ ವಸೂಲಿಸಿ, ವಿಶ್ವವಿದ್ಯಾಲಯದ ನಿಧಿಗೆ ಜಮೆ ಮಾಡಲು ಸೂಚಿಸಿದೆ.

ಲೆಕ್ಕ ಸಮನ್ವಯದ ವಿವರಗಳನ್ನು **ಅನುಬಂಧ –2** ರಲ್ಲಿ ಲಗತ್ತಿಸಿದೆ.

**7. ನಗದೀಕರಣಗೊಳ್ಳದಿರುವ ಧನಾಧೇಶಗಳನ್ನು ಪರಿಶೀಲಿಸಿ ಲೆಕ್ಕ ಸಮನ್ವಯಗೊಳಿಸದಿರುವುದು.**

ವಿಶ್ವವಿದ್ಯಾಲಯದ ಬ್ಯಾಂಕ್ ಖಾತೆಯೊಂದಿಗೆ ಲೆಕ್ಕ ಸಮನ್ವಯ ಪಟ್ಟಿಯನ್ನು ಪರಿಶೀಲಿಸಲಾಗಿ, ಹಿಂದಿನ ಸಾಲಿನಲ್ಲಿ ನಗದೀಕರಣಗೊಳ್ಳದಿರುವ ಧನಾದೇಶಗಳ ಮೊತ್ತ ರೂ. 1,37,053.00 ಇರುತ್ತದೆ. ಈ ಬಗ್ಗೆ ವಿಚಾರಣಾ ಪತ್ರ ಸಂಖ್ಯೆ: 13/2018–19, ದಿನಾಂಕ: 12.09.2019ನ್ನು ನೀಡಿದ್ದು, ವಿಶ್ವವಿದ್ಯಾಲಯವು ದಿನಾಂಕ: 18.09.2019 ರಂದು ನೀಡಿರುವ ಅನುಪಾಲನಾ ವರದಿಯಲ್ಲಿ ಈ ಕುರಿತು ಬ್ಯಾಂಕ್ ಅಧಿಕಾರಿಗಳೊಂದಿಗೆ ಪತ್ರ ವ್ಯವಹಾರವನ್ನು ನಡೆಸಿದ್ದು, ಯಾವುದೇ ರೀತಿಯ ಕ್ರಮ ಕೈಗೊಂಡಿರುವುದಿಲ್ಲ

ಎಂದು ತಿಳಿಸಿರುತ್ತಾರೆ. ಇದನ್ನು ಸೂಕ್ತ ಲೆಕ್ಕ ನಮೂದಿನಿಂದ ಸಮನ್ವಯಗೊಳಿಸುವುದು ಅತ್ಯವಶ್ಯಕವಾಗಿದ್ದು, ಈ ಬಗ್ಗೆ ಆಡಳಿತಾತ್ಮಕ ಕ್ರಮ ಕೈಗೊಳ್ಳುವವರೆಗೂ ನಗದೀಕರಣಗೊಳ್ಳದಿರುವ ಧನಾದೇಶಗಳ ಮೊತ್ತ ರೂ. 1,37,053.00 ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.

ಲೆಕ್ಕ ಸಮನ್ವಯದ ವಿವರಗಳನ್ನು **ಅನುಬಂಧ –2** ರಲ್ಲಿ ಲಗತ್ತಿಸಿದೆ.

**8. ಬ್ಯಾಂಕ್ ಖಾತೆಗಳನ್ನು ಪರಿಗಣನೆಗೆ ತೆಗೆದುಕೊಳ್ಳದಿರುವ ಬಗ್ಗೆ.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2018–19ನೇ ಸಾಲಿನಲ್ಲಿ ಒಟ್ಟು 9 ಪ್ರಮುಖ ಬ್ಯಾಂಕ್ ಖಾತೆಗಳಲ್ಲಿ ವಹಿವಾಟುಗಳನ್ನು ನಡೆಸಿ, ಲೆಕ್ಕಪತ್ರಗಳನ್ನು ನಿರ್ವಹಿಸಿದೆ. ಆದರೆ ಸದರಿ ಲೆಕ್ಕಪತ್ರಗಳನ್ನು ನಿರ್ವಹಿಸುವಾಗ ಈ ಕೆಳಗಿನ ವಿಶ್ವವಿದ್ಯಾಲಯದ ವಿಭಾಗಗಳ ಬ್ಯಾಂಕ್ ಖಾತೆಗಳನ್ನು ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲ ಮತ್ತು ವಾರ್ಷಿಕ ಲೆಕ್ಕಪತ್ರದಲ್ಲಿ ಪ್ರತ್ಯೇಕವಾಗಿ ತೋರಿಸಿರುವುದಿಲ್ಲ. ಸದರಿ ವಿಭಾಗಗಳ ಬ್ಯಾಂಕ್ ಖಾತೆಗಳ ವಿವರ ಈ ಕೆಳಗಿನಂತಿದೆ.

**(ರೂ.ಗಳಲ್ಲಿ)**

| ವಿವರ | **ಚಾಮರಾಜೇಂದ್ರ ಸಂಸ್ಕೃತ ಘಟಕ ಕಾಲೇಜು, ಬೆಂಗಳೂರು ಖಾತೆ ಸಂಖ್ಯೆ: 64086633380** | **ಬೋಧಕರ ಸಂಶೋಧನಾ ಉದ್ದೇಶಗಳಿಗಾಗಿ ವಿವಿಧ ಸಂಸ್ಥೆಗಳಿಂದ ಸ್ವೀಕೃತವಾದ ಅನುದಾನಗಳ ಖಾತೆ ಸಂಖ್ಯೆ: 64161666389** | **ಮಹಾರಾಜ ಸಂಸ್ಕೃತ ಘಟಕ ಕಾಲೇಜು, ಮೈಸೂರು 64042407465** | **ಸಂಸ್ಕೃತ ಸಂಶೋಧನಾ ಸಂಸತ್, ಮೇಲುಕೋಟೆ, ಮಂಡ್ಯ ಖಾತೆ ಸಂಖ್ಯೆ: 54034090744** |
|---|---|---|---|---|
| 01.04.2019 ಕ್ಕೆ ಪ್ರಾರಂಭಿಕ ಶಿಲ್ಕು | 21609.00 | 4,52,196.60 | 2,239.00 | 26,92,328.00 |
| 2018–19ನೇ ಸಾಲಿನ ಸ್ವೀಕೃತಿಗಳು | 370031.00 | 15,84,847.00 | 3,69,586.00 | 2,30,62,553.00 |
| **ಒಟ್ಟು** | **3,91,640.00** | **20,37,043.60** | **3,71,825.00** | **2,57,54,881.00** |
| 2018–19ನೇ ಸಾಲಿನ ಪಾವತಿಗಳು | 357314.00 | 12,94,652.50 | 3,61,486.50 | 2,16,24,161.00 |
| 31.03.2019 ಕ್ಕೆ ಅಂತಿಮ ಶಿಲ್ಕು | 34326.00 | 7,42,391.10 | 10,338.50 | 41,30,720.00 |

ಮೇಲ್ಕಂಡ ನಾಲ್ಕು ವಿಭಾಗಗಳ ಬ್ಯಾಂಕ್ ಖಾತೆಗಳ ಸ್ವೀಕೃತಿ ಮೊತ್ತ ರೂ: 2,53,87,017.00, ಪಾವತಿ ಮೊತ್ತ ರೂ: 2,36,37,613.00 ಹಾಗೂ ಅಂತಿಮ ಶಿಲ್ಕು ಒಟ್ಟು ರೂ: 49,17,775.00 ಗಳನ್ನು ವಾರ್ಷಿಕ ಲೆಕ್ಕಪತ್ರದಲ್ಲಿ ಅಳವಡಿಸದೇ ಇರುವುದರಿಂದ, ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳು ಅಪೂರ್ಣವಾಗಿರುತ್ತದೆ. ವಿಶ್ವವಿದ್ಯಾಲಯವು ಒಂದು ವರ್ಷದಲ್ಲಿ ತಾನು ಹೊಂದಿರುವ ಪ್ರತಿಯೊಂದು ಬ್ಯಾಂಕ್ ಖಾತೆಗಳಲ್ಲಿ ನಿರ್ವಹಿಸಿರುವ ವಹಿವಾಟುಗಳನ್ನು ವಾರ್ಷಿಕ ಲೆಕ್ಕಪತ್ರಗಳಲ್ಲಿ ನಮೂದಿಸುವುದು ಲೆಕ್ಕಪತ್ರ ನಿಯಮಗಳನ್ವಯ ಕಡ್ಡಾಯವಾಗಿರುತ್ತದೆ. ಇಲ್ಲದಿದ್ದ ಪಕ್ಷದಲ್ಲಿ ಸದರಿ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಯಲ್ಲಿ ದೃಢೀಕರಿಸಲು ಸಾಧ್ಯವಾಗುವುದಿಲ್ಲ. ಅಲ್ಲದೇ ವಹಿವಾಟುಗಳನ್ನು ವಾರ್ಷಿಕ ಲೆಕ್ಕಪತ್ರಗಳಿಂದ ಹೊರಗಿಡುವುದರಿಂದ, ಸದರಿ

ಖಾತೆಗಳ ವೆಚ್ಚಗಳ ನಿರ್ವಹಣೆಯಲ್ಲಿ ಕಾರ್ಯ ವಿಧಾನದ ಲೋಪಗಳು ಅಥವಾ ಹಣ ದುರುಪಯೋಗ ಪ್ರಕರಣಗಳಿದ್ದಲ್ಲಿ ಪರಿಶೀಲಿಸಲು ಲೆಕ್ಕಪರಿಶೋಧನೆಯಲ್ಲಿ ಸಾಧ್ಯವಾಗುವುದಿಲ್ಲ. ಆದ್ದರಿಂದ ಸದರಿ ವಹಿವಾಟುಗಳನ್ನು ವಾರ್ಷಿಕ ಲೆಕ್ಕಪತ್ರಗಳಲ್ಲಿ ನಮೂದಿಸಲು ಆಡಳಿತಾತ್ಮಕ ಕ್ರಮ ಕೈಗೊಂಡು, ಪರಿಷ್ಕರಿಸಿ ಮುಂದಿನ ಲೆಕ್ಕಪರಿಶೋಧನೆಗೆ ಒದಗಿಸುವಂತೆ ಸೂಚಿಸಿದೆ.

**9. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2018–19 ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಹಾಗೂ ಹಣಕಾಸು ವಹಿವಾಟುಗಳ ವಿವರಗಳು.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2018–19ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಪರೀಶೀಲಿಸಲಾಗಿ, ಈ ಕೆಳಗಿನ ಅಂಶಗಳು ಕಂಡುಬಂದಿರುತ್ತದೆ:

**ಜಮೆ ಖರ್ಚು ಪಟ್ಟಿ (Receipt and Payments A/c)**

ಜಮೆ ಖರ್ಚು ಪಟ್ಟಿಯು ವಾಸ್ತವಿಕ ಜಮೆ ಮತ್ತು ಖರ್ಚಿನ ಸಾರಾಂಶ ತಿಳಿಸುವ ಪಟ್ಟಿಯಾಗಿರುತ್ತದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರದಲ್ಲಿ ಜಮೆ ಖರ್ಚು ಪಟ್ಟಿಯು ವಾಸ್ತವಿಕ ಜಮೆಯಲ್ಲದ ಇತರೆ ಆದಾಯವನ್ನು ಕೂಡ ಒಳಗೊಂಡಿರುತ್ತದೆ. ಇದರಿಂದ ಜಮೆ ಖರ್ಚು ಪಟ್ಟಿಯನ್ನು ದೃಢೀಕರಿಸಲು ಸಾಧ್ಯವಿಲ್ಲ. ಜಮೆ ಖರ್ಚು ಪಟ್ಟಿಯನ್ನು ಕೇವಲ ವಾಸ್ತವಿಕ ಜಮೆ ಮತ್ತು ಖರ್ಚುಗಳನ್ನು ಮಾತ್ರ ಪರಿಗಣಿಸಿ ತಯಾರಿಸಿ ಆಡಳಿತ ಮಂಡಳಿಯಲ್ಲಿ ಅನುಮೋದನೆಗಾಗಿ ಮಂಡಿಸತಕ್ಕದ್ದು.

**ಅಡಾವೆ ಪತ್ರ (Balance Sheet)**

**ಅ. ಸ್ಥಿರಾಸ್ತಿಗಳು**

2018–19 ನೇ ಸಾಲಿನ ಅಡಾವೆ ಪತ್ರದ ಆಸ್ತಿ ಬದಿಯಲ್ಲಿ ರೂ.25,00,003.00 ಮೊತ್ತವನ್ನು ಸ್ಥಿರಾಸ್ತಿ ಎಂದು ನಮೂದಿಸಿ, ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು ಇಲ್ಲಿನ ಕಟ್ಟಡ ನಿರ್ಮಾಣ ಎಂದು ತೋರಿಸಲಾಗಿದೆ. ಈ ಸ್ಥಿರಾಸ್ತಿ ನಿರ್ಮಾಣವಾಗಿರುವುದರ ಬಗ್ಗೆ ಸಕ್ಷಮ ಪ್ರಾಧಿಕಾರವು ನೀಡಿರುವ ಕಾಮಗಾರಿ ಮುಕ್ತಾಯ ವರದಿಯನ್ನು ಹಾಜರುಪಡಿಸುವಂತೆ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ: 25, ದಿ: 16.09.2019 ರಂದು ಕೋರಿದ್ದು, ವಿಶ್ವವಿದ್ಯಾಲಯವು ದಿನಾಂಕ: 30.09.2019 ರಂದು ನೀಡಿದ ಅನುಪಾಲನಾ ವರದಿಯಲ್ಲಿ ಸದರಿ ಮೊತ್ತವು ಮೈಸೂರಿನ ಶೈವ ಸಂಶೋಧನಾ ಕೇಂದ್ರದ ನಿರ್ಮಾಣಕ್ಕೆ ಲೋಕೋಪಯೋಗಿ ಇಲಾಖೆ, ಮೈಸೂರು ಇವರಿಗೆ ನೀಡಿರುವ ಮುಂಗಡದ ಮೊತ್ತವಾಗಿದ್ದು, ಕಟ್ಟಡದ ಕಾಮಗಾರಿ ಪೂರ್ಣವಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಕಾಮಗಾರಿ ಪೂರ್ಣಗೊಳ್ಳದೇ ಅಡಾವೆ ಪತ್ರದಲ್ಲಿ ಸ್ಥಿರಾಸ್ತಿ ಎಂದು ನಮೂದಿಸಿರುವುದರಿಂದ, ಲೆಕ್ಕ ನಿರ್ವಹಣೆಯಲ್ಲಿ ತಪ್ಪಾಗಿದ್ದು, ಸ್ಥಿರಾಸ್ತಿಯ ಮೊತ್ತವನ್ನು ಪ್ರಮಾಣೀಕರಿಸಲು ಸಾಧ್ಯವಾಗಿರುವುದಿಲ್ಲ. ಸದರಿ ಮೊತ್ತವನ್ನು ಪ್ರಸ್ತುತ ಮುಂಗಡ ಮೊತ್ತವಾಗಿ ತೋರಿಸಿ, ಕಟ್ಟಡ ಕಾಮಗಾರಿಯು ಪೂರ್ಣವಾದ ನಂತರವಷ್ಟೇ ಅಡಾವೆ ಪತ್ರದಲ್ಲಿ ಸ್ಥಿರಾಸ್ತಿ ಎಂದು ನಮೂದಿಸಲು ಸೂಚಿಸಿದೆ.

**ಆ. ಇತರೆ ಆಸ್ತಿಗಳು**

2018–19ರ ಅಂತ್ಯಕ್ಕೆ ರೂ. 68,16,373.00 ಗಳನ್ನು ಸ್ಥಿರಾಸ್ತಿ (Fixed Assets) ಶೀರ್ಷಿಕೆಯಲ್ಲಿ ಇತರೆ ಆಸ್ತಿಗಳು (Other Assets) ಅಡಿಯಲ್ಲಿ ತೋರಿಸಲಾಗಿದೆ. ಈ ಬಗ್ಗೆ ಆಸ್ತಿ ವಿವರವನ್ನು ನೀಡಲು ಆಸ್ತಿ ವಹಿಯನ್ನು ಲೆಕ್ಕಪರಿಶೋಧನೆಗೆ ನೀಡುವಂತೆ, ವಿಚಾರಣಾ ಪತ್ರ ಸಂಖ್ಯೆ: 6, ದಿನಾಂಕ: 09.09.2019 ರಂದು ವಿಚಾರಣೆ ನೀಡಲಾಗಿತ್ತು. ದಿನಾಂಕ: 30.09.2019 ರಂದು ವಿಶ್ವವಿದ್ಯಾಲಯವು ನೀಡಿರುವ ಉತ್ತರದಲ್ಲಿ ಆಸ್ತಿ ವಹಿ ಈವರೆಗೂ ನಿರ್ವಹಿಸಿಲ್ಲವೆಂದು, ಇತರೆ ಸ್ಥಿರಾಸ್ತಿ ಬಳಕೆ ವಿವರ ಮತ್ತು ವಾರ್ಷಿಕ ಭೌತಿಕ ಪರಿಶೀಲನೆಗೆ ಒಂದು ಸಮಿತಿಯನ್ನು ರಚಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ. ವಿಶ್ವವಿದ್ಯಾಲಯವು ಹೊಂದಿರುವ ಪ್ರತಿಯೊಂದು ಆಸ್ತಿಗಳನ್ನು ಗುರುತಿಸಿ, ಕ್ರಮ ಸಂಖ್ಯೆ ನೀಡಿ, ಅವುಗಳ ಸವಕಳಿ ಕಳೆದು ಮೌಲ್ಯೀಕರಣ ಮಾಡಿ, ಕರ್ನಾಟಕ ಆರ್ಥಿಕ ಸಂಹಿತೆ ನಿಯಮ 166 ರಂತೆ, ಪ್ರಪತ್ರ 34ರಲ್ಲಿ ಆಸ್ತಿ ವಹಿಯನ್ನು ನಿರ್ವಹಿಸಿ, ಕ್ರೋಢೀಕೃತ ಮೊತ್ತವನ್ನು ಅಡಾವೆ ಪತ್ರದಲ್ಲಿ ತೋರಿಸುವುದು ಸರಿಯಾದ ಲೆಕ್ಕ ನಿರ್ವಹಣಾ ಕ್ರಮವಾಗಿರುತ್ತದೆ. ಅಲ್ಲದೇ ಸಕ್ಷಮ ಪ್ರಾಧಿಕಾರವು ಈ ಭೌತಿಕ ಆಸ್ತಿಗಳ ಸತ್ಯಾಪನೆಯನ್ನು ವಾರ್ಷಿಕವಾಗಿ ಕೈಗೊಂಡು ದೃಢೀಕರಿಸಿರಬೇಕು. ಆದರೆ ಈ ವಿಧಾನವನ್ನು ಅನುಸರಿಸದೇ ಇರುವುದರಿಂದ ಲೆಕ್ಕಪರಿಶೋಧನೆಯಲ್ಲಿ ಇತರೆ ಆಸ್ತಿಗಳ ಮೊತ್ತವನ್ನು ದೃಢೀಕರಿಸಲು ಸಾಧ್ಯವಾಗಿರುವುದಿಲ್ಲ. ಈ ಬಗ್ಗೆ ಆಡಳಿತಾತ್ಮಕ ಕ್ರಮ ಕೈಗೊಂಡು ಮೇಲ್ಕಂಡ ನಿಯಮಗಳನ್ವಯ ಆಸ್ತಿ ವಹಿಯನ್ನು ನಿರ್ವಹಿಸಿ, ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ.

**ಇ. ಹೂಡಿಕೆಗಳು**

ಹಣಕಾಸು ಅಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರು ಒದಗಿಸಿರುವ ತ:ಖ್ತೆಯಂತೆ, 2018–19ನೇ ಸಾಲಿನಲ್ಲಿ, ವಿಶ್ವವಿದ್ಯಾಲಯವು ಹೊಂದಿರುವ ನಿಶ್ಚಿತ ಠೇವಣಿ ಹೂಡಿಕೆಗಳ ವಿವರಗಳು ಕೆಳಕಂಡಂತಿರುತ್ತವೆ:

| | |
|---|---:|
| ಪ್ರಾರಂಭ ಶಿಲ್ಕು | 10,02,73,482.00 |
| 2018–19ನೇ ಸಾಲಿನ ಹೂಡಿಕೆಗಳು | 0.00 |
| ಸ್ವೀಕೃತಿ(ಬಡ್ಡಿ ಮೊತ್ತ) | 54,76,488.00 |
| ಒಟ್ಟು | **10,57,49,970.00** |
| ನಿಶ್ಚಿತ ಠೇವಣಿಯನ್ನು ಹಿಂಪಡೆದಿರುವುದು | 1,35,28,605.00 |
| ಅಂತಿಮ ಶಿಲ್ಕು | **9,22,21,365.00** |

ವಿಶ್ವವಿದ್ಯಾಲಯವು 2018–19ನೇ ಸಾಲಿನಲ್ಲಿ ಹೊಸದಾಗಿ ಯಾವುದೇ ಹೂಡಿಕೆಗಳನ್ನು ಮಾಡಿರುವುದಿಲ್ಲ. ಆರ್ಥಿಕ ವರ್ಷಾಂತ್ಯಕ್ಕೆ ವಿಶ್ವವಿದ್ಯಾಲಯವು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಚಾಮರಾಜಪೇಟೆ ಶಾಖೆ ಇಲ್ಲಿ ಹೂಡಿಕೆ ಮಾಡಿರುವ ನಿಶ್ಚಿತ ಠೇವಣಿಗಳ ವಿವರಗಳನ್ನು **ಅನುಬಂಧ–3** ರಲ್ಲಿ ಲಗತ್ತಿಸಿದೆ.

**10 ಹೂಡಿಕೆಗಳು ಪಕ್ವಗೊಂಡ ಸ್ವೀಕೃತಿಗಳ ಮೊತ್ತವು ಬ್ಯಾಂಕ್ ಖಾತೆಯಲ್ಲಿ ಜಮೆಯಾದ ಮೊತ್ತಕ್ಕೂ ಹಾಗೂ ವಾರ್ಷಿಕ ಲೆಕ್ಕಪತ್ರಗಳಿಗೂ ವ್ಯತ್ಯಾಸವಿರುವುದು.**

2018–19 ನೇ ಸಾಲಿನಲ್ಲಿ ಜಮೆ ಖರ್ಚು ಪಟ್ಟಿಯಲ್ಲಿ (Receipts and Payments)ಹೂಡಿಕೆಗಳು ಪಕ್ವಗೊಂಡ ಸ್ವೀಕೃತಿಗಳನ್ನು ಪರಿಶೀಲಿಸಿದಾಗ, ಬ್ಯಾಂಕ್ ಖಾತೆಯಲ್ಲಿ ಜಮೆಯಾದ ಮೊತ್ತಕ್ಕೂ ಜಮೆ ಖರ್ಚು ಪಟ್ಟಿಯಲ್ಲಿ ತೋರಿಸಿರುವ ಮೊತ್ತಕ್ಕೂ ತಾಳೆಯಾಗಿರುವುದಿಲ್ಲ. ವ್ಯತ್ಯಾಸದ ವಿವರಗಳು ಈ ಕೆಳಗಿನಂತಿದೆ.

| Sl No | Invesement | As per Bank Statement | Amt in R&P Statement | TDS Amt |
|---|---|---|---|---|
| | | | | |
| 01 | OPS Deposit | - | 6532.00 | 6532.00 |
| 02 | SCP & TSP | 11307113.00 | 11727820.00 | 420707.00 |
| 03 | Block Grant Colleges | 2227821.00 | 2294901.00 | 67080.00 |
| 04 | Development Grant | - | 117705.00 | 117705.00 |
| | | | **Total Amount** | **612024.00** |

ಮೇಲ್ಕಂಡ ಹೂಡಿಕೆಗಳ ಬ್ಯಾಂಕ್‌ಪಾಸ್ ಶೀಟ್ ಮತ್ತು ವಾರ್ಷಿಕ ಲೆಕ್ಕಪತ್ರಗಳ ಜಮೆ ಖರ್ಚು ಪಟ್ಟಿಯಲ್ಲಿ (Receipts and Payments) ಪರಿಶೀಲಿಸಿದಾಗ, ಕ್ರ.ಸಂ. (4)ರ ಮೊತ್ತ ರೂ: 1,17,705.00 ಠೇವಣಿಯ ಅರ್ಜಿತ ಬಡ್ಡಿಯ ಮೇಲಿನ ಆದಾಯ ತೆರಿಗೆ ಮೊತ್ತವಾಗಿದ್ದು, ವಿಶ್ವವಿದ್ಯಾಲಯದ ನಿಧಿಗೆ ಸ್ವೀಕೃತವಾಗಿದೆ. ಕ್ರ.ಸಂ. (1), (2) (3)ರ ಆದಾಯ ತೆರಿಗೆ ಮೊತ್ತ ಒಟ್ಟು ರೂ: 4,94,319.00 ವಿಶ್ವವಿದ್ಯಾಲಯದ ನಿಧಿಗೆ ಸ್ವೀಕೃತವಾಗಿರುವುದಿಲ್ಲ. ಆದಾಗ್ಯೂ ಈ ಸಾಲಿನ ಜಮೆ ಖರ್ಚು ಪಟ್ಟಿಯಲ್ಲಿ **"ಸ್ವೀಕೃತಿ"** ಎಂದು ನಮೂದಿಸಿರುವುದು ಲೆಕ್ಕ ನಿರ್ವಹಣೆಯಲ್ಲಿನ ನ್ಯೂನತೆಯನ್ನು ತೋರಿಸುತ್ತದೆ. ಈ ಕುರಿತು ವಿವರಣೆಯನ್ನು ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:5/9.10.2015 ರಲ್ಲಿ ಕೋರಲಾಗಿದ್ದು, ಈ ಬಗ್ಗೆ ಸೂಕ್ತ ವಿವರಣೆ ನೀಡಿರುವುದಿಲ್ಲ. ಆದ್ದರಿಂದ ಕ್ರ.ಸಂ. (1) ರಿಂದ (3) ರವರೆಗಿನ ಮೊತ್ತ ರೂ: 4,94,319/– ಸ್ವೀಕೃತವಾಗದಿದ್ದರೂ ಸಹ, ಇದನ್ನು ಜಮೆಯಾಗಿ ತೋರಿಸಿರುವುದು ತಪ್ಪು ಲೆಕ್ಕ ನಿರ್ವಹಣೆಯಾಗಿರುತ್ತದೆ. ಈ ಕುರಿತು ಕ್ರಮ ವಹಿಸಿ, ವಾರ್ಷಿಕ ಲೆಕ್ಕಪತ್ರಗಳಲ್ಲಿ ಸರಿಪಡಿಸಲು ಸೂಚಿಸಿದೆ.

**11. ಮುಂಗಡಗಳು**

2018–19ನೇ ಸಾಲಿನ ಅಡಾವೆ ಪತ್ರದಲ್ಲಿ ಕೆಳಕಂಡ ಕಾಮಗಾರಿಗಳಿಗಾಗಿ "ಮುಂಗಡ ವೆಚ್ಚ" ಎಂದು ರೂ.2,97,92,676.00 ಗಳನ್ನು ನಮೂದಿಸಲಾಗಿರುತ್ತದೆ. ವಿವರಗಳು ಕೆಳಕಂಡಂತಿವೆ:

| ಕ್ರ.ಸಂ. | ವಿವರಗಳು | ಪಾವತಿಸಿರುವ ಮುಂಗಡ ಮೊತ್ತ ರೂ. ಗಳಲ್ಲಿ |
|---|---|---|
| 1 | Advance for Building Construction Karnataka Sanskrit University-I | 1,40,00,000.00 |
| 2. | Advance for Building Construction Karnataka Sanskrit University -I I | 40,00,000.00 |
| 3. | Advance for Hostel Const-Sc/St Maharaja Sanskrit College, Mysore. | 57,92,676.00 |
| 4 | Advance for Expenses Boys Hostel Karnataka Sanskrit University. | 60,00,000.00 |
| | **ಒಟ್ಟು ಮೊತ್ತ ರೂ:** | **2,97,92,676.00** |

ಮೇಲ್ಕಂಡ ಕಾಮಗಾರಿಗಳಲ್ಲಿ ಕ್ರ.ಸಂ. (1)ರ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕಟ್ಟಡ-1 2018-19 ರಲ್ಲಿ ನಿರ್ಮಾಣವಾಗಿದ್ದು, ಲೆಕ್ಕಪತ್ರ ನಿಯಮಗಳ ಪ್ರಕಾರ, ಕಾಮಗಾರಿ ಪೂರ್ಣಗೊಂಡ ಕಟ್ಟಡದ ಮೊತ್ತವನ್ನು ಸ್ಥಿರಾಸ್ತಿಯಾಗಿ ಅಡಾವೆ ಪತ್ರದಲ್ಲಿ ನಮೂದಿಸಬೇಕಾಗಿರುತ್ತದೆ. ಆದರೆ 2018-19ನೇ ಸಾಲಿನ ಅಡಾವೆ ಪತ್ರದಲ್ಲಿ ಈ ಕಾಮಗಾರಿಗೆ ಪಾವತಿಸಿರುವ ಮುಂಗಡ ವೆಚ್ಚವೆಂದೇ ತೋರಿಸಿರುವುದು ತಪ್ಪಾಗಿರುತ್ತದೆ. ಈ ಕುರಿತು ವಿವರಣೆ ನೀಡುವಂತೆ, ಲೆಕ್ಕ ವಿಚಾರಣಾ ಪತ್ರ ಸಂಖ್ಯೆ : 34/18.09.2019 ರಂದು ಮಾಹಿತಿ ಕೇಳಲಾಗಿದ್ದು, ದಿನಾಂಕ: 30.09.2019 ರಂದು ವಿಶ್ವವಿದ್ಯಾಲಯವು ನೀಡಿರುವ ಉತ್ತರದಲ್ಲಿ, ಸದರಿ ನ್ಯೂನತೆಯನ್ನು ಮುಂದಿನ ಪರಿಷ್ಕೃತ ಅಡಾವೆ ಪತ್ರದಲ್ಲಿ ಸರಿಪಡಿಸಿಕೊಳ್ಳಲಾಗುವುದೆಂದು ಉತ್ತರ ನೀಡಿರುತ್ತಾರೆ. ಈ ಬಗ್ಗೆ ಸೂಕ್ತ ಕ್ರಮವಹಿಸಿ, ಮುಂದಿನ ಲೆಕ್ಕಪರಿಶೋಧನೆಗೆ ಒದಗಿಸುವಂತೆ ಸೂಚಿಸಿದೆ.

12. **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಹೂಡಿಕೆಗಳಿಂದ ಅರ್ಜಿಸಿರುವ ಬಡ್ಡಿಗಳ ಮೇಲಿನ ಆದಾಯ ತೆರಿಗೆ ಮೊತ್ತವು ಜಮೆಯಾಗದಿರುವುದು.**

2018-19ನೇ ಸಾಲಿಗೆ ಸಂಬಂಧಿಸಿದಂತೆ, ವಾರ್ಷಿಕ ಲೆಕ್ಕಪತ್ರಗಳಲ್ಲಿ ರೂ. **6,46,531.00** ಬಡ್ಡಿಗಳ ಮೇಲಿನ ಆದಾಯ ತೆರಿಗೆ ಕಟಾವಣೆ (TDS) ಎಂದು ನಮೂದಿಸಲಾಗಿದೆ. ಈ ಸಂಬಂಧ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :04/2018-19 ದಿ: 09.09.2019ರಲ್ಲಿ, ಸದರಿ ಸಾಲಿನಲ್ಲಿ ಆದಾಯ ತೆರಿಗೆ ಇಲಾಖೆಯ ನಮೂನೆ 26 ಎಎಸ್ ದಾಖಲಾತಿಯನ್ನು ಒದಗಿಸಲು ಕೋರಿದ್ದು, ವಿಶ್ವವಿದ್ಯಾಲಯವು ಒದಗಿಸಿರುವ ನಮೂನೆ 26 ಎಎಸ್ ಪ್ರಕಾರ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಖಾತೆಗೆ ಜಮೆಯಾದ ಟಿಡಿಎಸ್ ರೂ. 6,40,135.00 ಆಗಿರುತ್ತದೆ. ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳಲ್ಲಿ ಹೂಡಿಕೆಗಳಿಂದ ಅರ್ಜಿಸಿರುವ ಬಡ್ಡಿಗಳ ಮೇಲಿನ ಆದಾಯ ತೆರಿಗೆ ಮೊತ್ತ ರೂ: 6,46,531.00 ಗಳಾಗಿದ್ದು, ಒಂದಕ್ಕೊಂದು ತಾಳೆಯಾಗಿರುವುದಿಲ್ಲ. ಇವುಗಳ ವ್ಯತ್ಯಾಸದ ಮೊತ್ತ ರೂ. 6,396.00 ಗಳಾಗಿದ್ದು, ಬ್ಯಾಂಕಿನಿಂದ ಹೆಚ್ಚುವರಿಯಾಗಿ ಆದಾಯ ತೆರಿಗೆಯ ಮೊತ್ತವನ್ನು ಕಟಾಯಿಸಲಾಗಿರುತ್ತದೆ. ಈ ಕುರಿತು ವಿಶ್ವವಿದ್ಯಾಲಯವು ಕೈಗೊಂಡಿರುವ ಕ್ರಮದ ಬಗ್ಗೆ ಯಾವುದೇ ಸೂಕ್ತ ವಿವರಣೆ ನೀಡಿರುವುದಿಲ್ಲ. ಸದರಿ ಮೊತ್ತವನ್ನು ಬ್ಯಾಂಕ್ ಅಧಿಕಾರಿಗಳು ವಿಶ್ವವಿದ್ಯಾಲಯದ ಪ್ಯಾನ್ ಖಾತೆಗೆ ಆದಾಯ ತೆರಿಗೆಯಾಗಿ ಜಮೆ ಮಾಡಬೇಕು. ಇಲ್ಲವೇ ಈ ಮೊತ್ತವನ್ನು ಬಡ್ಡಿಯಾಗಿ ವಿಶ್ವವಿದ್ಯಾಲಯಕ್ಕೆ ನೀಡಬೇಕಾಗಿರುತ್ತದೆ. ಆದ್ದರಿಂದ ಸದರಿ ವ್ಯತ್ಯಾಸದ ಮೊತ್ತ ರೂ. 6,396/- ಗಳನ್ನು ವಸೂಲಾತಿಗೆ ಸೂಚಿಸಿದೆ.

**13. ಅಮಾನತು ಖಾತೆಯಲ್ಲಿ (Suspense Account) ಲಭ್ಯವಿರುವ ಮೊತ್ತ.**

2018–19 ನೇ ಸಾಲಿನ ಅಡಾವೆ ಪತ್ರದಲ್ಲಿ ಅಮಾನತು ಖಾತೆಯಲ್ಲಿ ರೂ. 15,635/– ಗಳನ್ನು ನಮೂದಿಸಲಾಗಿದೆ. ಅಮಾನತು ಖಾತೆಯಲ್ಲಿರುವ ಈ ಮೊತ್ತದ ಮೂಲ ಹಾಗೂ ಯಾರಿಗೆ ಸಂದಾಯವಾಗಿದೆ ಎಂಬುದರ ಬಗ್ಗೆ ವಿಶ್ವವಿದ್ಯಾಲಯದಲ್ಲಿ ಮಾಹಿತಿ ಇರುವುದಿಲ್ಲ. ಅಮಾನತು ಖಾತೆಯಲ್ಲಿ ಶಿಲ್ಕು ಲಭ್ಯವಿರುವುದು ವಿಶ್ವವಿದ್ಯಾಲಯದ ಲೆಕ್ಕಪತ್ರ ನಿರ್ವಹಣೆಯಲ್ಲಿ ನ್ಯೂನತೆಗಳಿರುವುದನ್ನು ಸೂಚಿಸುತ್ತದೆ. ಈ ಬಗ್ಗೆ ಪರಿಶೀಲಿಸಿ ಮಾಹಿತಿಯನ್ನು ಪಡೆದು ಲೆಕ್ಕ ಪತ್ರಗಳನ್ನು ಸರಿಪಡಿಸುವವರೆಗೂ ಅಮಾನತು ಖಾತೆಯಲ್ಲಿರುವ ಮೊತ್ತ ರೂ. 15,635/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

14. **ವಿಶೇಷ ಘಟಕ ಯೋಜನೆ/ ಗಿರಿಜನ ಉಪಯೋಜನೆ ಅನುದಾನವನ್ನು ಅಡಾವೆ ಪತ್ರದಲ್ಲಿ ತಪ್ಪಾಗಿ ನಮೂದಿಸಿರುವುದು.**

i) 2018–19 ನೇ ಸಾಲಿನ ಅಡಾವೆ ಪತ್ರದಲ್ಲಿ ವಿಶೇಷ ಘಟಕ ಯೋಜನೆ/ ಗಿರಿಜನ ಉಪಯೋಜನೆ ಅನುದಾನಕ್ಕೆ ಸಂಬಂಧಿಸಿದಂತೆ, ಹೊಣೆಗಾರಿಕೆ ಬದಿಯಲ್ಲಿ ರೂ. 7,14,28,562/– ಹಾಗೂ ಆಸ್ತಿ ಬದಿಯಲ್ಲಿ ರೂ. 6,39,42,802/– ಗಳ ಮೊತ್ತವನ್ನು ನಮೂದಿಸಿದ್ದು, ದ್ವಿನಮೂದು ಲೆಕ್ಕಪತ್ರಗಳನ್ವಯ, ಯಾವುದೇ ಹೊಣೆಗಾರಿಕೆ ಮತ್ತು ಆಸ್ತಿಗಳ ಮೊತ್ತಗಳು ಸಮವಾಗಿರಬೇಕಾಗಿರುತ್ತದೆ.

ii) 2017–18 ಮತ್ತು 2018–19ನೇ ಸಾಲಿನ ಅಡಾವೆ ಪತ್ರವನ್ನು ತಾಳೆ ಮಾಡಿ ಪರಿಶೀಲಿಸಿದಾಗ, ಈ ಯೋಜನೆಗಳ ಅನುದಾನಕ್ಕೆ ಸಂಬಂಧಿಸಿದಂತೆ, ಹೊಣೆಗಾರಿಕೆಯ ಬದಿಯಲ್ಲಿ ಮೊತ್ತವನ್ನು ಎರಡೂ ವರ್ಷಗಳಲ್ಲಿಯೂ ಸಹ ರೂ: 7,14,28,562.00 ನಮೂದಿಸಲಾಗಿರುತ್ತದೆ. ಈ ಯೋಜನೆಯ ಬಳಕೆಯಾಗದೇ ಅನುದಾನವನ್ನು ಹೂಡಿಕೆ ಮಾಡಲಾಗಿದ್ದು, ಸದರಿ ಸಾಲಿನಲ್ಲಿ ಅರ್ಜಿಸಿದ ಬಡ್ಡಿಯನ್ನು ಮರು ಹೂಡಿಕೆ ಮಾಡಲಾಗಿರುವ ವಿವರಗಳನ್ನು ಒದಗಿಸುವಂತೆ, ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 02/06.09.2019 ರಲ್ಲಿ ಮಾಹಿತಿ ಕೋರಲಾಗಿತ್ತು. ದಿನಾಂಕ: 13.09.2019 ರಂದು ಒದಗಿಸಿರುವ ಅನುಸರಣೆಯು ಈ ಕೆಳಗಿನಂತಿರುತ್ತವೆ.

| ಕ್ರ, ಸಂ. | ವಿವರಣೆ | ಮೊತ್ತ ರೂ.ಗಳಲ್ಲಿ |
|---|---|---|
| | **ಹೊಣೆಗಾರಿಕೆ** | |
| 1 | Grant Balance | 7,14,28,562.00 |
| 2 | Interest Received (Less Tds) | 38,15,024.00 |
| | **ಒಟ್ಟು ಮೊತ್ತ ರೂ:** | 7,52,43,586.00 |
| | ಆಸ್ತಿ | |
| 1 | Balance in Deposit Account as on 31.03.2019 | 6,39,42,802.00 |
| 2 | Balance in S.B. A/c No. 64069994360(F.O.A/c) | 2,10,784.00 |
| 3 | Advance for Hostel Construction | 1,10,90,000.00 |
| | **ಒಟ್ಟು ಮೊತ್ತ ರೂ:** | 7,52,43,586.00 |

ಮೇಲ್ಕಂಡ ವಿವರಣೆಯನ್ನು ಪರಿಶೀಲಿಸಿದಾಗ, ಆಸ್ತಿ ಮತ್ತು ಹೊಣೆಗಾರಿಕೆಗಳು ತಾಳೆಯಾಗಿದ್ದು, ವಿಶೇಷ ಘಟಕ ಯೋಜನೆ/ ಗಿರಿಜನ ಉಪಯೋಜನೆ ಅನುದಾನಕ್ಕೆ ಸಂಬಂಧಿಸಿದಂತೆ, 2018–19ನೇ ಸಾಲಿನಲ್ಲಿ ಅರ್ಜಿತವಾದ ಬಡ್ಡಿ ಮೊತ್ತ ರೂ: 38,15,024.00 ಗಳನ್ನು ಅಡಾವೆ ಪತ್ರದಲ್ಲಿ ಪರಿಗಣಿಸದೇ ಮೂಲ ಮೊತ್ತವನ್ನು ಮಾತ್ರ ನಮೂದಿಸಿರುವುದು ಲೆಕ್ಕಪತ್ರಗಳಲ್ಲಿನ ನ್ಯೂನ್ಯತೆಯನ್ನು ತೋರಿಸುತ್ತದೆ. ಈ ಕಾರಣಗಳಿಂದ 2018–19 ನೇ ಸಾಲಿನ ಅಡಾವೆ ಪತ್ರದಲ್ಲಿ ತೋರಿಸಿರುವ ವಿಶೇಷ ಘಟಕ ಯೋಜನೆ/ ಗಿರಿಜನ ಉಪಯೋಜನೆ ಹೊಣೆಗಾರಿಕೆ ಮೊತ್ತವನ್ನು ಲೆಕ್ಕಪರಿಶೋಧನೆಯಲ್ಲಿ ಪ್ರಮಾಣೀಕರಿಸಲು ಸಾಧ್ಯವಾಗಿರುವುದಿಲ್ಲ.

**15. ಅಡಾವೆ ಪತ್ರದ ಆಸ್ತಿ ಮತ್ತು ಹೊಣೆಗಾರಿಕೆಗಳಲ್ಲಿ ಅನುದಾನಗಳ ಮೊತ್ತ ಹೊಂದಾಣಿಕೆಯಾಗದಿರುವುದು.**

2018–19 ನೇ ಸಾಲಿನ ಅಡಾವೆ ಪತ್ರದಲ್ಲಿ, ಈ ಕೆಳಕಂಡ ಅನುದಾನಗಳ ಹೊಣೆಗಾರಿಕೆ & ಆಸ್ತಿಯ ಮೊತ್ತದಲ್ಲಿ ವ್ಯತ್ಯಾಸ ಇರುವುದು ಕಂಡು ಬಂದಿದೆ. ವಿವರಗಳು ಕೆಳಕಂಡಂತಿರುತ್ತವೆ.

**(ರೂ.ಗಳಲ್ಲಿ)**

| Sl. No. | Grants | Liability Amt. | Asset Amt | Diffrence Amt |
|---|---|---|---|---|
| 1. | Block Grants | 2,10,00,485.00 | 90,13,058.00(Invst)<br>1,28,39,546.00(Bank)<br>2,18,52,604.00(Total) | 8,52,119.00 |
| 2. | Development Grant | - | 1,92,65,505.00 | 1,92,65,505.00 |
| 3. | National Service Scheme | - | 1,00,099.00 | 1,00,099.00 |

ವಿಶ್ವವಿದ್ಯಾಲಯವು ಲೆಕ್ಕಪತ್ರ ನಿರ್ವಹಣೆಯನ್ನು ದ್ವಿನಮೂದು ಪದ್ಧತಿಯಲ್ಲಿ ನಿರ್ವಹಿಸುತ್ತಿದ್ದು, ಈ ಪದ್ಧತಿಯನ್ವಯ, ಆಸ್ತಿ ಮತ್ತು ಹೊಣೆಗಾರಿಕೆಗಳ ಮೊತ್ತಗಳು ಒಂದಕ್ಕೊಂದು ಪೂರಕವಾಗಿರಬೇಕು. 2018–19ನೇ ಸಾಲಿನ ಅಡಾವೆ ಪತ್ರವನ್ನು ಪರಿಶೀಲಿಸಲಾಗಿ, ಕ್ರ.ಸಂ. (1) ಕ್ಕೆ ಸಂಬಂಧಿಸಿದಂತೆ, ಹೊಣೆಗಾರಿಕೆಗಿಂತ ಆಸ್ತಿ ಮೊತ್ತವು ಅಧಿಕವಾಗಿದ್ದು, ಕ್ರಮ ಸಂಖ್ಯೆ: (2) ಮತ್ತು (3)ರ ಆಸ್ತಿ ಮೊತ್ತಕ್ಕೆ ಸಂಬಂಧಿಸಿದಂತೆ, ಹೊಣೆಗಾರಿಕೆ ಮೊತ್ತವನ್ನು ನಮೂದಿಸಿರುವುದಿಲ್ಲ. ಈ ನ್ಯೂನತೆಗಳಿಗೆ ವಿವರಣೆ ಕೋರಿ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 08/11.09.2019 ರಲ್ಲಿ ಮಾಹಿತಿ ಕೋರಲಾಗಿದ್ದು, ದಿನಾಂಕ: 30.09.2019 ರಂದು ನೀಡಿರುವ ಉತ್ತರದಲ್ಲಿ, ಈ ನ್ಯೂನ್ಯತೆಯನ್ನು ಸರಿಪಡಿಸಿ ಸೂಕ್ತ ಕ್ರಮವನ್ನು ಕೈಗೊಂಡು ಅಡಾವೆ ಪತ್ರವನ್ನು ಪರಿಷ್ಕರಣೆ ಮಾಡಲಾಗುವುದೆಂದು ತಿಳಿಸಲಾಗಿದೆ. ಪರಿಷ್ಕೃತ ಅಡಾವೆ ಪತ್ರವನ್ನು ಮುಂದಿನ ಲೆಕ್ಕಪರಿಶೋಧನೆಗೆ ಒದಗಿಸುವಂತೆ ಸೂಚಿಸಲಾಗಿದೆ.

**16. ನಗದು ಪುಸ್ತಕ:–**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಜಮೆ ಮತ್ತು ಪಾವತಿಗಳಿಗೆ ಸಂಬಂಧಿಸಿದಂತೆ ಒಟ್ಟು 9 ಎಸ್.ಬಿ. ಖಾತೆಗಳಲ್ಲಿ ವಹಿವಾಟನ್ನು ನಡೆಸಿದ್ದು, ಜಮೆ ಮತ್ತು ಪಾವತಿಗಳಿಗೆ ಸಂಬಂಧಿಸಿದಂತೆ ನಗದು ಪುಸ್ತಕವನ್ನು ನಿರ್ವಹಿಸಿರುವುದಿಲ್ಲ.

ಕರ್ನಾಟಕ ಆರ್ಥಿಕ ಸಂಹಿತೆ 1958 ರ ಆರ್ಟಿಕಲ್ 327 ರಿಂದ 331 ರ ಅನ್ವಯ ನಗದು ಪುಸ್ತಕವನ್ನು ನಿರ್ವಹಿಸಬೇಕಾಗಿರುತ್ತದೆ ಹಾಗೂ ಪ್ರತಿ ತಿಂಗಳ ಕೊನೆಯ ದಿನಾಂಕದಂದು ನಗದು ಪುಸ್ತಕವನ್ನು ಮುಕ್ತಾಯ

ಮಾಡಿ ಬಟವಾಡೆ ಅಧಿಕಾರಿಯು ದೃಢೀಕರಣದೊಂದಿಗೆ ನಗದು ಪುಸ್ತಕದಲ್ಲಿ ಸಹಿ ಮಾಡಬೇಕಾಗಿರುತ್ತದೆ. ವಿಶ್ವವಿದ್ಯಾಲಯದ ಪ್ರವೇಶ ಶುಲ್ಕಗಳು, ಸರ್ಕಾರ ಮತ್ತು ಸರ್ಕಾರೇತರ ಅನುದಾನಗಳ ಸ್ವೀಕೃತಿಗಳು, ಕಾಮಗಾರಿ ವೆಚ್ಚಗಳು, ಸರಕು ಸಂಗ್ರಹಣಾ ಪಾವತಿಗಳು, ಉತ್ತರ ಪುಸ್ತಕಗಳ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಸಂಭಾವನೆ, ಪ್ರಯಾಣ ಭತ್ಯೆ, ಸಂಚಾರ ಭತ್ಯೆ, ಪರೀಕ್ಷಾ ಕಾರ್ಯಕ್ಕೆ ಸಂಬಂಧಿಸಿದಂತೆ ಸಂಗ್ರಹಣೆ ಮಾಡಲಾದ ವಿವಿಧ ರೀತಿಯ ಲೇಖನ ಸಾಮಗ್ರಿಗಳ ವೆಚ್ಚ, ಜಾಹೀರಾತು ವೆಚ್ಚ, ಕಛೇರಿ ವೆಚ್ಚ, ವಾಹನ ಬಾಡಿಗೆ ಇತ್ಯಾದಿ ವೆಚ್ಚಕ್ಕೆ ಸಂಬಂಧಿಸಿದಂತೆ ಚೆಕ್ಕುಗಳ ಮೂಲಕ ಹಣ ಪಾವತಿಸಿರುವುದು ಕಂಡುಬರುತ್ತದೆ. ಆದರೆ, ಜಮೆ ಮತ್ತು ಪಾವತಿಗಳ ದೈನಂದಿನ ಹಣಕಾಸು ವ್ಯವಹಾರಗಳನ್ನು ದಾಖಲಿಸಲು ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ 327 ರಿಂದ 331ರ ನಿಯಮದಂತೆ ಸಾಮಾನ್ಯ ನಗದುಪುಸ್ತಕವನ್ನು ನಿರ್ವಹಿಸಿರುವುದಿಲ್ಲ. ಮುಂದುವರೆದು, ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ 4(ಬಿ) (ii) ರಲ್ಲಿನ ನಿಯಮಗಳನ್ನು ಅನುಷ್ಠಾನಗೊಳಿಸಿಲ್ಲ. ಮೇಲ್ಕಂಡ ನಿಯಮಗಳಂತೆ ಕಡ್ಡಾಯವಾಗಿ ಪ್ರತಿ ಲೆಕ್ಕಖಾತೆಗೆ ಪ್ರತ್ಯೇಕವಾಗಿ ನಗದು ಪುಸ್ತಕವನ್ನು ನಿರ್ವಹಿಸುವಂತೆ ಸೂಚಿಸಲಾಗಿದೆ.

**17. ವಿಶ್ವವಿದ್ಯಾಲಯವು ಪರಿನಿಯಮಗಳನ್ನು ರಚಿಸಿಕೊಳ್ಳದೆ ಕಾರ್ಯನಿರ್ವಹಿಸುತ್ತಿರುವುದು.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2018-19 ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ರಚಿಸಿಕೊಂಡಿರುವ ಪರಿನಿಯಮಗಳ ಕುರಿತು ಪರಿಶೀಲಿಸಿದಾಗ, ವಿಶ್ವವಿದ್ಯಾಲಯವು 2008-09 ರಿಂದ ಕಾರ್ಯಾರಂಭವಾಗಿದ್ದು. 10 ವರ್ಷಗಳು ಪೂರ್ಣಗೊಂಡಿದ್ದರೂ ಸಹ, ಇದುವರೆಗೂ ವಿಶ್ವವಿದ್ಯಾಲಯವು ಯಾವುದೇ ಪರಿನಿಯಮಗಳನ್ನು ರಚಿಸಿಕೊಳ್ಳದೇ ಕಾರ್ಯನಿರ್ವಹಿಸುತ್ತಿದೆ. ವಿಶ್ವವಿದ್ಯಾಲಯ ಪರಿನಿಯಮಗಳಿಗೆ ಸಂಬಂಧಿಸಿದಂತೆ, ಹಿಂದಿನ ಲೆಕ್ಕ ತನಿಖೆಗಳಲ್ಲೂ ಆಕ್ಷೇಪಿಸಿದ್ದು, ಈ ವಿಷಯದ ಕುರಿತು ವಿಶ್ವವಿದ್ಯಾಲಯವು ಅಗತ್ಯ ಕ್ರಮಗಳನ್ನು ಕೈಗೊಳ್ಳದಿರುವುದು ಕಂಡುಬಂದಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮ 2009ರ ಅಧ್ಯಾಯ-5ರ ನಿಯಮ 38 ರನ್ವಯ ವಿಶ್ವವಿದ್ಯಾಲಯಗಳು ಪರಿನಿಯಮಗಳನ್ನು ರಚಿಸಿಕೊಂಡು ಕಾರ್ಯ ನಿರ್ವಹಿಸಬೇಕಾಗಿರುತ್ತದೆ. ಅಲ್ಲದೇ ಸದರಿ ಅಧಿನಿಯಮದ ಕಲಂ 54 ರ ಅನ್ವಯ ವಿಶ್ವವಿದ್ಯಾಲಯವು ತನ್ನ ನಿಧಿಯ ಬಳಕೆಗೆ ಪರಿನಿಯಮಗಳನ್ನು ರಚಿಸತಕ್ಕದಾಗಿದ್ದು, ಅಂತಹ ಯಾವುದೇ ಪರಿನಿಯಮಗಳನ್ನು ರಚಿಸದೇ 2018-19 ನೇ ಸಾಲಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009ರ ನಿಯಮ 38 ಹಾಗೂ 54 ಅನ್ನು ಉಲ್ಲಂಘಿಸಿ, ಕಾರ್ಯನಿರ್ವಹಿಸಿರುವುದು ಮತ್ತು ತನ್ನ ನಿಧಿಯನ್ನು ಬಳಸಿಕೊಂಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಇದನ್ನು ಲೆಕ್ಕಪರಿಶೋಧನೆಯಲ್ಲಿ ಗಂಭೀರವಾಗಿ ಪರಿಗಣಿಸಿದ್ದು, ಕೂಡಲೇ ಈ ಬಗ್ಗೆ ಪರಿನಿಯಮಗಳನ್ನು ರಚಿಸಿಕೊಂಡು ಕಾರ್ಯ ನಿರ್ವಹಿಸಲು ಸೂಚಿಸಿದೆ.

**18. ಲೆಕ್ಕಪರಿಶೋಧನಾ ಅಭಿಪ್ರಾಯ:-**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2018-19ನೇ ಸಾಲಿನ ಲೆಕ್ಕಪರಿಶೋಧನೆಯನ್ನು ವಿಶ್ವವಿದ್ಯಾಲಯಕ್ಕೆ ಅನ್ವಯಿಸುವಂತಹ ಕಾಯ್ದೆ, ನಿಯಮಗಳು ಮತ್ತು ಇತರೆ ಶಾಸನಗಳಲ್ಲಿ ಕಲ್ಪಿಸಲಾದ ಅವಕಾಶಗಳು ಹಾಗೂ ಲೆಕ್ಕಪರಿಶೋಧನಾ ವಿಧಾನಗಳ ಅನುಸಾರ ಕೈಗೊಳ್ಳಲಾಗಿರುತ್ತದೆ. ಲೆಕ್ಕಪರಿಶೋಧನೆಯ ಹೊಣೆಯು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳ ಆಧಾರದ ಮೇಲೆ ವಿಶ್ವವಿದ್ಯಾಲಯದ ಹಣಕಾಸು ಲೆಕ್ಕಪತ್ರಗಳ ಕುರಿತು ಅಭಿಪ್ರಾಯ ವ್ಯಕ್ತಪಡಿಸುವ ಮಿತಿಗೆ ಸೀಮಿತವಾಗಿರುತ್ತದೆ.

ಆದರೆ ಕಂಡಿಕೆ 5 ರಿಂದ 17 ರವರೆಗೆ ಗಮನಿಸಿರುವ ಲೋಪದೋಷಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2018–19ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ದೃಢೀಕರಿಸಲು ಸಾಧ್ಯವಾಗಿರುವುದಿಲ್ಲ.

ಆದ್ದರಿಂದ ಮೇಲೆ ತಿಳಿಸಿರುವ ಎಲ್ಲಾ ಲೋಪದೋಷಗಳನ್ನು ಸರಿಪಡಿಸಿಕೊಂಡು ಸೂಕ್ತ ಲೆಕ್ಕ ನಮೂದಿನೊಂದಿಗೆ ಲೆಕ್ಕಪತ್ರಗಳನ್ನು ನಿರ್ವಹಿಸಲು ಸೂಚಿಸಿದೆ ಹಾಗೂ ಸಮರ್ಪಕ ಲೆಕ್ಕ ನೀತಿಯನ್ನು ಅಳವಡಿಸಿ ದಾಖಲಾತಿಗಳನ್ನು ನಿರ್ವಹಿಸಿ, ಪೂರ್ಣ ಮಾಹಿತಿ ನೀಡುವಂಥಹ ಲೆಕ್ಕಪತ್ರಗಳನ್ನು ತಯಾರಿಸಲು ಸೂಚಿಸಿದೆ.

ಅಪರ ನಿರ್ದೇಶಕರು
ಬೆಂಗಳೂರು ಪ್ರಾಂತೀಯ ಕಛೇರಿ
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು
ಲೆಕ್ಕಪತ್ರ ಇಲಾಖೆ,
ಬೆಂಗಳೂರು

## 19. ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೂಚಿಸಿದ ಗುರುತರ ಆಕ್ಷೇಪಣೆಗಳು ಮತ್ತು ವಸೂಲಾತಿ ಪ್ರಕರಣಗಳ ಇತ್ಯರ್ಥಕ್ಕೆ ವಿಶ್ವವಿದ್ಯಾಲಯ ತೆಗೆದುಕೊಂಡಿರುವ ಕ್ರಮಗಳು.

2008–09 ರಿಂದ 2017–18 ನೇ ಸಾಲಿನವರೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳು ವಿಶ್ವವಿದ್ಯಾಲಯದ ಕಾರ್ಯ ವ್ಯಾಪ್ತಿಯಲ್ಲಿ ಬರುವ ವಿವಿಧ ವಿಭಾಗಗಳಲ್ಲಿ ನಡೆಸಲಾದ ವಹಿವಾಟುಗಳ ಸ್ಥಳೀಯ ಲೆಕ್ಕಪರಿಶೋಧನೆಯನ್ನು ಕೈಗೊಂಡು ವರದಿಗಳನ್ನು ಜಾರಿಮಾಡಲಾಗಿರುತ್ತದೆ. ಲೆಕ್ಕಪರಿಶೋಧನಾ ವರದಿಗಳಲ್ಲಿ ತಿಳಿಸಿರುವ ಆಕ್ಷೇಪಣೆಗಳು ಮತ್ತು ವಸೂಲಾತಿ ಪ್ರಕರಣಗಳ ಇತ್ಯರ್ಥದ ಬಗ್ಗೆ, ವಿಶ್ವವಿದ್ಯಾಲಯದ ಅಧಿಕಾರಿಗಳು ಆಸಕ್ತಿ ತೋರಿಸದ ಕಾರಣ 2008–09 ರಿಂದ 2017–18 ನೇ ಸಾಲಿನವರೆಗಿನ ಆಕ್ಷೇಪಾರ್ಹ ವಹಿವಾಟುಗಳು ಮತ್ತು ವಸೂಲಾತಿ ಪ್ರಕರಣಗಳ ಬಾಬ್ತು ಅನುಕ್ರಮವಾಗಿ ಏರಿಕೆಯಾಗಿರುತ್ತದೆ. ಅನುಪಾಲನಾ ವರದಿಗಳನ್ನು ಸಕಾಲದಲ್ಲಿ ಸಲ್ಲಿಸದ ಕಾರಣ ವರದಿಗಳಲ್ಲಿ ಸೂಚಿಸಿರುವ ಆಕ್ಷೇಪಣೆಗಳು, ವಸೂಲಾತಿ ಪ್ರಕರಣಗಳು ಅದೇ ರೀತಿ ಪ್ರತಿ ವರ್ಷಗಳಲ್ಲಿ ಪುನರಾವರ್ತನೆಗೊಳ್ಳುತ್ತಿವೆ. ವಸೂಲಾತಿಗೆ ಸೂಚಿಸಿರುವ ಹೆಚ್ಚುವರಿ ವೇತನ ಭತ್ಯೆಗಳು, ತೆರಿಗೆಗಳು, ವೇತನ ನಿಗಧಿಯಲ್ಲಿ ಲೋಪಗಳು, ಓವರ್ ಟೈಂ ಕೆಲಸಕ್ಕೆ ನಿಯಮಬಾಹಿರವಾಗಿ ಪಾವತಿಸಿರುವ ಹೆಚ್ಚುವರಿ ಭತ್ಯೆಗಳು, ಇತ್ಯಾದಿಗಳು ಸಕಾಲದಲ್ಲಿ ವಸೂಲಾತಿ ಆಗದಿದ್ದರೆ ಅಂತಹ ಬಾಬ್ತುಗಳು ವಸೂಲಾಗದ ಹಂತ ತಲುಪಿ ವಿಶ್ವವಿದ್ಯಾಲಯಕ್ಕೆ ನಷ್ಟ ಉಂಟಾಗುತ್ತದೆ. ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಳಂಬ ಉಂಟಾದಲ್ಲಿ ವಿಶ್ವವಿದ್ಯಾಲಯದ ಹಣಕಾಸಿನ ಮೇಲಿನ ನಿಯಂತ್ರಣ ಮತ್ತಷ್ಟು ದುರ್ಬಲವಾಗಿ ಹಣಕಾಸಿನ ದುರುಪಯೋಗ ಮತ್ತು ನಷ್ಟದ ಪ್ರಕರಣಗಳು ಉಂಟಾಗಲು ಅವಕಾಶ ನೀಡಿದಂತಾಗುವುದು. ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣೆ ಮತ್ತು ವಸೂಲಾತಿ ಮೊಬಲಗಿನ ತೀರುವಳಿಗೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿಕೊಂಡು ಕಾಲಮಿತಿಯಲ್ಲಿ ಅನುಪಾಲನಾ ವರದಿಗಳನ್ನು ಸಲ್ಲಿಸುವುದು ಅವಶ್ಯಕವೆಂದು ಅಭಿಪ್ರಾಯಪಡಲಾಗಿದೆ. ಸಂಬಂಧಿಸಿದ ಲೆಕ್ಕ ತನಿಖೆ ವರದಿಗಳ ವಿವರ ಈ ಕೆಳಕಂಡಂತಿದೆ.

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ 2008–09 ರಿಂದ 2017–18 ನೇ ಸಾಲಿನವರೆಗೆ ಬಾಕಿ ಇರುವ ಆಕ್ಷೇಪಣೆ ಮೊತ್ತ ಮತ್ತು ವಸೂಲಾತಿ ಮೊತ್ತದ ಕಂಡಿಕೆಯ ವಿವರಗಳ ತ:ಖ್ತೆ**

(ರೂ.ಗಳಲ್ಲಿ)

| ಕ್ರ. ಸಂ. | ವರ್ಷ | ಆಕ್ಷೇಪಣೆ ಕಂಡಿಕೆಗಳ ಸಂಖ್ಯೆ | ಆಕ್ಷೇಪಣೆ ಮೊತ್ತ ರೂ.ಗಳಲ್ಲಿ | ವಸೂಲಾತಿ ಕಂಡಿಕೆಗಳ ಸಂಖ್ಯೆ | ವಸೂಲಾತಿ ಮೊತ್ತ ರೂ.ಗಳಲ್ಲಿ |
|---|---|---|---|---|---|
| 1. | 2008–09 ರಿಂದ 2010–11 | 3 | 21,07,369.00 | 1 | 24,000.00 |
| 2. | 2011–12 | 18 | 99,12,345.00 | 6 | 70,368.00 |
| 3. | 2012–2013 ರಿಂದ 2014–15 | 58 | 25,23,23,437.00 | 19 | 29,16,029.00 |
| 4. | 2015–2016 | 14 | 8,61,71,747.00 | 3 | 4,35,533.00 |
| 5. | 2016–17 | 6 | 12,98,336.00 | 3 | 4,74,212.00 |
| 6. | 2017–18 | 16 | 1,52,47,239.00 | 9 | 16,69,870.00 |
| | **ಒಟ್ಟು ರೂ.** | **115** | **36,70,60,473.00** | **41** | **55,90,012.00** |

ಕರ್ನಾಟಕ ಆರ್ಥಿಕ ಇಲಾಖೆಯಿಂದ ಬಿಡುಗಡೆಯಾಗಿರುವ "Hand Book of Instructions for the Speedy Settlement of Audit Observations, Inspection Reports Speedy disposal of Audit

Paragraphs and Timely action on matter pertaining to the public Accounts committee, The Committee on public undertaking" ಎಂಬ ಮಾರ್ಗಸೂಚಿಯಂತೆ ಸೂಕ್ತ ಕ್ರಮ ವಹಿಸಿ ಲೆಕ್ಕಪರಿಶೋಧನಾ ವರದಿಗಳಲ್ಲಿನ ಕಂಡಿಕೆಗಳ ತೀರುವಳಿಗೆ ಅಗತ್ಯ ಕ್ರಮವಹಿಸಲು ಸೂಚಿಸಿದೆ.

**20. ಲೆಕ್ಕ ಪರಿಶೋಧನಾ ತೀರುವಳಿ ವಹಿಯನ್ನು ನಿರ್ವಹಿಸದಿರುವುದು:**

ಲೆಕ್ಕಪರಿಶೋಧನಾ ತೀರುವಳಿ ವಹಿಯನ್ನು ನಿರ್ವಹಿಸಿ, ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ. ವಹಿಯನ್ನು ಪ್ರತಿ ಆರ್ಥಿಕ ವರ್ಷದ ಲೆಕ್ಕ ತನಿಖೆ ವರದಿಗಳ ಸಂಕ್ಷಿಪ್ತ ವಿವರಗಳನ್ನು ದಾಖಲಿಸಿಕೊಂಡು ಸಂಬಂಧಿಸಿದ ಕಂಡಿಕೆಗಳಿಗೆ ಸೂಕ್ತ ಹಾಗೂ ಸಮರ್ಥನೀಯವಾದ ಅನುಪಾಲನಾ ಉತ್ತರಗಳನ್ನು ದಾಖಲಿಸಿಕೊಂಡು, ಕಂಡಿಕೆಗಳ ತೀರುವಳಿಯಾದ ಪಕ್ಷದಲ್ಲಿ ಕಂಡಿಕೆಗಳನ್ನು ತೀರುವಳಿ ಮಾಡಿದ ವಿವರವನ್ನು ಕೆಂಪು ಶಾಯಿಯಲ್ಲಿ ನಮೂದಿಸಿಕೊಂಡು ದೃಢೀಕರಣದೊಂದಿಗೆ ಮುಂದಿನ ತಪಾಸಣೆಗೆ ಹಾಜರುಪಡಿಸುವಂತೆ ಸೂಚಿಸಿದೆ.

**21. ಆಯವ್ಯಯ ಅಂದಾಜು ಮತ್ತು ವಾರ್ಷಿಕ ಲೆಕ್ಕಪತ್ರಗಳು**

ಹಣಕಾಸು ಅಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಇವರು ಒದಗಿಸಿರುವ 2018–19 ನೇ ಸಾಲಿನ ವಾರ್ಷಿಕ ಆಯವ್ಯಯ ಅಂದಾಜು ಮತ್ತು ವಾರ್ಷಿಕ ಲೆಕ್ಕಪತ್ರಗಳಲ್ಲಿನ ಅಂಕಿ ಅಂಶಗಳು ಈ ಕೆಳಗಿನಂತಿವೆ.

1. **ಸ್ವೀಕೃತಿ** **(ರೂ. ಲಕ್ಷಗಳಲ್ಲಿ)**

| ಪ್ರಸ್ತಾವಿತ ಅಂದಾಜು ಆಯವ್ಯಯ | ಅನುಮೋದಿತ ಆಯವ್ಯಯ ಅಂದಾಜು | ವಾರ್ಷಿಕ ಲೆಕ್ಕಪತ್ರಗಳು |
|---|---|---|
| 11890.39 | 5237.62 | 5655.03 |

2. **ಪಾವತಿ**

| ಪ್ರಸ್ತಾವಿತ ಅಂದಾಜು ಆಯವ್ಯಯ | ಅನುಮೋದಿತ ಆಯವ್ಯಯ ಅಂದಾಜು | ವಾರ್ಷಿಕ ಲೆಕ್ಕಪತ್ರಗಳು |
|---|---|---|
| 11890.39 | 5237.62 | 5181.78 |

ಮೇಲ್ಕಂಡ ಅಂಕಿ–ಅಂಶಗಳ ಕುರಿತಂತೆ ಸ್ವೀಕೃತ ಅನುದಾನ ಗಮನಿಸಿದಲ್ಲಿ, ಪ್ರಸ್ತಾಪಿತ ಆಯವ್ಯಯಕ್ಕೂ ವಾಸ್ತವಿಕವಾಗಿ ಸ್ವೀಕೃತವಾದ ಅನುದಾನ/ಆದಾಯಕ್ಕೂ ವ್ಯತ್ಯಾಸವಿದ್ದು, ವಿಶ್ವವಿದ್ಯಾಲಯವು ನಿರೀಕ್ಷಿತ ಅನುದಾನ/ಆದಾಯವನ್ನು ಪಡೆಯಲು/ಸಂಗ್ರಹಿಸಲು ವಹಿಸಲಾದ ಕ್ರಮಗಳ ಬಗ್ಗೆ ಮಾಹಿತಿ ನೀಡಿರುವುದಿಲ್ಲ. ಅದರಂತೆ ಪ್ರಸ್ತಾಪಿತ ಆಯವ್ಯಯಕ್ಕೂ ವಾಸ್ತವಿಕವಾಗಿ ಪಾವತಿಗೂ ಸಹ ವ್ಯತ್ಯಾಸವಿದ್ದು, ವಿವರಣೆ ಅವಶ್ಯವಾಗಿದೆ. ಅದರಂತೆ ಪ್ರಸ್ತಾಪಿತ ಆಯವ್ಯಯಕ್ಕೂ ವಾಸ್ತವಿಕವಾಗಿ ಪಾವತಿಗೂ ಹಾಗೂ ವಿಶ್ವವಿದ್ಯಾಲಯವು ಒದಗಿಸಿರುವ ವಾರ್ಷಿಕ ಲೆಕ್ಕ ಪತ್ರಗಳ ಅಂಕಿ ಅಂಶಗಳಿಗೂ ವ್ಯತ್ಯಾಸವಿರುತ್ತದೆ. ಆದ್ದರಿಂದ ಹಣಕಾಸು ಅಧಿಕಾರಿಗಳು, ಕರ್ನಾಟಕ

ಸಂಸ್ಕೃತ ವಿಶ್ವವಿದ್ಯಾಲಯ, ಇವರು ಒದಗಿಸಿರುವ 2018–19 ನೇ ಸಾಲಿನ ವಾರ್ಷಿಕ ಆಯವ್ಯಯ ಅಂದಾಜು ಮತ್ತು ವಾರ್ಷಿಕ ಲೆಕ್ಕಪತ್ರಗಳಲ್ಲಿನ ಅಂಕಿ ಅಂಶಗಳನ್ನು ಲೆಕ್ಕ ಪರಿಶೋಧನೆಯಲ್ಲಿ ದೃಢೀಕರಿಸಲು ಸಾಧ್ಯವಾಗಿರುವುದಿಲ್ಲ.

**ಅಯವ್ಯಯ ಅಂದಾಜು ಪಟ್ಟಿ ಸಿದ್ದಪಡಿಸುವಲ್ಲಿನ ಪ್ರಮುಖ ನ್ಯೂನತೆಗಳು ಈ ಕೆಳಗಿನಂತಿವೆ:**

1. ಆಯವ್ಯಯವನ್ನು ಪರಿಶೀಲಿಸಲಾಗಿ, ಸ್ವೀಕೃತಿ ಮತ್ತು ಪಾವತಿಗಳ ಸಮರ್ಪಕ ವರ್ಗೀಕರಣವಿಲ್ಲದೇ ಅಂದಾಜನ್ನು ತಯಾರಿಸಲಾಗಿದ್ದು, ಇದರಿಂದ ನಿಖರವಾಗಿ ಸ್ವೀಕೃತಿ ಮತ್ತು ಪಾವತಿಗಳ ವಾಸ್ತವಿಕ ಅಂದಾಜನ್ನು ತಯಾರಿಸಿರುವುದಿಲ್ಲ.

2. ಆಯವ್ಯಯ ತಯಾರಿಸುವ ಮುನ್ನ, ಹಿಂದಿನ ಸಾಲಿನ ವಾಸ್ತವಿಕ ವೆಚ್ಚಗಳೊಡನೆ, ಪ್ರಸ್ತುತ ಸಾಲಿನ ಆಯವ್ಯಯ ಅಂದಾಜು ಮತ್ತು ಮುಂದಿನ ಸಾಲಿಗೆ ಆಯವ್ಯಯ ಅಂದಾಜು ತಯಾರಿಸುವ ಸಮಯದಲ್ಲಿನ ವಾಸ್ತವಿಕ ಮತ್ತು ಪರಿಷ್ಕೃತ ಅಂದಾಜುಗಳ ಆಧಾರದ ಮೇಲೆ ತಯಾರಿಸುವುದು ವೈಜ್ಞಾನಿಕವಾದ ಕ್ರಮವಾಗಿರುತ್ತದೆ. ಪ್ರಸ್ತುತ ಅಂದಾಜನ್ನು ಈ ಆಧಾರದ ಮೇಲೆ ತಯಾರಿಸದೇ ಹಿಂದಿನ ಸಾಲಿನ ಅಂದಾಜುಗಳಲ್ಲಿ ಏರಿಕೆ ಮಾಡಿ ಪ್ರಸ್ತಾವನೆ ಸಲ್ಲಿಸಿರುವುದು ಕಂಡುಬಂದಿರುತ್ತದೆ. ಇದು ಸರಿಯಾದ ಕ್ರಮವಾಗಿರುವುದಿಲ್ಲ.

3. ವಿಶ್ವವಿದ್ಯಾಲಯವು ಪ್ರತಿ ಬಿಲ್ಲಿನ ಪಾವತಿಗೂ ಮುನ್ನ ಸದರಿ ವೆಚ್ಚದ ಲೆಕ್ಕಶೀರ್ಷಿಕೆಯಲ್ಲಿ ಇದುವರೆಗೆ ವಿನಿಯೋಗಿಸಲ್ಪಟ್ಟ ವೆಚ್ಚ, ಪ್ರಸ್ತುತ ವೆಚ್ಚ, ಉಳಿಕೆಯಾದ ಅನುದಾನದ ವಿವರಗಳನ್ನು ನಮೂದಿಸದೇ ಪಾವತಿಸಲಾಗುತ್ತಿದ್ದು, ಆಯವ್ಯಯದ ಮೇಲೆ ಆಂತರಿಕ ನಿಯಂತ್ರಣವೇ ಇರುವುದಿಲ್ಲ.

4. ಪ್ರಸ್ತುತ ಆಯಾ ಸಾಲಿನ ವಾರ್ಷಿಕ ಅಯವ್ಯಯದ ಅವಕಾಶಗಳನ್ನು ಕಲ್ಪಿಸುವ ಬಗ್ಗೆ ಯಾವ ರೀತಿ ಪ್ರಸ್ತಾವನೆಗಳನ್ನು ವಿಶ್ವವಿದ್ಯಾಲಯದ ವಿಭಾಗದಿಂದ ಪಡೆಯಲಾಗುತ್ತಿದೆ ಎಂಬುದನ್ನು ವಿವರಿಸಲು ತಿಳಿಸಿದೆ. ಅವಕಾಶದಲ್ಲಿನ ಸಂಪೂರ್ಣ ಅನುದಾನವು ಭರಿಸದೇ ನಿರರ್ಥಕವಾಗಿರುತ್ತದೆ. ಇದರಿಂದ ಅವೈಜ್ಞಾನಿಕವಾಗಿ ಅಯವ್ಯಯ ಪ್ರಸ್ತಾವನೆಯನ್ನು ತಯಾರಿಸಿರುವುದರಿಂದ ಒಟ್ಟಾರೆ ವಿಶ್ವವಿದ್ಯಾಲಯದ ಕ್ರೋಢೀಕೃತ ಸ್ವೀಕೃತಿ ಮತ್ತು ವೆಚ್ಚದಲ್ಲಿನ ಆರ್ಥಿಕ ವ್ಯತ್ಯಾಸದ ಅಸಮತೋಲನ ಎದ್ದುಕಾಣುತ್ತದೆ.

6. ವಿಶ್ವವಿದ್ಯಾಲಯದ ಆಯ–ವ್ಯಯ ಕುರಿತಂತೆ, ಪ್ರತಿ ವರ್ಷವು ಅಂದಾಜಿಸಿದ ಆಯ–ವ್ಯಯಗಳ ಅಂದಾಜನ್ನು ಸಿಂಡಿಕೇಟ್‌ನಿಂದ ಅನುಮೋದನೆ ಪಡೆದು, ಅಂದಾಜಿನ ಪರಿಧಿಯಲ್ಲಿ ವ್ಯಯಗಳನ್ನು ಮಾಡಲಾಗುತ್ತದೆ. ಒಂದು ವೇಳೆ ಅಂದಾಜುಗಳ ಮೊತ್ತಗಳನ್ನು ಮೀರಿ ವೆಚ್ಚಗಳನ್ನು ಭರಿಸಬೇಕಾದ ಸಂದರ್ಭದಲ್ಲಿ ಹೆಚ್ಚುವರಿ ವೆಚ್ಚ ಭರಿಸಲಾಗುವ ಮೊತ್ತಗಳಿಗೆ ಹಣಕಾಸು ಸಮಿತಿಯ ಶಿಫಾರಸ್ಸಿನೊಂದಿಗೆ ಸಿಂಡಿಕೇಟ್ ಅನುಮೋದನೆ ಅಗತ್ಯವಾಗಿರುತ್ತದೆ. ಹೆಚ್ಚುವರಿ ವೆಚ್ಚಗಳನ್ನು ಅನಿವಾರ್ಯ ಸಂದರ್ಭಗಳಲ್ಲಿ ವ್ಯಯಿಸಲು ಮಾತ್ರ ವಿನಾಯಿತಿಯಿದ್ದು, ಇದೇ ಕ್ರಮಗಳು ಪುನರಾವರ್ತನೆಯಾದರೆ ಆಯ–ವ್ಯಯ ಅಂದಾಜುಗಳಿಗೆ ಮಾನ್ಯತೆ ಇಲ್ಲದಂತಾಗುತ್ತದೆ ಹಾಗೂ ಈ ಅಂದಾಜುಗಳು ವಾಸ್ತವತೆಗೆ ಸಮೀಪವಾಗಿರುವುದಿಲ್ಲವೆಂದು ಪರಿಗಣಿಸಲಾಗುತ್ತದೆ.

7. ಇದೇ ರೀತಿ ರಾಜಸ್ವ ಅಂದಾಜುಗಳಿಗೂ ಅನ್ವಯಿಸಲಿದ್ದು, ರಾಜಸ್ವ ಅಂದಾಜುಗಳಿಗಿಂತ ಕಡಿಮೆ ರಾಜಸ್ವ ಸಂಗ್ರಹ ಎಲ್ಲಾ ವಿಷಯದಲ್ಲೂ ಮುಂದುವರೆದರೆ ಅವೈಜ್ಞಾನಿಕ ಪದ್ದತಿಯಲ್ಲಿ ಆಯ–ವ್ಯಯ ಅಂದಾಜುಗಳು ಮಾಡಲಾಗಿರುವುದನ್ನು ಬಿಂಬಿಸುತ್ತದೆ. ವಿಶ್ವವಿದ್ಯಾಲಯವು 2018–19 ನೇ ಸಾಲಿನಲ್ಲಿ ಅಂದಾಜಿಸಿದ ಆಯ–ವ್ಯಯ ಹಾಗೂ ವಾಸ್ತವಿಕ ಅಂಕಿ ಅಂಶಗಳ ಕುರಿತು ಪರಿಶೀಲಿಸಿದಾಗ, ರಾಜಸ್ವ ಹಾಗೂ

ವೆಚ್ಚಗಳಲ್ಲಿ ಏರುಪೇರುಗಳನ್ನು ಗಮನಿಸಿದ್ದು, ಆಯ–ವ್ಯಯದ ಅಂದಾಜುಗಳು ವಾಸ್ತವಿಕ ಅಂಶಗಳಿಗೆ ಸಮೀಪವಾಗಿಲ್ಲದಿರುವುದು ಸ್ಪಷ್ಟವಾಗುತ್ತದೆ.

ಈ ರೀತಿಯ ಪದ್ಧತಿಯನ್ನು ಗಮನಿಸಿದಾಗ ಸಕ್ಷಮ ಪ್ರಾಧಿಕಾರವು ವಿವಿಧ ವಿಭಾಗಗಳಿಂದ ಪೂರ್ವ ಪ್ರಸ್ತಾವನೆಯನ್ನು ಪಡೆಯದೇ, ಸ್ವೀಕೃತಿ ಮತ್ತು ಪಾವತಿಗಳ ಸಮರ್ಪಕ ವರ್ಗೀಕರಣವಿಲ್ಲದೇ ಆಯವ್ಯಯದಲ್ಲಿ ಅವಕಾಶ ಕಲ್ಪಿಸಿರುವುದು ಕಂಡುಬಂದಿದೆ. ಆಯವ್ಯಯವನ್ನು ಹಿಂದಿನ ವರ್ಷಗಳಲ್ಲಿಯೂ ಸಹ ತಾರ್ಕಿಕವಾಗಿ ಮತ್ತು ವೈಜ್ಞಾನಿಕವಾಗಿ ತಯಾರಿಸಿರುವುದು ಕಂಡುಬಂದಿರುವುದಿಲ್ಲ. ಒಟ್ಟಾರೆ ವಿಶ್ವವಿದ್ಯಾಲಯದ ಆಯವ್ಯಯವನ್ನು ಅವೈಜ್ಞಾನಿಕವಾಗಿ ತಯಾರಿಸಲಾಗಿದೆ.

ಮುಂದಿನ ಆರ್ಥಿಕ ವರ್ಷಗಳ ಆಯವ್ಯಯವನ್ನು ತಯಾರಿಸುವಾಗ, ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ವಾಸ್ತವಿಕ ಅಂಕಿ–ಅಂಶಗಳನ್ನು ಪ್ರತಿಬಿಂಬಿಸುವ ಮತ್ತು ಆಯವ್ಯಯ ಕೈಪಿಡಿಯ ನಿಯಮಗಳನ್ವಯ ವೈಜ್ಞಾನಿಕ ರೀತಿಯಲ್ಲಿ ಆಯವ್ಯಯ ಅಂದಾಜನ್ನು ತಯಾರಿಸಲು ಸೂಚಿಸಿದೆ.

ಹಣಕಾಸು ಅಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರು ಲೆಕ್ಕಪರಿಶೋಧನೆಗೆ ಒದಗಿಸಿರುವ ಅಯವ್ಯಯ ವಿಚಲನಾಪಟ್ಟಿಯನ್ನು **ಅನುಬಂಧ– 4ರಲ್ಲಿ** ಲಗತ್ತಿಸಿದೆ.

**22. ವಿಶ್ವವಿದ್ಯಾಲಯದ ನಿಧಿಗಳು:**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ತನ್ನ ಉದ್ದೇಶಿತ ಉನ್ನತ ಶಿಕ್ಷಣ ಪ್ರಸರಣಾ ಕಾರ್ಯ ಚಟುವಟಿಕೆಗಳಿಗಾಗಿ ಅಗತ್ಯವಿರುವ ಹಣಕಾಸು ನಿಧಿಗಳನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009 ರ ಅಧ್ಯಾಯ 8, ನಿಯಮ 51 ರಿಂದ 54 ರನ್ವಯ ನಿರ್ವಹಿಸಲಾಗುತ್ತಿದ್ದು, ವಿಷಯಾಧಾರಿತವಾಗಿ ವರ್ಗೀಕರಿಸಲಾಗಿದೆ. ಈ ನಿಧಿಗಳಿಗೆ ರಾಜಸ್ವ ಮೂಲಗಳು ಪ್ರಮುಖವಾಗಿ ಅನುದಾನ ಹಾಗೂ ಕೇಂದ್ರ ಸರ್ಕಾರವು ನೀಡುವ ಅನುದಾನ, ವಿಶ್ವವಿದ್ಯಾಲಯ ಸ್ವತ್ತುಗಳಿಂದ ಸ್ವೀಕರಿಸಿದ ಆದಾಯ, ಹೂಡಿಕೆಗಳಿಂದ ಸ್ವೀಕರಿಸಿದ ಆದಾಯ, ರಾಜ್ಯ ಸರ್ಕಾರದ ಅನುದಾನ, ರಾಜ್ಯ ಸರ್ಕಾರದ ಸಮೂಹ ಅನುದಾನಗಳು, ಸಂಯೋಜನಾ ಶುಲ್ಕ, ಪ್ರವೇಶಾತಿ ಮತ್ತು ಪರೀಕ್ಷಾ ಶುಲ್ಕ ಹಾಗೂ ಇತರೆ ಶುಲ್ಕಗಳು ಹಾಗೂ ಮೂಲದಿಂದ ಸ್ವೀಕರಿಸಿದ ಆದಾಯಗಳನ್ನು ಒಳಗೊಂಡಿರುತ್ತದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಕಲಂ 46(2) ರನ್ವಯ ವಿಶ್ವವಿದ್ಯಾಲಯದ ನಿಧಿಗಳನ್ನು ಭಾರತ ರಿಜರ್ವ್ ಬ್ಯಾಂಕ್ ಅಧಿನಿಯಮ, 1943 ರಲ್ಲಿ ಪರಿಭಾಷಿಸಿರುವಂತೆ, ಅನುಸೂಚಿತ ಬ್ಯಾಂಕ್ ಅಥವಾ ಬ್ಯಾಂಕಿಂಗ್ ಕಂಪನಿಗಳು ಉದ್ಯಮಗಳ ಅರ್ಜನೆ ಮತ್ತು ವರ್ಗಾವಣೆ ಅಧಿನಿಯಮ 1970ರ ಮೇರೆಗೆ ರಚಿತವಾದ ಹೊಸ ಸಂವಾದಿ ಬ್ಯಾಂಕ್‌ನಲ್ಲಿ ಇಡತಕ್ಕದ್ದು ಹಾಗೂ ವಿಶ್ವವಿದ್ಯಾಲಯದ ನಿಧಿಗಳನ್ನು ಬ್ಯಾಂಕ್‌ಗಳ ಮೂಲಕ ವ್ಯವಸ್ಥಿತ ನಿರ್ವಹಣೆಯನ್ನು ರಾಜ್ಯ ಸರ್ಕಾರದ ಆರ್ಥಿಕ ಇಲಾಖೆ ಹೊರಡಿಸಿರುವ **ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ. 5 ಟಿಎಆರ್ 2017 ದಿನಾಂಕ: 30.01.2017**ರ ಮಾರ್ಗಸೂಚಿಯಲ್ಲಿ ನೀಡಿರುವಂತೆ ಹೂಡಿಕೆಗಳನ್ನು ನಿರ್ವಹಿಸಬೇಕಾಗಿರುತ್ತದೆ.

**23. ವಿಶ್ವವಿದ್ಯಾಲಯದ ರಾಜಸ್ವ ಮತ್ತು ಇತರೆ ಸ್ವೀಕೃತಿಗಳು.**

2018–19 ನೇ ಸಾಲಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಎಲ್ಲಾ ವಿಭಾಗಗಳ ರಶೀದಿ ಪುಸ್ತಕಗಳನ್ನು ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾಗಿ, ಸದರಿ ಸಾಲಿನಲ್ಲಿ ಒಟ್ಟು ರೂ. 40,11,33,142.00 ಗಳು ವಿವಿಧ ಮೂಲಗಳಿಂದ ಸ್ವೀಕೃತವಾಗಿರುವುದು ಕಂಡುಬಂದಿದ್ದು, ವಾರ್ಷಿಕ ಲೆಕ್ಕಪತ್ರಗಳಲ್ಲಿ ಒಟ್ಟು ರೂ. 43,59,23,764.00 ಸ್ವೀಕೃತಿಯನ್ನ ನಮೂದಿಸಲಾಗಿದೆ. ವ್ಯತ್ಯಾಸದ ಮೊತ್ತ ಒಟ್ಟು ರೂ. 3,47,90,622.00.

(ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ನಿಧಿಗೆ ರೂ. 2,79,69,073.00 ನೇರವಾಗಿ ಜಮೆಯಾಗಿರುವುದು ಕಂಡು ಬಂದಿರುತ್ತದೆ ಹಾಗೂ ರೂ. 68,21,549.00 ಗಳು ಇತರೆ ಸ್ವೀಕೃತಿಯಾಗಿದ್ದು ಲೆಕ್ಕಪತ್ರ ಖಾತೆಯಲ್ಲಿ ಹೊಂದಾಣಿಕೆಯಾಗಿರುತ್ತದೆ.) ಆದರೆ ವರ್ಗವಾರು ಸ್ವೀಕೃತಿಗಳನ್ನು ಸಮರ್ಪಕವಾಗಿ ನಿರ್ವಹಿಸದ ಕಾರಣ ಒಟ್ಟು ಸ್ವೀಕೃತಿಯನ್ನು ಲೆಕ್ಕಪರಿಶೋಧನೆಯಲ್ಲಿ ದೃಢೀಕರಿಸಲು ಸಾಧ್ಯವಾಗಿರುವುದಿಲ್ಲ.

**2018–19 ನೇ ಸಾಲಿನ ಸ್ವೀಕೃತಿಯ ವಿವರಗಳು**

**(ರೂ. ಗಳಲ್ಲಿ)**

| ಲೆಕ್ಕಪತ್ರದಲ್ಲಿಯ ಸ್ವೀಕೃತಿ ವಿವರ | | ರಶೀದಿ ಪುಸ್ತಕದ ಸ್ವೀಕೃತಿ ವಿವರ | |
|---|---|---|---|
| ವರ್ಗ | ಮೊತ್ತ | ವರ್ಗ | ಮೊತ್ತ |
| **1. ರಾಜ್ಯ ಸರ್ಕಾರದ ಅನುದಾನ** | | | |
| ಎ. ಬ್ಲಾಕ್ ಗ್ರಾಂಟ್– | 35,18,00,000.00 | **ಪ್ರವೇಶ ಶುಲ್ಕ, ಪರೀಕ್ಷಾ ಶುಲ್ಕ ಇತರೆ** | **95,34,473.00** |
| ಬಿ ರಾಷ್ಟ್ರೀಯ ಸೇವಾ ಯೋಜನೆ | 5,10,579.00 | | |
| ಸಿ. ಅಭಿವೃದ್ಧಿ ಅನುದಾನ | 2,00,00,000.00 | | |
| ಡಿ. ವಿಶ್ವವಿದ್ಯಾಲಯದ ಸಿಬ್ಬಂದಿ ವೇತನಾನುದಾನ | 3,81,00,000.00 | | |
| **2. ಪ್ರವೇಶ ಶುಲ್ಕ, ಪರೀಕ್ಷಾ ಶುಲ್ಕ ಇತರೆ** | 95,34,473.00 | | |
| **3. ಇತರೆ ಆದಾಯ** | 62,578.00 | **ವರ್ಗೀಕರಿಸದ ಮೊತ್ತ** | **39,15,98,669.00** |
| **4. ದತ್ತಿ ನಿಧಿ** | 2,60,000.00 | | |
| **5. ಬಡ್ಡಿ ಸ್ವೀಕೃತಿಗಳು ಒಟ್ಟು** | 88,34,585.00 | | |
| **6. ಇತರೆ ಸ್ವೀಕೃತಿಗಳು** | 68,21,549.00 | | |
| **ಒಟ್ಟು** | **43,59,23,764.00** | **ಒಟ್ಟು** | **40,11,33,142.00** |
| | | | **ವ್ಯತ್ಯಾಸದ ಮೊತ್ತ ರೂ. 3,47,90,622.00** |

(ಅ) 2018–19ನೇ ಸಾಲಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಅನುದಾನಿತ ಶಾಲಾ ಕಾಲೇಜುಗಳ ವಿವಿಧ ಪದವಿಗಳು, ಕೋರ್ಸುಗಳು ಅರ್ಜಿ ಶುಲ್ಕ ಪ್ರವೇಶ ಶುಲ್ಕಗಳು, ಪರೀಕ್ಷಾ ಶುಲ್ಕಗಳು, ಶಾಲಾ ಕಾಲೇಜುಗಳ ಸಂಯೋಜನಾ ಶುಲ್ಕಗಳು, ನವೀಕರಣ ಶುಲ್ಕಗಳು, ಮತ್ತು ಇತರೆ ಶುಲ್ಕಗಳಿಂದ ಒಟ್ಟು ರೂ. 95,34,473.00 ಗಳು ವಾರ್ಷಿಕ ಲೆಕ್ಕಪತ್ರಗಳ ಅನ್ವಯ ಸ್ವೀಕೃತವಾಗಿದ್ದು, ಕರ್ನಾಟಕ ಆರ್ಥಿಕ ಸಂಹಿತೆ ನಿಯಮಗಳ ಅನ್ವಯ ಬೇಡಿಕೆ, ಸ್ವೀಕೃತಿ ಮತ್ತು ಬಾಕಿ ವಹಿ (Demand, Collection, Balance) ಯನ್ನು ನಿರ್ವಹಿಸಬೇಕಾಗಿರುತ್ತದೆ.

ಸದರಿ ವಹಿಯನ್ನು ನಿರ್ವಹಿಸದೇ ಇರುವುದರಿಂದ, ಲೆಕ್ಕಪರಿಶೋಧನೆಯಲ್ಲಿ ನಿಖರವಾಗಿ ಸ್ವೀಕೃತಿಗಳನ್ನು ದೃಢೀಕರಿಸಲು ಸಾಧ್ಯವಾಗಿರುವುದಿಲ್ಲ.

2018–19 ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯವು ರಾಜಸ್ವಗಳಿಗೆ ಸಂಬಂಧಿಸಿದಂತೆ ರೆವಿನ್ಯೂ, ಫೀಜು, ಶುಲ್ಕಗಳು, ಇತ್ಯಾದಿಗಳನ್ನು ಡಿಡಿ/ಚೆಕ್ಕುಗಳ ಮೂಲಕ ಸ್ವೀಕರಿಸಿ ನಿಧಿಗೆ ಜಮೆ ಮಾಡಲಾಗಿದ್ದು, ಅದಕ್ಕೆ ಸಂಬಂಧಿಸಿದ ಡಿಡಿ/ಚೆಕ್ ಸ್ವೀಕೃತಿ ಜಮೆ ವಹಿ, ಚಲನ್‌ಗಳು, ಶುಲ್ಕವಾರು ದೃಢೀಕೃತ ಘೋಷ್ವಾರೆ, ವಿವಿಧ ಘಟಕ/ವಿಭಾಗಗಳವರು ಸ್ವೀಕರಿಸಿ ಜಮೆ ಮಾಡಿದವರಿಂದ ನಿಯಂತ್ರಣಾಧಿಕಾರಿಗಳು ಪಡೆದಿರುವ ದೃಢೀಕೃತ ತಃಖ್ತೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.

**(ಆ)** 2018–19ನೇ ಸಾಲಿನಲ್ಲಿ ವಿಶ್ವವಿದ್ಯಾಲಯವು ನೀಡಿರುವ ಮಾಹಿತಿಯ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ವಿವಿಧ ಕೋರ್ಸುಗಳಿಗೆ ಒಟ್ಟು 214 ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದಿದ್ದು, ದಂಡ ಶುಲ್ಕ/ವಿಳಂಬ ಶುಲ್ಕಗಳು ಸೇರಿ ಒಟ್ಟು ರೂ. 8,52,750.00 ಗಳು ಸ್ವೀಕೃತವಾಗಿರುತ್ತದೆ.

**ಘೋಷ್ವಾರೆ**

**(ರೂ.ಗಳಲ್ಲಿ)**

| **ವಿದ್ಯಾರ್ಥಿಗಳ ಸಂಖ್ಯೆ** | **ಫೀ** | **ಮೊತ್ತ** |
|---|---|---|
| 214 | ಒಟ್ಟು ಪ್ರವೇಶ ಶುಲ್ಕ | 8,27,550.00 |
| | ದಂಡ ಶುಲ್ಕ | 25,200.00 |
| 214 | **ಒಟ್ಟು ಶುಲ್ಕ** | **8,52,750.00** |

**(ಇ)** ಅದೇ ರೀತಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಒಳಪಟ್ಟ ಅನುದಾನಿತ/ಅನುದಾನ ರಹಿತ ಕಾಲೇಜುಗಳಲ್ಲಿ ವಿವಿಧ ಕೋರ್ಸುಗಳಿಗೆ ಒಟ್ಟು 2598 ವಿದ್ಯಾರ್ಥಿಗಳ ಪ್ರವೇಶ ಪಡೆದಿದ್ದು, ದಂಡ/ವಿಳಂಬ ಶುಲ್ಕಗಳು ಸೇರಿ ಒಟ್ಟು ರೂ. 8,62,975.00 ಗಳು ಸ್ವೀಕೃತವಾಗಿರುತ್ತದೆ.

**ಘೋಷ್ವಾರೆ**

**(ರೂ.ಗಳಲ್ಲಿ)**

| **ವಿದ್ಯಾರ್ಥಿಗಳ ಸಂಖ್ಯೆ** | **ಫೀ** | **ಮೊತ್ತ** |
|---|---|---|
| 2598 | ಒಟ್ಟು ಪ್ರವೇಶ ಶುಲ್ಕ | 8,62.675.00 |
| | ವಿಳಂಬ ಶುಲ್ಕ | 300.00 |
| 2598 | **ಒಟ್ಟು ಶುಲ್ಕ** | **8,62,975.00** |

**(ಈ)** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಒಳಪಟ್ಟ ಅನುದಾನಿತ/ಅನುದಾನ ರಹಿತ ಪಾಠಶಾಲೆಗಳಲ್ಲಿ ವಿವಿಧ ಜ್ಯೋತಿಷ್ಯ ಕೋರ್ಸುಗಳಿಗೆ ಒಟ್ಟು 535 ವಿದ್ಯಾರ್ಥಿಗಳ ಪ್ರವೇಶ ಪಡೆದಿದ್ದು, ದಂಡ/ವಿಳಂಬ ಶುಲ್ಕಗಳು ಸೇರಿ ಒಟ್ಟು ರೂ. 10,41,650.00 ಗಳು ಸ್ವೀಕೃತವಾಗಿರುತ್ತದೆ.

**ಘೋಷ್ವಾರೆ**

**(ರೂ.ಗಳಲ್ಲಿ)**

| ವಿದ್ಯಾರ್ಥಿಗಳ ಸಂಖ್ಯೆ | ಫೀ | ಮೊತ್ತ |
|---|---|---|
| 535 | ಒಟ್ಟು ಪ್ರವೇಶ ಶುಲ್ಕ | 10,33,750.00 |
| | ವಿಳಂಬ ಶುಲ್ಕ | 7900.00 |
| 535 | **ಒಟ್ಟು ಶುಲ್ಕ** | **10,41,650.00** |

**(ಉ)** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಒಳಪಟ್ಟ ಅನುದಾನಿತ/ಅನುದಾನ ರಹಿತ ಶಾಲಾ ಕಾಲೇಜುಗಳಲ್ಲಿ ವಿವಿಧ ಕೋರ್ಸುಗಳಿಗೆ ಒಟ್ಟು 29643 ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ, ದಂಡ/ವಿಳಂಬ ಶುಲ್ಕಗಳು ಸೇರಿ ಒಟ್ಟು ರೂ. 41,96,617.00 ಗಳು ಸ್ವೀಕೃತವಾಗಿರುತ್ತದೆ.

**ಘೋಷ್ವಾರೆ**

**(ರೂ.ಗಳಲ್ಲಿ)**

| ವಿದ್ಯಾರ್ಥಿಗಳ ಸಂಖ್ಯೆ | ಪರೀಕ್ಷಾ ಶುಲ್ಕ | ಮೊತ್ತ |
|---|---|---|
| 29502 | ಒಟ್ಟು ಪರೀಕ್ಷಾ ಶುಲ್ಕ | 41,22,410.00 |
| 141 | ಪುನರಾವರ್ತಿತ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ | 32,400.00 |
| | ವಿಳಂಬ ಶುಲ್ಕ | 41,807.00 |
| 29643 | **ಒಟ್ಟು ಶುಲ್ಕ** | **41,96,617.00** |

**(ಉ)** ವಿಶ್ವವಿದ್ಯಾಲಯವು ಲೆಕ್ಕಪರಿಶೋಧನೆಗೆ ಒದಗಿಸಿರುವ ದಾಖಲೆಗಳನ್ವಯ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಒಳಪಟ್ಟ ಅನುದಾನಿತ/ಅನುದಾನ ರಹಿತ ಶಾಲಾ ಕಾಲೇಜುಗಳಿಂದ ಮಾನ್ಯತಾ ಶುಲ್ಕ, ಮಾನ್ಯತಾ ನವೀಕರಣ, ನಕಲಿ ಅಂಕಪಟ್ಟಿಗಳು, ಅಂಕಪಟ್ಟಿಗಳ ತಿದ್ದುಪಡಿ ಇತರೆ ಶುಲ್ಕಗಳು ಸೇರಿ ಒಟ್ಟು ರೂ. 26,54,688.00 ಗಳು ಸ್ವೀಕೃತವಾಗಿರುತ್ತದೆ.

**24. ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳ ಪ್ರವೇಶ ಶುಲ್ಕದ ಮೊತ್ತವನ್ನು ಮರುಭರಣ ಮಾಡಿಕೊಳ್ಳದಿರುವುದು.**

2018–19ನೇ ಸಾಲಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಹಾಗೂ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ಅನುದಾನಿತ, ಅನುದಾನರಹಿತ ಮತ್ತು ಶಾಲಾ ಕಾಲೇಜುಗಳಲ್ಲಿ ಅಭ್ಯಾಸ ಮಾಡುತ್ತಿರುವ ಪರಿಶಿಷ್ಟ ಜಾತಿ/ಪಂಗಡ ಹಾಗೂ ಪ್ರವರ್ಗ–1 ಕ್ಕೆ ಸೇರಿದ ವಿದ್ಯಾರ್ಥಿಗಳಿಂದ ಶೇ. 50 ರಷ್ಟು ಪ್ರವೇಶಾತಿ ಹಾಗೂ ಪರೀಕ್ಷಾ ಶುಲ್ಕಗಳನ್ನು ಪಡೆದಿರುವುದು ಕಂಡುಬಂದಿರುತ್ತದೆ. ಉಳಿದ ಶೇ. 50 ರಷ್ಟು ಶುಲ್ಕವನ್ನು ಸಮಾಜ ಕಲ್ಯಾಣ ಇಲಾಖೆ/ಸರ್ಕಾರದಿಂದ ಮರುಭರಣ ಮಾಡಿಕೊಳ್ಳದಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಸದರಿ ಮೊತ್ತವನ್ನು ರೂ. 7,45,695.00 ಮೊತ್ತವನ್ನು ಸಂಬಂಧಪಟ್ಟ ಇಲಾಖೆಯಿಂದ ವಸೂಲಿಸಬೇಕಾಗಿದ್ದು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನಿಧಿಗೆ ಜಮೆ ಮಾಡಲು ಸೂಚಿಸಲಾಗಿದೆ.

(ರೂ.ಗಳಲ್ಲಿ)

| ಕ್ರ.ಸಂ. | ವಿವರಗಳು | ಮರುಭರಣವಾಗಬೇಕಾಗಿರುವ ಮೊತ್ತ ರೂ.ಗಳಲ್ಲಿ |
|---|---|---|
| 1 | Admission Fee (Within Campus) | 7950.00 |
| 2 | Admission Fee (Affiliated College) | 57475.00 |
| 3 | Admission Fee (Jothishya) | 16250.00 |
| 4 | Examination Fees | 664020.00 |
| | **Total** | **745695.00** |

ವಿವರಗಳನ್ನು **ಅನುಬಂಧ– 5**(ಎ)(ಬಿ)(ಸಿ) ಮತ್ತು (ಡಿ)ರಲ್ಲಿ ಲಗತ್ತಿಸಿದೆ.

**25. ವಿಶ್ವವಿದ್ಯಾಲಯದ ವೆಚ್ಚಗಳ ನಿಯಂತ್ರಣ:**

ಪರಿಣಾಮಕಾರಿಯಾದ ವೆಚ್ಚಗಳ ನಿಯಂತ್ರಣ ಕಾರ್ಯದಲ್ಲಿ ವಿಶ್ವವಿದ್ಯಾಲಯದ ವಿಭಾಗಗಳ ಮಾಸಿಕ ವೆಚ್ಚ ತಃಖ್ತೆಗಳು, ವೆಚ್ಚಗಳು ಹಾಗೂ ಆಯವ್ಯಯ ಹಂಚಿಕೆಗಳು, ಮತ್ತು ಬ್ಯಾಂಕ್ ಖಾತೆಗಳೊಡನೆ ಅವುಗಳ ನಿಯಂತ್ರಣ ಇವುಗಳಿಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.

ಕರ್ನಾಟಕ ಆರ್ಥಿಕ ಸಂಹಿತೆ 1958 ರ ಅನುಚ್ಛೇದ 301(8) ರ ಅನ್ವಯ ಮಾಸಿಕ ವೆಚ್ಚ ತಃಖ್ತೆಗಳನ್ನು ತಯಾರಿಸುವುದು ಹಾಗೂ ಪರಿಣಾಮಕಾರಿಯಾದ ವೆಚ್ಚಗಳ ನಿಯಂತ್ರಣಕ್ಕೆ, ಲೆಕ್ಕಪತ್ರ ನಿರ್ವಹಣೆಯ ತತ್ವಗಳನ್ವಯ ನಿಗದಿತ ನಮೂನೆಯಾದ ಸ್ವೀಕೃತಿ ಮತ್ತು ಪಾವತಿ ತಃಖ್ತೆ, ಆದಾಯ ಮತ್ತು ಖರ್ಚು ತಃಖ್ತೆ ಹಾಗೂ ಅಡಾವೆ ಪತ್ರಗಳನ್ನು ನಿರ್ವಹಿಸಲು ಸೂಚಿಸಿದೆ.

**26. ಆಸ್ತಿ ತೆರಿಗೆಯ ಮೇಲಿನ ದಂಡ ಮತ್ತು ಬಡ್ಡಿ ಮೊತ್ತವನ್ನು ಪಾವತಿಸಿರುವುದು.**

ವಿಶ್ವವಿದ್ಯಾಲಯವು 2008–09 ರಿಂದ 2018–19 ನೇ ಸಾಲಿನವರೆಗೆ ಒಟ್ಟು ರೂ. 8,30,199/– ಗಳನ್ನು ಆಸ್ತಿ ತೆರಿಗೆಯಾಗಿ ಪಾವತಿಸಿದೆ. ಅದರಲ್ಲಿ ಸದರಿ ಸಾಲಿನಲ್ಲಿ ಈ ಕೆಳಕಂಡಂತೆ ಆಸ್ತಿ ತೆರಿಗೆ ಪಾವತಿಸಿದ್ದು, ವಿವರಗಳು ಕೆಳಕಂಡಂತಿವೆ.

| ವರ್ಷ | ಆಸ್ತಿ ತೆರಿಗೆ | ದಂಡ | ಬಡ್ಡಿ |
|---|---|---|---|
| 2016–17 | 75487.00 | 100 | 18109.00 |
| 2017–18 | 68353.00 | 100 | 10975.00 |
| 2018–19 | 58375.00 | 0 | 1097.00 |
| | **ಒಟ್ಟು** | **200.00** | **30,181.00** |

ಕರ್ನಾಟಕ ಮುನ್ಸಿಪಾಲ್ ಕಾರ್ಪೋರೇಷನ್ ಕಾಯ್ದೆ 1976 ರ ಸೆಕ್ಷನ್ 110(1) (i) ನ ಉಪ ಕಲಂ (a) (b) ನ ಅನ್ವಯ ಶಿಕ್ಷಣ ಸಂಸ್ಥೆಗಳಿಗೆ ಆಸ್ತಿ ತೆರಿಗೆಯಿಂದ ವಿನಾಯಿತಿ ಪಡೆಯಬಹುದಾಗಿರುತ್ತದೆ. ಈ ಸಂಬಂಧ ಸೂಕ್ತ ಕ್ರಮಗಳನ್ನು ವಿಶ್ವವಿದ್ಯಾಲಯವು ಕೈಗೊಂಡಿದ್ದರೆ, ಮೇಲ್ಕಂಡ ಮೊತ್ತವು ವಿಶ್ವವಿದ್ಯಾಲಯದ ನಿಧಿಗೆ ಉಳಿತಾಯವಾಗುತ್ತಿತ್ತು ಎಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯ ಪಡಲಾಗಿದೆ. ಮುಂದುವರೆದು, ಆಸ್ತಿ ತೆರಿಗೆ ಪಾವತಿಯ ಸ್ವೀಕೃತಿ ರಸೀದಿ ಪರಿಶೀಲಿಸಲಾಗಿ, ನಿಗದಿತ ಸಮಯದಲ್ಲಿ ತೆರಿಗೆ ಪಾವತಿಸದೇ ಇರುವುದರಿಂದ ಹೆಚ್ಚುವರಿಯಾಗಿ ದಂಡ ಮತ್ತು ಬಡ್ಡಿ ಮೊತ್ತ ರೂ. 30,181/– ಗಳನ್ನು ವಿಧಿಸಲಾಗಿದೆ. ಈ ಕುರಿತು ವಿವರಣೆ

ನೀಡಲು ವಿಚಾರಣಾ ಪತ್ರ ಸಂಖ್ಯೆ: 52/2018-19. ದಿನಾಂಕ: 25.09.2019 ರಲ್ಲಿ ಮಾಹಿತಿ ಕೋರಲಾಗಿತ್ತು. ಆದರೆ ವಿಶ್ವವಿದ್ಯಾಲಯವು ದಿನಾಂಕ: 30.09.2019 ರಂದು ನೀಡಿರುವ ಮಾಹಿತಿಯು ಅಪೂರ್ಣವಾಗಿರುವ ಕಾರಣ, ದಂಡ & ಬಡ್ಡಿ ಪಾವತಿಸಿರುವ ಮೊತ್ತ ರೂ. 30,181/- ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಲು ಸೂಚಿಸಿದೆ.

## 27. ಕಾನೂನು ಸಲಹೆಗಾಗಿ ವಕೀಲರಿಗೆ ಮೊತ್ತವನ್ನು ಪಾವತಿಸಿರುವುದು.

1. ಶ್ರೀ ಸಿ. ವೆಂಕಟೇಶ, ವಕೀಲರು ಇವರನ್ನು ವಿಶ್ವವಿದ್ಯಾಲಯದ ಕಾನೂನು ಸಂಬಂಧಿತ ಕೆಲಸಗಳಿಗಾಗಿ ಹೊರಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡಿದ್ದು, ಇವರಿಗೆ ಮಾಸಿಕ ರೂ.15,000/- ಗಳಂತೆ 2018-19 ನೇ ಸಾಲಿನಲ್ಲಿ ಒಟ್ಟು ರೂ. 1,80,000/-ಗಳನ್ನು ಗೌರವ ಸಂಭಾವನೆಯಾಗಿ ಪಾವತಿಸಲಾಗಿದೆ. ಈ ಬಗ್ಗೆ ವಿಚಾರಣಾ ಪತ್ರ ಸಂಖ್ಯೆ: 15/ದಿನಾಂಕ: 12.09.2019 ರಲ್ಲಿ ಮಾಹಿತಿ ಕೇಳಿದ್ದು, ದಿನಾಂಕ: 17.09.2019 ರಲ್ಲಿ ವಿಶ್ವವಿದ್ಯಾಲಯವು ನೀಡಿರುವ ಉತ್ತರದಲ್ಲಿ, ಸದರಿ ಸಂಭಾವನೆಯನ್ನು ಪಾವತಿಸಲು ಪ್ರಶಾಸನ ಸಮಿತಿ ಸಭೆಯಲ್ಲಿ ನಿರ್ಣಯಕೈಗೊಂಡಿರುವುದಾಗಿ ತಿಳಿಸಿರುತ್ತಾರೆ. ಆದರೆ ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಶೀಲಿಸಿದಾಗ, ವಿಶ್ವವಿದ್ಯಾಲಯಕ್ಕೆ ಕಾನೂನು ಸಲಹೆಗಾರರ ಹುದ್ದೆಯು ಮಂಜೂರಾಗಿರುವುದಿಲ್ಲ ಹಾಗೂ ಇದಕ್ಕೆ ಸಂಬಂಧಿಸಿದಂತೆ, ಸರ್ಕಾರದಿಂದ ಏನಾದರೂ ಅನುಮತಿ ಪಡೆದಿದ್ದಲ್ಲಿ ಅದ್ದು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಆದ್ದರಿಂದ 2018-19ನೇ ಸಾಲಿನಲ್ಲಿ ವಿಶ್ವವಿದ್ಯಾಲಯವು ಶ್ರೀ ಸಿ. ವೆಂಕಟೇಶ, ವಕೀಲರು ಇವರಿಗೆ ಪಾವತಿಸಿರುವ ರೂ.1,80,000/- ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.

2. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2018-19 ನೇ ಸಾಲಿನಲ್ಲಿ ಶ್ರೀ ಉದಯ ಹೊಳ್ಳ, ಹಿರಿಯ ನ್ಯಾಯವಾದಿಗಳು & ಅಡ್ವೋಕೇಟ್ ಜನರಲ್ ಇವರಿಗೆ ಕಾನೂನು ಸಲಹೆಗಾಗಿ ರೂ.1,00,000/- ಪಾವತಿಸಿರುವುದು ಲೆಕ್ಕ ತನಿಖೆಯಲ್ಲಿ ಕಂಡು ಬಂದಿದೆ. ವಿಶ್ವವಿದ್ಯಾಲಯವು ಕಾನೂನು ಸಂಬಂಧಿತ ಕೆಲಸಗಳಿಗಾಗಿ ವಕೀಲರನ್ನು ನೇಮಿಸಿಕೊಂಡಿದ್ದರೂ ಸಹ, ಹೆಚ್ಚುವರಿಯಾಗಿ ಬೇರೆಯವರಿಂದ ಕಾನೂನು ಸಲಹೆ ಪಡೆದಿರುವುದು ಸೂಕ್ತವಾಗಿರುವುದಿಲ್ಲ. ಈ ಬಗ್ಗೆ ವಿಚಾರಣಾ ಪತ್ರ ಸಂಖ್ಯೆ: 15/ದಿನಾಂಕ: 12.09.2019 ರಲ್ಲಿ ಮಾಹಿತಿ ಕೇಳಿದ್ದು, ದಿ:17.09.2019 ರಂದು ವಿಶ್ವವಿದ್ಯಾಲಯವು ಉತ್ತರ ಸಲ್ಲಿಸಿದ್ದು ಸಮರ್ಪಕವಾಗಿರುವುದಿಲ್ಲ. ಆದ್ದರಿಂದ ರೂ.1,00,000/- ಆಕ್ಷೇಪಣೆಗೆ ಸೂಚಿಸಿದೆ.

## 28. ಆಸ್ತಿಗಳ ಸೃಜನೆಗೆ ಬಿಡುಗಡೆಯಾದ ಸಹಾಯಾನುದಾನವನ್ನು ಮಾರ್ಗಪಲ್ಲಟ (Diversion of Fund) ಮಾಡಿ ಇತರೆ ಖರ್ಚುಗಳಿಗೆ ಬಳಸಿಕೊಂಡಿರುವುದು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ/2/ಟಿಎಫ್‌ಪಿ/2018, ದಿನಾಂಕ: 03.04.2018 ರಲ್ಲಿ ಲೆಕ್ಕಶೀರ್ಷಿಕೆ 2202-05-103-0-23-103 ಅಡಿಯಲ್ಲಿ ಆಸ್ತಿಗಳ ಸೃಜನೆಗಾಗಿ ಸರ್ಕಾರದಿಂದ ಸಹಾಯಾನುದಾನ ಪಡೆದಿರುತ್ತದೆ. ಇದನ್ನು ಅಭಿವೃದ್ಧಿ ಅನುದಾನ (Developmental Grant) ಶೀರ್ಷಿಕೆಯಲ್ಲಿ ನಿರ್ವಹಿಸಿದ್ದು, 2018-19ನೇ ಸಾಲಿನಲ್ಲಿ ರೂ. 2,20,83,714.00 ಗಳು ವೆಚ್ಚವಾಗಿರುತ್ತದೆ. ಸದರಿ ವೆಚ್ಚವನ್ನು ಆದಾಯ ಮತ್ತು ವೆಚ್ಚ ತಃಖ್ತೆ (Income & Expenditure) ರಾಜಸ್ವ ವೆಚ್ಚವಾಗಿ Revenue Expenditure ತೋರಿಸಲಾಗಿದೆ. ಆಸ್ತಿಗಳ ಸೃಜನೆಗೆ ನೀಡಿದ ಸಹಾಯಾನುದಾನವನ್ನು ಇತರೆ ಉದ್ದೇಶಗಳಿಗಾಗಿ ಬಳಸಿಕೊಂಡಿದ್ದು, ಈ ಬಗ್ಗೆ ವಿವರಣೆ ನೀಡುವಂತೆ, ವಿಚಾರಣಾ ಪತ್ರ ಸಂಖ್ಯೆ: 30/2018-19 ದಿ:17.09.2019 ನ್ನು ನೀಡಿದ್ದು, ದಿನಾಂಕ: 26.09.2019 ರಂದು ವಿಶ್ವವಿದ್ಯಾಲಯವು ನೀಡಿರುವ ಉತ್ತರದಲ್ಲಿ ವಿಶ್ವವಿದ್ಯಾಲಯದ

ದೈನಂದಿನ ನಿರ್ವಹಣೆ ಮತ್ತು ಅಭಿವೃದ್ಧಿ ಕಾರ್ಯಗಳಿಗಾಗಿ ಇದೇ ಅನುದಾನದ ಮೇಲೆ ಅವಲಂಬಿತವಾಗಿದ್ದು, ಈ ಬಗ್ಗೆ ಸರ್ಕಾರದೊಂದಿಗೆ ಪತ್ರ ವ್ಯವಹಾರ ನಡೆಸಿ ಸರಿಪಡಿಸಿಕೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ. ಸರ್ಕಾರದೊಂದಿಗೆ ಪತ್ರ ವ್ಯವಹಾರ ನಡೆಸಿ ಇದನ್ನು ಸರಿಪಡಿಸಿಕೊಳ್ಳುವವರೆಗೆ, ಸದರಿ ಮೊತ್ತ ರೂ. 2,20,83,714.00 ಗಳನ್ನು ಆಕ್ಷೇಪಣೆಯಲ್ಲಿ ಇಡಲಾಗಿದೆ.

**29. ಬ್ಲಾಕ್ ಗ್ರಾಂಟ್ ಖಾತೆಯ ವಿವರಗಳು. (Block Grants)**

2018-19ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಿದಾಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ 11 ಅನುದಾನಿತ ಸಂಸ್ಕೃತ ಕಾಲೇಜುಗಳು ಹಾಗೂ 281 ಅನುದಾನಿತ ಪಾಠಶಾಲೆಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವೇತನ ಮತ್ತು ಇತರೆ ಭತ್ಯೆಗಳು, ನಿವೃತ್ತಿ ವೇತನಗಳಿಗೆ ಸಂಬಂಧಿಸಿದ ಪಾವತಿಗಳಿಗೆ ಸಂಬಂಧಿಸಿದಂತೆ, ಸರ್ಕಾರದಿಂದ ಅನುದಾನವನ್ನು ಸ್ವೀಕರಿಸಲಾಗುತ್ತಿದೆ. ವಿಶ್ವವಿದ್ಯಾಲಯವು ಇದನ್ನು ಪ್ರತ್ಯೇಕ ಖಾತೆಯಲ್ಲಿ ನಿರ್ವಹಿಸುತ್ತಿದ್ದು, ಈ ಬ್ಲಾಕ್ ಗ್ರಾಂಟ್ ಅನುದಾನದ ಬ್ಯಾಂಕ್ ಉಳಿತಾಯ ಖಾತೆಯ ಸಂಖ್ಯೆ: 64140220134 ರ ಸ್ವೀಕೃತಿ ಮತ್ತು ಪಾವತಿಗಳನ್ನು ಪರಿಶೀಲಿಸಲಾಗಿ, ವಾರ್ಷಿಕ ಲೆಕ್ಕಪತ್ರಗಳನ್ವಯ, ಆರ್ಥಿಕ ಪರಿಸ್ಥಿತಿ ಈ ಕೆಳಕಂಡಂತಿರುತ್ತದೆ:

**ಬ್ಲಾಕ್ ಗ್ರಾಂಟ್ ಖಾತೆಯ ಎಸ್.ಬಿ.ಐ.ಉಳಿತಾಯ ಖಾತೆ ಸಂಖ್ಯೆ: 64140220134**

**(ರೂ. ಗಳಲ್ಲಿ)**

| ವಿವರಗಳು | ಸ್ವೀಕೃತಿಗಳು | ವಿವರಗಳು | ಪಾವತಿಗಳು |
|---|---|---|---|
| ಪ್ರಾರಂಭ ಶಿಲ್ಕು | 63,89,694.50 | ಸಂಸ್ಕೃತ ಪಾಠಶಾಲಾ ಮತ್ತು ಕಾಲೇಜು ಸಿಬ್ಬಂದಿಗಳಿಗೆ ವೇತನ ಪಾವತಿ | 34,85,24,364.00 |
| ನಿಶ್ಚಿತ ಠೇವಣಿ (ನಿಶ್ಚಿತ ಠೇವಣಿ ಹಿಂಪಡೆದಿರುವುದು) | 20,00,000.00 | | |
| 2018-19ನೇ ಸಾಲಿನಲ್ಲಿ ಸರ್ಕಾರದಿಂದ ಸ್ವೀಕೃತಿ | 35,18,00,000.00 | | |
| ಠೇವಣಿಯಿಂದ ಬಂದ ಬಡ್ಡಿ | 2,27,821.00 | | |
| ಉಳಿತಾಯ ಖಾತೆಯಿಂದ ಬಂದ ಬಡ್ಡಿ | 9,46,395.00 | **ಅಂತಿಮ ಶಿಲ್ಕು- (ಉಳಿತಾಯ ಖಾತೆಯಲ್ಲಿ)** | 1,28,39,546.50 |
| **ಒಟ್ಟು** | **36,13,63,910.50** | **ಅಂತಿಮ ಶಿಲ್ಕು (ನಿಶ್ಚಿತ ಠೇವಣಿ)** | **80,00,000.00** |

2018-19ನೇ ಸಾಲಿನಲ್ಲಿ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಅನುದಾನಿತ ಕಾಲೇಜುಗಳು ಹಾಗೂ ಪಾಠಶಾಲೆಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವೇತನ ಹಾಗೂ ಭತ್ಯೆಗಳಿಗಾಗಿ, ರಾಜ್ಯ ಸರ್ಕಾರದಿಂದ ರೂ.35,18,00,000.00 ಗಳ ಬ್ಲಾಕ್ ಗ್ರಾಂಟ್ ಬಿಡುಗಡೆಯಾಗಿದ್ದು, ವಾರ್ಷಿಕ ಲೆಕ್ಕಪತ್ರಗಳನ್ವಯ ಒಟ್ಟು ರೂ. 34,85,24,364.00 ಗಳು ವೆಚ್ಚವಾಗಿರುತ್ತದೆ. ವಿವರಗಳು ಕೆಳಕಂಡಂತೆ ಇರುತ್ತದೆ.

**(i) ಅನುದಾನಿತ ಸಂಸ್ಕೃತ ಕಾಲೇಜುಗಳ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ವೇತನ ಮತ್ತು ಇತರೆ ಭತ್ಯೆಗಳ ಪಾವತಿಗಳ ವಿವರ:**

2018–19ನೇ ಸಾಲಿನಲ್ಲಿ 11 ಅನುದಾನಿತ ಕಾಲೇಜುಗಳ ಬೋಧಕ & ಬೋಧಕೇತರ ಸಿಬ್ಬಂದಿಗಳ ವೇತನ ಮತ್ತು ಇತರೆ ಭತ್ಯೆಗಳಿಗಾಗಿ ರೂ. 8,28,79,638.00 ಗಳನ್ನು ಪಾವತಿಸಲಾಗಿರುತ್ತದೆ. ವಿವರಗಳನ್ನು **ಅನುಬಂಧ–6** ರಲ್ಲಿ ಲಗತ್ತಿಸಿದೆ.

**(ii) ಪಾಠಶಾಲೆಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವೇತನ ಹಾಗೂ ಭತ್ಯೆಗಳನ್ನು ಪಾವತಿಸಿರುವ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸದಿರುವುದು.**

ಪಾಠಶಾಲೆಗಳಿಗೆ ಏಪ್ರಿಲ್–2018 ರಿಂದ ಮಾರ್ಚ್–2019 ರವರೆಗೆ ಮಾಹೆವಾರು ಪಾವತಿಸಲಾದ ವೇತನ ಮತ್ತು ಭತ್ಯೆಗಳು, ನಿವೃತ್ತಿ ವೇತನಕ್ಕೆ ಸಂಬಂಧಿಸಿದ ಪಾವತಿಗಳು ಹಾಗೂ ಇತರೆ ವೆಚ್ಚಗಳ ವಿವರಗಳನ್ನು ಒದಗಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 62/2018–19, ದಿನಾಂಕ: 11.10.2019 ರಲ್ಲಿ ಕೋರಿದ್ದು, ಒದಗಿಸಿರುವ ಮಾಹಿತಿಯಂತೆ 2018–19ನೇ ಸಾಲಿನಲ್ಲಿ ಸಮೂಹ ಅನುದಾನದಲ್ಲಿ ಒಟ್ಟು ರೂ. 26,56,44,726/– ಗಳನ್ನು ಸಂಸ್ಕೃತ ಪಾಠ ಶಾಲೆಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವೇತನ ಹಾಗೂ ಭತ್ಯೆಗಳನ್ನು ಪಾವತಿಸಲಾಗಿದ್ದು, ಸದರಿ ಮೊತ್ತದಲ್ಲಿ ರೂ. 26,09,95,095/– ಗಳಿಗೆ ವೋಚರ್‌ಗಳನ್ನು ಒದಗಿಸಲಾಗಿದೆ. ಉಳಿದ ಮೊತ್ತ ರೂ. **46,49,631/–** ಗಳಿಗೆ ವೋಚರ್‌ಗಳನ್ನು ಒದಗಿಸದಿರುವ ಕಾರಣ ಆಕ್ಷೇಪಣೆಯಲ್ಲಿಡಲಾಗಿದೆ. ದಾಖಲೆಗಳನ್ನು ಒದಗಿಸದಿರುವ ಪಾಠಶಾಲೆಗಳ ವಿವರಗಳನ್ನು **ಅನುಬಂಧ–6(ಅ)**ರಲ್ಲಿ ಲಗತ್ತಿಸಿದೆ.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ 11 ಅನುದಾನಿತ ಕಾಲೇಜುಗಳು ಮತ್ತು 281 ಅನುದಾನಿತ ಪಾಠಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವೇತನವನ್ನು ಪಾವತಿಸುವ ಸಲುವಾಗಿ ಸರ್ಕಾರದಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಅನುದಾನ ಬಿಡುಗಡೆಯಾಗುತ್ತಿದ್ದು, ವೇತನವು ವಿಶ್ವವಿದ್ಯಾಲಯದ ಮುಖಾಂತರ ಪಾವತಿಯಾಗುತ್ತಿರುತ್ತದೆ. ಸದರಿ ಕಾಲೇಜುಗಳು ಮತ್ತು ಪಾಠಶಾಲೆಗಳು ಸಲ್ಲಿಸುವ ವೇತನ ಬಿಲ್ಲುಗಳು/ವೇತನೇತರ ಬಿಲ್ಲುಗಳ ಆಧಾರದಲ್ಲಿ ವಿಶ್ವವಿದ್ಯಾಲಯವು ಪಾವತಿ ಮಾಡುತ್ತಿದ್ದು, ಈ ಪಾವತಿಗಳಿಗೆ ಸಂಬಂಧಿಸಿದಂತೆ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಗಿದೆ.

**1**. ಸದರಿ ಅನುದಾನಿತ/ಅನುದಾನರಹಿತ ಕಾಲೇಜುಗಳು ಮತ್ತು ಪಾಠಶಾಲೆಗಳು ಸಲ್ಲಿಸುವ ವೇತನ ಬಿಲ್ಲುಗಳು/ವೇತನೇತರ ಬಿಲ್ಲುಗಳಲ್ಲಿ ನಮೂದಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಅಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ವಿಶ್ವವಿದ್ಯಾಲಯವು ಭೌತಿಕವಾಗಿ ಪರಿಶೀಲಿಸಿ ಖಾತ್ರಿಪಡಿಸಿಕೊಂಡಿರುವ ಮಾಹಿತಿ ಲಭ್ಯವಿರುವುದಿಲ್ಲ.

2. ಸದರಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಸೇವಾ ಪುಸ್ತಕಗಳ ಆಂತರಿಕ ಪರಿಶೋಧನೆಯನ್ನು ವಿಶ್ವವಿದ್ಯಾಲಯದಿಂದ ಮಾಡಿರುವುದಿಲ್ಲ.

3. ಕಾಲೇಜು/ಪಾಠಶಾಲಾ ಸಿಬ್ಬಂದಿಗಳ ವೇತನ ನಿಗದಿ, ವೇತನ ಬಡ್ತಿ, ಇತರೆ ಆರ್ಥಿಕ ಸೌಲಭ್ಯಗಳನ್ನು ಪಾವತಿಸುವ ಮುನ್ನ ಸೇವಾ ಪುಸ್ತಕಗಳನ್ನು ಪರಿಶೀಲಿಸಿ, ದೃಡೀಕರಿಸಿ ಪಾವತಿಸಬೇಕಾಗಿರುತ್ತದೆ.

4. ಅನುದಾನಿತ ಕಾಲೇಜು/ಪಾಠಶಾಲಾ ಸಿಬ್ಬಂದಿಗಳ ರಜಾ ಖಾತೆಯ ಮಾಹಿತಿಗಳು ಹಾಗೂ ಗಳಿಕೆ ರಜಾ ವೇತನ ಪಾವತಿಯಲ್ಲಿ ಆಡಳಿತ ಮಂಡಳಿಗಳು ಒದಗಿಸಿರುವ ಮಾಹಿತಿಯನ್ನು, ವಿಶ್ವವಿದ್ಯಾಲಯವು ರಜಾ ಖಾತೆಯ ಮಾಹಿತಿಗಳನ್ನು ಪರಿಶೀಲಿಸಿ ಪಾವತಿಸಬೇಕಾಗಿರುತ್ತದೆ.

5. ವಿಶ್ವವಿದ್ಯಾಲಯವು ಅನುದಾನಿತ/ಅನುದಾನರಹಿತ ಕಾಲೇಜುಗಳು ಮತ್ತು ಪಾಠಶಾಲೆಗಳ ವೇತನ ಬಿಲ್ಲುಗಳನ್ನು ಪಾವತಿಸುತ್ತಿದ್ದು, ಹಿಂದಿನ ಮಾಹೆಯ ಬಿಲ್ಲುಗಳಲ್ಲಿ ಕಟಾಯಿಸಲಾಗುತ್ತಿರುವ ಶಾಸನಬದ್ಧ ಹಾಗೂ ವೈಯಕ್ತಿಕ ಕಟಾವಣೆಗಳು ಸಂಬಂಧಿಸಿದ ಇಲಾಖೆಗಳಿಗೆ ಹಾಗೂ ಖಾತೆಗಳಿಗೆ ಜಮೆಯಾಗುತ್ತಿರುವ ಬಗ್ಗೆ, ಮುಂದಿನ ಮಾಹೆಯ ವೇತನವನ್ನು ಪಾವತಿಸುವ ಮುನ್ನ ಖಾತ್ರಿಪಡಿಸಿಕೊಂಡಿರುವುದಿಲ್ಲ.

ವಿಶ್ವವಿದ್ಯಾಲಯವು ಅನುದಾನಿತ/ಅನುದಾನರಹಿತ ಕಾಲೇಜುಗಳು ಮತ್ತು ಪಾಠಶಾಲೆಗಳಿಗೆ ಬಟವಾಡೆ ಅಧಿಕಾರಿಯಾಗಿ ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ (49) ರಿಂದ (57) ರ ಅನುಸಾರ, ಕಾರ್ಯ ನಿರ್ವಹಿಸಬೇಕಾಗಿರುತ್ತದೆ. ಆದ್ದರಿಂದ ಮೇಲ್ಕಂಡ ಅಂಶಗಳ ಬಗ್ಗೆ ಗಮನ ಹರಿಸಿ ಸೂಕ್ತ ಕ್ರಮ ಕೈಗೊಂಡು ನಿಯಮಾನುಸಾರ ವೇತನ ಮತ್ತು ವೇತನೇತರ ಬಿಲ್ಲುಗಳನ್ನು ಪಾವತಿಸಲು ಸೂಚಿಸಿದೆ.

**30. "ಶ್ರೀ ದೊರೆಸ್ವಾಮಿ, ಮುಖ್ಯ ಶಿಕ್ಷಕರು, ಶ್ರೀ ಚಂದ್ರಮೌಳೇಶ್ವರ ಮಲ್ಲಿಕಾರ್ಜುನಸ್ವಾಮಿ ಸಂಸ್ಕೃತ ಪಾಠಶಾಲೆ ಇವರಿಗೆ ವಿಶ್ವವಿದ್ಯಾಲಯದಿಂದ ವೇತನದ ಹಿಂಬಾಕಿ ಮೊತ್ತವನ್ನು ಪಾವತಿಸಿರುವುದು.**

2018–19ನೇ ಸಾಲಿನ ಅನುದಾನಿತ ಪಾಠಶಾಲೆಗಳ ವೇತನ ಪಾವತಿಯ ಬಿಲ್ಲುಗಳನ್ನು ಪರಿಶೀಲಿಸಲಾಗಿ, ಶ್ರೀ ದೊರೆಸ್ವಾಮಿ, ಮುಖ್ಯ ಶಿಕ್ಷಕರು, ಶ್ರೀ ಚಂದ್ರಮೌಳೇಶ್ವರ ಮಲ್ಲಿಕಾರ್ಜುನಸ್ವಾಮಿ, ಸಂಸ್ಕೃತ ಪಾಠಶಾಲೆ, ಮಾದಾಪುರ, ಹೆಚ್.ಡಿ. ಕೋಟೆ, ಮೈಸೂರು ಇವರಿಗೆ ಚೆಕ್ ಸಂಖ್ಯೆ:311613, ದಿನಾಂಕ:29.05.2018ರಲ್ಲಿ ಹಿಂಬಾಕಿ ಪಾವತಿಗಾಗಿ ರೂ.6,58,845/–ಗಳನ್ನು ಪಾವತಿಸಲಾಗಿದೆ. ಶ್ರೀ ದೊರೆಸ್ವಾಮಿಯವರು ದಿನಾಂಕ:25.10.2012ರಲ್ಲಿ ಸ್ವಯಂ ನಿವೃತ್ತಿ ನೀಡಿದ್ದಾರೆಂದು, ಮೇಲ್ಕಂಡ ಶಾಲೆಯ ಆಡಳಿತ ಮಂಡಳಿಯು, ಸದರಿಯವರನ್ನು ದಿನಾಂಕ:31.10.2013ರಲ್ಲಿ ಸಂಸ್ಕೃತ ನಿರ್ದೇಶನಾಲಯದ ಅನುಮೋದನೆಯೊಂದಿಗೆ ಕರ್ತವ್ಯದಿಂದ ಬಿಡುಗಡೆಗೊಳಿಸಿರುತ್ತಾರೆ. ಆದರೆ ಶ್ರೀ ದೊರೆಸ್ವಾಮಿಯವರು ತಾನು ಸ್ವಯಂ ನಿವೃತ್ತಿಯನ್ನು ಅದೇ ದಿನ ಹಿಂಪಡೆದಿದ್ದು, ಆಡಳಿತ ಮಂಡಳಿಯು ಹಿಂಪಡೆದ ಮನವಿಯನ್ನು ಪರಿಗಣಿಸದೇ ಕರ್ತವ್ಯದಿಂದ ಬಿಡುಗಡೆಗೊಳಿಸಿದೆ ಎಂದು ಆಕ್ಷೇಪಿಸಿ ಈ ಆದೇಶದ ವಿರುದ್ಧ ಹೈಕೋರ್ಟ್‌ನಲ್ಲಿ Writ petition 56917/2013/07.01.2014 ರಲ್ಲಿ ಮೇಲ್ಮನವಿ ಸಲ್ಲಿಸಿದ್ದು, ದಿನಾಂಕ:03.06.2014 ರ ಹೈಕೋರ್ಟ್‌ನ ಕೋರ್ಟ್ ತೀರ್ಪಿನಲ್ಲಿ ಅವರ ಮನವಿಯನ್ನು ಮನ್ನಿಸಿ ಅವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿರುವ ಆಡಳಿತ ಮಂಡಳಿಯ ಆದೇಶವನ್ನು ರದ್ದುಪಡಿಸಿ, ಕರ್ತವ್ಯಕ್ಕೆ ಹಾಜರುಮಾಡಿಕೊಳ್ಳಲು ಆದೇಶ ನೀಡಿರುತ್ತಾರೆ. ಅದರಂತೆ ದಿನಾಂಕ:10.07.2014ರಲ್ಲಿ ಶ್ರೀ ದೊರೆಸ್ವಾಮಿಯವರು ಕರ್ತವ್ಯಕ್ಕೆ ಹಾಜರಾಗಲು ಆಡಳಿತ ಮಂಡಳಿಗೆ ಮನವಿ ಸಲ್ಲಿಸಿದ್ದು, ಆಡಳಿತ ಮಂಡಳಿಯು ಈ ಮನವಿಯನ್ನು ಪುರಸ್ಕರಿಸದೇ ನಂತರ ವಿಳಂಬವಾಗಿ ದಿನಾಂಕ:14.09.2015ರಲ್ಲಿ ಅವರನ್ನು ಕರ್ತವ್ಯಕ್ಕೆ ಹಾಜರಾಗಲು ಅನುಮತಿ ನೀಡಿರುತ್ತಾರೆ.

ಶ್ರೀ ದೊರೆಸ್ವಾಮಿಯವರು ದಿನಾಂಕ:01.11.2013 ರಿಂದ 13.09.2015ರವರೆಗೆ ಕರ್ತವ್ಯ ನಿರ್ವಹಿಸದ ಅವಧಿಯಾಗಿದ್ದು, ಈ ದಿನದ ವೇತನ ಸಕ್ರಮಕ್ಕೆ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ, ನಿರ್ದೇಶಕರ ಆದೇಶ ಸಂಖ್ಯೆ: ಕ.ಸಂ.ವಿ/ಸಂ.ಶಿ.ನಿ/ಆ.ಸಂ.ಪಾ.ಮ/132/2013–14/582 ದಿನಾಂಕ: 09.02.2017 ರಲ್ಲಿ ಸಕ್ರಮಗೊಳಿಸಲು ಆದೇಶಿಸಿರುತ್ತಾರೆ.

ಮೇಲ್ಕಂಡ ಅಂಶಗಳನ್ವಯ, ಆಡಳಿತ ಮಂಡಳಿಯು ಕೋರ್ಟ್ ಆದೇಶವನ್ನು ಉಲ್ಲಂಘಿಸಿದ್ದು, ಶ್ರೀ ದೊರೆಸ್ವಾಮಿಯವರನ್ನು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಒಪ್ಪಿರುವುದಿಲ್ಲ. ಆದ್ದರಿಂದ ಸದರಿಯವರು ಈ ಅವಧಿಯಲ್ಲಿ ಕರ್ತವ್ಯ ನಿರ್ವಹಿಸದಿರಲು ಆ ಅವಧಿಯಲ್ಲಿನ ಆಡಳಿತ ಮಂಡಳಿಯ ಸದಸ್ಯರುಗಳೇ ನಿರ್ಧಾರಗಳೇ ಕಾರಣವಾಗಿರುತ್ತದೆ.. ಆದ್ದರಿಂದ ಈ ಅವಧಿಯ ಮೊತ್ತವನ್ನು ಈ ನ್ಯೂನತೆಗೆ ಹೊಣೆಗಾರರಾದ

ಶಾಲೆಯ ಆ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಆಡಳಿತ ಮಂಡಳಿಯೇ ಭರಿಸಬೇಕಿದ್ದು, ಸರ್ಕಾರದ ನಿಧಿಯಿಂದ ಭರಿಸುವಂತಿಲ್ಲ. ಆದ್ದರಿಂದ ಶ್ರೀ ದೊರೆಸ್ವಾಮಿಯವರಿಗೆ ಪಾವತಿಸಿರುವ ಮೊತ್ತ ರೂ.6,58,845/– ಗಳನ್ನು ಶ್ರೀ ಚಂದ್ರಮೌಳೇಶ್ವರ ಮಲ್ಲಿಕಾರ್ಜುನಸ್ವಾಮಿ, ಸಂಸ್ಕೃತ ಪಾಠಶಾಲೆಯ ಆ ಅವಧಿಯ ಆಡಳಿತ ಮಂಡಳಿಯಿಂದ ವಸೂಲಿಸಿ ವಿಶ್ವವಿದ್ಯಾಲಯದ ಖಾತೆಗೆ ಜಮಾ ಮಾಡಲು ಸೂಚಿಸಿದೆ.

**31. 2012–13 ರಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನವನ್ನು ಬಳಕೆ ಮಾಡದಿರುವುದು.**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, 2018–19 ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗೆ ಸಂಬಂಧಿಸಿದ ಕಡತಗಳನ್ನು ಪರಿಶೀಲಿಸಲಾಯಿತು. ಅದರಂತೆ ವಿಶ್ವವಿದ್ಯಾಲಯಕ್ಕೆ 2011–12 ರಿಂದ 2014–15 ರವರೆಗೆ ಅನುದಾನ ಬಿಡುಗಡೆಯಾಗಿದ್ದು, ಸದರಿ ಅನುದಾನವನ್ನು 2018–19 ನೇ ಸಾಲಿನಲ್ಲಿ ಬಳಕೆ ಮಾಡಿರುವುದು ಲೆಕ್ಕ ಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ. ಈ ಬಗ್ಗೆ ವಿವರಣೆ ಒದಗಿಸುವಂತೆ ತಿಳಿಸಿ, ಲೆಕ್ಕ ಪರಿಶೋಧನಾ ವಿಚಾರಣಾ ಸಂಖ್ಯೆ: 17/13.09.2019 ರಲ್ಲಿ ಮಾಹಿತಿ ಕೇಳಿದ್ದು, ವಿಶ್ವವಿದ್ಯಾಲಯವು ದಿ: 26.09.2019 ರಂದು ಉತ್ತರವನ್ನು ನೀಡಿದ್ದು, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನವನ್ನು ಬಳಸಿಕೊಳ್ಳುವುದು ಆಡಳಿತಾತ್ಮಕ ಕಾರಣಗಳಿಂದ ವಿಳಂಬವಾಗಿದ್ದು, 2018–19ನೇ ಸಾಲಿನಲ್ಲಿ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿನಿಲಯಗಳ ನಿರ್ಮಾಣ ಕಾಮಗಾರಿಗೆ ರೂ: 1,10,90,000.00 ಬಳಸಿಕೊಳ್ಳಲಾಗಿರುವುದಾಗಿಯೂ ಉಳಿದ ಅನುದಾನವನ್ನು ಮುಂದಿನ ದಿನಗಳಲ್ಲಿ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳ ಅಭಿವೃದ್ಧಿಗೆ ಬಳಕೆ ಮಾಡುವುದಾಗಿ ತಿಳಿಸಿರುತ್ತಾರೆ. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ ಒಟ್ಟು ಮೊತ್ತ ರೂ.7,56,70,622/– ಗಳಾಗಿದ್ದು, ಅದರಲ್ಲಿ ರೂ. 6,28,99,699/– ಗಳನ್ನು 2014–15ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಆಕ್ಷೇಪಿಸಲಾಗಿರುತ್ತದೆ. ಉಳಿದಂತಹ ಒಟ್ಟು ರೂ.1,27,70,923/– ಗಳಲ್ಲಿ ಈ ವರ್ಷ ರೂ. 1,10,90,000/– ಗಳನ್ನು ಪ.ಜಾತಿ/ಪ.ಪಂಗಡದ ವಿದ್ಯಾರ್ಥಿನಿಲಯಗಳ ಕಟ್ಟಡ ಕಾಮಗಾರಿಗೆ ಬಳಸಲಾಗಿದೆ. ಬಾಕಿ ಉಳಿದ ಮೊತ್ತ ಅಂದರೆ (ರೂ: 1,27,70,923–1,10,90,000) ರೂ.16,80,923/– ಗಳನ್ನು ಮೊತ್ತವನ್ನು ಬಳಕೆ ಮಾಡುವವರೆಗೂ ಅಥವಾ ಸರ್ಕಾರಕ್ಕೆ ಆದ್ಯರ್ಪಿಸುವವರೆಗೂ ಆಕ್ಷೇಪಣೆಯಲ್ಲಿಡಲಾಗಿದೆ.

**32. ಡಾ. ಶ್ರೀನಿವಾಸ ವರಖೇಡಿ, ಪ್ರಾಧ್ಯಾಪಕರು ಇವರ ಪಿಂಚಣಿ ವಂತಿಗೆ ಮತ್ತು ರಜಾ ವೇತನ ವಂತಿಗೆ ಸಂಬಂಧಿಸಿದ ವಿಶ್ವವಿದ್ಯಾಲಯದಿಂದ ವಸೂಲಿಸಿ, ವಿಶ್ವವಿದ್ಯಾಲಯದ ಖಾತೆಗೆ ಜಮೆ ಮಾಡದಿರುವುದು.**

2018–19ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ, ಬೋಧಕ ಸಿಬ್ಬಂದಿಗಳ ಸೇವಾ ಪುಸ್ತಕ ಪರಿಶೀಲಿಸಲಾಗಿದ್ದು, ಡಾ|| ಶ್ರೀನಿವಾಸ ವರಖೇಡಿ, ಪ್ರಾಧ್ಯಾಪಕರು ಇವರು ಸರ್ಕಾರದ ಆದೇಶ ಸಂ: CS/ KKSU/AVC/2017/2087, ದಿನಾಂಕ: 12/12/2017 ರನ್ವಯ "ಕವಿ ಕುಲಗುರು ಕಾಳಿದಾಸ ವಿಶ್ವವಿದ್ಯಾಲಯ" ನಾಗಪುರ, ಮಹಾರಾಷ್ಟ್ರ ಇಲ್ಲಿಗೆ ಕುಲಪತಿಗಳಾಗಿ ಆಯ್ಕೆಯಾಗಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957ರ ನಿಯಮ 50(1)(ಬಿ)ರನ್ವಯ 'lien' ಮೇಲೆ ಬಿಡುಗಡೆಗೊಳಿಸಿ, ಅನ್ಯಸೇವೆಯ ಮೇಲೆ ಸೇವೆ ಸಲ್ಲಿಸಲು ತೆರಳಿರುತ್ತಾರೆ. ಸದರಿಯವರ ವೇತನಗಳು, ಕರ್ತವ್ಯಗಳು ಈ ವಿಶ್ವವಿದ್ಯಾಲಯದಲ್ಲಿ ನಿರ್ವಹಿಸಲ್ಪಡುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957ರ ನಿಯಮ 416 ರ ಅನ್ವಯ ಅನ್ಯಸೇವಾ ನಿಯಮಗಳು

ಮತ್ತು ನಿಯಮ 427 ರನ್ವಯ, ಸದರಿಯವರ ಪಿಂಚಣಿ ವಂತಿಗೆ ಮೂಲವೇತನದ ಶೇ. 12.5 ಹಾಗೂ ರಜಾವೇತನ ವಂತಿಗೆ ಶೇ. 11 % ರಷ್ಟನ್ನು ನಿಯೋಜಿಸಲ್ಪಟ್ಟ ಸಂಸ್ಥೆಯಿಂದ ವಸೂಲಿಸಬೇಕಾಗಿರುತ್ತದೆ. ಈ ಬಗ್ಗೆ ಸಂಬಂಧಪಟ್ಟ ವಿಶ್ವವಿದ್ಯಾಲಯದಿಂದ ವಸೂಲಿಸಿ ವಿಶ್ವವಿದ್ಯಾಲಯದ ನಿಧಿಗೆ ಜಮೆ ಮಾಡಿರುವ ವಿವರಗಳನ್ನು ಲೆಕ್ಕತನಿಖೆಗೆ ಒದಗಿಸುವಂತೆ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 53/ದಿನಾಂಕ: 01.10.2019ರಲ್ಲಿ ಸೂಚಿಸಲಾಗಿತ್ತು. ಅದರಂತೆ ವಿಶ್ವವಿದ್ಯಾಲಯದವರು ದಿನಾಂಕ: 02.10.2019 ರಂದು ನೀಡಿರುವ ಉತ್ತರದಲ್ಲಿ ಈಗಾಗಲೇ ಈ ಬಗ್ಗೆ ಸದರಿ ಅಧಿಕಾರಿಯವರು ಕರ್ತವ್ಯ ನಿರ್ವಹಿಸುತ್ತಿರುವ ವಿಶ್ವವಿದ್ಯಾಲಯದೊಂದಿಗೆ ಪತ್ರ ವ್ಯವಹಾರ ನಡೆಸಲಾಗಿದ್ದು, ಪ್ರಸ್ತುತ ಲೆಕ್ಕಪರಿಶೋಧನೆಯಲ್ಲಿ ಸದರಿ ವಸೂಲಾತಿಯ ಕುರಿತು ಆಕ್ಷೇಪಿಸಿರುವ ಹಿನ್ನೆಲೆಯಲ್ಲಿ, ಮತ್ತೊಮ್ಮೆ ಈ ಕುರಿತು ಪತ್ರ ಬರೆಯುವುದಾಗಿ ತಿಳಿಸಿರುತ್ತಾರೆ. ಈ ಬಗ್ಗೆ ಕ್ರಮ ಕೈಗೊಂಡು ಡಾ. ಶ್ರೀನಿವಾಸ ವರಖೇಡಿ, ಪ್ರಾಧ್ಯಾಪಕರು ಇವರ ಪಿಂಚಣಿ ವೇತನ ಮತ್ತು ರಜಾ ವೇತನ ವಂತಿಗೆ ಮೊತ್ತ ರೂ: 2,74,609/– ಭತ್ಯೆಗಳನ್ನು ಸಂಬಂಧಿಸಿದ ವಿಶ್ವವಿದ್ಯಾಲಯದಿಂದ ವಸೂಲಿಸಿ, ವಿಶ್ವವಿದ್ಯಾಲಯದ ನಿಧಿಗೆ ಜಮೆ ಮಾಡಲು ಸೂಚಿಸಿದೆ.

ವಿವರವನ್ನು **ಅನುಬಂಧ–7** ರಲ್ಲಿ ನಮೂದಿಸಿದೆ.

**33. ಶ್ರೀಮತಿ ಹೆಚ್.ಪಿ. ಜ್ಯೋತಿ , ಯೋಜನಾ ಸಹಾಯಕರು ಇವರಿಗೆ ರಜಾ ಅವಧಿಯಲ್ಲಿ ವಾರ್ಷಿಕ ವೇತನ ಬಡ್ತಿಯ ಆರ್ಥಿಕ ಸೌಲಭ್ಯಗಳನ್ನು ನೀಡಿರುವುದು.**

ಶ್ರೀಮತಿ ಹೆಚ್.ಪಿ. ಜ್ಯೋತಿ, ಯೋಜನಾ ಸಹಾಯಕರು ಇವರ ಸೇವಾ ಪುಸ್ತಕವನ್ನು ಪರಿಶೀಲಿಸಲಾಗಿ, ಸದರಿಯವರಿಗೆ ದಿನಾಂಕ: 29.12.2015 ರಿಂದ 28.06.2016 ರವರೆಗೆ ಲೆಕ್ಕಪರಿಶೋಧನೆ ಪ್ರಸೂತಿ ರಜೆಯನ್ನು ಮಂಜೂರು ಮಾಡಿದ್ದು, ದಿನಾಂಕ: 01.01.2017 ರಂದು ಸದರಿಯವರಿಗೆ ವೇತನ ಶ್ರೇಣಿ 21600–40050 ರಲ್ಲಿ ವಾರ್ಷಿಕ ವೇತನ ಬಡ್ತಿಯನ್ನು ನೀಡಿ, ಮೂಲವೇತನವನ್ನು ರೂ: 23,400/– ಗಳಿಗೆ ನಿಗದಿಪಡಿಸಲಾಗಿದೆ.

ಕರ್ನಾಟಕ ನಾಗರಿಕ ಸೇವಾ ನಿಯಮಗಳು 1957ರ ನಿಯಮ 135ಎ ರನ್ವಯ, ರಜೆಯ ಮೇಲೆ ತೆರಳುವ ಸರ್ಕಾರಿ ನೌಕರರು ರಜೆಗೆ ತೆರಳುವ ಮುನ್ನ ಪಡೆಯುತ್ತಿದ್ದ ವೇತನ ಭತ್ಯೆಗಳನ್ನೇ ರಜಾ ಅವಧಿಯಲ್ಲೂ ಪಡೆಯಬಹುದಾಗಿದ್ದು, ರಜಾ ಅವಧಿಯಲ್ಲಿ ಮಂಜೂರಾದ ವಾರ್ಷಿಕ ವೇತನ ಬಡ್ತಿಯ ಆರ್ಥಿಕ ಸೌಲಭ್ಯಗಳನ್ನು ಕರ್ತವ್ಯಕ್ಕೆ ಹಿಂದಿರುಗಿದ ದಿನಾಂಕದಿಂದ ಪಡೆಯಲು ಅರ್ಹರಿರುತ್ತಾರೆ.

ಅದರಂತೆ ಶ್ರೀಮತಿ ಹೆಚ್.ಪಿ.ಜ್ಯೋತಿ, ಯೋಜನಾ ಸಹಾಯಕರು ಇವರಿಗೆ ವಾರ್ಷಿಕ ವೇತನ ಬಡ್ತಿಯ ಆರ್ಥಿಕ ಸೌಲಭ್ಯಗಳನ್ನು ಸದರಿಯವರು ಕರ್ತವ್ಯಕ್ಕೆ ಹಿಂದಿರುಗಿದ ದಿನಾಂಕ: 29.06.2016 ರಿಂದ ಪಾವತಿಸಲಾಗಿದೆಯೇ ಎಂಬುದರ ಬಗ್ಗೆ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 56/2018–19, ದಿನಾಂಕ:01.10.2019ನ್ನು ನೀಡಲಾಗಿತ್ತು. ಅದರಂತೆ ವಿಶ್ವವಿದ್ಯಾಲಯದವರು ದಿನಾಂಕ: 14.10.2019 ರಂದು ಉತ್ತರವನ್ನು ನೀಡಿದ್ದು, ಸದರಿಯವರಿಗೆ ಪ್ರಸೂತಿ ರಜೆಯ ಅವಧಿಯಲ್ಲಿಯೂ ಸಹ ವಾರ್ಷಿಕ ವೇತನ ಬಡ್ತಿಯ ಆರ್ಥಿಕ ಸೌಲಭ್ಯಗಳನ್ನು ನೀಡಿದ್ದು, ವಸೂಲಿಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ ಶ್ರೀಮತಿ ಹೆಚ್.ಪಿ. ಜ್ಯೋತಿ, ಯೋಜನಾ ಸಹಾಯಕರು ಇವರಿಗೆ ದಿನಾಂಕ: 01.01.2016 ರಿಂದ 28.06.2016 ಲೆಕ್ಕಪರಿಶೋಧನೆ ಪಾವತಿಸಿರುವ ವಾರ್ಷಿಕ ವೇತನ ಬಡ್ಡಿಯ ಹೆಚ್ಚುವರಿ ಆರ್ಥಿಕ ಸೌಲಭ್ಯದ ಮೊತ್ತ ರೂ: 5,910.00 ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ.

ವಿವರವನ್ನು **ಅನುಬಂಧ–8** ರಲ್ಲಿ ನಮೂದಿಸಿದೆ.

**34. ಆರ್ಥಿಕ ಪರಿನಿಯಮಗಳನ್ನು ರಚಿಸಿಕೊಳ್ಳದೇ, ಕುಲಸಚಿವರಿಗೆ ಹಾಗೂ ಹಣಕಾಸು ಅಧಿಕಾರಿಗಳಿಗೆ ಗೃಹ ಪರಿಚಾರಿಕೆ ಭತ್ಯೆಯನ್ನು ಪಾವತಿಸಿರುವುದು.**

ವಿಶ್ವವಿದ್ಯಾಲಯಗಳಲ್ಲಿ ಗೃಹ ಪರಿಚಾರಿಕೆ ಭತ್ಯೆಯನ್ನು ಮಾನ್ಯ ಕುಲಪತಿಯವರಿಗೆ ಮಾತ್ರ ಪಾವತಿಸಲು ಅವಕಾಶವಿರುತ್ತದೆ. ಆದರೆ 2018–19 ನೇ ಸಾಲಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಕುಲಸಚಿವರಿಗೆ ಹಾಗೂ ಆರ್ಥಿಕ ಅಧಿಕಾರಿಗಳಿಗೆ ಸಹ ಮಾಸಿಕವಾಗಿ ತಲಾ ರೂ. 3,000/– ಗಳಂತೆ, ಗೃಹ ಪರಿಚಾರಿಕೆ ಭತ್ಯೆಯನ್ನು ಪಾವತಿಸಲಾಗಿದೆ. ಸದರಿ ಪಾವತಿಯನ್ನು ಮಾಡಿರುವ ಬಗ್ಗೆ ವಿಶ್ವವಿದ್ಯಾಲಯದ ನಿಯಮಗಳು ಹಾಗೂ ಆರ್ಥಿಕ ಪರಿನಿಯಮಗಳ ಪ್ರತಿಯನ್ನು ಲೆಕ್ಕ ಪರಿಶೋಧನೆಗೆ ಒದಗಿಸುವಂತೆ, ವಿಚಾರಣಾ ಪತ್ರ ಸಂಖ್ಯೆ: 43/2018–19 ದಿನಾಂಕ: 20.09.2019 ರಲ್ಲಿ ಕೋರಲಾಗಿತ್ತು. ವಿಶ್ವವಿದ್ಯಾಲಯವು ದಿನಾಂಕ: 26.09.2019 ರಲ್ಲಿ ನೀಡಿರುವ ಉತ್ತರದಲ್ಲಿ, ಸದರಿ ವೆಚ್ಚವನ್ನು ಪಾವತಿಸಲು ಪ್ರಶಾಸನ ಸಮಿತಿಯಲ್ಲಿ ಅನುಮೋದನೆ ಪಡೆದುಕೊಳ್ಳಲಾಗಿದೆ. ಪ್ರಸ್ತುತ ಈ ಬಗ್ಗೆ ಕರಡು ಪರಿನಿಯಮಗಳನ್ನು ರಚಿಸಲಾಗಿದ್ದು, ಪ್ರಶಾಸನ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ತಿಳಿಸಿರುತ್ತಾರೆ. ಅಲ್ಲಿಯವರೆಗೂ ಕುಲಸಚಿವರು ಹಾಗೂ ಆರ್ಥಿಕ ಅಧಿಕಾರಿಗಳಿಗೆ ಪಾವತಿಸಿರುವ ಗೃಹ ಪರಿಚಾರಿಕೆ ಭತ್ಯೆ ಮೊತ್ತ (ರೂ.3000*12*2) ಒಟ್ಟು ರೂ.72,000/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**35. ಅವಶ್ಯವಿಲ್ಲದೇ ಅಡುಗೆ ಸಹಾಯಕರನ್ನು ನೇಮಕಾತಿ ಮಾಡಿ ಮೊತ್ತವನ್ನು ಪಾವತಿಸಿರುವುದು.**

2018–19ನೇ ಸಾಲಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಬೋಧಕೇತರ ಸಿಬ್ಬಂದಿಗಳ ಸೇವಾ ವಹಿಯ ಪರಿಶೀಲನೆಯ ಸಂದರ್ಭದಲ್ಲಿ, ವಿಶ್ವವಿದ್ಯಾಲಯ ನೇಮಕಾತಿ ಅಧಿಸೂಚನೆ ಸಂಖ್ಯೆ: ಕಸಂವಿ/ಆವಿ/ಸಿಬ್ಬಂದಿ/1/2012–13 ದಿನಾಂಕ:16.07.2012 ಅನ್ವಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಮಂಜೂರಾಗಿರುವ ಒಂದು ಅಡುಗೆ ಸಹಾಯಕರ ಹುದ್ದೆಗೆ ಶ್ರೀಮತಿ ಎಂ. ಮಂಗಳ ಅವರನ್ನು ದಿನಾಂಕ: 27.09.2012 ರಿಂದ ನೇಮಿಸಿಕೊಳ್ಳಲಾಗಿರುತ್ತದೆ. ಸದರಿಯವರು ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ, ಕೆಳಕಂಡ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವಂತೆ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 55/2018–19 ದಿನಾಂಕ: 01.10.2019 ರಲ್ಲಿ ಕೋರಲಾಗಿತ್ತು.

1. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ವಿದ್ಯಾರ್ಥಿ/ವಿದ್ಯಾರ್ಥಿನಿ ನಿಲಯವನ್ನು ಹೊಂದಿದ್ದಲ್ಲಿ, ಸದರಿ ಸಿಬ್ಬಂದಿಯು ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾಹಿತಿ.
2. ವಿಶ್ವವಿದ್ಯಾಲಯವು ಅತಿಥಿ ಗೃಹಗಳನ್ನು ಹೊಂದಿದ್ದಲ್ಲಿ ಅತಿಥಿಗೃಹದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾಹಿತಿ.

ಈ ಬಗ್ಗೆ ವಿಶ್ವವಿದ್ಯಾಲಯವು ದಿನಾಂಕ: 14.10.2019 ರಲ್ಲಿ ನೀಡಿರುವ ಅನುಪಾಲನ ವರದಿಯಲ್ಲಿ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿದ್ಯಾರ್ಥಿ ನಿಲಯಗಳ ಕಾಮಗಾರಿಗಳು ಪ್ರಗತಿಯಲ್ಲಿದ್ದು, ವಿಶ್ವವಿದ್ಯಾಲಯವು ಯಾವುದೇ ಅತಿಥಿ ಗೃಹವನ್ನು ಹೊಂದಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಪ್ರಸ್ತುತ ಶ್ರೀಮತಿ ಎಂ. ಮಂಗಳ, ಅಡುಗೆ ಸಹಾಯಕರು ಇವರು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳ ಮನೆಯಲ್ಲಿ ಅಡುಗೆ ಕಾರ್ಯನಿರ್ವಹಿಸುತ್ತಿರುತ್ತಾರೆ ಎಂದು ತಿಳಿಸಿರುತ್ತಾರೆ. ಆದ್ದರಿಂದ ವಿಶ್ವವಿದ್ಯಾಲಯವು ವಿದ್ಯಾರ್ಥಿ ನಿಲಯಗಳು ಹಾಗೂ ಅತಿಥಿ ಗೃಹಗಳನ್ನು ಹೊಂದಿಲ್ಲದೇ ಇದ್ದರೂ ಸಹ, ವಿಶ್ವವಿದ್ಯಾಲಯಕ್ಕೆ ಅಡುಗೆ ಸಹಾಯಕರನ್ನು ನೇಮಿಸಿಕೊಂಡು ಸದರಿಯವರಿಗೆ ಪಾವತಿಸಿರುವ ಪ್ರಸಕ್ತ ಸಾಲಿನ ವೇತನ ರೂ: 2,39,935/– ಗಳನ್ನು ವಸೂಲಾತಿಗೆ ಸೂಚಿಸಿದೆ.

**36. ಶ್ರೀ ಸಿದ್ದಯ್ಯ ಎಸ್. ವಿಶ್ರಾಂತಿ ಗೃಹ ಮೇಲ್ವಿಚಾರಕ ಇವರಿಗೆ ನಿಯಮಬಾಹಿರವಾಗಿ ವೇತನ ಮತ್ತು ವೇತನ ಶ್ರೇಣಿಯನ್ನು ಪರಿಷ್ಕರಿಸಿ, ಮೊತ್ತವನ್ನು ಪಾವತಿಸಿರುವುದು..**

2018–19ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಶ್ರೀ ಸಿದ್ದಯ್ಯ ಎಸ್. ವಿಶ್ರಾಂತಿ ಗೃಹ ಮೇಲ್ವಿಚಾರಕ ಇವರ ಸೇವಾ ಪುಸ್ತಕವನ್ನು ಪರಿಶೀಲಿಸಿದಾಗ, ಸದರಿಯವರು ದಿನಾಂಕ: 11/10/2013 ರಲ್ಲಿ, ವಿಶ್ವವಿದ್ಯಾಲಯದ ವೃಂದ ನೇಮಕಾತಿ ನಿಯಮಗಳನ್ವಯ, ವೇತನ ಶ್ರೇಣಿ 10,400–16,400 ರಲ್ಲಿ ವಿಶ್ರಾಂತಿ ಗೃಹ ಮೇಲ್ವಿಚಾರಕ (ಕೇರ್ ಟೇಕರ್) ರಾಗಿ ನೇಮಕ ಹೊಂದಿರುತ್ತಾರೆ. ಸದರಿಯವರ ಕೋರಿಕೆಯ ಮೇರೆಗೆ ವಿಶ್ವವಿದ್ಯಾಲಯದ ಆದೇಶ ಸಂಖ್ಯೆ: ಕ.ಸಂ.ವಿ.ವಿ.ಗೃ.ಮೇ–01/13–14 ದಿನಾಂಕ: 08.05.2015 & ವಿಶ್ವವಿದ್ಯಾಲಯದ ಆದೇಶ ಸಂಖ್ಯೆ: ಕ.ಸಂ.ವಿ.ವಿ.ಗೃ.ಮೇ. 01/13–14 ದಿನಾಂಕ: 03.06.2015ರ ಅನ್ವಯ, ಇವರ ವೇತನವನ್ನು ರೂ: 11,600/– ಗಳಿಗೆ ಪರಿಷ್ಕರಿಸಿ, ದ್ವಿತೀಯ ದರ್ಜೆ ಸಹಾಯಕರ ವೇತನ ಶ್ರೇಣಿಗೆ ಉನ್ನತೀಕರಿಸಿದೆ. ನೇಮಕಾತಿ ಹೊಂದಿದ ದಿನಾಂಕದಿಂದ ವೇತನವನ್ನು ಪರಿಷ್ಕರಿಸಿ ಪಾವತಿಸಲಾಗಿದೆ. ವಿಶ್ವವಿದ್ಯಾಲಯವು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಗತ್ಯ ತಿದ್ದುಪಡಿ ಮಾಡದೇ, ನೇರವಾಗಿ ವೇತನ ಶ್ರೇಣಿಯನ್ನು ಉನ್ನತೀಕರಿಸಿರುವುದು, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ಉಲ್ಲಂಘನೆಯಾಗಿರುತ್ತದೆ. ಸಿಬ್ಬಂದಿಯವರ ವೇತನ ಶ್ರೇಣಿಯನ್ನು ಪರಿಷ್ಕರಿಸಲು ವಿಶ್ವವಿದ್ಯಾಲಯವು ಹೊಂದಿರುವ ಅಧಿಕಾರ ಪ್ರತ್ಯಾಯೋಜನೆ ಹಾಗೂ ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ತಿದ್ದುಪಡಿ ಮಾಡಿರುವ ಬಗ್ಗೆ ವಿವರಗಳನ್ನು ಒದಗಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 54/2018–19, ದಿನಾಂಕ: 01.10.2019ರಲ್ಲಿ ಮಾಹಿತಿ ಕೋರಲಾಗಿತ್ತು. ವಿಶ್ವವಿದ್ಯಾಲಯವು ದಿನಾಂಕ: 14.10.2019 ರಂದು ಒದಗಿಸಿರುವ ಅನುಪಾಲನಾ ವರದಿಯಲ್ಲಿ, ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ತಿದ್ದುಪಡಿ ಮಾಡಿ, ಪಾವತಿಸಿರುವ ಬಗ್ಗೆ ಮಾಹಿತಿ ಒದಗಿಸದಿರುವ ಹಿನ್ನೆಲೆಯಲ್ಲಿ, ವೇತನ ಪರಿಷ್ಕರಿಸಿ ಪಾವತಿಸಿರುವ ಮೊತ್ತ ರೂ.1,39,192/– ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಲು ಸೂಚಿಸಿದೆ.

ವಿವರಗಳನ್ನು **ಅನುಬಂಧ–9 ರಲ್ಲಿ** ಲಗತ್ತಿಸಿದೆ.

**37. ಪರೀಕ್ಷಾ ಸಂಬಂಧಿ ಕಾರ್ಯಗಳನ್ನು ನಿರ್ವಹಿಸಿದ ಅಧ್ಯಾಪಕರುಗಳಿಗೆ ಮತ್ತು ಸಿಬ್ಬಂದಿಗಳು ಸಲ್ಲಿಸಿರುವ ಪ್ರಯಾಣಭತ್ಯೆ, ದಿನಭತ್ಯೆ ಹಾಗೂ ಸಂಭಾವನೆಯ ಬಿಲ್ಲುಗಳನ್ನು ಸೂಕ್ತವಾಗಿ ಪರಿಶೀಲಿಸದೇ ಪಾವತಿಸಿರುವುದು.**

2018–19 ನೇ ಸಾಲಿನಲ್ಲಿ ಪರೀಕ್ಷಾ ಸಂಬಂಧಿ ಕಾರ್ಯಗಳನ್ನು ನಿರ್ವಹಿಸಿದ ಅಧ್ಯಾಪಕರುಗಳಿಗೆ ಮತ್ತು ಸಿಬ್ಬಂದಿಗಳಿಗೆ ವಿಶ್ವವಿದ್ಯಾಲಯವು ಪ್ರಯಾಣ ಭತ್ಯೆ/ದಿನಭತ್ಯೆ & ಗೌರವ ಸಂಭಾವನೆಯಾಗಿ ರೂ.7,25,079/– ಗಳನ್ನು ಪಾವತಿಸಲಾಗಿದೆ.

ಈ ಬಗ್ಗೆ ಲೆಕ್ಕಪರಿಶೋಧನೆಗೆ ಒದಗಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ, ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತವೆ:

1. ಪ್ರಯಾಣ ಭತ್ಯೆ ಬಿಲ್ಲಿನೊಂದಿಗೆ ಸದರಿ ಅಧ್ಯಾಪಕರುಗಳಿಗೆ ಮತ್ತು ಸಿಬ್ಬಂದಿಗಳನ್ನು ಪ್ರಶ್ನೆಪತ್ರಿಕೆ ತಯಾರಿಕೆ ಹಾಗೂ ಉತ್ತರ ಪತ್ರಗಳ ಮೌಲ್ಯಮಾಪನ ಪ್ರಶ್ನೆಪತ್ರಿಕೆ ತಯಾರಿಕೆ ಹಾಗೂ ಉತ್ತರ ಪತ್ರಗಳ ಮೌಲ್ಯಮಾಪನಕ್ಕೆ ಆಗಮಿಸಿದ ಅಧ್ಯಾಪಕರು ಹಾಗೂ ಸಿಬ್ಬಂದಿಗಳ ಹಾಜರಾತಿ ವಹಿ ನಿರ್ವಹಿಸಿರುವುದಿಲ್ಲ.

2. ನಿಗದಿತ ನಮೂನೆಯಲ್ಲಿ ಪ್ರಯಾಣ ಭತ್ಯೆ ಬಿಲ್ಲನ್ನು ಸಲ್ಲಿಸಿರುವುದಿಲ್ಲ.

3. ಪ್ರಯಾಣ ಭತ್ಯೆ ಪಡೆಯಲು ಬಸ್ ಟಿಕೆಟ್/ರೈಲು ಟಿಕೆಟ್ & ದಿನಭತ್ಯೆ ಪಡೆಯಲು ವೇತನ ಪ್ರಮಾಣಪತ್ರ ಕಡ್ಡಾಯವೆಂದು ವಿಶ್ವವಿದ್ಯಾಲಯದ ಆದೇಶ ಪತ್ರದಲ್ಲಿ ನಮೂದಿಸಿದ್ದರೂ ಸಹ, ಈ ಆದೇಶವನ್ನು ಪಾಲಿಸದೇ ಪ್ರಯಾಣ ಭತ್ಯೆ /ದಿನಭತ್ಯೆ & ಗೌರವ ಸಂಭಾವನೆಯನ್ನು ಪಾವತಿಸಲಾಗಿದೆ. ಆದ್ದರಿಂದ ರೂ.7,25,079/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**38. ವಿಶ್ವವಿದ್ಯಾಲಯದ ಅಧಿಕಾರಿ/ಸಿಬ್ಬಂದಿಗಳು ಸಲ್ಲಿಸಿರುವ ಪ್ರಯಾಣ ಭತ್ಯೆಗಳ ಬಿಲ್ಲುಗಳನ್ನು ಸೂಕ್ತವಾಗಿ ಪರಿಶೀಲಿಸದೇ ಪಾವತಿಸಿರುವುದು.**

2018–19ನೇ ಸಾಲಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿಕಾರಿ/ಸಿಬ್ಬಂದಿಗಳ ಪ್ರಯಾಣ ಭತ್ಯೆಗಾಗಿ ಒಟ್ಟು ರೂ.5,84,992/– ಗಳಷ್ಟು ವೆಚ್ಚ ಭರಿಸಿರುತ್ತಾರೆ. ಇದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿದಾಗ, ಈ ಕೆಳಕಂಡ ನ್ಯೂನತೆಗಳು ಕಂಡುಬಂದಿದೆ.

I. ಅಧಿಕಾರಿ/ಸಿಬ್ಬಂದಿಯವರು ಪ್ರಯಾಣಿಸುವುದಕ್ಕೆ ಯಾವುದೇ ಆದೇಶ ಅಥವಾ ಮೇಲಾಧಿಕಾರಿಗಳ ಅನುಮೋದನೆ ಪಡೆದಿರುವುದಿಲ್ಲ.

II. ನಿಗದಿತ ಪ್ರಯಾಣ ಭತ್ಯೆ ಬಿಲ್ಲಿನಲ್ಲಿ ಬಿಲ್ಲನ್ನು ತಯಾರಿಸಿರುವುದಿಲ್ಲ. ಯಾವ ಸ್ಥಳದಿಂದ ಯಾವ ಸ್ಥಳಕ್ಕೆ ಪ್ರಯಾಣಿಸಿರುತ್ತಾರೆ , ಯಾವ ವಿಧಾನದಲ್ಲಿ ಪ್ರಯಾಣಿಸಿರುತ್ತಾರೆ. (ಬಸ್/ಕಾರ್/ಟ್ಯಾಕ್ಸಿ/ವಿಮಾನ/ರೈಲು) ,ಎಷ್ಟು ಕಿ.ಮೀ. ಪ್ರಯಾಣಿಸಿರುತ್ತಾರೆ, ಯಾವ ಉದ್ದೇಶಕ್ಕಾಗಿ ಪ್ರಯಾಣಿಸಿರುತ್ತಾರೆ ಎಂಬ ವಿವರಗಳಿರುವುದಿಲ್ಲ.

III. ಪ್ರಯಾಣಿಸಿದ ಪಟ್ಟಿಯನ್ನು ದಿನಾಂಕವಾರು ವಿವರ ಹಾಗೂ ಪ್ರಯಾಣಿಸಿದ ಅವಧಿ , ತಂಗಿದ ಅವಧಿಯ ವಿವರಗಳನ್ನು ನಮೂದಿಸಿರುವುದಿಲ್ಲ,

IV. ಸಭೆಗಳಿಗಾಗಿ ಇತರೇ ಸ್ಥಳಗಳಿಂದ ಬೆಂಗಳೂರಿಗೆ ಪ್ರಯಾಣಿಸಿದಕ್ಕೆ ಯಾವುದೇ ಸೂಚನಾ ಪತ್ರವಾಗಲೀ ಅಥವಾ ಸಭೆಗೆ ಹಾಜರಾಗಿರುವುದಕ್ಕೆ ಹಾಜರಾತಿಯ ದಾಖಲಾತಿಗಳು ಇರುವುದಿಲ್ಲ.

V. ನೌಕರರು/ ಅಧಿಕಾರಿಗಳು ಸಲ್ಲಿಸಿರುವ ಬಿಲ್ಲುಗಳನ್ನು ಪರಿಶೀಲಿಸದೇ ಪಾವತಿ ಮಾಡಲಾಗಿದ್ದು, ಪ್ರಮಾಣ ಪತ್ರಗಳನ್ನು ಸಲ್ಲಿಸಿರುವುದಿಲ್ಲ.

VI. ಸಭೆಗಳಿಗೆ ಹಾಜರಾದ ಗೌರವಾನ್ವಿತರು/ಸಂಪನ್ಮೂಲ ವ್ಯಕ್ತಿಗಳಿಗೆ ಗೌರವಧನ ಹಾಗೂ ಪ್ರಯಾಣ ಭತ್ಯೆ ಒಂದೇ ಬಿಲ್ಲಿನಲ್ಲಿ ತಯಾರಿಸಲಾಗಿದೆ.

ಮೇಲಿನ ಎಲ್ಲಾ ನ್ಯೂನತೆಗಳನ್ನು ಸರಿಪಡಿಸುವವರೆಗೆ ವಿಶ್ವವಿದ್ಯಾಲಯದ ಅಧಿಕಾರಿ/ಸಿಬ್ಬಂದಿಗಳಿಗೆ 2018–19ನೇ ಸಾಲಿನಲ್ಲಿ ಪಾವತಿಸಿರುವ ಒಟ್ಟು ಪ್ರಯಾಣ ಭತ್ಯೆ ಮೊತ್ತ ರೂ. 5,84,992/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**39. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮಗಳನ್ವಯ ಟೆಂಡರ್ ಕರೆಯದೇ ಪರೀಕ್ಷಾ ಮುದ್ರಣಾ ಕಾರ್ಯಗಳಿಗೆ ಸಂಬಂಧಿಸಿದಂತೆ M/s Mehra computers, Chennai ಇವರಿಗೆ ಪಾವತಿಸಿರುವುದು.**

2018–19ನೇ ಸಾಲಿನಲ್ಲಿ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ, ಪ್ರಶ್ನೆಪತ್ರಿಕೆ, ಉತ್ತರ ಪತ್ರಿಕೆಗಳ ಮುದ್ರಣ ಹಾಗೂ ಅಂಕಪಟ್ಟಿಗಳ ಮುದ್ರಣಕ್ಕಾಗಿ M/s Mehra Computers, Chennai ಇವರಿಗೆ ರೂ. 66.86,903/– ಗಳನ್ನು ಪಾವತಿಸಲಾಗಿದೆ. ಈ ಬಗ್ಗೆ ಲೆಕ್ಕಪರಿಶೋಧನೆಗೆ ಒದಗಿಸಿದ ಕಡತಗಳನ್ನು ಪರಿಶೀಲಿಸಲಾಗಿ, ದಿನಾಂಕ: 03.01.2018 ರಂದು ವಿಶ್ವವಿದ್ಯಾಲಯದಿಂದ ಸದರಿ ಕಾರ್ಯಕ್ಕಾಗಿ ದರಪಟ್ಟಿಯನ್ನು ಕರೆಯಲಾಗಿದ್ದು, ಕಡಿಮೆ ದರ ನಮೂದಿಸಿರುವ M/s Mehra Computers, Chennai ಇವರನ್ನು ಆಯ್ಕೆ ಮಾಡಿ, ದಿನಾಂಕ: 16.02.2018 ರಂದು ಕಾರ್ಯಾದೇಶ ನೀಡಲಾಗಿದೆ. ದಿನಾಂಕ: 10.01.2018 ರಂದು ಕರಾರು ಪತ್ರವನ್ನು ಮಾಡಿಕೊಂಡು, ಕರಾರಿನ ಅವಧಿಯನ್ನು ದಿನಾಂಕ: 10.01.2018 ರಿಂದ 09.01.2019 ನಮೂದಿಸಲಾಗಿದೆ. ಅದರಂತೆ ಏಪ್ರಿಲ್–18 ರಿಂದ ಮಾರ್ಚ್–19 ರ ಅವಧಿಯಲ್ಲಿ ಸದರಿಯವರಿಗೆ ಒಟ್ಟು ರೂ. 66,86,903.00 ಗಳನ್ನು ಪಾವತಿಸಲಾಗಿದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 4(e)(ii)ರಂತೆ ವಾರ್ಷಿಕ ರೂ. 1.00 ಲಕ್ಷಗಳಿಗೆ ಮೀರಿದ ಸೇವೆಯನ್ನು ಪಡೆಯಬೇಕಾದಲ್ಲಿ ಟೆಂಡರನ್ನು ಕರೆಯಬೇಕಾಗಿದ್ದು, ಸದರಿ ನಿಯಮವನ್ನು ಪಾಲಿಸದೇ ದರಪಟ್ಟಿಯ ಆಧಾರದ ಮೇಲೆ ಕರಾರನ್ನು ಮಾಡಿಕೊಂಡು ರೂ. 66,86,903/– ಗಳನ್ನು M/s Mehra Computers ರವರಿಗೆ ಪಾವತಿಸಿರುವ ಬಗ್ಗೆ ಸೂಕ್ತ ಸ್ಪಷ್ಟೀಕರಣವನ್ನು ನೀಡುವಂತೆ ಕೋರಿ, ವಿಚಾರಣಾ ಪತ್ರ ಸಂಖ್ಯೆ: 41/2018–19. ದಿನಾಂಕ: 20.09.2019 ನ್ನು ನೀಡಲಾಗಿತ್ತು. ಈ ಬಗ್ಗೆ ವಿಶ್ವವಿದ್ಯಾಲಯವು ದಿನಾಂಕ: 03.10.2019 ರಂದು ಉತ್ತರವನ್ನು ನೀಡಿ, ಸದರಿ ಸಂಸ್ಥೆಯಿಂದ ಸೇವೆಯನ್ನು ಪಡೆಯುವ ಬಗ್ಗೆ ಸರ್ಕಾರದಿಂದ 4 ಜಿ ವಿನಾಯಿತಿಯನ್ನು ಕೋರಿದ್ದು, ಸರ್ಕಾರವು ಅನುಮತಿ ನೀಡಿರುವಂತೆ ಪತ್ರ ನೀಡಿರುವುದಾಗಿಯೂ ಪರೀಕ್ಷಾ ಕಾರ್ಯದ ಗೋಪ್ಯತೆಯ ಹಿನ್ನೆಲೆಯಲ್ಲಿ, ಸದರಿ ಸಂಸ್ಥೆಯ ಸೇವೆಯನ್ನು ಪಡೆದಿರುವುದಾಗಿ ತಿಳಿಸಿ, ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಿರುತ್ತಾರೆ. ಆದರೆ ಸರ್ಕಾರದ ಪತ್ರವನ್ನು ಪರಿಶೀಲಿಸಲಾಗಿ, 4 (ಜಿ) ವಿನಾಯಿತಿಯನ್ನು ಪಡೆದುಕೊಳ್ಳಲು ಚಾಲ್ತಿಯಲ್ಲಿರುವ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ತಿಳಿಸಿದ್ದು, 4 (ಜಿ) ವಿನಾಯಿತಿಯನ್ನು ನೀಡಿರುವುದಿಲ್ಲ. ಈ ಹಿನ್ನೆಲೆಯಲ್ಲಿ, 4 (ಜಿ) ವಿನಾಯಿತಿಯನ್ನು ಪಡೆಯದೇ 2018–19ನೇ ಸಾಲಿನಲ್ಲಿ M/s Mehra Computer ಇವರಿಗೆ ಪಾವತಿಸಿದ ಮೊತ್ತ ರೂ 66,86,903/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**40. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮಗಳನ್ವಯ ಟೆಂಡರ್ ಕರೆಯದೇ ವಿಶ್ವವಿದ್ಯಾಲಯದ ಕಂಪ್ಯೂಟರ್, ಲ್ಯಾಪ್‌ಟಾಪ್ ಹಾಗೂ ಪ್ರಿಂಟರ್‌ಗಳ ವಾರ್ಷಿಕ ನಿರ್ವಹಣೆಯ ಮೊತ್ತ ಪಾವತಿಸಿರುವುದು.**

2018–19ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಕಂಪ್ಯೂಟರ್, ಲ್ಯಾಪ್‌ಟಾಪ್ ಹಾಗೂ ಪ್ರಿಂಟರ್‌ಗಳ ವಾರ್ಷಿಕ ನಿರ್ವಹಣೆಗಾಗಿ M/s Shiplasagar Enterprises, Bangalore ಇವರಿಗೆ ರೂ. 2,05,519/– ಗಳನ್ನು ಪಾವತಿ ಮಾಡಲಾಗಿರುತ್ತದೆ. ಈ ಬಗ್ಗೆ ಲೆಕ್ಕಪರಿಶೋಧನೆಗೆ ಒದಗಿಸಿದ ಕಡತಗಳನ್ನು ಪರಿಶೀಲಿಸಲಾಗಿ, ಗಣಕಯಂತ್ರಗಳ ವಾರ್ಷಿಕ ನಿರ್ವಹಣೆಗಾಗಿ ದಿನಾಂಕ: 01.04.2017ರಂದು ದರಪಟ್ಟಿಯನ್ನು ಕರೆಯಲಾಗಿದ್ದು,

ದಿನಾಂಕ: 05.04.2017ರಂದು M/s Shilpasagar Enterprises, Bangalore ಇವರು ಮಾಸಿಕ ರೂ. 11,450/– ಗಳಿಗೆ ದರಪಟ್ಟಿಯನ್ನು ಸಲ್ಲಿಸಿರುತ್ತಾರೆ. ಅದರಂತೆ ಸದರಿಯವರಿಗೆ ದಿನಾಂಕ: 19.04.2017 ರಂದು ಕಾರ್ಯಾದೇಶವನ್ನು ನೀಡಲಾಗಿದೆ. ಯಾವುದೇ ರೀತಿಯ ಕರಾರನ್ನು ಮಾಡಿಕೊಳ್ಳದೇ, ಜೂನ್–18 ರವರೆಗೂ ಸದರಿಯವರಿಗೆ ಮಾಹೆಯಾನ ರೂ. 11,450/– ಗಳಂತೆ ಪಾವತಿಸಿಕೊಂಡು ಬರಲಾಗಿದೆ. ತದನಂತರ ದಿನಾಂಕ: 02.07.2018ರಂದು ಪುನ: ದರಪಟ್ಟಿ ಕರೆದು ಕಡಿಮೆ ದರ ನಮೂದಿಸಿರುವ ಕಾರಣ ಮತ್ತೊಮ್ಮೆ ಅದೇ ಸಂಸ್ಥೆಗೆ ಕಾರ್ಯಾದೇಶವನ್ನು ನೀಡಿ, ದಿನಾಂಕ: 22.09.2018 ರಂದು ಕರಾರು ಪತ್ರವನ್ನು ದಿನಾಂಕ: 01.07.2018 ರಿಂದ ಪೂರ್ವಾನ್ವಯವಾಗುವಂತೆ ಮಾಡಿಕೊಂಡು ಫೆಬ್ರವರಿ–2019ರ ಮಾಹೆವರೆಗೆ ಮಾಸಿಕ ರೂ. 12,950.00 (GST ಪ್ರತ್ಯೇಕ) ಗಳಿಗೆ ಮಾಡಿಕೊಂಡು ಪಾವತಿ ಮಾಡಲಾಗಿದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 4(e)(ii) ರಂತೆ ಸೇವೆಯ ಮೌಲ್ಯವು ರೂ. 1.00 ಲಕ್ಷ ಮೀರಿದ್ದಲ್ಲಿ ಟೆಂಡರ್ ಕರೆದು ಸದರಿ ಸೇವೆಯನ್ನು ಪಡೆಯಬೇಕಾಗಿರುತ್ತದೆ. ಆದರೆ ಟೆಂಡರ್ ಕರೆಯದೇ ದರಪಟ್ಟಿಯ ಆಧಾರದ ಮೇಲೆ ಸೇವೆಯನ್ನು ಪಡೆದುಕೊಂಡು ಸದರಿಯವರಿಗೆ ವಾರ್ಷಿಕ ರೂ: 2,05,519.00 ಗಳನ್ನು ಪಾವತಿಸಿರುವ ಬಗ್ಗೆ ಸೂಕ್ತ ಸ್ಪಷ್ಟೀಕರಣ ನೀಡುವಂತೆ ಕೋರಿ, ವಿಚಾರಣಾ ಪತ್ರ ಸಂಖ್ಯೆ: 39/2018–19 ದಿನಾಂಕ: 20.09.2019ನ್ನು ನೀಡಲಾಗಿರುತ್ತದೆ. ವಿಶ್ವವಿದ್ಯಾಲಯವು ದಿನಾಂಕ: 30.09.2019 ರಂದು ಉತ್ತರವನ್ನು ನೀಡಿದ್ದು, ಕರಾರು ಪತ್ರದಲ್ಲಿ ಸದರಿಯವರ ಸೇವೆಯು ತೃಪ್ತಿಕರವಾಗಿದ್ದಲ್ಲಿ, ವಿಶ್ವವಿದ್ಯಾಲಯದ ಕಂಪ್ಯೂಟರ್, ಲ್ಯಾಪ್‌ಟಾಪ್ ಹಾಗೂ ಪ್ರಿಂಟರ್‌ಗಳ ವಾರ್ಷಿಕ ನಿರ್ವಹಣೆಯನ್ನು ಸದರಿ ಸಂಸ್ಥೆಗೆ ವಹಿಸಬಹುದಾಗಿರುತ್ತದೆ ಎಂದು ಉಲ್ಲೇಖಿಸಿರುವುದರಿಂದ, ದರಪಟ್ಟಿ ಕರೆದು 2018–19ನೇ ಸಾಲಿನಲ್ಲಿ ಸದರಿ ಸಂಸ್ಥೆಯ ಸೇವೆಯನ್ನು ಪಡೆಯಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆದರೆ ಇದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 4(e) (ii) ರ ಸ್ಪಷ್ಟ ಉಲ್ಲಂಘನೆಯಾಗಿರುವುದರಿಂದ, ಈ ಉತ್ತರವನ್ನು ಒಪ್ಪಲು ಸಾಧ್ಯವಿರುವುದಿಲ್ಲ. ಈ ಬಗ್ಗೆ ಸೂಕ್ತ ಸ್ಪಷ್ಟೀಕರಣವನ್ನು ನೀಡುವವರೆಗೂ, M/s Shilpasagar Enterprises, Bangalore ಇವರಿಗೆ ಪಾವತಿಸಿರುವ ಮೊತ್ತ ರೂ: 2,05,519.00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**41. ವಿಶ್ವವಿದ್ಯಾಲಯದಲ್ಲಿ ಲೆಕ್ಕ ನಿರ್ವಹಣೆಗೆ ಲೆಕ್ಕತಜ್ಞರನ್ನು ನೇಮಿಸಿಕೊಂಡು ಭದ್ರತಾ ಠೇವಣಿಯನ್ನು ಕಟಾಯಿಸದಿರುವುದು.**

2018–19ನೇ ಸಾಲಿನಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ವಿಶ್ವವಿದ್ಯಾಲಯಕ್ಕೆ ಲೆಕ್ಕತಜ್ಞರು ಮತ್ತು ಸಹಾಯಕರನ್ನು ನೇಮಿಸಿಕೊಂಡು M/S D.N. Joshi & Co, Bangalore ಇವರಿಗೆ ರೂ. 3,93,580/– ಗಳನ್ನು ಪಾವತಿಸಲಾಗಿದೆ. ಸದರಿ ಕಡತವನ್ನು ಪರಿಶೀಲಿಸಲಾಗಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ(ತಿದ್ದುಪಡಿ)ನಿಯಮಗಳು 2000 ನಿಯಮ 12(3) ರಂತೆ, ಯಶಸ್ವಿ ಬಿಡ್ಡುದಾರರಿಂದ ಶೇ. 5 ರಷ್ಟು ಭದ್ರತಾ ಠೇವಣಿಯನ್ನು ಪಡೆದುಕೊಳ್ಳಬೇಕೆಂದು ತಿಳಿಸಿದ್ದು, ಭದ್ರತಾ ಠೇವಣಿಯನ್ನು ಪಡೆದುಕೊಂಡಿರುವ ಬಗ್ಗೆ ವಿವರಗಳು ಕಡತದಲ್ಲಿ ಲಭ್ಯವಿರುವುದಿಲ್ಲ.

ಈ ಬಗ್ಗೆ ವಿಚಾರಣಾ ಪತ್ರ ಸಂಖ್ಯೆ: 45/2018–19, ದಿನಾಂಕ: 21.09.2019ನ್ನು ನೀಡಲಾಗಿದ್ದು, ವಿಶ್ವವಿದ್ಯಾಲಯವು ದಿನಾಂಕ: 26.09.2019 ರಂದು ನೀಡಿರುವ ಉತ್ತರದಲ್ಲಿ, ಸದರಿ ಭದ್ರತಾ ಠೇವಣಿಯನ್ನು ಪಡೆದುಕೊಂಡಿರುವುದಿಲ್ಲವೆಂದು ತಿಳಿಸಿದ್ದು, ವಸೂಲಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ

ಸದರಿ ಭದ್ರತಾ ಠೇವಣಿ ಮೊತ್ತ ರೂ. 19,250/– ಗಳನ್ನು M/S D.N. Joshi & Co, Bangalore ಇವರಿಂದ ವಸೂಲಿಸಿ, ವಿಶ್ವವಿದ್ಯಾಲಯದ ನಿಧಿಗೆ ಜಮೆ ಮಾಡುವಂತೆ ಸೂಚಿಸಲಾಗಿದೆ.

**42. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮಗಳನ್ವಯ ಟೆಂಡರ್ ಕರೆಯದೇ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಮೆ॥ ಕರ್ನಾಟಕ ಆಫ್‌ಸೆಟ್ ಪ್ರಿಂಟರ್ಸ್‌ರವರಿಂದ ಮುದ್ರಣ ಕಾರ್ಯ ಮಾಡಿಸಿ ಪಾವತಿಸಿರುವುದು.**

2018–19 ನೇ ಸಾಲಿನಲ್ಲಿ ವಿಶ್ವವಿದ್ಯಾಲಯವು ಮೆ॥ ಕರ್ನಾಟಕ ಆಫ್‌ಸೆಟ್ ಪ್ರಿಂಟರ್ಸ್‌ರವರಿಂದ ವಿವಿಧ ಮಾಹೆಯಲ್ಲಿ ವಾರ್ಷಿಕ ರೂ. 3,50,488/–ಗಳ ಸಾಮಾಗ್ರಿಗಳನ್ನು ಖರೀದಿಸಿ ಪಾವತಿಸಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮ 4(e) ಮತ್ತು 5 ರ ಅನ್ವಯ ಯಾವುದೇ ಸಂಸ್ಥೆಯಿಂದ ವಾರ್ಷಿಕ ಒಂದು ಲಕ್ಷ ಮೇಲ್ಪಟ್ಟ ಖರೀದಿಯನ್ನು ಟೆಂಡರ್ ಮೂಲಕ ಕೈಗೊಳ್ಳಬೇಕಾಗಿರುತ್ತದೆ. ಆದರೆ ರೂ. 3,50,488/– ಗಳಲ್ಲಿ ಮೌಲ್ಯದ ಸರಕುಗಳನ್ನು ದರಪಟ್ಟಿಯ ಮೂಲಕ ಖರೀದಿಸಿರುವುದು ಕಂಡು ಬಂದಿದ್ದು, ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮದ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಈ ಬಗ್ಗೆ ಮಾಹಿತಿಯನ್ನು ಕೋರಿ, ವಿಚಾರಣಾ ಪತ್ರ ಸಂಖ್ಯೆ: 47/2018–19, ದಿನಾಂಕ: 23.09.2019 ನೀಡಲಾಗಿದ್ದು, ವಿಶ್ವವಿದ್ಯಾಲಯವು ದಿನಾಂಕ: 03.10.2019 ರಂದು ನೀಡಲಾದ ಅನುಪಾಲನ ವರದಿಯಲ್ಲಿ ವಿಶ್ವವಿದ್ಯಾಲಯವು ಸದರಿ ಸಂಸ್ಥೆಯಿಂದ ಹಲವು ಬಾರಿ ಮುದ್ರಣ ಕಾರ್ಯವನ್ನು ಮಾಡಿಸಿದ್ದು, ಪ್ರತಿ ಬಾರಿಯೂ ದರಪಟ್ಟಿ ಕರೆದು ಮಾಡಲಾಗಿರುತ್ತದೆ. ಇನ್ನು ಮುಂದೆ ಈ ರೀತಿಯಾಗದಂತೆ ಟೆಂಡರ್ ಕರೆದು ಮುದ್ರಣ ಕಾರ್ಯವನ್ನು ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ. ಆದರೆ ಪಠ್ಯಪುಸ್ತಕಗಳ ಮುದ್ರಣ ಕಾರ್ಯವು ವಿಶ್ವವಿದ್ಯಾಲಯವು ನಿಯತ ಕಾರ್ಯವಾಗಿದ್ದು, ಮುದ್ರಿಸಬೇಕಾದ ಪಠ್ಯಪುಸ್ತಕಗಳು ಮತ್ತು ತಗಲಬಹುದಾದ ಅಂದಾಜು ವೆಚ್ಚಗಳ ಬಗ್ಗೆ ಪೂರ್ವನಿಯೋಜಿತವಾಗಿ ಅಂದಾಜಿಸಿ, ನಿಯಮಾನುಸಾರ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಆದ್ದರಿಂದ 2018–19ನೇ ಸಾಲಿನಲ್ಲಿ ಮೆ॥ ಕರ್ನಾಟಕ ಆಫ್‌ಸೆಟ್ ಪ್ರಿಂಟರ್ಸ್‌ರವರಿಗೆ ಪಠ್ಯಪುಸ್ತಕಗಳನ್ನು ಮುದ್ರಿಸಲು ಪಾವತಿಸಿರುವ ಮೊತ್ತ ರೂ.3,50,488/– ಆಕ್ಷೇಪಣೆಯಲ್ಲಿಡಲಾಗಿದೆ.

43. **ಸರ್ಕಾರದ ಆದೇಶಗಳು ಹಾಗೂ ಮಾರ್ಗಸೂಚಿಗಳನ್ನು ಉಲ್ಲಂಘಿಸಿ, ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ನೂತನ ಕಾರನ್ನು ಖರೀದಿಸಿರುವುದು.**

2018–19ನೇ ಸಾಲಿನ ಲೆಕ್ಕ ಪರಿಶೋಧನೆ ಕೈಗೊಂಡಿದ್ದು, ಸದರಿ ಸಾಲಿನಲ್ಲಿ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಗಳಿಗೆ ನೂತನ ಕಾರನ್ನು (HYUNDAI VERNA CRDI.E) ಖರೀದಿಸಿದ್ದು, ಈ ಪಾವತಿಯ ವಿವರಗಳು ಈ ಕೆಳಕಂಡಂತಿವೆ.

| ಸಂಸ್ಥೆ | ಮೊತ್ತ | ಚೆಕ್ ಸಂಖ್ಯೆ/ದಿನಾಂಕ |
|---|---|---|
| ಅದ್ವೈತ ಹುಂಡಾಯ್ | 11,63,768/– | 528028/03.07.2018 |

ಮೇಲ್ಕಂಡ ಖರೀದಿಗೆ ಸಂಬಂಧಿಸಿದಂತೆ, ಕಡತಗಳನ್ನು ಪರಿಶೀಲಿಸಿದಾಗ ಕೆಳಕಂಡ ಮಾಹಿತಿಗಳು ಲಭ್ಯವಿರುವುದಿಲ್ಲ.

1. ಹಣಕಾಸು ಅಧಿಕಾರಿಗಳು ಬಳಸುತ್ತಿದ್ದ ಇಂಡಿಗೋ ಕಾರು (KA-01, MH 6191) 2012ರ ಮಾಡೆಲ್ ಅಗಿದ್ದು, ಒಟ್ಟು 1.15ಲಕ್ಷ ಕಿ.ಮೀ. ಗಳು ಚಲಿಸಿದೆ. ಸರ್ಕಾರಿ ಆದೇಶ ಸಂಖ್ಯೆ: ಸಿ.ಆ.ಸು.ಇ 153 ಶಿವಾನಿ 2013, ಬೆಂಗಳೂರು. ದಿನಾಂಕ: 12.12.2013ರಲ್ಲಿ ತಿಳಿಸಿರುವಂತೆ ಯಾವುದೇ ವಾಹನ ಅನುಪಯುಕ್ತ ಎಂದು ಪರಿಗಣಿಸಲು ಕನಿಷ್ಟ 7 ವರ್ಷ ಹಾಗೂ ಕನಿಷ್ಟ 2 ಲಕ್ಷ ಕಿ.ಮೀ. ಕ್ರಮಿಸಬೇಕು. ಮೇಲ್ಕಂಡ ಖರೀದಿಯಲ್ಲಿ ಈ ಅಂಶಗಳನ್ನು ಪೂರೈಸಿರುವ ಬಗ್ಗೆ ಮಾಹಿತಿ.

2. ಈ ಮಾನದಂಡಗಳನ್ನು ಅನುಸರಿಸಿ, ಸಾರಿಗೆ ಇಲಾಖೆ ಅಧಿಕಾರಿಗಳು ವಾಹನವನ್ನು ಅನುಪಯುಕ್ತ ಎಂದು ಘೋಷಿಸಿ, ಸಾರ್ವಜನಿಕ ಹರಾಜಿನಲ್ಲಿ ವಿಲೇವಾರಿ ಮಾಡುವ ವಾಹನದ ಕನಿಷ್ಟ ಮೌಲ್ಯವನ್ನು ನಿಗಧಿಪಡಿಸಬೇಕಾಗಿದ್ದು, ಈ ರೀತಿ ನಿಗದಿಪಡಿಸಿರುವ ವಾಹನದ ಕನಿಷ್ಟ ಮೌಲ್ಯದ ವಿವರಗಳು.

3. ಸರ್ಕಾರಿ ಆದೇಶ ಸಂಖ್ಯೆ: ಸಿ.ಆ.ಸು.ಇ 137 ಶಿವಾನಿ 2010, ಬೆಂಗಳೂರು. ದಿನಾಂಕ: 11.01.2011 ರಲ್ಲಿ ರಲ್ಲಿ ಅದೇಶಿಸಿದಂತೆ, ಇಲಾಖಾ ಮುಖ್ಯಸ್ಥರು & ಜಿಲ್ಲಾಧಿಕಾರಿಗಳ ನೇತೃತ್ವದ ಸಮಿತಿಗಳು ಸಾರ್ವಜನಿಕ ಹರಾಜು ಮೂಲಕ ಹಳೆಯ ವಾಹನಗಳ ವಿಲೇವಾರಿಯ ಪ್ರಕ್ರಿಯೆಯನ್ನು ಕೈಗೊಳ್ಳಬೇಕಾಗಿರುತ್ತದೆ. ಅದರೆ ಈ ಕಾರನ್ನು ರೂ: 1,10,000.00 ಗಳಿಗೆ ಅದೇ ಮಾರಾಟ ಸಂಸ್ಥೆಗೆ ಮರು ಮಾರಾಟ (BUY BACK) ಮಾಡುವ ಮೂಲಕ ನೂತನ ಕಾರನ್ನು ಖರೀದಿಸಿರುವ ಔಚಿತ್ಯದ ಬಗ್ಗೆ ವಿವರಗಳು.

4. ನೂತನ ಕಾರನ್ನು ಖರೀದಿಸುವಾಗ ಖರೀದಿ ಸಮಿತಿಯ ಅನುಮೋದನೆ ಹಾಗೂ ನೂತನ ಕಾರಿನ ಮಾದರಿಯ ಆಯ್ಕೆಯ ಮಾಹಿತಿ ಹಾಗೂ ಖರೀದಿ ಪ್ರಕ್ರಿಯೆಯಲ್ಲಿ ದರ ಸಂಧಾನ ಮಾಡಿಕೊಂಡ ಬಗ್ಗೆ ವಿವರಗಳು.

ಮೇಲ್ಕಂಡ ಅಂಶಗಳಿಗೆ ಸಂಬಂಧಿಸಿದಂತೆ, ಲೆಕ್ಕಪರಿಶೋಧನೆಗೆ ಮಾಹಿತಿ ಒದಗಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 18/2018–19. ದಿನಾಂಕ: 13.09.2019 ರಲ್ಲಿ ಕೋರಲಾಗಿತ್ತು. ಆದರೆ ದಿನಾಂಕ: 01.10.2019 ರಲ್ಲಿ ವಿಶ್ವವಿದ್ಯಾಲಯವು ಒದಗಿಸಿದ ಅನುಪಾಲನಾ ವರದಿಯಂತೆ, ಪ್ರಶಾಸನ ಸಮಿತಿಯ ಅನುಮೋದನೆ ಮಾತ್ರ ಪಡೆಯಲಾಗಿದ್ದು, ಖರೀದಿ ಪ್ರಕ್ರಿಯೆಯಲ್ಲಿ ಸರ್ಕಾರದ ಆದೇಶ/ನಿಯಮಗಳನ್ನು ಉಲ್ಲಂಘಿಸಿರುವುದರಿಂದ, ಕಾರು ಖರೀದಿಗಾಗಿ ಪಾವತಿಸಿರುವ ಮೊತ್ತ ರೂ. 11,63,768/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

## 44. ಟೆಂಡರ್ ಕರೆಯದೇ "S.A. Manpower Services Pvt Ltd" ಬೆಂಗಳೂರು ಇವರಿಂದ ಹೊರಗುತ್ತಿಗೆ ಅಧಾರದಲ್ಲಿ ಸಿಬ್ಬಂದಿಗಳ ಸೇವೆಯನ್ನು ಪಡೆದು ಮೊತ್ತವನ್ನು ಪಾವತಿಸಿರುವುದು.

2018–19ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು, ಸದರಿ ಸಾಲಿನಲ್ಲಿ **"SA Manpower Services Pvt Ltd"** ಬೆಂಗಳೂರು ಇವರಿಂದ ಹೊರಗುತ್ತಿಗೆ ಆಧಾರದಲ್ಲಿ ದ್ವಿತೀಯ ದರ್ಜೆ ಸಹಾಯಕರು–01, ಚಾಲಕರು–01, ಹಾಗೂ 'ಡಿ' ಗ್ರೂಪ್– 04 ಒಟ್ಟು 6 ಮಂದಿ ಸಿಬ್ಬಂದಿಗಳ ಸೇವೆಯನ್ನು ಪಡೆಯಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿವೆ.

| ಮಾಹೆ | ಚೆಕ್ ಸಂಖ್ಯೆ ಮತ್ತು ದಿನಾಂಕ | ಬಿಲ್ಲಿನ ಮೊತ್ತ (ರೂ.ಗಳಲ್ಲಿ) | ಕಟಾಯಿಸಬೇಕಾದ ಜಿ.ಎಸ್.ಟಿ. ಮೊತ್ತ (ರೂ.ಗಳಲ್ಲಿ) |
|---|---|---|---|
| ಮೇ–18 | 544773/14.05.2018 | 72349.00 | – |
| ಜೂನ್–18 | 544820/13.06.2018 | 78566.00 | – |
| ಜುಲೈ – 18 | 528055/12.07.2018 | 78566.00 | – |
| ಆಗಸ್ಟ್ – 18 | 038417/25.08.2018 | 78566.00 | – |
| ಸೆಪ್ಟೆಂಬರ್ – 18 | 872149/14.09.2018 | 84988.00 | – |
| ಅಕ್ಟೋಬರ್ – 18 | 872203/12.10.2018 | 92786.00 | 1572 |
| ನವೆಂಬರ್– 18 | 016880/22.11.2018 | 92327.00 | 1572 |
| ಡಿಸೆಂಬರ್– 18 | 016924/18.12.2018 | 90930.00 | 1572 |
| ಜನವರಿ– 19 | 730727/14.01.2019 | 92786.00 | 1572 |
| ಫೆಬ್ರವರಿ– 19 | 044270/14.02.2019 | 92786.00 | – |
| | ಒಟ್ಟು ರೂ: | **8,54,650.00** | **6288.00** |

ಈ ಪಾವತಿಗೆ ಸಂಬಂಧಿಸಿದಂತೆ ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಿದೆ.

1. ಸದರಿ ಸಂಸ್ಥೆಯಿಂದ ಪಡೆದಿರುವ ಸೇವೆಗಳ ಮೊತ್ತವು ಒಂದು ಲಕ್ಷ ಮೀರಿದ್ದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ ಕಾಯ್ದೆ 2000 ರ ನಿಯಮ 5 ರ ಅನ್ವಯ ಟೆಂಡರ್ ಪ್ರಕ್ರಿಯೆ ಕೈಗೊಂಡಿರುವುದಿಲ್ಲ.
2. ಒಟ್ಟು 6 ಹುದ್ದೆಗಳನ್ನು ನೇಮಕ ಮಾಡಿಕೊಂಡಿದ್ದು, ಮಂಜೂರಾದ ಹುದ್ದೆಗೆ ಎದುರಾಗಿ ನೇಮಕ ಮಾಡಿಕೊಂಡಿರುವ ಬಗ್ಗೆ ಮಾಹಿತಿ ನೀಡಿರುವುದಿಲ್ಲ.
3. ಹೊರಗುತ್ತಿಗೆ ಸೇವೆ ನೀಡುತ್ತಿರುವ ಸಂಸ್ಥೆಯು ನೌಕರರ ಸಂಭಾವನೆ ಬಿಲ್ಲುಗಳಲ್ಲಿ ಕಟಾಯಿಸಿರುವ ESI ಮತ್ತು PF ಮೊತ್ತವನ್ನು ಪ್ರತಿ ಮಾಹೆಯಲ್ಲಿ ಸಂಬಂಧಿಸಿದ ಇಲಾಖೆಗಳಿಗೆ ಜಮೆ ಮಾಡಿ, ಮುಂದಿನ ಮಾಹೆಯ ಸಂಭಾವನೆ ಬಿಲ್ಲನ್ನು ಸಲ್ಲಿಸುವಾಗ, ಅದರೊಂದಿಗೆ ಇರಸಾಲು ಸ್ವೀಕೃತಿಗಳನ್ನು ಲಗತ್ತಿಸಿ ಸಲ್ಲಿಸಬೇಕಾಗಿರುತ್ತದೆ. ಅದರಂತೆ ಕಟಾಯಿಸಲಾದ ಮೊತ್ತವನ್ನು ಸಂಬಂಧಿಸಿದ ಇಲಾಖೆಗಳಿಗೆ ಜಮೆ ಬಗ್ಗೆ ವಿಶ್ವವಿದ್ಯಾಲಯವು ಖಚಿತಪಡಿಸಿಕೊಂಡ ನಂತರವೇ ಮುಂದಿನ ಮಾಹೆಯ ಬಿಲ್ಲುಗಳನ್ನು ಪಾವತಿಸಬೇಕಾಗಿರುತ್ತದೆ. ವಿಶ್ವವಿದ್ಯಾಲಯವು ಈ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.
4. ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ACS/FD/2018, Bengaluru. D:28–09–2018 ರನ್ವಯ ಸರಕು ಮತ್ತು ಸೇವೆಗಳಿಗೆ ಸಂಬಂದಿಸಿದ ಪಾವತಿಗಳಿಗೆ ಅಕ್ಟೋಬರ್–2018 ರಿಂದ 2% GST ಯನ್ನು ಮುರುಗಡೆ ಮಾಡಬೇಕಿದ್ದು, ಸದರಿ ಸಂಸ್ಥೆಯ ಪಾವತಿಗಳಿಗೆ ಫೆಬ್ರವರಿ–2019 ರಿಂದ ಕಟಾವಣೆ ಮಾಡಲಾಗಿದೆ. ನಿಯಮಾನುಸಾರ ಅಕ್ಟೋಬರ್‌ರಿಂದ ಕಟಾವಣೆ ಮಾಡಬೇಕಾದ GST ಮೊತ್ತ ರೂ. 6,288/– ಗಳನ್ನು ವಸೂಲಿಸಿರುವುದಿಲ್ಲ.

ಈ ಕುರಿತು ವಿವರಣೆ ನೀಡಲು ವಿಚಾರಣಾ ಪತ್ರ ಸಂಖ್ಯೆ: 24/2018–19. ದಿನಾಂಕ: 16.09.2019 ರಲ್ಲಿ ಮಾಹಿತಿ ಕೋರಲಾಗಿತ್ತು. ದಿನಾಂಕ: 26.09.2019 ರಲ್ಲಿ ಒದಗಿಸಿರುವ ಅನುಪಾಲನಾ ವರದಿಯಂತೆ ವಿಶ್ವವಿದ್ಯಾಲಯಕ್ಕೆ ಮಂಜೂರಾದ ಹುದ್ದೆಗಳ ಮಾಹಿತಿಯನ್ನು ಒದಗಿಸಲಾಗಿದೆ. ಇನ್ನುಳಿದ

ಅಂಶಗಳಿಗೆ ಸೂಕ್ತ ಮಾಹಿತಿ ಒದಗಿಸದ ಕಾರಣ ಪಾವತಿಸಿರುವ ಮೊತ್ತ ರೂ. 8,54,650/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಮತ್ತು ಕಟಾವಣೆ ಮಾಡಬೇಕಾದ GST ಮೊತ್ತ ರೂ. 6,288/- ಗಳನ್ನು ವಸೂಲಿಸಲು ಸೂಚಿಸಿದೆ.

**45. ವಿಶ್ವವಿದ್ಯಾಲಯವು 2018-19ನೇ ಸಾಲಿನಲ್ಲಿ ವಿವಿಧ ಸಂಸ್ಥೆಗಳಿಂದ ಸರಕುಗಳನ್ನು ಮತ್ತು ಸೇವೆಗಳನ್ನು ಪಡೆದುಕೊಂಡಿದ್ದು, ಬಿಲ್ಲಿನಲ್ಲಿ ಜಿ.ಎಸ್.ಟಿ. ಮೊತ್ತವನ್ನು ಕಟಾವಣೆ ಮಾಡದಿರುವುದು.**

ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ACS/FD/2018, Bengaluru, D: 28-09-2018 ರನ್ವಯ, ಸರಕು ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ಮಾಡಿರುವ ಪಾವತಿಗಳಿಗೆ ಅಕ್ಟೋಬರ್-2018 ರಿಂದ 2% GST ಮೊತ್ತವನ್ನು ಕಟಾವಣೆ ಮಾಡಬೇಕಿದ್ದು, 2018-19ನೇ ಸಾಲಿನಲ್ಲಿ ವಿಶ್ವವಿದ್ಯಾಲಯವು ಅಕ್ಟೋಬರ್, ನವೆಂಬರ್, ಡಿಸೆಂಬರ್-2018 ಮತ್ತು ಜನವರಿ- 2019 ರಲ್ಲಿ ಕೆಳಕಂಡ ಸಂಸ್ಥೆಗಳಿಗೆ ಪಾವತಿಸಿರುವ ಬಿಲ್ಲುಗಳಲ್ಲಿ GST ಮೊತ್ತವನ್ನು ಕಟಾವಣೆ ಮಾಡಿರುವುದಿಲ್ಲ.

**(ರೂ.ಗಳಲ್ಲಿ )**

| ಕ್ರ. ಸಂ. | ಸಂಸ್ಥೆಯ ಹೆಸರು | ಮೂಲ ಬಿಲ್ಲಿನ ಮೊತ್ತ | ಕಟಾಯಿಸಬೇಕಾದ ಮೊತ್ತ (ಶೇ.2) |
|---|---|---|---|
| 1. | ಕರ್ನಾಟಕ ಆಫ್‌ಸೆಟ್ ಪ್ರಿಂಟರ್ಸ್. | 15,25,997.00 | 30,520.00 |
| 2. | ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್ | 7,07,364.00 | 14,147.00 |
| 3. | KRIDL (ಕಟ್ಟಡ ಕೆಡವಿದ ಬಾಬ್ತು) | 8,97,000.00 | 17,940.00 |
| | ಒಟ್ಟು ರೂ: | 31,30,361.00 | 62,607.00 |

ಈ ಬಗ್ಗೆ ವಿವರಣೆ ಒದಗಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 20/16.09.2019ರಲ್ಲಿ ಕೋರಲಾಗಿತ್ತು. ವಿಶ್ವವಿದ್ಯಾಲಯವು ದಿನಾಂಕ: 26.09.2019 ರಲ್ಲಿ ನೀಡಿರುವ ಉತ್ತರದಲ್ಲಿ, ಈ ಬಗ್ಗೆ ಸದರಿ ಸಂಸ್ಥೆಗಳಿಗೆ ಮಾಹಿತಿ ನೀಡಿದ್ದು, ಅದಷ್ಟು ಬೇಗ ವಸೂಲಿ ಮಾಡಿ ಪಾವತಿ ಮಾಡಲಾಗುವುದೆಂದು ತಿಳಿಸಿರುತ್ತಾರೆ. ಸದರಿ ಜಿ.ಎಸ್.ಟಿ. ಮೊತ್ತವನ್ನು ಸಂಬಂಧಪಟ್ಟ ಸಂಸ್ಥೆಗಳಿಂದ ವಸೂಲಿಸಿ ಪಾವತಿಸುವವರೆಗೂ ರೂ: 62,607.00 ಗಳನ್ನು ವಸೂಲಾತಿಗೆ ಸೂಚಿಸಿದೆ.

**46. ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳ ಮುದ್ರಣ ಮತ್ತು ವಿತರಣೆಯನ್ನು ನಿಯಮಾನುಸಾರ ಕೈಗೊಳ್ಳದಿರುವುದು.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಪದವಿ ಪ್ರಮಾಣ ಪತ್ರಗಳಿಗೆ ಸಂಬಂಧಿಸಿದಂತೆ, ಪ್ರತಿ ಮುದ್ರಣವನ್ನು ದಾಸ್ತಾನಿಗೆ ತೆಗೆದುಕೊಂಡು ವಿತರಣೆಯನ್ನು ನಮೂದಿಸಿ, ಅಂಕಪಟ್ಟಿಗಳ ದಾಸ್ತಾನು ವಹಿಯನ್ನು ನಿರ್ವಹಿಸಿರುವುದಿಲ್ಲ. ಅಂಕಪಟ್ಟಿ ಮತ್ತು ಪ್ರಮಾಣಪತ್ರಗಳು ವಿಶ್ವವಿದ್ಯಾಲಯದ ಪ್ರಮುಖ ಆಸ್ತಿಯಾಗಿದ್ದು, ಹೆಚ್ಚಿನ ಭದ್ರತೆಯ ಅವಶ್ಯಕತೆ ಇರುತ್ತದೆ. ಈ ಸಂಬಂಧ ಕೆಳಕಂಡ ನ್ಯೂನತೆಗಳು ವಿಶ್ವವಿದ್ಯಾಲಯದ ಆಡಳಿತ ನಿಯಂತ್ರಣದಲ್ಲಿನ ಕೊರತೆಯನ್ನು ಸೂಚಿಸುತ್ತದೆ.

- ಸೂಕ್ತ ದಾಸ್ತಾನು ವಹಿ ನಿರ್ವಹಿಸದಿರುವುದು
- ಖಾಲಿ ಅಂಕಪಟ್ಟಿ ಮತ್ತು ಮುದ್ರಿತ ಪಟ್ಟಿ ಎರಡನ್ನು ಒಬ್ಬರೇ ಮುದ್ರಕರಿಂದ ಪಡೆದುಕೊಂಡಿರುವುದು.
- ಅಂಕಗಳ ವಿವರಗಳನ್ನು ಕಂಪ್ಯೂಟರ್‌ನಲ್ಲಿ MS Excel Application ನಲ್ಲಿ ನಿರ್ವಹಿಸಿ ಇ-ಮೇಲ್ ಮುಖಾಂತರ ಮುದ್ರಣ ಸಂಸ್ಥೆಗೆ ಕಳುಹಿಸಿ, ಅಂಕಪಟ್ಟಿ ಮುದ್ರಿಸಲಾಗುತ್ತದೆ. ಎಕ್ಸೆಲ್ ಮತ್ತು ಈ – ಮೇಲ್ ಮುಖಾಂತರ ಅಂಕಗಳನ್ನು ಕಳುಹಿಸುವಾಗ ಅಂಕಗಳು ಬದಲಾಗದಂತೆ, ಯಾವುದೇ ಸೂಕ್ತ ಭದ್ರತಾ ಕ್ರಮ ವಹಿಸಿರುವುದಿಲ್ಲ. ಈ ಸಂಬಂಧ ಸೂಕ್ತವಾದ ಪರೀಕ್ಷಾ ನಿರ್ವಹಣಾ ಸಾಫ್ಟ್‌ವೇರನ್ನು ಅಳವಡಿಸಿಕೊಂಡಿದ್ದಲ್ಲಿ, ದತ್ತಾಂಶಗಳ ಭದ್ರತೆಯಲ್ಲಿ ಹೆಚ್ಚಿನ ನಿಯಂತ್ರಣ ಸಾಧ್ಯವಿರುತ್ತದೆ.
- ತಪ್ಪು ಮುದ್ರಿತವಾದ ಅಂಕಪಟ್ಟಿಗಳಿಗೆ ಬದಲಿ ಅಂಕಪಟ್ಟಿ ನೀಡಿರುವ ಪ್ರಕರಣಗಳಲ್ಲಿ ಈ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಸೂಕ್ತ ಅನುಮೋದನೆ ಪಡೆಯದೆ ಇರುವುದು

ಮುಂದುವರೆದು ದಾಸ್ತಾನು ವಹಿಯ ಅನುಪಸ್ಥಿತಿಯಲ್ಲಿ ಅಂಕಪಟ್ಟಿ ಬಳಕೆ ವಿವರಗಳನ್ನು ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ದಾಖಲಾತಿಗಳ ಆಧಾರದ ಮೇಲೆ ತಯಾರಿಸಿದ್ದು, ವಿವರಗಳು ಈ ಕೆಳಗಿನಂತಿದೆ.

**(i) ಪಾಠಶಾಲೆ ಅಂಕಪಟ್ಟಿಗಳು**

| | | |
|---|---|---|
| **ದಿನಾಂಕ: 01/4/2018ಕ್ಕೆ ಪ್ರಾರಂಭಿಕ ಶಿಲ್ಕು** | | |
| ಖಾಲಿ ಅಂಕಪಟ್ಟಿಗಳು | 760 | |
| ಮೆಹ್ರಾ ಪ್ರಿಂಟರ್ಸ್‌ನಿಂದ ಪಡೆದುಕೊಂಡ ಅಂಕಪಟ್ಟಿಗಳು | 22240 | |
| | ಒಟ್ಟು | 23,000 |
| **ವಿತರಣೆ** | | |
| ವಿತರಿಸಲಾದ ಮುದ್ರಿತ ಅಂಕಪಟ್ಟಿಗಳು | 22,240 | 22544.00 |
| ತಪ್ಪು ಮುದ್ರಿತ ಅಂಕಪಟ್ಟಿಗಳಿಗೆ ಬದಲಿ ಅಂಕಪಟ್ಟಿ ನೀಡಲು ಬಳಸಿದ ಅಂಕಪಟ್ಟಿಗಳು | 173 | |
| ದೃಢೀಕೃತ ಅಂಕಪಟ್ಟಿಯಾಗಿ ನೀಡಲು ಬಳಸಿದ ಅಂಕಪಟ್ಟಿಗಳು | 113 | |
| 2019–20ನೇ ವರ್ಷದಲ್ಲಿ ಬಳಕೆ | 18 | |
| **1/10/2019 ಕ್ಕೆ ಅಂತಿಮ ಶಿಲ್ಕು** | | **456.00** |

(ii) **ಕಾಲೇಜು ಮತ್ತು ಡಿಪ್ಲೋಮಾ ತರಗತಿವಾರು ಅಂಕಪಟ್ಟಿಗಳು**

| | | |
|---|---|---|
| **ದಿನಾಂಕ: 01/4/2018ಕ್ಕೆ ಪ್ರಾರಂಭಿಕ ಶಿಲ್ಕು** | | |
| ಖಾಲಿ ಅಂಕಪಟ್ಟಿಗಳು | 2800 | |
| ಮೆಹ್ರಾ ಪ್ರಿಂಟರ್ಸ್‌ನಿಂದ ಪಡೆದುಕೊಂಡ ಅಂಕಪಟ್ಟಿಗಳು | 3827 | |
| | ಒಟ್ಟು | 6627 |
| **ವಿತರಣೆ** | | |
| ವಿತರಿಸಲಾದ ಮುದ್ರಿತ ಅಂಕಪಟ್ಟಿಗಳು | 3827 | 5873 |
| ಸರ್ಟಿಫಿಕೇಟ್ ಕೋರ್ಸ್‌ಗಾಗಿ ವಿಶ್ವವಿದ್ಯಾಲಯದಲ್ಲಿ ಮುದ್ರಣಕ್ಕಾಗಿ ಬಳಸಿದ ಅಂಕಪಟ್ಟಿಗಳು | 709 | |
| ದ್ವಿಪ್ರತಿ ಕ್ರೋಢೀಕೃತ ಅಂಕಪಟ್ಟಿ ಮತ್ತು ತಿದ್ದುಪಡಿಗೆ ಬಳಸಿದ ಅಂಕಪಟ್ಟಿಗಳು | 126 | |
| ವಿವಿಧ ಕೋರ್ಸ್‌ಗಳಿಗೆ ವಿ.ವಿಯಲ್ಲಿ ಮುದ್ರಿಸಿದ ಅಂಕಪಟ್ಟಿಗಳು | 333 | |
| ತಪ್ಪು ಮುದ್ರಿತ ಅಂಕಪಟ್ಟಿಗಳಿಗೆ ಬದಲಿ ಅಂಕಪಟ್ಟಿ ನೀಡಲು ಬಳಸಿದ ಅಂಕಪಟ್ಟಿಗಳು | 29 | |
| Certification Course ಪ್ರಮಾಣ ಪತ್ರ ನೀಡಲು ಬಳಸಿಕೊಂಡ ಅಂಕಪಟ್ಟಿಗಳು | 709 | |
| 2019-20ನೇ ವರ್ಷದಲ್ಲಿ ಬಳಕೆ | 140 | |
| **1/10/2019 ಕ್ಕೆ ಅಂತಿಮ ಶಿಲ್ಕು** | | **754.00** |

**(iii). ಪದವಿ ಪ್ರಮಾಣ ಪತ್ರಗಳು**

| | |
|---|---|
| 1/4/2018ಕ್ಕೆ ಪ್ರಾರಂಭಿಕ ಶಿಲ್ಕು | 544 |
| ಮೆಹ್ರಾ ಪ್ರಿಂಟರ್ಸ್‌ನಿಂದ ಪಡೆದುಕೊಂಡ ಅಂಕಪಟ್ಟಿಗಳು | 1000 |
| ಒಟ್ಟು | 1544 |
| 2018-19ನೇ ಸಾಲಿನಲ್ಲಿ ವಿತರಣೆಗೊಂಡ ಅಂಕಪಟ್ಟಿಗಳು | (550) |
| 2018-19 ನೇ ಸಾಲಿಗೆ ಅಂತಿಮ ಶಿಲ್ಕು | 994 |
| 2019-20ನೇ ಸಾಲಿನ ಬಳಕೆ | (92) |
| 1/10/2019ಕ್ಕೆ ಅಂತಿಮ ಶಿಲ್ಕು | 902 |

ಪಾಠಶಾಲೆಗಳ ಅಂಕಪಟ್ಟಿಗಳಿಗೆ ಸಂಬಂಧಿಸಿದಂತೆ 173 ಮತ್ತು ಕಾಲೇಜು ಅಂಕಪಟ್ಟಿಗಳಿಗೆ ಸಂಬಂಧಿಸಿದಂತೆ 29 ಒಟ್ಟು 202 ಅಂಕಪಟ್ಟಿಗಳು ಮೆಹ್ರಾ ಪ್ರಿಂಟರ್ಸ್ ಇವರಿಂದ ತಪ್ಪಾಗಿ ಮುದ್ರಿತಗೊಂಡಿದ್ದು ಈ ಬಗ್ಗೆ ವಿಶ್ವವಿದ್ಯಾಲಯವು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಇದರಿಂದ ಸದರಿ ಸಂಸ್ಥೆಗೆ ಮುದ್ರಣ ಖರ್ಚು ರೂ. 7,676.00 (202x38) ಹೆಚ್ಚುವರಿ ಪಾವತಿಯಾಗಿರುತ್ತದೆ.

ಕ್ರೋಢೀಕೃತ ಅಂಕಪಟ್ಟಿ, ತಿದ್ದುಪಡಿ ಮತ್ತು ದ್ವಿಪ್ರತಿಗೆ ವಿಶ್ವವಿದ್ಯಾಲಯವು ರೂ. 500/- ಶುಲ್ಕ ವಿಧಿಸಬೇಕಾಗಿರುತ್ತದ. ಮೇಲಿನ ಲೆಕ್ಕಚಾರದಂತೆ 239 (113+126) ಅಂಕಪಟ್ಟಿಗಳಿಂದ ರೂ. 1,19,500.00 (239 x 500) ಶುಲ್ಕ ವಸೂಲಿಸಬೇಕಾಗಿರುತ್ತದೆ. ವಿಶ್ವವಿದ್ಯಾಲಯದ ಲೆಕ್ಕಪತ್ರಗಳನ್ವಯ ಕೇವಲ ರೂ. 95,700.00 ಗಳು ಮಾತ್ರ ಈ ಸಂಬಂಧ ವಸೂಲಿಯಾಗಿರುತ್ತದೆ. 48 ಅಂಕಪಟ್ಟಿಗಳನ್ನು ಹಿಂದಿನ ಸಾಲಿನ ವಿತರಣೆಗಾಗಿ ಶ್ರೀ ರಾಘವೇಂದ್ರ ಭಾರತೀ ಸೇವಾ ಸಂಸ್ಕೃತ ಕಾಲೇಜಿಗೆ ನೀಡಿರುವುದಾಗಿ ತಿಳಿಸಿದ್ದು, ಈ ಬಗ್ಗೆ ಯಾವುದೇ ಸೂಕ್ತ ದಾಖಲಾತಿಗಳಾಗಲೀ ಅಥವಾ ದಾಸ್ತಾನು ವಹಿಯಲ್ಲಿ ನಮೂಸಿರುವುದಾಗಲೀ ಮಾಡಿರುವುದಿಲ್ಲ. ಇದರಿಂದ ವ್ಯತ್ಯಾಸದ ಮೊತ್ತ ರೂ.23,800.00 (1,19,500-95,700) ವಸೂಲಿಯಾಗದ ಮೊತ್ತವಾಗಿರುತ್ತದೆ.

ದಾಖಲಾತಿಗಳ ಪ್ರಕಾರ, ಪಾಠಶಾಲೆಗಳ ಅಂಕಪಟ್ಟಿಗಳ ಅಂತಿಮ ಶಿಲ್ಕು 456 ಮತ್ತು ಕಾಲೇಜುಗಳು ಅಂತಿಮ ಶಿಲ್ಕು 754 ಇರುತ್ತದೆ. ವಾಸ್ತವಿಕವಾಗಿ ಪಾಠಶಾಲೆಗಳು ಅಂಕಪಟ್ಟಿಗಳು 450 ಮತ್ತು ಕಾಲೇಜುಗಳ ಅಂಕಪಟ್ಟಿಗಳು 742 ಲಭ್ಯವಿದೆ ಎಂದು ಲೆಕ್ಕಪರಿಶೋಧನೆಗೆ ಮಾಹಿತಿ ನೀಡಿರುತ್ತಾರೆ. ವ್ಯತ್ಯಾಸವಾದ 18 ಅಂಕಪಟ್ಟಿಗಳು ಮುದ್ರಣ ಸಮಯದಲ್ಲಿ ಶಾಖದಿಂದ ಜೆರಾಕ್ಸ್ ಯಂತ್ರದಲ್ಲಿ ಸಿಕ್ಕಿ ಹಾಕಿಕೊಂಡು (12+6 ಅಂಕಪಟ್ಟಿಗಳು) ಶೇಖರಿಸಲು ಸಾಧ್ಯವಾಗದಷ್ಟು ಕೆಟ್ಟು ಹೋಗಿರುತ್ತದೆ. ಎಂದು ಲೆಕ್ಕಪರಿಶೋಧನೆಗೆ ತಿಳಿಸಿರುತ್ತಾರೆ. ಈ ಉತ್ತರವನ್ನು ಒಪ್ಪಲು ಸಾಧ್ಯವಿರುವುದಿಲ್ಲ. ಇದರಿಂದ ರೂ.9,000.00 (18 x500) ವಸೂಲಿಸಬೇಕಾದ ಮೊತ್ತವಾಗಿರುತ್ತದೆ.

ಮೇಲಿನ ಎಲ್ಲಾ ನ್ಯೂನತೆಗಳಿಗೆ ಸಂಬಂಧಿಸಿದಂತೆ, ವಿವರಣೆ ಒದಗಿಸುವಂತೆ ತಿಳಿಸಿ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:59/2018-19 ದಿ : 01.10.2019 ನ್ನು ನೀಡಿದ್ದು, ವಿಶ್ವವಿದ್ಯಾಲಯವು ಯಾವುದೇ ಉತ್ತರ ನೀಡಿರುವುದಿಲ್ಲ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳು ಮುಖ್ಯ ದಾಖಲೆ ಆಗಿದ್ದು ಸೂಕ್ತ ಭದ್ರತೆ ಇಲ್ಲವಾದಲ್ಲಿ ಅಂಕಪಟ್ಟಿಗಳ ದುರ್ಬಳಕೆಗೆ ಸಾಧ್ಯತೆ ಇರುತ್ತದೆ. ಇದರಿಂದ ವಿಶ್ವವಿದ್ಯಾಲಯದ ಘನತೆಗೆ ಧಕ್ಕೆ ಉಂಟಾಗುವ ಸಂಭವವಿರುತ್ತದೆ. ಆದ್ದರಿಂದ ಈ ವಿಷಯವನ್ನು ಬಹಳ ಗಂಭೀರವಾಗಿ ಪರಿಗಣಿಸಿ ಸೂಕ್ತ ಆಡಳಿತಾತ್ಮಕ ಕ್ರಮ ವಹಿಸಲು ಸೂಚಿಸಿದೆ.

ಮುಂದುವರೆದು, ತಪ್ಪು ಮುದ್ರಣದ ಕಾರಣ ಹೆಚ್ಚುವರಿ ಪಾವತಿಯಾದ ರೂ. 7676.00 ಗಳನ್ನು ಮೆಹ್ರಾ ಪ್ರಿಂಟರ್ಸ್‌ನಿಂದ ಮತ್ತು ಕ್ರೋಢೀಕೃತ, ತಿದ್ದುಪಡಿ, ಮತ್ತು ದ್ವಿಪ್ರತಿ ಅಂಕಪಟ್ಟಿಗಳ ಶುಲ್ಕ ಸ್ವೀಕೃತಿಯಲ್ಲಿನ ವ್ಯತ್ಯಾಸದ ಮೊತ್ತ ರೂ. 23,800.00 ಹಾಗೂ ದಾಖಲಾತಿಗಳಿಗೂ ಮತ್ತು ವಿದ್ಯಾರ್ಥಿಗಳ ಶುಲ್ಕದ ಆಧಾರದ ಮೇಲೆ ವಾಸ್ತವಿಕವಾಗಿ ಲಭ್ಯವಿರುವ 18 ಅಂಕಪಟ್ಟಿಗಳ ವ್ಯತ್ಯಾಸದ ಮೊತ್ತ ರೂ. 9000.00 ಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಒಟ್ಟಾರೆಯಾಗಿ ಮೊತ್ತ ರೂ: 40,076.00 ಗಳನ್ನು (7676.00+23800+9000) ವಸೂಲಿಸಿ ವಿಶ್ವವಿದ್ಯಾಲಯದ ಖಾತೆಗೆ ಜಮೆ ಮಾಡಬೇಕಾಗಿ ಸೂಚಿಸಿದೆ.

### 47. "Construction of College Building at Karnataka Sanskrit University" Bengaluru ಈ ಕಾಮಗಾರಿಯನ್ನು ನಿಯಮಾನುಸಾರ ಕೈಗೊಳ್ಳದೇ ಇರುವುದು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು "**Construction of College Building at Karnataka Sanskrit University" Bengaluru** ಕಟ್ಟಡ ನಿರ್ಮಾಣ ಕಾಮಗಾರಿಯನ್ನು 2016-17 ನೇ ಸಾಲಿನ ಬೆಂಗಳೂರು ವೃತ್ತದ ದರಪಟ್ಟಿಯ ಅನ್ವಯ, ರೂ. 135.19 ಲಕ್ಷಗಳ ಅಂದಾಜು ತಯಾರಿಸಿ, ಬೆಂಗಳೂರು ನಿರ್ಮಿತಿ ಕೇಂದ್ರ(ನಗರ) ಬೆಂಗಳೂರು ಇವರಿಗೆ ವಹಿಸಲಾಗಿದೆ. ಈ ಕಾಮಗಾರಿಯನ್ನು ಠೇವಣಿ ಕಾಮಗಾರಿ (Depositary works) ಅಧಾರದಲ್ಲಿ ನಿರ್ವಹಿಸಲಾಗಿದ್ದು, 2018-19ನೇ ಸಾಲಿನಲ್ಲಿ ಸದರಿ ಸಂಸ್ಥೆಗೆ ಪಾವತಿಸಲಾದ ಮುಂಗಡದ ವಿವರಗಳು ಈ ಕೆಳಕಂಡಂತಿವೆ.

| ಸಂಸ್ಥೆ | ಚೆಕ್ ಸಂಖ್ಯೆ ಮತ್ತು ದಿನಾಂಕ | 2018–19ನೇ ಸಾಲಿನಲ್ಲಿ ಪಾವತಿಸಿರುವ ಮೊತ್ತ (ರೂ.ಗಳಲ್ಲಿ) |
|---|---|---|
| ಬೆಂಗಳೂರು ನಿರ್ಮಿತಿ ಕೇಂದ್ರ (ನಗರ) , ಬೆಂಗಳೂರು | 528027/03.07.2018 . | 40,00,000/– |

ಈ ಪಾವತಿಗೆ ಸಂಬಂಧಿಸಿದಂತೆ, ಕಡತಗಳನ್ನು ಪರಿಶೀಲಿಸಲಾಗಿ, ಕೆಳಕಂಡ ನ್ಯೂನತೆಗಳನ್ನು ಗಮನಿಸಿದೆ.

1. ಸರ್ಕಾರದ ಅದೇಶ ಸಂಖ್ಯೆ: PWD/671 FC–1/2009, ಬೆಂಗಳೂರು ದಿನಾಂಕ: 03.02.2010ರ ಆರ್ಥಿಕ ಪ್ರತ್ಯಾಯೋಜನೆಯ ಅನ್ವಯ 50 ಲಕ್ಷ ಮೀರಿದ ಕಾಮಗಾರಿಯ ಅಂದಾಜುಗಳಿಗೆ, ಮುಖ್ಯ ಅಭಿಯಂತರರು ಇವರಿಂದ ತಾಂತ್ರಿಕ ಪರಿಶೀಲನೆ (Technical Scrutiny) ಪಡೆಯಬೇಕಾಗಿದ್ದು, ಈ ಕಾಮಗಾರಿಯ ಅಂದಾಜಿಗೆ ತಾಂತ್ರಿಕ ಪರಿಶೀಲನೆ ಪಡೆದಿರುವುದಿಲ್ಲ.
2. ಮೇಲ್ಕಂಡ ದಿನಾಂಕದಲ್ಲಿ ರೂ. 40.00 ಲಕ್ಷಗಳನ್ನು ಚೆಕ್ ಮುಖಾಂತರ ಬೆಂಗಳೂರು ನಿರ್ಮಿತಿ ಕೇಂದ್ರ (ನಗರ)ಕ್ಕೆ ಪಾವತಿಸಿದ್ದು, ಕಾಮಗಾರಿ ನಿಯಮಗಳನ್ವಯ ವಿಶ್ವವಿದ್ಯಾಲಯ ಮತ್ತು ಬೆಂಗಳೂರು ನಿರ್ಮಿತಿ ಕೇಂದ್ರ(ನಗರ) ಈ ಸಂಸ್ಥೆಗಳ ನಡುವೆ ಕರಾರು ಒಪ್ಪಂದ ಏರ್ಪಟ್ಟಿರುವುದಿಲ್ಲ .
3. ಮುಂದುವರೆದು ದಿ:02.05.2019ರಲ್ಲಿ ಕರಾರು ಒಪ್ಪಂದ ಮಾಡಿಕೊಂಡಿದ್ದು, ಈ ಒಪ್ಪಂದದಲ್ಲಿ ಕಾಮಗಾರಿಯ ಕಾಲಾವಧಿ, ಗುಣನಿಯಂತ್ರಣ ವಿಳಂಬಕ್ಕೆ ದಂಡ, ನಿರ್ಮಿತಿ ಕೇಂದ್ರಕ್ಕೆ ಪಾವತಿಸಬೇಕಾದ ಆಡಳಿತಾತ್ಮಕ ವೆಚ್ಚಗಳು Defect Liability Period (DLP) ಈ ವಿಷಯಗಳು ಸೇರಿಸಿರುವುದಿಲ್ಲ.
4. ಈ ಕಾಮಗಾರಿಯ ಅಂದಾಜು ಮೊತ್ತ ರೂ.135.00 ಲಕ್ಷಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: FD9 PCL 2004(I) Banglore, Dated:06.08.2005 ರ ಅನ್ವಯ 1 ಕೋಟಿಗೂ ಮೀರಿದ ಕಾಮಗಾರಿಯನ್ನು ಕೆ.ಡಬ್ಲ್ಯೂ–4 ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಕರಾರು ಒಪ್ಪಂದ ಮಾಡಿಕೊಳ್ಳಬೇಕಾಗಿದ್ದು, ವಿಶ್ವವಿದ್ಯಾಲಯ ಮತ್ತು ಬೆಂಗಳೂರು ನಿರ್ಮಿತಿ ಕೇಂದ್ರ(ನಗರ) ಈ ಸಂಸ್ಥೆಗಳ ನೀಡುವ ಈ ಕರಾರು ಒಪ್ಪಂದ ಏರ್ಪಟ್ಟಿರುವುದಿಲ್ಲ.

ಮೇಲ್ಕಂಡ ಅಂಶಗಳ ಕುರಿತು ವಿವರಣೆ ನೀಡುವಂತೆ ತಿಳಿಸಿ, ವಿಚಾರಣಾ ಪತ್ರ ಸಂಖ್ಯೆ: 22/2018–19, ದಿನಾಂಕ: 16.09.2019 ರಲ್ಲಿ ಮಾಹಿತಿ ಕೋರಲಾಗಿತ್ತು. ದಿನಾಂಕ: 30.09.2019 ರಂದು ಒದಗಿಸಿರುವ ಅನುಪಾಲನಾ ವರದಿಯಂತೆ, ಕ್ರಿಯಾ ಯೋಜನೆಯ ಪ್ರತಿಯನ್ನು ಮಾತ್ರ ಒದಗಿಸಿದ್ದು, ಇನ್ನುಳಿದ ಅಂಶಗಳಿಗೆ ನೀಡಿದ ಮಾಹಿತಿ ಸಮಂಜಸವಾಗಿರದ ಕಾರಣ, ಬೆಂಗಳೂರು ನಿರ್ಮಿತಿ ಕೇಂದ್ರ(ನಗರ) ಬೆಂಗಳೂರು ಇವರಿಗೆ ಪಾವತಿಸಿರುವ ಒಟ್ಟು ಮೊತ್ತ ರೂ. 40,00,000/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**48. ವಿದ್ಯಾರ್ಥಿನಿಲಯ ನಿರ್ಮಾಣ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು ಈ ಕಾಮಗಾರಿಯ ಪಾವತಿಯ ನ್ಯೂನತೆಗಳು.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2012–13 ಮತ್ತು 2013–14 ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ ಅನುದಾನದ ಮೊತ್ತವನ್ನು ಬಳಸಿ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು ಇಲ್ಲಿ ಪ.ಜಾ/ಪ.ಪಂ. ವಿದ್ಯಾರ್ಥಿಗಳಿಗಾಗಿ ಹಳೆಯ ವಿದ್ಯಾರ್ಥಿ ನಿಲಯದ ಕಟ್ಟಡವನ್ನು ಕೆಡವಿ, ಅದೇ ಜಾಗದಲ್ಲಿ ನೂತನ ವಿದ್ಯಾರ್ಥಿ ನಿಲಯ ನಿರ್ಮಿಸಲು ರೂ.

199.99 ಲಕ್ಷಗಳ ಅಂದಾಜನ್ನು 2016–17ನೇ ಸಾಲಿಗೆ ತಯಾರಿಸಿ K.R.I.D.L. ಬೆಂಗಳೂರು ಇವರಿಗೆ ಠೇವಣಿ ಕಾಮಗಾರಿಯ ಅಧಾರದಲ್ಲಿ ವಹಿಸಲಾಗಿದೆ. ದಿನಾಂಕ: 13.011.2018 ರಂದು ಕಾಮಗಾರಿಯನ್ನು ಪ್ರಾರಂಭಿಸಲು ಅದೇಶಿಸಿದ್ದು. 2018–19ನೇ ಸಾಲಿನಲ್ಲಿ ಸದರಿ ಸಂಸ್ಥೆಗೆ ಪಾವತಿಸಿದ ವಿವರಗಳು ಈ ಕೆಳಕಂಡಂತಿವೆ.

| **ದಿನಾಂಕ** | **ಚೆಕ್ ಸಂಖ್ಯೆ ಮತ್ತು ದಿನಾಂಕ** | **2018–19ನೇ ಸಾಲಿನಲ್ಲಿ ಪಾವತಿಸಿರುವ ಮೊತ್ತ (ರೂ.ಗಳಲ್ಲಿ)** |
|---|---|---|
| 07.01.2019 | 730691/07.01.2019 | 60,00,000/– |

ಈ ಪಾವತಿಗೆ ಸಂಬಂಧಿಸಿದಂತೆ, ಕಡತಗಳನ್ನು ಪರಿಶೀಲಿಸಲಾಗಿ, ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಿದೆ.

1. ಸರ್ಕಾರದ ಅದೇಶ ಸಂಖ್ಯೆ: PWD/671 FC–1/2009, ಬೆಂಗಳೂರು ದಿನಾಂಕ: 03.02.2010ರ ಅರ್ಥಿಕ ಪ್ರತ್ಯಾಯೋಜನೆಯ ಅನ್ವಯ 50 ಲಕ್ಷ ಮೀರಿದ ಕಾಮಗಾರಿಯ ಅಂದಾಜುಗಳಿಗೆ, ಮುಖ್ಯ ಅಭಿಯಂತರರು ಇವರಿಂದ ತಾಂತ್ರಿಕ ಪರಿಶೀಲನೆ (Technical Scrutiny) ಪಡೆಯಬೇಕಾಗಿದ್ದು, ಈ ಕಾಮಗಾರಿಯ ಅಂದಾಜಿಗೆ ತಾಂತ್ರಿಕ ಪರಿಶೀಲನೆ ಪಡೆದಿರುವುದಿಲ್ಲ.
2. ಹಳೆಯ ಕಟ್ಟಡವನ್ನು ಕೆಡವಲು 48 ನೇ ಪ್ರಶಾಸನ ಸಮಿತಿಯಲ್ಲಿ ನಿರ್ಧರಿಸಿದ್ದು, ಕಟ್ಟಡದ ತಪಾಸಣೆ & ಸಂಬಂಧಿತ ರಚನಾತ್ಮಕ ಸ್ಥಿರತೆಯ ವರದಿಯನ್ನು, ಮುಖ್ಯ ಇಂಜಿನಿಯರ್, ಗುಣಮಾಪನ ವಲಯ ಬೆಂಗಳೂರು ಇವರಿಂದ ಪಡೆದು, ನಂತರ ಅವರ ವರದಿಯ ಆಧಾರದ ಮೇಲೆ ಕಟ್ಟಡವನ್ನು ಕೆಡವಬೇಕಾಗಿರುತ್ತದೆ. ಈ ಕಛೇರಿಯ ಪತ್ರ ಸಂಖ್ಯೆ:853 ದಿ: 04–10–2018ರಲ್ಲಿ ಅವರು ಈ ವಿಷಯದಲ್ಲಿ ಯಾವುದೇ ಅಭಿಪ್ರಾಯವನ್ನು ನೀಡಿರುವುದಿಲ್ಲ. ಆದಾಗ್ಯೂ ಕಟ್ಟಡವನ್ನು ಕೆಡವಿ ಕಾಮಗಾರಿಯನ್ನು ಪ್ರಾರಂಭಿಸಿದ್ದು, ಕಟ್ಟಡದ ಶಿಥಿಲತೆಯನ್ನು ಸಕ್ಷಮ ಪ್ರಾಧಿಕಾರದಿಂದ ದೃಢೀಕರಿಸಿರುವುದಿಲ್ಲ.
3. ಕಟ್ಟಡವನ್ನು ಕೆಡವಿದ ನಂತರ ವಿಲೇ ಮಾಡಬಹುದಾದ ವಸ್ತುಗಳಾದ ಮರದ ಸಾಮಗ್ರಿಗಳು, ಕಬ್ಬಿಣ ಇತ್ಯಾದಿಗಳ ವಿಲೇವಾರಿ ಮಾಡಲು ಕೈಗೊಂಡ ಕ್ರಮಗಳು ವಿಲೇಯಿಂದ ಬಂದ ಮೊತ್ತದ ಮಾಹಿತಿ ಲಭ್ಯವಿರುವುದಿಲ್ಲ.
4. ಕಾರ್ಯಾದೇಶದ ಅನ್ವಯ 6 ತಿಂಗಳ ಕಾಲಾವಧಿಯನ್ನು ಕಾಮಗಾರಿ ಪೂರ್ಣಗೊಳಿಸಲು ನೀಡಿದ್ದು, (13.11.2018 ರಿಂದ 13.05.2019) ಪ್ರಸಕ್ತ ಸಾಲಿನಲ್ಲಿ ಸಾಧಿಸಲಾದ ಆರ್ಥಿಕ ಪ್ರಗತಿ ಹಾಗೂ ಕಾಮಗಾರಿ ಪೂರ್ಣಗೊಂಡಿರುವ ವಿವರಗಳು ಲಭ್ಯವಿರುವುದಿಲ್ಲ.
5. ಕರಾರು ಒಪ್ಪಂದವು ಸಾಮಾನ್ಯ ಷರತ್ತುಗಳನ್ನು ವಿಧಿಸಿ ಮಾಡಿಕೊಂಡಿದ್ದು, ಸರ್ಕಾರದ ಆದೇಶ ಸಂಖ್ಯೆ: FD9 PCL 2004(I) Banglore, Dated:06.08.2005 ರ ಅನ್ವಯ 1 ಕೋಟಿಗೂ ಮೀರಿದ ಕಾಮಗಾರಿಯನ್ನು ಕೆ.ಡಬ್ಲೂ–4 ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಕರಾರು ಮಾಡಿಕೊಂಡಿರುವುದಿಲ್ಲ ಅದ್ದರಿಂದ ವಿಳಂಬ ವಿನಾಯಿತಿ, ವಿಳಂಬಕ್ಕೆ ದಂಡ ಶುಲ್ಕ, ಬೆಲೆ ಏರಿಕೆಗಳ ವಿಷಯಗಳ ನಡುವೆ ಯಾವುದೇ ಒಪ್ಪಂದಗಳಾಗಿರುವುದಿಲ್ಲ.
6. ಆರ್ಥಿಕ ಇಲಾಖೆಯ ಸುತ್ತೋಲೆ ACS/FD/2018, Bengaluru. D:28–09–2018 ರನ್ವಯ ಸರಕು ಮತ್ತು ಸೇವೆಗಳಿಗೆ ಸಂಬಂಧಿಸಿದ ಪಾವತಿಗಳಿಗೆ ಅಕ್ಟೋಬರ್–2018 ರಿಂದ 2% GST ಯನ್ನು ಕಟಾವಣೆ

ಮಾಡಬೇಕಿದ್ದು, ಸದರಿ ಸಂಸ್ಥೆಯ ಪಾವತಿಗಳಿಗೆ ನಿಯಮಾನುಸಾರ ಕಟಾವಣೆ ಮಾಡಬೇಕಾದ GST ಮೊತ್ತ ರೂ.1,20,000/–ಗಳನ್ನು ವಸೂಲಿಸಿರುವುದಿಲ್ಲ.

ಈ ಕುರಿತು ವಿವರಣೆ ನೀಡಲು ವಿಚಾರಣಾ ಪತ್ರ ಸಂಖ್ಯೆ: 37/2018–19, ದಿನಾಂಕ: 18.09.2019 ರಲ್ಲಿ ಮಾಹಿತಿ ಕೋರಲಾಗಿತ್ತು. ವಿಶ್ವವಿದ್ಯಾಲಯವು ದಿನಾಂಕ: 01.10.2019 ರಲ್ಲಿ ಅನುಪಾಲನಾ ವರದಿಯನ್ನು ಒದಗಿಸಿದ್ದು, ಮಾಹಿತಿ ಅಪೂರ್ಣವಾಗಿರುವ ಕಾರಣ ಪಾವತಿಸಿರುವ ಮೊತ್ತ ರೂ. 60,00,000/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಮತ್ತು ಕಟಾವಣೆ ಮಾಡಬೇಕಾದ ಜಿ.ಎಸ್.ಟಿ. ಮೊತ್ತ ರೂ. 1,20,000/– ಗಳನ್ನು ವಸೂಲಿಸಲು ಸೂಚಿಸಿದೆ.

**49. "ಪ.ಜಾ/ಪ.ಪಂ ವಿದ್ಯಾರ್ಥಿಗಳ ವಿದ್ಯಾರ್ಥಿನಿಲಯ ನಿರ್ಮಾಣ ಶ್ರೀ ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು ಕಾಮಗಾರಿಯ ನ್ಯೂನತೆಗಳು.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಅಡಿಯಲ್ಲಿ 2012–13 ಮತ್ತು 2013–14 ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಮೊತ್ತವನ್ನು ಬಳಸಿ ಶ್ರೀ ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು ಇಲ್ಲಿ ಪ.ಜಾ/ಪ.ಪಂ. ವಿದ್ಯಾರ್ಥಿಗಳಿಗಾಗಿ ಹಳೆಯ ವಿದ್ಯಾರ್ಥಿನಿಯದ ಕಟ್ಟಡವನ್ನು ಕೆಡವಿ, ಅದೇ ಜಾಗದಲ್ಲಿ ನೂತನ ವಿದ್ಯಾರ್ಥಿನಿಲಯ ನಿರ್ಮಿಸಲು ರೂ. 163.80 ಲಕ್ಷಗಳ ಅಂದಾಜನ್ನು 2016–17ನೇ ಸಾಲಿಗೆ ತಯಾರಿಸಿ K.R.I.D.L. ಮೈಸೂರು ಇವರಿಗೆ ಠೇವಣಿ ಕಾಮಗಾರಿಯ ಅಧಾರದಲ್ಲಿ ವಹಿಸಲಾಗಿದೆ. ದಿನಾಂಕ: 04.01.2018 ರಂದು ಕಾಮಗಾರಿಯನ್ನು ಪ್ರಾರಂಭಿಸಲು ಆದೇಶಿಸಿದ್ದು. 2018–19ನೇ ಸಾಲಿನಲ್ಲಿ ಸದರಿ ಸಂಸ್ಥೆಗೆ ಪಾವತಿಸಿದ ವಿವರಗಳು ಈ ಕೆಳಕಂಡಂತಿವೆ.

| ದಿನಾಂಕ | ಚೆಕ್ ಸಂಖ್ಯೆ ಮತ್ತು ದಿನಾಂಕ | 2018–19ನೇ ಸಾಲಿನಲ್ಲಿ ಪಾವತಿಸಿರುವ ಮೊತ್ತ (ರೂ.ಗಳಲ್ಲಿ) |
|---|---|---|
| **01.06.2018** | **544803/01.06.2018** | **50,00,000/–** |

ಈ ಪಾವತಿಗೆ ಸಂಬಂಧಿಸಿದಂತೆ, ಕಡತಗಳನ್ನು ಪರಿಶೀಲಿಸಲಾಗಿ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಗಿದೆ:

1. ಕಡತಗಳನ್ನು ಪರಿಶೀಲಿಸಲಾಗಿ ಈ ಕಾಮಗಾರಿಯ ಅಂದಾಜು ಪಟ್ಟಿಯ ವಿವರಗಳು ಲಭ್ಯವಿರುವುದಿಲ್ಲ.
2. ಸರ್ಕಾರದ ಅದೇಶ ಸಂಖ್ಯೆ: PWD/671 FC–1/2009, ಬೆಂಗಳೂರು ದಿನಾಂಕ: 03.02.2010ರ ಆರ್ಥಿಕ ಪ್ರತ್ಯಾಯೋಜನೆಯ ಅನ್ವಯ ರೂ.50.00 ಲಕ್ಷ ಮೀರಿದ ಕಾಮಗಾರಿಯ ಅಂದಾಜುಗಳಿಗೆ, ಮುಖ್ಯ ಅಭಿಯಂತರರು ಇವರಿಂದ ತಾಂತ್ರಿಕ ಪರಿಶೀಲನೆ (Technical Scrutiny) ಪಡೆಯಬೇಕಿದ್ದು ಈ ಕಾಮಗಾರಿಯ ಅಂದಾಜಿಗೆ ತಾಂತ್ರಿಕ ಪರಿಶೀಲನೆ ಪಡೆದಿರುವುದಿಲ್ಲ.

3. ಮೇಲ್ಕಂಡ ಮೊತ್ತವನ್ನು ಈಗಾಗಲೇ ಪಾವತಿಸಿದ್ದು ಪಾವತಿಗೂ ಮುನ್ನ, ಸರ್ಕಾರದ ಆದೇಶ ಸಂಖ್ಯೆ: FD9 PCL 2004(I) Banglore, Dated:06.08.2005 ರ ಅನ್ವಯ 1 ಕೋಟಿಗೂ ಮೀರಿದ ಕಾಮಗಾರಿಯನ್ನು ಕೆ.ಡಬ್ಲೂ–4 ಟೆಂಡರ್ ಡಾಕ್ಯುಮೆಂಟ್‌ನಲ್ಲಿ ವಿ.ವಿ. ಮತ್ತು K.R.I.D.L ನೊಡನೆ ಗುತ್ತಿಗೆ ಕರಾರು ಮಾಡಿಕೊಳ್ಳಬೇಕಾಗಿದ್ದು, ಕರಾರು ಒಪ್ಪಂದದ ಪ್ರತಿ ಲಭ್ಯವಿರುವುದಿಲ್ಲ.
4. ರೂ. 50.00.000 ಗಳನ್ನು ಪಾವತಿಸಿದ್ದು, ನಿಯಮಾವಳಿಯಂತೆ 2% TDS ಮಾಡಿ ರೂ: 49,00,000 ಗಳನ್ನು ಪಾವತಿಸಬೇಕಿದ್ದು. ರೂ: 49,90,000/– ಗಳನ್ನು ಪಾವತಿಸಿದೆ. ಹೆಚ್ಚುವರಿಯಾಗಿ ರೂ. 90,000/– ಗಳನ್ನು ಪಾವತಿಸಲಾಗಿದೆ.
5. ವಲಯ ಆಯುಕ್ತರ ಕಛೇರಿ, ಮೈಸೂರು, ಮಹಾನಗರ ಪಾಲಿಕೆ, ಇವರ ಪತ್ರ ಸಂಖ್ಯೆ: ಮೈನಪಾ/ವ.ಅ/ಎ.ಇ–1/2018–19. ದಿನಾಂಕ: 11.06.2018ರ ಆದೇಶದಂತೆ, ಹಳೆಯ ಕಟ್ಟಡ ಕೆಡವುದನ್ನು ತಡೆನೀಡಿ ಆದೇಶಿಸಿರುತ್ತಾರೆ. ಇದರಿಂದಾಗಿ ಒಟ್ಟಾರೆ ಕಾಮಗಾರಿಯ ಪ್ರಾರಂಭವಾಗದೇ ಸ್ಥಗಿತವಾಗಿರುತ್ತದೆ. ಎಲ್ಲಾ ತಯಾರಿ & ಅನುಮತಿಗಳನ್ನು ಪಡೆದ ನಂತರವೇ ಕಾರ್ಯಾದೇಶ ಮತ್ತು ಹಣ ಪಾವತಿಸಬೇಕಿದ್ದು, ವಿಳಂಬದಿಂದಾಗಿ ಪಾವತಿಸಿದ ಮೊತ್ತವು ಅವಧಿ ಪೂರ್ವವಾಗಿ ವಿ.ವಿ. ನಿಧಿಯಿಂದ ಹೊರ ಹೋದಂತಾಗಿದೆ. ಈ ಸಂಬಂಧ ವಿವರಣೆ ಕೋರಿದೆ.
6. ಕಾರ್ಯಾದೇಶದ ಅನ್ವಯ 6 ತಿಂಗಳ ಕಾಲಾವಧಿಯನ್ನು ಕಾಮಗಾರಿ ಪೂರ್ಣಗೊಳಿಸಲು ನೀಡಿದ್ದು, (04.01.2018 ರಿಂದ 04.07.2018) ಪ್ರಸಕ್ತ ಆರ್ಥಿಕ ವರ್ಷದಲ್ಲಿ ಶೂನ್ಯ ಪ್ರಗತಿ ಸಾಧಿಸಲಾಗಿದೆ. ಈ ವಿಳಂಭಕ್ಕೆ ದಂಡಶುಲ್ಕ ಮತ್ತು ಅವಧಿ ವಿಸ್ತರಣೆಗೆ ನೀಡಿದ ಆದೇಶದ ಮಾಹಿತಿ ಲಭ್ಯವಿರುವುದಿಲ್ಲ.

ಈ ಕುರಿತು ವಿವರಣೆ ನೀಡಲು ವಿಚಾರಣಾ ಪತ್ರ ಸಂಖ್ಯೆ: 38/2018–19, ದಿನಾಂಕ: 19.09.2019 ರಲ್ಲಿ ಮಾಹಿತಿ ಕೋರಲಾಗಿತ್ತು. ವಿಶ್ವವಿದ್ಯಾಲಯವು ದಿನಾಂಕ: 01.10.2019 ರಂದು ನೀಡಿರುವ ಅನುಪಾಲನಾ ವರದಿಯಲ್ಲಿ ಕಾಮಗಾರಿ ಅಂದಾಜು ಪಟ್ಟಿ ಒದಗಿಸಿದ್ದು, ಇನ್ನುಳಿದ ಮಾಹಿತಿ ಸಮಂಜಸವಾಗಿರದ ಕಾರಣ, ಪಾವತಿಸಿರುವ ಮೊತ್ತ ರೂ. 50,00,000/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಮತ್ತು ಹೆಚ್ಚುವರಿಯಾಗಿ ಪಾವತಿಸಿದ ಮೊತ್ತ ರೂ. 90,000/– ಗಳನ್ನು ವಸೂಲಿಸಲು ಸೂಚಿಸಿದೆ.

**50. "Construction of meeting hall & V.C. Chamber Building (1st Floor) ಈ ಕಾಮಗಾರಿಯ ಪಾವತಿಯ ನ್ಯೂನತೆಗಳು.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು "Construction of meeting hall & V.C. Chamber Building (1st Floor) ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಅಂದಾಜು 150.00 ಲಕ್ಷಗಳಿಗೆ 2016–17ನೇ ಸಾಲಿನ ಬೆಂಗಳೂರು ವೃತ್ತದ ದರಪಟ್ಟಿಯಂತೆ K.R.I.D.L ನಿಂದ ತಯಾರಿಸಿ, ಇದೇ ಸಂಸ್ಥೆಗೆ ಠೇವಣಿ ಕಾಮಗಾರಿಗಳ ಆಧಾರದಲ್ಲಿ ವಹಿಸಲಾಗಿದೆ. ದಿನಾಂಕ: 10.12.2018 ರಲ್ಲಿ ಕರಾರು ಒಪ್ಪಂದ ಮಾಡಿಕೊಂಡಿದ್ದು, ಎರಡು ತಿಂಗಳು ಕಾಲಾವಕಾಶವನ್ನು ನೀಡಲಾಗಿದೆ. ಈ ಕಾಮಗಾರಿಗೆ ಸಂಬಂಧಿಸಿದಂತೆ, K.R.I.D.L. ಬೆಂಗಳೂರು ಸಂಸ್ಥೆಗೆ 2018–19ನೇ ಸಾಲಿನಲ್ಲಿ ಪಾವತಿಸಿರುವ ವಿವರಗಳು ಇಂತಿವೆ.

| ದಿನಾಂಕ | ಚೆಕ್ ಸಂಖ್ಯೆ ಮತ್ತು ದಿನಾಂಕ | 2018–19ನೇ ಸಾಲಿನಲ್ಲಿ ಪಾವತಿಸಿರುವ ಮೊತ್ತ (ರೂ.ಗಳಲ್ಲಿ) |
|---|---|---|
| 08.01.2019 | 730711/08.01.2019 | 40,00,000/– |

ಈ ಪಾವತಿಗೆ ಸಂಬಂಧಿಸಿದಂತೆ, ಕಡತಗಳನ್ನು ಪರಿಶೀಲಿಸಲಾಗಿ, ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಿದೆ.

1. ಸರ್ಕಾರದ ಅದೇಶ ಸಂಖ್ಯೆ: PWD/671 FC–1/2009, ಬೆಂಗಳೂರು ದಿನಾಂಕ: 03.02.2010ರ ಅರ್ಥಿಕ ಪ್ರತ್ಯಾಯೋಜನೆಯ ಅನ್ವಯ, ರೂ.50 ಲಕ್ಷ ಮೀರಿದ ಕಾಮಗಾರಿಯ ಅಂದಾಜುಗಳಿಗೆ, ಮುಖ್ಯ ಅಭಿಯಂತರರು ಇವರಿಂದ ತಾಂತ್ರಿಕ ಪರಿಶೀಲನೆ (Technical Scrutiny) ಪಡೆಯಬೇಕಾಗಿದ್ದು, ಈ ಕಾಮಗಾರಿಯ ಅಂದಾಜಿಗೆ ತಾಂತ್ರಿಕ ಪರಿಶೀಲನೆ ಪಡೆದಿರುವುದಿಲ್ಲ.
2. ಕಡತಗಳ ಪರಿಶೀಲನೆಯ ಅನ್ವಯ ದಿನಾಂಕ: 15.06.2017ರಲ್ಲಿ ಕಾರ್ಯದೇಶ ನೀಡಲಾಗಿದ್ದು, ದಿನಾಂಕ: 10.12.2018ರಲ್ಲಿ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ. ಕರಾರಿನ ಅನ್ವಯ ನಿಗದಿತ ಕಾಲಾವಧಿಯಲ್ಲಿ ಕಾಮಗಾರಿ ಪೂರ್ಣಗೊಳ್ಳದೇ ಪ್ರಸಕ್ತ ಸಾಲಿನಲ್ಲಿಯೂ ಮುಂದುವರೆದಿರುತ್ತದೆ. ಈ ವಿಷಯವಾಗಿ ವಿಳಂಬ ವಿನಾಯಿತಿ ಅದೇಶ ನೀಡಿರುವ ಬಗ್ಗೆ (EOT) & ವಿಳಂಬಕ್ಕೆ ದಂಡ ವಿಧಿಸಿರುವ ಬಗ್ಗೆ ಮಾಹಿತಿಯನ್ನು ಒದಗಿಸಿರುವುದಿಲ್ಲ.
3. ಆರ್ಥಿಕ ಇಲಾಖೆಯ ಸುತ್ತೋಲೆ ACS/FD/2018, Bengaluru. D:28–09–2018 ರನ್ವಯ, ಸರಕು ಮತ್ತು ಸೇವೆಗಳಿಗೆ ಸಂಬಂಧಿಸಿದ ಪಾವತಿಗಳಿಗೆ ಅಕ್ಟೋಬರ್–2018 ರಿಂದ 2% GST ಯನ್ನು ಕಟಾವಣೆ ಮಾಡಬೇಕಿದ್ದು, ಸದರಿ ಸಂಸ್ಥೆಯ ಪಾವತಿಗಳಿಗೆ ನಿಯಮಾನುಸಾರ ಕಟಾವಣೆ ಮಾಡಬೇಕಾದ ಜಿ.ಎಸ್.ಟಿ. ಮೊತ್ತ ರೂ.80,000/–ಗಳನ್ನು ವಸೂಲಿಸಿರುವುದಿಲ್ಲ.
4. ಅಂದಾಜು ಪಟ್ಟಿಯನ್ನು ಪರಿಶೀಲಿಸಿದಾಗ SL III, item No: 9,10,11,12, ಇವುಗಳು Non Operational item (ಸರಕು ಸಾಮಾಗ್ರಿಗಳಿಗೆ)ಸಂಬಂಧಿಸಿದ್ದು, ಇವುಗಳ ಒಟ್ಟು ಮೊತ್ತ 13,17,000/– ಗಳಾಗಿರುತ್ತವೆ. ಇವುಗಳನ್ನು ಪ್ರತ್ಯೇಕವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮಗಳನ್ವಯ ಟೆಂಡರ್ ಕರೆದು ಖರೀದಿಸುವುದರ ಬದಲಾಗಿ, ಕಟ್ಟಡ ನಿರ್ಮಾಣದ ಕಾಮಗಾರಿಯ ವೆಚ್ಚದಲ್ಲೇ ಅಳವಡಿಸಿಕೊಂಡಿರುವುದು.
5. ವಿಶ್ವವಿದ್ಯಾಲಯದಲ್ಲಿ ಕೆ.ಆರ್.ಐಡಿ.ಎಲ್. ಸಂಸ್ಥೆಯಿಂದ ವಿವಿಧ ಕಟ್ಟಡ ಕಾಮಗಾರಿಗಳನ್ನು ವಹಿಸಲಾಗಿದ್ದು, ಇದೇ ಸಂಸ್ಥೆಯಿಂದ ಕೆ.ಆರ್.ಐ.ಡಿ.ಎಲ್. ದರ 3% ನ್ನು ವಿಧಿಸಿದ್ದು, ಸದರಿ ಕಾಮಗಾರಿಯಲ್ಲಿ ಕೆ.ಆರ್.ಐ.ಡಿ.ಎಲ್. ದರ ಅನ್ನು 8% ಗೆ ವಿಧಿಸಲಾಗಿದೆ. ಈ ದರ ವ್ಯತ್ಯಾಸಕ್ಕೆ ಸ್ಪಷ್ಟೀಕರಣ ನೀಡಿರುವುದಿಲ್ಲ.

ಈ ಕುರಿತು ವಿವರಣೆ ನೀಡಲು ವಿಚಾರಣಾ ಪತ್ರ ಸಂಖ್ಯೆ: 40/2018–19. ದಿನಾಂಕ: 20.09.2019 ರಲ್ಲಿ ಮಾಹಿತಿ ಕೋರಲಾಗಿತ್ತು. ವಿಶ್ವವಿದ್ಯಾಲಯವು ದಿನಾಂಕ: 30.09.2019 ರಲ್ಲಿ ಒದಗಿಸಿರುವ ಅನುಪಾಲನಾ ವರದಿಯಲ್ಲಿ ಮುಂದಿನ ಕಾಮಗಾರಿಗಳಲ್ಲಿ ಮೇಲ್ಕಂಡ ಅಂಶಗಳನ್ನು ಪಾಲಿಸುವುದಾಗಿ ತಿಳಿಸಿರುವ ಹಿನ್ನೆಲೆಯಲ್ಲಿ, ಸದರಿ ಸಂಸ್ಥೆಗೆ 2018–19ನೇ ಸಾಲಿನಲ್ಲಿ ಪಾವತಿಸಿರುವ

ಮೊತ್ತ ರೂ. 40,00,000/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಕಟಾವಣೆ ಮಾಡದಿರುವ ಜಿ.ಎಸ್.ಟಿ. ಮೊತ್ತ ರೂ. 80,000/– ಗಳನ್ನು ವಸೂಲಿಸಲು ಸೂಚಿಸಿದೆ.

**51. ಕಾಮಗಾರಿಯ ವಿಳಂಬಕ್ಕೆ ದಂಡ ಶುಲ್ಕವನ್ನು ವಿಧಿಸದಿರುವುದು.**

"Construction of meeting hall & V.C. Chamber Building (1st Floor) ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಅಂದಾಜು 150.00 ಲಕ್ಷಗಳಿಗೆ, 2016–17ನೇ ಸಾಲಿನ ಬೆಂಗಳೂರು ವೃತ್ತದ ದರಪಟ್ಟಿಯಂತೆ K.R.I.D.L ನಿಂದ ತಯಾರಿಸಿ, ಇದೇ ಸಂಸ್ಥೆಗೆ ಠೇವಣಿ ಕಾಮಗಾರಿಗಳ ಆಧಾರದಲ್ಲಿ ವಹಿಸಲಾಗಿದೆ. ದಿನಾಂಕ: 10.12.2018 ರಲ್ಲಿ ಕರಾರು ಒಪ್ಪಂದ ಮಾಡಿಕೊಂಡಿದ್ದು. ಎರಡು ತಿಂಗಳು ಕಾಲಾವಕಾಶವನ್ನು ನೀಡಲಾಗಿದೆ. ಕಟ್ಟಡವನ್ನು ದಿ: 05.05.2017 ರಂದು ಪ್ರಾರಂಭಿಸಲಾಗಿದ್ದು, ಕರಾರು ಪತ್ರದ ಪ್ರಕಾರ ಕಾಮಗಾರಿ ದಿ: 04.11.2017 ರಂದು ಮುಗಿಯಬೇಕಾಗಿರುತ್ತದೆ. ಆದರೆ ಕಟ್ಟಡ ಕಾಮಗಾರಿ ದಿ: 24.09.2018 ರಂದು ಮುಕ್ತಾಯವಾಗಿರುತ್ತದೆ. ಒಟ್ಟಾರೆ 324 ದಿನಗಳು ತಡವಾಗಿದ್ದು, Standard Tender Document Rule-36 Kw04 ಪ್ರಕಾರ 0.1% ದಂಡ ಅಥವಾ ಗರಿಷ್ಟ ಕಾಮಗಾರಿ ಮೊತ್ತ 10% ದಂಡವನ್ನು ಕಡಿತ ಮಾಡಬೇಕಾಗಿರುತ್ತದೆ. ಈ ಬಗ್ಗೆ ವಿಚಾರಣಾ ಸಂಖ್ಯೆ: 35/18.09.09 ರಂದು ಮಾಹಿತಿ ಕೇಳಿದ್ದು, ನೀಡಿರುವ ಉತ್ತರದಲ್ಲಿ ಮುಂದಿನ ದಿನಗಳಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿದೆ. ಆದ್ದರಿಂದ ರೂ.15,00,000/– ದಂಡವನ್ನು ಸಂಬಂಧಪಟ್ಟವರಿಂದ ವಸೂಲಿಸಲು ತಿಳಿಸಲಾಗಿದೆ.

**52. ಶ್ರೀ ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು ಇಲ್ಲಿ ನಿರ್ಮಿಸುತ್ತಿರುವ ನೂತನ ವಿದ್ಯಾರ್ಥಿನಿಲಯದ ಸಂಬಂಧ ಕಾರ್ಮಿಕ ಕಲ್ಯಾಣ ಕರವನ್ನು ವಿಶ್ವವಿದ್ಯಾಲಯದಿಂದ ಪಾವತಿಸಿರುವುದು.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಅಡಿಯಲ್ಲಿ 2012–13 ಮತ್ತು 2013–14 ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಮೊತ್ತವನ್ನು ಬಳಸಿ, ಶ್ರೀ ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು ಇಲ್ಲಿ ಪ.ಜಾ/ಪ.ಪಂ. ವಿದ್ಯಾರ್ಥಿಗಳಿಗಾಗಿ ಹಳೆಯ ವಿದ್ಯಾರ್ಥಿನಿಲಯದ ಕಟ್ಟಡವನ್ನು ಕೆಡವಿ, ಅದೇ ಜಾಗದಲ್ಲಿ ನೂತನ ವಿದ್ಯಾರ್ಥಿನಿಲಯ ನಿರ್ಮಿಸಲು ರೂ. 163.80 ಲಕ್ಷಗಳ ಅಂದಾಜನ್ನು 2016–17ನೇ ಸಾಲಿನ ದರಪಟ್ಟಿಯನ್ವಯ ತಯಾರಿಸಿ K.R.I.D.L. ಮೈಸೂರು ಇವರಿಗೆ ಠೇವಣಿ ಕಾಮಗಾರಿಯ ಅಧಾರದಲ್ಲಿ ವಹಿಸಲಾಗಿದೆ. 2018–19 ನೇ ಸಾಲಿನ ವೋಚರ್ ಪರಿಶೀಲನೆಯಲ್ಲಿ ಚೆಕ್ ಸಂಖ್ಯೆ: 730728 ದಿ:16.01.2019 ರಲ್ಲಿ ಮೊತ್ತ ರೂ. 1,62,162/– ಗಳನ್ನು ವಿಶ್ವವಿದ್ಯಾಲಯವು ಸರ್ಕಾರದ ಕಾರ್ಮಿಕ ಇಲಾಖೆಯ "KSB & Other Construction Workers Welfare Board" ಸಂಸ್ಥೆಗೆ ಕಾರ್ಮಿಕ ಕಲ್ಯಾಣ ಕರವಾಗಿ (Labour Cess) ಪಾವತಿಸಿದ್ದು, ನಿಯಮಾವಳಿಗಳ ಪ್ರಕಾರ, ನಿರ್ಮಾಣ ಕಾಮಗಾರಿ ನಿರ್ವಹಿಸುವ ಸಂಸ್ಥೆಯು ಈ ಕಾರ್ಮಿಕ ಕಲ್ಯಾಣ ಕರವನ್ನು ಪಾವತಿಸಬೇಕಾಗಿರುತ್ತದೆ. ಈ ಕುರಿತು ವಿವರಣೆ ನೀಡುವಂತೆ ಕೋರಿ, ವಿಚಾರಣಾ ಪತ್ರ ಸಂಖ್ಯೆ: 50/2018–19. ದಿನಾಂಕ: 23.09.2019ರಲ್ಲಿ ನೀಡಲಾಗಿತ್ತು. ಆದರೆ ಯಾವುದೇ ವಿವರಣೆ ಒದಗಿಸದ ಕಾರಣ, K.R.I.D.L. ಮೈಸೂರು ಸಂಸ್ಥೆಗೆ ಮುಂದಿನ ಬಿಲ್ಲಿನ ಮೊತ್ತವನ್ನು ಪಾವತಿಸುವಾಗ ರೂ: 1,62,162.00 ಗಳ ಮೊತ್ತವನ್ನು ಕಟಾಯಿಸುವುದು ಅಥವಾ ಈ ಪಾವತಿಗೆ ಕಾರಣರಾದ ಅಧಿಕಾರಿ/ಸಿಬ್ಬಂದಿಗಳಿಂದ ವಸೂಲಿಸಿ, ವಿಶ್ವವಿದ್ಯಾಲಯದ ನಿಧಿಗೆ ಜಮೆ ಮಾಡಲು ಸೂಚಿಸಿದೆ.

**53. ಪ್ರಶ್ನೆ ಪತ್ರಿಕೆಗಳು ಮತ್ತು ಉತ್ತರಪತ್ರಿಕೆಗಳ ದಾಸ್ತಾನು ನಿರ್ವಹಿಸದಿರುವುದು.**

2018–19ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ, ಪರೀಕ್ಷಾ ವಿಭಾಗದ ಪ್ರಶ್ನೆಪತ್ರಿಕೆಗಳು & ಉತ್ತರ ಪತ್ರಿಕೆಗಳ ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಿದ್ದು, ಕೆಳಕಂಡ ನೂನ್ಯತೆಗಳನ್ನು ಗಮನಿಸಲಾಗಿದೆ.

1. ಪ್ರಶ್ನೆ ಪತ್ರಿಕೆಗಳ ಸಂಬಂಧ ಯಾವುದೇ ದಾಸ್ತಾನು ವಹಿ ನಿರ್ವಹಿಸಿರುವುದಿಲ್ಲ. ಆದ್ದರಿಂದ ಸ್ವೀಕೃತಿಯಾದ, ವಿತರಿಸಲ್ಪಟ್ಟ ಹಾಗೂ ಉಳಿಕೆಯಾದ ಪ್ರಶ್ನೆಪತ್ರಿಕೆಗಳ ಮಾಹಿತಿ ಲಭ್ಯವಿರುವುದಿಲ್ಲ.

2. ಉತ್ತರ ಪತ್ರಿಕೆಗಳಿಗೆ ಸಂಬಂಧಿಸಿದಂತೆ, ದಾಸ್ತಾನು ವಹಿಯ ಮಾಹಿತಿಗೂ, ಬಿಲ್ಲು ಪಾವತಿಸಿರುವ ಸಂಖ್ಯೆಗೂ ಹಾಗೂ ವಿತರಿಸಿರುವ ಉತ್ತರ ಪತ್ರಿಕೆಗಳ ಸಂಖ್ಯೆಗೂ ತಾಳೆಯಾಗಿರುವುದಿಲ್ಲ.

3. ಕಳೆದ ಸಾಲುಗಳಲ್ಲಿ ವಿತರಿಸಲ್ಪಟ್ಟ ಉತ್ತರ ಪತ್ರಿಕೆಗಳು, ಆಯಾ ಶಿಕ್ಷಣ ಸಂಸ್ಥೆಯಲ್ಲಿ ಉಳಿದಿರುವ ಸಂಖ್ಯೆಗಳ ಮಾಹಿತಿಯನ್ನು ಸಂಗ್ರಹಿಸಿ ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.

4. ಕರ್ನಾಟಕ ಆರ್ಥಿಕ ಸಂಹಿತೆ 1958 ಅನುಚ್ಛೇದ 164 ಹಾಗೂ 169 ರಂತೆ, ದಾಸ್ತಾನು ವಹಿ, ಅನುಪಯುಕ್ತ & ಹಾಳಾದ ದಾಸ್ತಾನಿನ ವಿವರಗಳು ಹಾಗೂ ವಾರ್ಷಿಕ ದಾಸ್ತಾನಿನ ಭೌತಿಕ ಸತ್ಯಾಪನೆಯ ವಿವರಗಳು ಲಭ್ಯವಿರುವುದಿಲ್ಲ.

ಈ ಸಂಬಂಧ ಲೆಕ್ಕ ತನಿಖೆಗೆ ಸ್ಪಷ್ಟೀಕರಣ ಒದಗಿಸುವಂತೆ ತಿಳಿಸಿ, ವಿಚಾರಣಾ ಪತ್ರ ಸಂಖ್ಯೆ: 61/2018–19. ದಿನಾಂಕ: 10.10.2019ನ್ನು ನೀಡಲಾಗಿರುತ್ತದೆ. ವಿಶ್ವವಿದ್ಯಾಲಯವು ದಿನಾಂಕ: 18.10.2019 ರಂದು ಒದಗಿಸಿರುವ ಮಾಹಿತಿಯಂತೆ, ಮೇಲೆ ಸೂಚಿಸಿರುವ ಅಂಶಗಳನ್ನು ಮುಂದಿನ ಸಾಲಿನಿಂದ ನಿಯಮಾವಳಿಗಳನ್ವಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ. ಆದರೆ ಪ್ರಶ್ನೆಪತ್ರಿಕೆಗಳು ಹಾಗೂ ಉತ್ತರ ಪತ್ರಿಕೆಗಳು ವಿಶ್ವವಿದ್ಯಾಲಯದ ಪ್ರಮುಖ ದಾಖಲೆಗಳಾಗಿದ್ದು, ಅವುಗಳ ದಾಸ್ತಾನು ಮತ್ತು ವಿತರಣೆ ವಹಿಯನ್ನು ನಿರ್ವಹಿಸದೇ ಇರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಂಭೀರವಾಗಿ ಪರಿಗಣಿಸಲಾಗಿದ್ದು, ಈ ಬಗ್ಗೆ ಕೂಡಲೇ ಸೂಕ್ತ ಕ್ರಮ ವಹಿಸಲು ಸೂಚಿಸಿದೆ.

**54. ಇತರೇ ಮುಂಗಡಗಳು.**

2018–19ನೇ ಸಾಲಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲಿನಲ್ಲಿ ಒಟ್ಟು ರೂ: 19,74,269.00 ಗಳನ್ನು ಸೆಳೆಯಲಾಗಿದ್ದು, ಒದಗಿಸಿರುವ ಮಾಹಿತಿಯಂತೆ, ಸದರಿ ಸಾಲಿನಲ್ಲಿಯೇ ಪೂರ್ಣ ಮೊತ್ತಕ್ಕೆ ಎನ್.ಡಿ.ಸಿ. ಬಿಲ್ಲುಗಳನ್ನು ಹೊಂದಿಸಲಾಗಿದ್ದು, ಇವುಗಳನ್ನು ಪರಿಶೀಲಿಸಿದಾಗ, ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಗಿದೆ:

1) 1 ಸಾದಿಲ್ವಾರು ವೆಚ್ಚದ ಕೈಪಿಡಿ 1958ರ ನಿಯಮ 36(2) ರ ಅನ್ವಯ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಲ್ಲಿ ತಕ್ಷಣದ ಹಾಗೂ ತುರ್ತು ಅವಶ್ಯಕತೆಗಳಿಗಾಗಿ ಮಾತ್ರ ಹಣವನ್ನು ಸೆಳೆಯಬೇಕಾಗಿದ್ದು, ಬಹುತೇಕ ಬಿಲ್ಲುಗಳು ತಕ್ಷಣದ ಅವಶ್ಯಕತೆಗಳಾಗದಿರುವುದು ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದಿರುತ್ತದೆ.

2) ಬಹುತೇಕ ಬಿಲ್ಲುಗಳಲ್ಲಿ ಎ.ಸಿ. ಬಿಲ್ಲು ಸೆಳೆದ ಹಿಂದಿನ ದಿನಗಳ ವೆಚ್ಚದ ಬಿಲ್ಲುಗಳನ್ನು ಲಗತ್ತಿಸಲಾಗಿದೆ, ಈ ರೀತಿ ಮಾಡುವ ಬದಲಿಗೆ, ಅವುಗಳನ್ನು ಡಿ.ಸಿ. ಬಿಲ್ಲುಗಳಾಗಿ ಕ್ಲೇಮು ಮಾಡಬೇಕಾಗಿರುತ್ತದೆ. ಈ ರೀತಿ ಮಾಡುವುದರಿಂದ, ಎ.ಸಿ. ಬಿಲ್ಲು ಸೆಳೆಯುವ ಉದ್ದೇಶವೇ ಪೂರ್ಣವಾಗುವುದಿಲ್ಲ.

ವಿಶ್ವವಿದ್ಯಾಲಯವು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲಿನಲ್ಲಿ ಹಣವನ್ನು ಸೆಳೆಯುವುದನ್ನು ಆದಷ್ಟು ನಿಯಂತ್ರಿಸಿ, ಕೇವಲ ತುರ್ತು ಅವಶ್ಯಕತೆಗಳಿಗಾಗಿ ಮಾತ್ರ ಹಣವನ್ನು ಸೆಳೆದು ವೆಚ್ಚ ಮಾಡುವಂತೆ ತಿಳಿಸಿದೆ. ಅಲ್ಲದೇ ಕರ್ನಾಟಕ ಸಾದಿಲ್ವಾರು ವೆಚ್ಚದ ಕೈಪಿಡಿ 1958 ರ ನಿಯಮ (36) ರಂತೆ ಕ್ರಮ ಕೈಗೊಂಡು ಒಂದು ತಿಂಗಳೊಳಗಾಗಿ ಸವಿವರ ಸಾದಿಲ್ವಾರು ಬಿಲ್ಲನ್ನು ಸಲ್ಲಿಸಲು ಸೂಚಿಸಿದೆ.

2018–19ನೇ ಸಾಲಿನಲ್ಲಿ ವಿಶ್ವವಿದ್ಯಾಲಯವು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲಿನಲ್ಲಿ ಸೆಳೆದು, ಹೊಂದಾಣಿಕೆಯಾದ ಬಿಲ್ಲಿನ ವಿವರಗಳನ್ನು **ಅನುಬಂಧ– 10** ರಲ್ಲಿ ಲಗತ್ತಿಸಿದೆ.

**55. ವಿಶ್ವವಿದ್ಯಾಲಯದ ದತ್ತಿನಿಧಿ ಖಾತೆಗಳ ವಿವರಗಳು.**

2018–19 ನೇ ಸಾಲಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಒಟ್ಟು 22 ದತ್ತಿನಿಧಿಗಳನ್ನು ಹೊಂದಿದ್ದು, ದತ್ತಿನಿಧಿಗಳಿಂದ ಬಂದಂತಹ ಬಡ್ಡಿಯಲ್ಲಿ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಹಾಗೂ ನಗದು ಪುರಸ್ಕಾರಗಳನ್ನು ವಿತರಿಸಿದ್ದು, ಸ್ವೀಕೃತಿ ಹಾಗೂ ಪಾವತಿಯ ವಿವರಗಳು ಈ ಕೆಳಕಂಡಂತಿವೆ.

| **ಸ್ವೀಕೃತಿ** | | **ಪಾವತಿ** | |
|---|---|---|---|
| **ವಿವರಗಳು** | **ಮೊತ್ತ** | **ವಿವರಗಳು** | **ಮೊತ್ತ** |
| ಪ್ರಾರಂಭ ಶಿಲ್ಕು | – | ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ | 1,29,000.00 |
| ಎಸ್.ಬಿ. ಖಾತೆಯಲ್ಲಿ | 1,65,465.00 | | |
| ಎಫ್.ಡಿ. ಖಾತೆಯಲ್ಲಿ. | 35,32,391.00 | ಚಿನ್ನದ ಪದಕ ವಿತರಣೆ | 82,006.00 |
| 2018–19ರಲ್ಲಿ ಸ್ವೀಕೃತಿ | 2,60,000.00 | ಎನ್.ಎಸ್.ಎಸ್. ಪುರಸ್ಕಾರ | 5,000.00 |
| ಬಡ್ಡಿ ಸ್ವೀಕೃತಿ | 2,82,348.00 | ಟಿ.ಡಿ.ಎಸ್. ಪಾವತಿ | 4,472.00 |
| **ಒಟ್ಟು** | **42,40,204.00** | **ಒಟ್ಟು** | **2,20,478.00** |
| | | **ಅಂತಿಮ ಶಿಲ್ಕು** | |
| | | ಎಸ್.ಬಿ. ಖಾತೆಯಲ್ಲಿ | 1,47,335.00 |
| | | ಎಫ್.ಡಿ. ಖಾತೆಯಲ್ಲಿ. | 38,72,391.00 |

ವಿಶ್ವವಿದ್ಯಾಲಯವು ಹೊಂದಿರುವ ದತ್ತಿನಿಧಿಗಳ ವಿವರಗಳನ್ನು **ಅನುಬಂಧ–11** ರಲ್ಲಿ ಲಗತ್ತಿಸಿದೆ.

**56. ವಿದ್ಯಾರ್ಥಿ ವೇತನದ ಮೊತ್ತವನ್ನು ಪೂರ್ಣವಾಗಿ ಹಂಚಿಕೆ ಮಾಡದೇ ಬಾಕಿ ಉಳಿಸಿಕೊಂಡಿರುವುದು.**

2018-19 ಸಾಲಿನಲ್ಲಿ ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಬಿಡುಗಡೆಯಾದ, ವಿತರಿಸಿದ ಹಾಗೂ ಉಳಿಕೆಯಾದ ವಿದ್ಯಾರ್ಥಿ ವೇತನದ ವಿವರಗಳು ಕೆಳಕಂಡಂತಿರುತ್ತವೆ.

| ವಿವರ | ಮೊತ್ತ |
|---|---|
| ಪ್ರಾರಂಭ ಶಿಲ್ಕು (01.04.2018) | 35,86,600 |
| 2018-19ನೇ ಸಾಲಿನಲ್ಲಿ ಸ್ವೀಕೃತಿ ಹಣ | - |
| ಒಟ್ಟು | 35,86,600 |
| ವಿತರಣೆ | 8,33,700 |
| ಅಂತಿಮ ಶಿಲ್ಕು | 27,52,900 |

2018-19 ನೇ ಸಾಲಿನ ಕಡತಗಳನ್ನು ಪರಿಶೀಲಿಸಲಾಗಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಇವರ ಪ.ಸಂ: ED:297:UNE:2016 / Dtd:11.05.2017 ರಲ್ಲಿ ಸಂಸ್ಕೃತ ವಿ.ವಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲು ರೂ.80.00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ. ಅದರಲ್ಲಿ 2016-17, 2017-18 ಹಾಗೂ 2018-19 ನೇ ಸಾಲಿನಲ್ಲಿ ಒಟ್ಟು ರೂ.52,47,100/- ಗಳನ್ನು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗಿದ್ದು, ಉಳಿದ ಮೊತ್ತ ರೂ.27,52,900/- ರ ಬಗ್ಗೆ ಮಾಹಿತಿ ಕೋರಿ ಲೆ.ವಿ.ಸಂಖ್ಯೆ:28/ದಿ.17/09/2019 ರಲ್ಲಿ ಕೇಳಿದ್ದು, ನೀಡಿರುವ ಉತ್ತರದಲ್ಲಿ ಮುಂದಿನ ಸಾಲಿನಲ್ಲಿ ಉಪಯೋಗಿಸಲಾಗುತ್ತದೆ ಎಂದು ತಿಳಿಸಿರುತ್ತಾರೆ. ಕೂಡಲೇ ಸದರಿ ವಿದ್ಯಾರ್ಥಿ ವೇತನದ ಮೊತ್ತವನ್ನು ಅರ್ಹ ವಿದ್ಯಾರ್ಥಿಗಳಿಗೆ ವಿತರಿಸಲು ಕ್ರಮ ಕೈಗೊಳ್ಳುವಂತೆ ಅಥವಾ ಸದರಿ ಮೊತ್ತವನ್ನು ಸರ್ಕಾರಕ್ಕೆ ಆದ್ಯರ್ಪಿಸುವಂತೆ ಸೂಚಿಸಿ, ರೂ.27,52,900/- ಗಳ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**57. ಪಿಂಚಣಿ ಸೌಲಭ್ಯ ಯೋಜನೆಗಳು.**

2018-19 ನೇ ಸಾಲಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸಹಾಯನುದಾನ ವಿಶ್ರಾಂತಿ ವೇತನಗಳು ಲೆಕ್ಕಶೀರ್ಷಿಕೆಯಲ್ಲಿ 2202-05-103-0-01-118 ರಲ್ಲಿ ಸರ್ಕಾರವು ರೂ: 19,00,000.00 ವನ್ನು ಬಿಡುಗಡೆ ಮಾಡಿದ್ದು, ಸದರಿ ಮೊತ್ತವನ್ನು ವಿಶ್ವವಿದ್ಯಾಲಯದ ಬಾಬ್ತು ನೂತನ ಪಿಂಚಣಿ ಯೋಜನೆ/ಹಳೆಯ ಪಿಂಚಣಿ ಯೋಜನೆಯ ಖಾತೆಗಳಿಗೆ ವರ್ಗಾವಣೆ ಮಾಡಲಾಗಿರುತ್ತದೆ.

**58. ಪುಸ್ತಕಗಳ ಮಾರಾಟ.**

2018-19 ನೇ ಸಾಲಿನಲ್ಲಿ, ವಿಶ್ವವಿದ್ಯಾಲಯದ ಪಠ್ಯಪುಸ್ತಕಗಳ ದಾಸ್ತಾನು ವಹಿಯನ್ನು ಪರಿಶೀಲಿಸಲಾಗಿದ್ದು, ವಿವರಗಳು ಕೆಳಕಂಡಂತಿರುತ್ತವೆ:

| ವಿವರಗಳು | ಸಂಖ್ಯೆ |
|---|---|
| ಪ್ರಾರಂಭ ಶಿಲ್ಕು | 13813 |
| ಸ್ವೀಕೃತಿಯಾದ ಪುಸ್ತಕಗಳು | 64000 |
| ಒಟ್ಟು ಪುಸ್ತಕಗಳು | 77813 |
| ವಿತರಿಸಿದ ಪುಸ್ತಕಗಳು | 10748 |
| ಅಂತಿಮ ಶಿಲ್ಕು | 67065 |

ಪಠ್ಯ ಪುಸ್ತಕಗಳ ಮಾರಾಟದಿಂದ ವಿಶ್ವವಿದ್ಯಾಲಯಕ್ಕೆ ರೂ: 6,92,491.00 ಗಳು ಸ್ವೀಕೃತವಾಗಿದ್ದು, ಪಠ್ಯಪುಸ್ತಕವಾರು ಮಾರಾಟವಾದ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ. ಮುಂದಿನ ಲೆಕ್ಕಪರಿಶೋಧನೆಯಲ್ಲಿ ಪುಸ್ತಕಗಳ ಹೆಸರು, ಮೊತ್ತ, ಮಾರಾಟವಾದ ಒಟ್ಟು ಪುಸ್ತಕಗಳ ವಿವರಗಳನ್ನು ಪ್ರತ್ಯೇಕವಾಗಿ ನೀಡುವಂತೆ ಸೂಚಿಸಿದೆ. **ವಿವರಗಳನ್ನು ಅನುಬಂಧ–12 ರಲ್ಲಿ ಲಗತ್ತಿಸಿದೆ.**

**59. ರಾಷ್ಟ್ರೀಯ ಸೇವಾ ಯೋಜನೆ :**

2018–19ನೇ ಸಾಲಿನಲ್ಲಿ, ರಾಷ್ಟ್ರೀಯ ಸೇವಾ ಯೋಜನೆಗೆ ಸಂಬಂಧಿಸಿದಂತೆ, ಸ್ವೀಕೃತಿ ಮತ್ತು ಪಾವತಿಯ ವಿವರಗಳು ಕೆಳಕಂಡಂತಿರುತ್ತವೆ:

| | |
|---|---|
| ಪ್ರಾರಂಭ ಶಿಲ್ಕು ದಿನಾಂಕ: 01.04.2018 ರಂತೆ | 81,316.50 |
| ಸ್ವೀಕೃತಿ | 5,10,579.00 |
| ಒಟ್ಟು | 5,91,895.00 |
| ಪಾವತಿಗಳು | 5,73,301.00 |
| ಅಂತಿಮ ಶಿಲ್ಕು | 18,594.50 |

ವಿಶ್ವವಿದ್ಯಾಲಯವು 2018–19ನೇ ಸಾಲಿನಲ್ಲಿ ವಿಶ್ವವಿದ್ಯಾಲಯದಲ್ಲಿ ವಿಶೇಷ ಶಿಬಿರ ಆಯೋಜನೆಗಾಗಿ ರೂ: 2.18 ಲಕ್ಷ, ಅನುದಾನಿತ ಕಾಲೇಜುಗಳಲ್ಲಿ ಶಿಬಿರಗಳ ಆಯೋಜನೆಗಾಗಿ ರೂ: 2.37 ಲಕ್ಷ ಹಾಗೂ ದೈನಂದಿನ ಚಟುವಟಿಕೆಗಳಿಗಾಗಿ ರೂ: 1.18 ಲಕ್ಷಗಳಂತೆ ಒಟ್ಟು ರೂ: 5.73 ಲಕ್ಷಗಳ ವೆಚ್ಚ ಭರಿಸಿದ್ದು, ಲೆಕ್ಕಪರಿಶೋಧನೆಯಲ್ಲಿ ಸದರಿ ವೋಚರ್‌ಗಳನ್ನು ಪರಿಶೀಲಿಸಲಾಗಿರುತ್ತದೆ.

**60. ಬ್ಯಾಂಕ್ ಖಾತೆ: 54034090744, ನಿರ್ದೇಶಕರು, ಸಂಸ್ಕೃತ ಸಂಶೋಧನಾ ಅಕಾಡೆಮಿ, ಮೇಲುಕೋಟೆ ಇದಕ್ಕೆ ಸಂಬಂಧಿಸಿದ ವೋಚರ್‌ಗಳ ಪರಿಶೀಲನೆ.**

**(i) ಮುಂಗಡ ಪಾವತಿಸಿರುವ ಮೊತ್ತ ರೂ. 85,000/–ಗಳ ಆಕ್ಷೇಪಣೆ**

2018–19ನೇ ಸಾಲಿನ ಸಂಸ್ಕೃತ ಸಂಶೋಧನಾ ಅಕಾಡೆಮಿಯ ಲೆಕ್ಕ ಪರಿಶೋಧನೆ ಕೈಗೊಂಡಿದ್ದು, ಸದರಿ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು ಪರಿಶೀಲಿಸಲಾಗಿ, ಈ ಕೆಳಕಂಡ ಸಂಸ್ಥೆ ಮತ್ತು ನೌಕರರಿಗೆ ಹಿಂದಿನ ಸಾಲಿನಲ್ಲಿ ನೀಡಿರುವ ಮುಂಗಡಗಳು ವಿಲೇಯಾಗದೇ ಇರುವುದು ಕಂಡು ಬಂದಿರುತ್ತದೆ.

| ಕ್ರ. ಸಂ | ಸಂಸ್ಥೆ/ ನೌಕರ | ಮೊತ್ತ |
|---|---|---|
| 1 | M/s Kaynes energy systems Pvt. Ltd, Mysore. | 15,000 |
| 2 | ಶ್ರೀ ಶ್ರೀನಿವಾಸಮೂರ್ತಿ. | 70,000 |
| | **ಒಟ್ಟು ಮೊತ್ತ** | **85,000/–** |

ಈ ಮೇಲ್ಕಂಡ ಮೊತ್ತಗಳು ಪ್ರಸ್ತುತ ಸಾಲಿನಲ್ಲಿ ಹೊಂದಾಣಿಕೆಯಾಗಿ ಹಿಂಪಡೆದಿರುವ ವಿವರಗಳನ್ನು ಲೆಕ್ಕ ತನಿಖೆಗೆ ಒದಗಿಸಲು ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ 02, ದಿನಾಂಕ: 06.11.2019 ಕೋರಲಾಗಿತ್ತು, ದಿನಾಂಕ:07.11.2019 ರಲ್ಲಿ ಒದಗಿಸಿರುವ ಅನುಪಾಲನಾ ವರದಿಯಂತೆ ಸದರಿ ಮೊತ್ತಗಳು 1999–2000 ನೇ ಸಾಲಿಗೆ ಸಂಬಂಧಿಸಿದ್ದು, ಕ್ರಮ ಸಂಖ್ಯೆ–1ರ ಸಂಸ್ಥೆಯು ಪ್ರಸ್ತುತ ಅಸ್ತಿತ್ವದಲ್ಲಿಲ್ಲದೇ ಇರುವುದರಿಂದ ಹಾಗೂ ಕ್ರಮ ಸಂಖ್ಯೆ–2ರ ವ್ಯಕ್ತಿಯು ನಿಧನ ಹೊಂದಿರುವುದರಿಂದ, ಸದರಿ ಮೊತ್ತವನ್ನು ವಸೂಲಿಸಲು ಸಾಧ್ಯವಿರುವುದಿಲ್ಲವೆಂದು ತಿಳಿಸಿ, ಆಡಳಿತ ಮಂಡಳಿಯ ಅನುಮೋದನೆಯನ್ನು ಪಡೆದು ಸದರಿ ಮೊತ್ತಗಳನ್ನು ವಾರ್ಷಿಕ ಲೆಕ್ಕಪತ್ರಗಳಲ್ಲಿ ವಿಲೇ ಮಾಡುವುದಾಗಿ ತಿಳಿಸಿರುತ್ತಾರೆ. ಈ ಸಂಬಂಧ ಸೂಕ್ತ ಕ್ರಮ ಕೈಗೊಳ್ಳುವವರೆಗೂ ನೀಡಿರುವ ಮುಂಗಡ ಮೊತ್ತ ರೂ. 85,000/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**61. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮಗಳನ್ವಯ ಟೆಂಡರ್ ಕರೆಯದೇ ಎಸ್.ಎ. ಮ್ಯಾನ್‌ಪವರ್ ಸರ್ವಿಸ್ ಲಿಮಿಟೆಡ್ ಸಂಸ್ಥೆ, ಬೆಂಗಳೂರು ಇವರಿಂದ ಹೊರಗುತ್ತಿಗೆ ಸೇವೆಯನ್ನು ಪಡೆದು ಪಾವತಿಸಿರುವುದು.**

2018–19ನೇ ಸಾಲಿನ ಸಂಸ್ಕೃತ ಸಂಶೋಧನಾ ಸಂಸತ್, ಮೇಲುಕೋಟೆ ವಿಭಾಗದಿಂದ ಎಸ್.ಎ. ಮ್ಯಾನ್ ಪವರ್ ಸರ್ವಿಸ್ ಲಿಮಿಟೆಡ್, ಬೆಂಗಳೂರು ಸಂಸ್ಥೆಯಿಂದ ರೂ. 13,78,096.00 ಮೊತ್ತಗಳಿಗೆ ಹೊರಗುತ್ತಿಗೆ ಸೇವೆ ಪಡೆದಿರುವುದು ಕಂಡುಬಂದಿರುತ್ತದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000 ನಿಯಮ 4(ಇ) ಮತ್ತು 5ರ ಅನ್ವಯ ಯಾವುದೇ ಒಂದು ಸಂಸ್ಥೆಯಿಂದ ಒಂದು ಲಕ್ಷಕ್ಕೆ ಮೇಲ್ಪಟ್ಟ ಸರಕು ಮತ್ತು ಸೇವೆಯನ್ನು ಪಡೆಯುವುದಾದರೆ ಟೆಂಡರ್ ಮೂಲಕವೇ ಕೈಗೊಳ್ಳಬೇಕಾಗಿರುತ್ತದೆ. ಹಾಗೂ ಸದರಿ ಸೇವೆಯನ್ನು ದರಪಟ್ಟಿ ಆಧರಿಸಿ ಪಡೆದಿರುವುದು ಕಂಡುಬಂದಿರುತ್ತದೆ. ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 09 ಪಿಸಿಎಲ್ 2004 (ಪಿ–III) ದಿನಾಂಕ: 06.08.2005 ಅನ್ವಯ ಹತ್ತು ಲಕ್ಷಗಳಿಗೆ ಮೀರಿದ ಸೇವೆಗಳಿಗೆ ಅನುಬಂಧ 4 ಕೆ/ಸಿ 4 ನಿಯಮಾವಳಿ ಪ್ರಕಾರ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಬೇಕಾಗಿರುತ್ತದೆ.

ಆರ್ಥಿಕ ಇಲಾಖೆಯ ಸುತ್ತೋಲೆ ACS/FD/2018, Bengaluru, D: 28–09–2018 ರನ್ವಯ, ಸರಕು ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ಮಾಡಿರುವ ಪಾವತಿಗಳಿಗೆ ಅಕ್ಟೋಬರ್ 2018ರ ಮಾಹೆಯಿಂದ ಜಿ.ಎಸ್.ಟಿ. ಮೊತ್ತವನ್ನು ಕಟಾಯಿಸಬೇಕಾಗಿದ್ದು, ಸದರಿ ಸಂಸ್ಥೆಯಿಂದ ಜಿಎಸ್‌ಟಿ ಮೊತ್ತವನ್ನು ಕಟಾಯಿಸದಿರುವುದು ಕಂಡುಬಂದಿರುತ್ತದೆ. 2018 ಅಕ್ಟೋಬರ್ ಮಾಹೆಯಿಂದ ಮಾರ್ಚ್ 2019 ವರೆಗೆ ರೂ. 8,04,760 ಮೊತ್ತಗಳನ್ನು ಪಾವತಿಸಿದ್ದು, ಬಿಲ್ಲಿನಲ್ಲಿ ರೂ. 16,095.00 ಗಳ ಜಿ.ಎಸ್.ಟಿ. ಮೊತ್ತವನ್ನು ಕಟಾಯಿಸಿರುವುದಿಲ್ಲ. ಈ ಸಂಬಂಧ ಲೆಕ್ಕಪರಿಶೋಧನೆಗೆ ಸೂಕ್ತ ವಿವರಣೆಯನ್ನು ಒದಗಿಸುವಂತೆ ವಿಚಾರಣಾ ಪತ್ರ ಸಂಖ್ಯೆ 05, ದಿನಾಂಕ: 06.11.2019 ನೀಡಲಾಗಿತ್ತು. ವಿಶ್ವವಿದ್ಯಾಲಯವು ದಿನಾಂಕ: 07.11.2019 ರಲ್ಲಿ ಒದಗಿಸಿರುವ ಅನುಪಾಲನಾ ವರದಿಯಂತೆ, ಇನ್ನು ಮುಂದೆ ಸೇವೆಯನ್ನು ಟೆಂಡರ್ ಮೂಲಕ ಪಡೆಯಲಾಗುವುದು ಮತ್ತು ಜಿ.ಎಸ್.ಟಿ. ಸಂಖ್ಯೆಯನ್ನು

ಪಡೆದು ಕಟಾಯಿಸುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ ಟೆಂಡರ್ ಕರೆಯದೇ ಸದರಿ ಸಂಸ್ಥೆಯಿಂದ ಹೊರಗುತ್ತಿಗೆ ಸೇವೆಯನ್ನು ಪಡೆದು ಪಾವತಿಸಿರುವ ಮೊತ್ತ ರೂ. 13,78,096/– ಆಕ್ಷೇಪಣೆಯಲ್ಲಿ ಹಾಗೂ ಕಟಾಯಿಸಬೇಕಾದ ಜಿ.ಎಸ್.ಟಿ. ಮೊತ್ತ ರೂ. 16,095/– ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ.

**62. ಸಂಸ್ಕೃತ ಸಂಶೋಧನಾ ಸಂಸತ್, ಮೇಲುಕೋಟೆ ಸಂಸ್ಥೆಯ ನಿರ್ದೇಶಕರಾದ ಡಾ॥ ವೀರನಾರಾಯಣ ಎನ್.ಕೆ. ಪಾಂಡುರಂಗಿ ಇವರಿಗೆ ನೀಡಿದ ದಿನಭತ್ಯೆ ರೂ. 17,824/– ಆಕ್ಷೇಪಣೆ.**

2018–19ನೇ ಸಾಲಿನ ಸಂಸ್ಕೃತ ಸಂಶೋಧನ ಸಂಸತ್, ಮೇಲುಕೋಟೆ ವಿಭಾಗದಲ್ಲಿ ನಿರ್ದೇಶಕರಾಗಿ ಅಧಿಕ ಪ್ರಭಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ (ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಡೀನ್) ಡಾ॥ ವೀರನಾರಾಯಣ ಎನ್.ಕೆ. ಪಾಂಡುರಂಗಿ ಇವರಿಗೆ ಒಟ್ಟು ರೂ. 17,824/– ದಿನಭತ್ಯೆಯನ್ನು ಪಾವತಿಸಲಾಗಿದೆ. ಆದರೆ ನಿಯಮಾವಳಿಯಂತೆ ಇವರು ಪ್ರಭಾರ ಭತ್ಯೆಯನ್ನು ಪಡೆಯಲು ಅರ್ಹರಿದ್ದು, ದಿನಭತ್ಯೆಯನ್ನು ಯಾವ ಆಧಾರದ ಮೇಲೆ ನೀಡಲಾಗಿದೆ ಮತ್ತು ಈ ಕುರಿತು ಪರಿನಿಯಮಗಳನ್ನು ರಚಿಸಿಕೊಂಡಿರುವ ಮಾಹಿತಿಯನ್ನು ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ 06, ದಿನಾಂಕ: 06.11.2019 ನೀಡಲಾಗಿತ್ತು. ದಿನಾಂಕ: 07.11.2019 ರಲ್ಲಿ ಸಂಸ್ಥೆಯು ಒದಗಿಸಿರುವ ಅನುಪಾಲನಾ ವರದಿಯಲ್ಲಿ, ಮುಂದಿನ ದಿನಗಳಲ್ಲಿ ದಿನಭತ್ಯೆಯ ಬದಲಾಗಿ ಪ್ರಭಾರ ಭತ್ಯೆಯನ್ನು ಪಾವತಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ. ಈ ಬಗ್ಗೆ ಕ್ರಮ ಕೈಗೊಳ್ಳುವವರೆಗೂ ರೂ. 17,824/– ಆಕ್ಷೇಪಣೆಯಲ್ಲಿಡಲಾಗಿದೆ.

**63. ಬೋಧಕರ ಸಂಶೋಧನಾ ಯೋಜನೆಗಳಿಗಾಗಿ ಸ್ವೀಕೃತವಾದ ಅನುದಾನವನ್ನು ನಿರ್ವಹಿಸಿರುವ ಖಾತೆಗೆ ಸಂಬಂಧಿಸಿದಂತೆ, ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಒದಗಿಸದಿರುವ ಬಗ್ಗೆ.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ವಿವಿಧ ಸಂಸ್ಥೆಗಳಿಂದ ಬೋಧಕರ ಸಂಶೋಧನಾ ಉದ್ದೇಶಗಳಿಗಾಗಿ ಅನುದಾನವು ಬಿಡುಗಡೆಯಾಗಿದ್ದು, ಇದನ್ನು ಖಾತೆ ಸಂಖ್ಯೆ: 64161666389 ರಲ್ಲಿ ನಿರ್ವಹಿಸಲಾಗಿದೆ. ಸದರಿ ಖಾತೆಯಲ್ಲಿ 2018–19ನೇ ಸಾಲಿನಲ್ಲಿ ನಡೆಸಿರುವ ವಹಿವಾಟುಗಳು ಕೆಳಕಂಡಂತಿವೆ:

| | |
|---|---|
| 01.04.2019 ಕ್ಕೆ ಪ್ರಾರಂಭಿಕ ಶಿಲ್ಕು | 4,52,196.00 |
| 2018–19ನೇ ಸಾಲಿನ ಸ್ವೀಕೃತಿಗಳು | 15,84,847.00 |
| **ಒಟ್ಟು** | **20,37,043.00** |
| 2018–19ನೇ ಸಾಲಿನ ಪಾವತಿಗಳು | 12,94,652.00 |
| 31.03.2019 ಕ್ಕೆ ಅಂತಿಮ ಶಿಲ್ಕು | 7,42,391.00 |

ಸದರಿ ಮೊತ್ತವು ಯಾವ ಸಂಸ್ಥೆಯಿಂದ ಸ್ವೀಕೃತವಾಗಿದೆ ಹಾಗೂ ಇದಕ್ಕೆ ಸಂಬಂಧಿಸಿದ ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವಂತೆ, ವಿಚಾರಣಾ ಪತ್ರ ಸಂಖ್ಯೆ: 19/2018–19 ದಿ. 16.09.2019 ರಲ್ಲಿ ಕೋರಲಾಗಿತ್ತು. ವಿಶ್ವವಿದ್ಯಾಲಯವು ದಿನಾಂಕ: 19.10.2019 ರಲ್ಲಿ ನೀಡಿರುವ ಉತ್ತರದ ವಿವರಗಳು ಕೆಳಕಂಡಂತಿರುತ್ತವೆ :

| ಕ್ರ. ಸಂ. | ಯೋಜನೆಯ ಹೆಸರು | ಅನುದಾನ ಬಿಡುಗಡೆ ಮಾಡಿದ ಸಂಸ್ಥೆ | ಬಿಡುಗಡೆಯಾದ ಮೊತ್ತ ರೂ. ಗಳಲ್ಲಿ |
|---|---|---|---|
| 1 | ಅಷ್ಟಾದಶಿ–ಬಾಲಾಷ್ಟಾದಶಿ | ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ, ನವದೆಹಲಿ | 8,00,000.00 |
| 2 | ಅಷ್ಟಾದಶಿ– ಸರ್ವಪ್ರತ್ಯಯಮಾಲಾ | ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ, ನವದೆಹಲಿ | 1,10,000.00 |
| 3 | ಅಷ್ಟಾದಶಿ– ಸಂಜೆ ಕಾಲೇಜು | ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ, ನವದೆಹಲಿ | 2,00,000.00 |
| 4 | ಪಾಲಿ ಯೋಜನೆ | ದ ಇಂಟರ್‌ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಪಾಲಿ, ಸಂಸ್ಕೃತ ಮತ್ತು ಕಂಪರೇಟಿವ್ ಫಿಲಾಸಫಿ, ಗುಲ್ಬರ್ಗಾ. | 2,00,000.00 |
| 5 | | ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ, ನವದೆಹಲಿ | 1,25,000.00 |
| 6 | ಚರ್ನಿಂಗ್ ಆಫ್ ಇಂಡಾಲಜಿ | | 1,00,000.00 |
| | | **ಒಟ್ಟು ರೂ:** | **15,35,000.00** |

ಮುಂದುವರೆದು, ಮೇಲ್ಕಂಡ ಸಂಸ್ಥೆಗಳಿಂದ ಬಿಡುಗಡೆಯಾದ ಅನುದಾನದ ಬಳಕೆಯ ಬಗ್ಗೆ ಲೆಕ್ಕಪರಿಶೋಧಕರಿಂದ ಪ್ರತ್ಯೇಕವಾಗಿ ಲೆಕ್ಕಪರಿಶೋಧನೆ ಮಾಡಿಸಿ, ಲೆಕ್ಕಪರಿಶೋಧನಾ ವರದಿಯೊಂದಿಗೆ ಹಣ ಬಳಕೆ ಪ್ರಮಾಣ ಪತ್ರವನ್ನು ಕಳುಹಿಸಿಕೊಡಲಾಗಿದೆ ಎಂದು ತಿಳಿಸಿರುತ್ತಾರೆ. ಆದರೆ ಇದಕ್ಕೆ ಸಂಬಂಧಿಸಿದ ಕಡತಗಳನ್ನಾಗಲೀ, ವೋಚರ್‌ಗಳನ್ನಾಗಲೀ ಅಥವಾ ಹಣ ಬಳಕೆ ಪ್ರಮಾಣ ಪತ್ರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ. ಆದ್ದರಿಂದ ಬೋಧಕರ ಸಂಶೋಧನಾ ಯೋಜನೆಗಳಿಗಾಗಿ ಭರಿಸಿರುವ ವೆಚ್ಚದ ಮೊತ್ತ ರೂ. 12,94,652.00 ಗಳನ್ನು ಆಕ್ಷೇಪಣೆಯಲ್ಲಿ ಇಡಲಾಗಿದೆ.

**64. ವಿಶ್ವವಿದ್ಯಾಲಯವು ಅತಿಥಿ ಉಪನ್ಯಾಸಕರ ಸೇವೆಯನ್ನು ಪಡೆದುಕೊಂಡಿರುವ ಬಗ್ಗೆ.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2018–19ನೇ ಸಾಲಿನಲ್ಲಿ ಇಂಗ್ಲಿಷ್ ಭಾಷಾ ಬೋಧನೆಗಾಗಿ ಒಬ್ಬ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಂಡಿದ್ದು, ಸದರಿಯವರು ದಿನಾಂಕ: 11.10.2018 ರಿಂದ ವಿಶ್ವವಿದ್ಯಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಇವರಿಗೆ ಮಾಸಿಕ ರೂ: 10,000.00 ಗಳಂತೆ ಗೌರವ ಧನವನ್ನು ಪಾವತಿಸಲಾಗುತ್ತಿದೆ. ಈ ನೇಮಕಾತಿಯನ್ನು ಮಂಜೂರಾದ ಹುದ್ದೆಗೆ ಎದುರಾಗಿ ನೇಮಕ ಮಾಡಿಕೊಂಡಿರುವ ಬಗ್ಗೆ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ. ನಿಯಮಾವಳಿಗಳ ಪ್ರಕಾರ ಯಾವುದೇ ತಾತ್ಕಾಲಿಕ ಹುದ್ದೆಯನ್ನು ಮಂಜೂರಾದ ಹುದ್ದೆಗಳಿಗೆ ಎದುರಾಗಿಯೇ ನೇಮಕ ಮಾಡಕೊಳ್ಳಬೇಕಾಗಿರುತ್ತದೆ. ಆದರೆ, ಲೆಕ್ಕಪರಿಶೋಧನೆಗೆ ಯಾವುದೇ ಮಾಹಿತಿ ಒದಗಿಸದಿರುವುದರಿಂದ ಸದರಿ ಅತಿಥಿ ಉಪನ್ಯಾಸಕರಿಗೆ 2018–19ನೇ ಸಾಲಿನಲ್ಲಿ ಪಾವತಿಸಿರುವ ಮೊತ್ತ ರೂ. 40,000/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

## 65. ಸಾಮಾನ್ಯ ಅಭಿಪ್ರಾಯ:

1. ವಿಶ್ವವಿದ್ಯಾಲಯವು ಕಡ್ಡಾಯವಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009ರ ನಿಯಮ (38) ಹಾಗೂ (54)ರ ಅನ್ವಯ, ಪರಿನಿಯಮಗಳನ್ನು ರಚಿಸಿಕೊಂಡು ಕಾರ್ಯನಿರ್ವಹಿಸುವುದು.
2. ವಾರ್ಷಿಕ ಲೆಕ್ಕಪತ್ರಗಳ ದೃಢೀಕರಣದಲ್ಲಿ ತಿಳಿಸಿರುವ ಅಂಶಗಳನ್ನು ಸರಿಪಡಿಸಿಕೊಂಡು ಮುಂದಿನ ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸುವುದು.
3. ಹಣಕಾಸಿನ ವಹಿವಾಟು ನಡೆಸುವ ಎಲ್ಲಾ ನಗದು ವಹಿಯನ್ನು ಕಡ್ಡಾಯವಾಗಿ ನಿರ್ವಹಿಸತಕ್ಕದ್ದು.
4. ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳನ್ನು ಇತ್ಯರ್ಥಗೊಳಿಸುವ ಸಲುವಾಗಿ ಸೂಕ್ತ ಅನುಪಾಲನಾ ವರದಿಯನ್ನು ಸಲ್ಲಿಸುವುದು ಹಾಗೂ ಈ ಬಗ್ಗೆ ಆಗಿರುವ ಪ್ರಗತಿಯನ್ನು ಲೆಕ್ಕಪರಿಶೋಧನಾ ತೀರುವಳಿ ವಹಿಯನ್ನು ನಿರ್ವಹಿಸಿ ದಾಖಲಿಸುವುದು.
5. ಆಯವ್ಯಯವನ್ನು ವೈಜ್ಞಾನಿಕವಾಗಿ ವಾಸ್ತವಿಕ ಖರ್ಚುಗಳ ಆಧಾರದ ಮೇಲೆ ತಯಾರಿಸುವುದು.
6. ವಿಶ್ವವಿದ್ಯಾಲಯವು ಸ್ವೀಕೃತಿಗಳಿಗೆ ಸಂಬಂಧಿಸಿದಂತೆ, ಡಿ.ಸಿ.ಬಿ ವಹಿಗಳನ್ನು ನಿರ್ವಹಿಸುವುದು ಮತ್ತು ಸ್ವೀಕೃತಿಗಳು ಬ್ಯಾಂಕ್ ಖಾತೆಗೆ ಜಮೆ ಆಗಿರುವುದನ್ನು ಖಚಿತಪಡಿಸಿಕೊಳ್ಳಲು ಕಡ್ಡಾಯವಾಗಿ ಲೆಕ್ಕ ಸಮನ್ವಯ (Reconciliation) ಕಾರ್ಯವನ್ನು ಕೈಗೊಳ್ಳುವುದು ಅಗತ್ಯವಿದೆ.
7. ಅನುದಾನಿತ ಮತ್ತು ಅನುದಾನರಹಿತ ಕಾಲೇಜು ಹಾಗೂ ಪಾಠಶಾಲೆಗಳ ವೇತನ ಬಿಲ್ಲುಗಳ ಪಾವತಿಗೆ ಸಂಬಂಧಿಸಿದಂತೆ, ಅವುಗಳ ಆಂತರಿಕ ಲೆಕ್ಕಪರಿಶೋಧನೆ ಕೈಗೊಳ್ಳುವುದು ಹಾಗೂ ಈ ಬಗ್ಗೆ ವಿಶ್ವವಿದ್ಯಾಲಯವು ಈ ಬಗ್ಗೆ ನಿಯಂತ್ರಣ ಹೊಂದುವುದು.
8. ಸರ್ಕಾರಕ್ಕೆ ಕಾಲಕಾಲಕ್ಕೆ ಬಿಡುಗಡೆಯಾಗುವ ಅನುದಾನವನ್ನು ಉದ್ದೇಶಿತ ಕಾರ್ಯಕ್ರಮಗಳಿಗಾಗಿ ಸಕಾಲದಲ್ಲಿ ವೆಚ್ಚ ಭರಿಸುವುದು.
9. ವಿಶ್ವವಿದ್ಯಾಲಯವು ಸಿಬ್ಬಂದಿ ಶಾಖೆಗೆ ಸಂಬಂಧಿಸಿದಂತೆ, ಕಡ್ಡಾಯವಾಗಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 1958ರ ನಿಯಮಗಳನ್ನು ಪಾಲಿಸುವುದು.
10. ವಿಶ್ವವಿದ್ಯಾಲಯವು ಸರಕು ಮತ್ತು ಸೇವೆಗಳ ಖರೀದಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000 ಗಳ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.
11. ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿಗಳನ್ನು ನೇಮಿಸುವಾಗ, ಮಂಜೂರಾದ ಹುದ್ದೆಗಳಿಗೆದುರಾಗಿ ನೇಮಿಸಿಕೊಂಡಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.
12. ಅಂಕಪಟ್ಟಿ, ಪ್ರಮಾಣ ಪತ್ರಗಳು, ಪ್ರಶ್ನೆಪತ್ರಿಕೆಗಳು ಹಾಗೂ ಉತ್ತರಪತ್ರಿಕೆಗಳು ವಿಶ್ವವಿದ್ಯಾಲಯದ ಪ್ರಮುಖ ದಾಖಲೆಗಳಾಗಿದ್ದು, ಇವುಗಳ ದಾಸ್ತಾನು ಹಾಗೂ ವಿತರಣಾ ವಹಿಯನ್ನು ಕಡ್ಡಾಯವಾಗಿ ನಿರ್ವಹಿಸತಕ್ಕದ್ದು.
13. ವಿಶ್ವವಿದ್ಯಾಲಯವು ಕಾಮಗಾರಿಗಳನ್ನು ಕೈಗೊಳ್ಳುವಾಗ, ಲೋಕೋಪಯೋಗಿ ಇಲಾಖಾ ಸಂಹಿತೆಗಳನ್ನು ಗಮನದಲ್ಲಿಟ್ಟುಕೊಂಡು ನಿರ್ವಹಿಸುವುದು.
14. ಸಂಕ್ಷಿಪ್ತ ಸಾದಿಲ್ವಾರು ವೆಚ್ಚದ ಬಿಲ್ಲಿನಲ್ಲಿ ಹಣವನ್ನು ಸೆಳೆದು, ವೆಚ್ಚ ಭರಿಸುವುದನ್ನು ಸಂಪೂರ್ಣವಾಗಿ ನಿಯಂತ್ರಿಸುವುದು.

15 ಲೆಕ್ಕಪರಿಶೋಧನೆ ದಾಖಲಾತಿಗಳನ್ನು ಸಲ್ಲಿಸದಿರುವುದು/ ಅಪೂರ್ಣ ದಾಖಲೆಗಳನ್ನು ಸಲ್ಲಿಸುವುದರಿಂದ ಲೆಕ್ಕಪರಿಶೋಧನೆಯಲ್ಲಿ ಉಂಟಾಗುವ ಅಡಚಣೆಯನ್ನು ಗಮನಿಸಿ, ಈ ಸಮಸ್ಯೆಯನ್ನು ಪರಿಹರಿಸುವಲ್ಲಿ ಪರಿಣಾಮಕಾರಿ ಆಡಳಿತಾತ್ಮಕ ಕ್ರಮ ಕೈಗೊಳ್ಳತಕ್ಕದ್ದು.

16. ಲೆಕ್ಕಪತ್ರಗಳ ನಿರ್ವಹಣೆಯಲ್ಲಿ & ಹಣಕಾಸು ವಹಿವಾಟುಗಳಲ್ಲಿ ಲೆಕ್ಕಪರಿಶೋಧನೆಯಲ್ಲಿ ಗಮನಿಸಿ ವರದಿ ಮಾಡಲಾದ ನ್ಯೂನತೆಗಳನ್ನು ಸರಿಪಡಿಸಿಕೊಂಡು, ಹಣಕಾಸು ನಿರ್ವಹಣೆಯಲ್ಲಿ ಶಿಸ್ತು ರೂಢಿಸಿ ಕೊಳ್ಳುವುದು ಹಾಗೂ ಈ ನ್ಯೂನತೆಗಳಿಗೆ ಕಾರಣರಾದ ಅಧಿಕಾರಿ/ಸಿಬ್ಬಂದಿಗಳ ಮೇಲೆ ಸೂಕ್ತ ಆಡಳಿತಾತ್ಮಕ ಶಿಸ್ತು ಕ್ರಮ ಕೈಗೊಳ್ಳುವುದು.

ಅಪರ ನಿರ್ದೇಶಕರು,
ಬೆಂಗಳೂರು ಪ್ರಾಂತೀಯ ಕಛೇರಿ
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು
ಲೆಕ್ಕಪತ್ರ ಇಲಾಖೆ,
ಬೆಂಗಳೂರು

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2020-21ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡು ಬಂದ ಆಕ್ಷೇಪಣೆಗಳು ಹಾಗೂ ವಸೂಲಾತಿ ಪ್ರಕರಣಗಳ ತಃಖ್ತೆ.**

| ಕ್ರ. ಸಂ | ಕಂಡಿಕೆ | ವಿವರಗಳು | ಆಕ್ಷೇಪಣೆ ಮೊತ್ತ (ರೂ.ಗಳಲ್ಲಿ) | ವಸೂಲಾತಿ (ರೂ.ಗಳಲ್ಲಿ) |
|---|---|---|---|---|
| 1. | 10 | ಪ್ರವೇಶ ಶುಲ್ಕವನ್ನು ವಸೂಲಿ ಮಾಡದಿರುವುದು. | – | 52,500.00 |
| 2. | 10.1 | ಪರೀಕ್ಷಾ ಶುಲ್ಕವನ್ನು ವಸೂಲಿ ಮಾಡದಿರುವ ಬಗ್ಗೆ | – | 1,09,930.00 |
| 3. | 10.2 | ಡಿಗ್ರಿ ಸರ್ಟಿಫಿಕೇಟ್‌ಗೆ ಸಂಬಂಧಿಸಿದಂತೆ ಕಡಿಮೆ ಶುಲ್ಕವನ್ನು ಪಡೆದಿರುವ ಮೊತ್ತ | | 13,150.00 |
| 4. | 14.2 | ವಿದ್ಯಾರ್ಥಿವೇತನ ಖಾತೆ (Scholarship A/c) | 8.68,900.00 | – |
| 5. | 14.3 | ಬೇಡಿಕೆ ಹುಂಡಿಗಳನ್ನು ನಗದೀಕರಿಸಿಕೊಳ್ಳದೇ ಉಳಿಸಿಕೊಂಡಿರುವುದು. | – | 12,960.00 |
| 6. | 21 | ಕಾವಲುಗಾರ ಹುದ್ದೆಯಿಂದ ಕಿರಿಯ ವಾಹನ ಚಾಲಕರ ಹುದ್ದೆಗೆ ಮೇಲ್ದರ್ಜೆಗೇರಿಸಿ ವೇತನವನ್ನು ಪಾವತಿಸಿರುವ ಬಗ್ಗೆ. | 3,83,112.00 | – |
| 7. | 21.1 | ಅತಿಥಿ ಗೃಹ ಮೇಲ್ವಿಚಾರಕರಿಗೆ ವೇತನ ಶ್ರೇಣಿಯನ್ನು ಪರಿಷ್ಕರಿಸಿ ವೇತನ ಪಾವತಿಸಿರುವ ಬಗ್ಗೆ. | 3,81,778.00 | – |
| 8. | 21.2 | ಪದೋನ್ನತಿ ಹುದ್ದೆಯಾದ ಹಿರಿಯ ಸಹಾಯಕರ ಹುದ್ದೆಗೆ ನೇರ ನೇಮಕಾತಿ ಮಾಡಿ ಪಾವತಿಸಿರುವ ವೇತನ | 6,65,343.00 | – |
| 9. | 23.2 | ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳ ಮುದ್ರಣಕ್ಕಾಗಿ Mehra computer System Ltd ಇವರಿಗೆ ಪಾವತಿಸಿರುವ ಮೊಬಲಗು | 27,09,140.00 | – |
| 10. | 23.3 | ಪದವಿ ವಿಭಾಗದ ಪ್ರಶ್ನೆಪತ್ರಿಕೆ, ಉತ್ತರ ಪತ್ರಿಕೆ, ಪ್ರವೇಶ ಪತ್ರ ಮುದ್ರಣಕ್ಕಾಗಿ Kiran Enterprises ರವರಿಗೆ ಪಾವತಿಸಿರುವ ಮೊತ್ತ | 1,81,720.00 | – |
| 11. | 23.4 | ವಾಹನ ಬಾಡಿಗೆ ಪಡೆಯಲು ಸರ್ಕಾರಿ ಆದೇಶಕ್ಕಿಂತ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತ | – | 60,000.00 |
| 12. | 23.5 | ಜಾಹೀರಾತು ವೆಚ್ಚಕ್ಕಾಗಿ Four wind Mass Communication Services ಇವರಿಗೆ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತ | – | 50,794.00 |
| | | **ಒಟ್ಟು ಮೊತ್ತ ರೂ.** | **51,89,993.00** | **2,99,334.00** |

ಅಪರ ನಿರ್ದೇಶಕರು
ಬೆಂಗಳೂರು ಪ್ರಾಂತೀಯ ಕಛೇರಿ
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು
ಲೆಕ್ಕಪತ್ರ ಇಲಾಖೆ, ಬೆಂಗಳೂರು

## ವಿಶ್ವವಿದ್ಯಾಲಯದ ಸ್ಥಾಪನೆಯ ಹಿನ್ನಲೆ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮ 2009ರ ಕಲಂ 41 ಹಾಗೂ ಕಲಂ 7(iv) ರನ್ವಯ 2010 ರಿಂದ ಅಸ್ತಿತ್ವಕ್ಕೆ ಬಂದಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ಶಾಸ್ತ್ರೀಯವಾಗಿ ಸಂಸ್ಕೃತ ಕಲಿಕೆ ಪದ್ಧತಿಯನ್ನು ಉಳಿಸಿಕೊಳ್ಳಲು, ಸಾಂಪ್ರದಾಯಿಕ ಹಾಗೂ ಆಧುನಿಕ ಕಲಿಕೆ ಪದ್ಧತಿ ನಡುವಿನ ಅಂತರ ಕಡಿಮೆಗೊಳಿಸುವುದು, ಸಂಸ್ಕೃತ ಭಾಷೆ, ಸಾಹಿತ್ಯ, ವೇದಿಕ ಅಧ್ಯಯನ ಮತ್ತು ಶಾಸ್ತ್ರಗಳ ಅಧ್ಯಯನಗಳ ಬಗ್ಗೆ ಸೂಕ್ತ ಮತ್ತು ವ್ಯವಸ್ಥಿತವಾದ ಶಿಕ್ಷಣ, ತರಬೇತಿ ಮತ್ತು ಸಂಶೋಧನೆಗಳನ್ನು ನಡೆಸುವ ಉದ್ದೇಶವನ್ನು ವಿಶ್ವವಿದ್ಯಾಲಯವು ಹೊಂದಿರುತ್ತದೆ.

**ಅ) 2020–21ನೇ ಸಾಲಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಯೋಜನೆಗೆ ಒಳಪಟ್ಟ ಕಾಲೇಜು ಹಾಗೂ ಪಾಠಶಾಲೆಗಳ ವಿವರ:**

- ವಿಶ್ವವಿದ್ಯಾಲಯದ ಘಟಕ ಸ್ನಾತಕ/ಸ್ನಾತಕೋತ್ತರ ಕಾಲೇಜುಗಳು – 02
- ಸರ್ಕಾರಿ ಸಂಸ್ಕೃತ ಕಾಲೇಜು, ಮೇಲುಕೋಟೆ – 01
- ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ಅನುದಾನಿತ ಸ್ನಾತಕ/ಸ್ನಾತಕೋತ್ತರ ಸಂಸ್ಕೃತ ಕಾಲೇಜುಗಳು–10
- ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ಅನುದಾನಿತ ಇಂಟಿಗ್ರೇಟೆಡ್ ಕನ್ನಡ ಪಂಡಿತ ಕಾಲೇಜು– 01
- ವಿಶ್ವವಿದ್ಯಾಲಯ ಮಾನ್ಯತೆ ಪಡೆದ ಅನುದಾನ ರಹಿತ ಸ್ನಾತಕ/ಸ್ನಾತಕೋತ್ತರ ಸಂಸ್ಕೃತ ಕಾಲೇಜುಗಳು–19
- ಒಟ್ಟು ವಿದ್ಯಾರ್ಥಿಗಳು – 2469
- **ಪಾಠಶಾಲೆಗಳು:** ಅನುದಾನಿತ ಸಂಸ್ಕೃತ ಪಾಠಶಾಲೆಗಳು – 281
  ಅನುದಾನ ರಹಿತ ಸಂಸ್ಕೃತ ಪಾಠಶಾಲೆಗಳು – 349
  ಒಟ್ಟು ವಿದ್ಯಾರ್ಥಿಗಳ ಸಂಖ್ಯೆ –46,680

**ವಲಯಗಳು:**

1. ಬೆಂಗಳೂರು ವಲಯ
2. ಮೈಸೂರು ವಲಯ
3. ಗುಲ್ಬರ್ಗಾ ವಲಯ
4. ಚಿತ್ರದುರ್ಗ ವಲಯ
5. ಧಾರವಾಡ ವಲಯ
6. ಬೆಳಗಾವಿ ವಲಯ

- **ವಿಶ್ವವಿದ್ಯಾಲಯದಲ್ಲಿ ನಡೆಯುವ ತರಗತಿಗಳು**

    1. ಪಿ.ಜಿ. ಡಿಪ್ಲೋಮಾ ಇನ್ ಹಸ್ತಪ್ರತಿ ಶಾಸ್ತ್ರ
    2. ಬಿ.ಎ. (ಸಂಸ್ಕೃತ) ತರಗತಿಗಳು
    3. ಎಂ.ಎ. ತರಗತಿಗಳು – ವಿಭಾಗವಾರು
    4. ಪಿ.ಜಿ ಡಿಪ್ಲೋಮ ಇನ್ ಯೋಗ
    5. ಸರ್ಟಿಫಿಕೇಟ್ ಕೋರ್ಸ್ ಇನ್ ಬುದ್ಧಿಸಂ
    6. ಪಿ.ಜಿ. ಡಿಪ್ಲೋಮಾ ಇನ್ ಶಾಬ್ದಬೋಧ
    7. ಪಿ.ಹೆಚ್.ಡಿ. (ವಿದ್ಯಾವಾರಿಧಿ)
    8. ಯೋಗ ಡಿಪ್ಲೋಮೋ ಮತ್ತು ಸರ್ಟಿಫಿಕೇಟ್ ಕೋರ್ಸ್

- **ಭಾಷಾ ನಿಕಾಯ** – ಭಾಷೆ ಮತ್ತು ಸಾಹಿತ್ಯ, ಹಸ್ತಪ್ರತಿ ಶಾಸ್ತ್ರ
- **ಶಾಸ್ತ್ರ ನಿಕಾಯ** – ವ್ಯಾಕರಣ ಶಾಸ್ತ್ರ, ಅಲಂಕಾರ ಶಾಸ್ತ್ರ, ನ್ಯಾಯ ಶಾಸ್ತ್ರ
- **ವೇದಾಂತ ನಿಕಾಯ** – ವೇದಾಂತ ವಿಭಾಗ
    1. ಪಿ.ಜಿ. ಡಿಪ್ಲೋಮಾ ಇನ್ ಶಾಬ್ದಬೋಧ
    2. ಪಿ.ಹೆಚ್.ಡಿ. (ವಿದ್ಯಾವಾರಿಧಿ)

- **ನಿಕಾಯಗಳ ವಿವರ:**
    1. ಭಾಷಾ ನಿಕಾಯ
    2. ಶಾಸ್ತ್ರ ನಿಕಾಯ
    3. ವೇದಾಂತ ನಿಕಾಯ

- **ವಿಶ್ವವಿದ್ಯಾಲಯ ನೀಡುವ ಪದವಿಗಳು:**

    1. ಬಿ.ಎ. (ಸಂಸ್ಕೃತ) ಪಠ್ಯಕ್ರಮದ ಅವಧಿ 03 ವರ್ಷಗಳು
    2. ಎಂ.ಎ. (ಸಂಸ್ಕೃತ) ಪಠ್ಯಕ್ರಮದ ಅವಧಿ 02 ವರ್ಷಗಳು (4 ಸೆಮಿಸ್ಟರ್)

    1) ಮಾನ್ಯತೆ ಪಡೆದ ಸಂಶೋಧನ ಕೇಂದ್ರಗಳು – 17

- **ಯೋಗ ಚಿಕಿತ್ಸೆ ಮತ್ತು ಸಮಾಲೋಚನಾ ವಿಭಾಗ**
    1. ಯೋಗ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ–2
    2. ಯೋಗ ಪಿಜಿ ಡಿಪ್ಲೋಮೋ– 5 ಕೇಂದ್ರಗಳು
    3. ಯೋಗ ಡಿಪ್ಲೋಮೋ ಮತ್ತು ಸರ್ಟಿಫಿಕೇಟ್ –10 ಕೇಂದ್ರಗಳು

**ವಿಶ್ವವಿದ್ಯಾಲಯದ ಸಾಂಸ್ಥಿಕ ರಚನೆ:–**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮ 2009ರ ಕಲಂ 41 ಹಾಗೂ ಕಲಂ 7(iv) ರನ್ವಯ 2010 ರಿಂದ ಅಸ್ತಿತ್ವಕ್ಕೆ ಬಂದಿರುತ್ತದೆ. ವಿಶ್ವವಿದ್ಯಾಲಯದ ಆಡಳಿತದ ಪ್ರಮುಖ ಸಾಂಸ್ಥಿಕ ರಚನೆಯು ಈ ಕೆಳಗಿನಂತಿರುತ್ತದೆ.




**"ಶ್ವವಿದ್ಯಾಲಯದ ಸಮಿತಿಗಳು**

| ಕ್ರ. ಸಂ | ಮಂಡಳಿ/ಸಮಿತಿಯ ಹೆಸರು | ಕಾಯ್ದೆಯಲ್ಲಿನ ಅವಕಾಶ | ಸಮಿತಿಯ ಅಧ್ಯಕ್ಷರು |
|---|---|---|---|
| 1 | ಸಿಂಡಿಕೇಟ್ | ಕಲಂ–20 | ಕುಲಪತಿಗಳು |
| 2 | ಅಕಾಡೆಮಿಕ್ ಕೌನ್ಸಿಲ್ | ಕಲಂ–24 | ಕುಲಪತಿಗಳು |
| 3 | ಹಣಕಾಸು ಸಮಿತಿ | ಕಲಂ–28 | ಕುಲಪತಿಗಳು |

**ವಿಶ್ವವಿದ್ಯಾಲಯದ ಅಧಿಕಾರಿಗಳ ಆಂತರಿಕ ಹೊಣೆಗಾರಿಕೆಗಳ ಸ್ಥೂಲ ಪರಿಚಯ**

| ಕ್ರ.ಸಂ | ಪ್ರಾಧಿಕಾರ | ಹೊಣೆಗಾರಿಕೆ |
|---|---|---|
| 1 | ಸಮ ಕುಲಾಧಿಪತಿಗಳು | ಕಲಂ–11ರ ಪ್ರಕಾರ ಉನ್ನತ ಶಿಕ್ಷಣ ಇಲಾಖೆಯ ಸಚಿವರು ಸಮ ಕುಲಾಧಿಪತಿಗಳು ಆಗಿ ಕಾರ್ಯನಿರ್ವಹಣೆ ಮಾಡಿರುತ್ತಾರೆ. |
| 2 | ಕುಲಪತಿಗಳು | ಕಲಂ–12ರ ಅನುಸಾರ ಕುಲಪತಿಗಳು ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ, ವಿದ್ಯಾವಿಷಯಕ ಪರಿಷತ್ತು ಹಾಗೂ ಹಣಕಾಸು ಸಮಿತಿಯ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ. ಈ ಸಮಿತಿಗಳ ಸಭೆಗಳನ್ನು ತಾನು ಅಥವಾ ತಾನು ಅಧಿಕಾರ ನೀಡಿರುವ ಅಧಿಕಾರಿಗಳ ಮೂಲಕ ಲಿಖಿತವಾಗಿ ಸಭಾ ಸೂಚನೆ ಹೊರಡಿಸುವ ಮೂಲಕ ಕರೆಯುವ ಮತ್ತು ಸಮಿತಿಗಳ ನಿರ್ಣಯಗಳನ್ನು ಜಾರಿಗೊಳಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಕಾಯ್ದೆ 2000, ಕಾಯ್ದೆಯಡಿಯ ಪರಿನಿಯಮಗಳು, ಅಧ್ಯಾದೇಶಗಳು, ಕಾನೂನುಗಳು, ಕಾಯ್ದೆಗಳ ಉಪಬಂಧಗಳು ಪಾಲನೆಯಾಗಿರುವುದನ್ನು ನೋಡಿಕೊಳ್ಳುವ ಅಗತ್ಯ ಅಧಿಕಾರವನ್ನು ಹೊಂದಿರುತ್ತಾರೆ. |
| 3 | ಕುಲಸಚಿವರು | ಕಲಂ–15ರ ಅನುಸಾರ ಕುಲಸಚಿವರು ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿದ್ದು ವ್ಯವಸ್ಥಾಪನಾ ಮಂಡಳಿ, ವಿದ್ಯಾವಿಷಯಕ ಪರಿಷತ್ತು ಹಾಗೂ ಹಣಕಾಸು ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. "ವಿಶ್ವವಿದ್ಯಾಲಯದ ದಾಖಲೆಗಳು, ಮೊಹರು ಹಾಗೂ ಕುಲಪತಿಗಳು ಮತ್ತು ಸಮಿತಿಗಳು ತಮಗೆ ವಹಿಸಿಕೊಟ್ಟ ಇತರೆ ಆಸ್ತಿಗಳ ಅಭಿರಕ್ಷಕರಾಗಿರುತ್ತಾರೆ ಮತ್ತು "ವಿಶ್ವವಿದ್ಯಾಲಯದ ಅಧಿಕೃತ ಪತ್ರ ವ್ಯವಹಾರಗಳನ್ನು ಸಂಬಂಧಿಸಿದ ಪ್ರಾಧಿಕಾರಗಳೊಡನೆ ಮಾಡುವುದು, ಸಿಂಡಿಕೇಟ್ ಹಾಗೂ ಶಿಕ್ಷಣ ಮಂಡಳಿಗಳ, ವ್ಯಾಸಂಗ ಶಾಖೆಗಳ ಹಾಗೂ ಅಧ್ಯಯನ ಮಂಡಳಿಗಳ ಸಭಾ ಸೂಚನಾ ಪತ್ರಗಳನ್ನು ಹೊರಡಿಸುವ ಮತ್ತು ನಿರ್ಣಯಗಳ |

| | | |
|---|---|---|
| | | ನಡವಳಿಗಳನ್ನು ನಿರ್ವಹಿಸುವ ಕಾರ್ಯಗಳನ್ನು ಮಾಡುತ್ತಾರೆ. ವಿಶ್ವವಿದ್ಯಾಲಯದ ಪ್ರಾಧಿಕಾರಗಳು ನಡೆಸುವ ಸಭೆಗಳ ಸಭಾ ಕಾರ್ಯಸೂಚಿಯನ್ನು ಹಾಗೂ ಸಭೆ ನಡೆದ ಒಂದು ತಿಂಗಳೊಳಗೆ ಸಭಾ ನಡವಳಿಗಳನ್ನು ಮಾನ್ಯ ಕುಲಪತಿಗಳು ಮತ್ತು ಸರ್ಕಾರಕ್ಕೆ ಕಳುಹಿಸಿಕೊಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. "ವಿಶ್ವವಿದ್ಯಾಲಯದ ಪರಿನಿಯಮಗಳು, ಅಧ್ಯಾದೇಶಗಳು ಮತ್ತು ನಿಬಂಧನೆಗಳಲ್ಲಿ ನಿಗದಿಪಡಿಸಿರುವ ಹಾಗೂ ಕಾಲ ಕಾಲಕ್ಕೆ ಕುಲಪತಿಗಳು ಪ್ರತ್ಯಾಯೋಜಿಸುವ ಅಧಿಕಾರಗಳನ್ನು ನಿರ್ವಹಿಸುತ್ತಾರೆ. |
| 4 | ವಿತ್ತಾಧಿಕಾರಿ (ಹಣಕಾಸು ಅಧಿಕಾರಿ) | ಕಲಂ–17ರ ಅನುಸಾರ ವಿತ್ತಾಧಿಕಾರಿಗಳು (ಹಣಕಾಸು ಅಧಿಕಾರಿ) ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿದ್ದು ಹಣಕಾಸು ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿರುತ್ತಾರೆ. ಇವರು ವಿಶ್ವವಿದ್ಯಾಲಯದ ನಿಧಿಯ ಸಾಮಾನ್ಯ ಮೇಲ್ವಿಚಾರಕರಾಗಿ ಕಾರ್ಯನಿರ್ವಹಿಸುತ್ತಾರೆ ಹಾಗೂ ಹಣಕಾಸಿನ ನೀತಿ ಮತ್ತು ನಿರ್ವಹಣೆ ಕುರಿತಂತೆ ವಿಶ್ವವಿದ್ಯಾಲಯಕ್ಕೆ ಸಲಹೆ ಮತ್ತು ಸೂಚನೆಗಳನ್ನು ನೀಡುವುದು. ವ್ಯವಸ್ಥಾಪನಾ ಮಂಡಳಿಯು ತೆಗೆದುಕೊಳ್ಳುವ ನಿರ್ಣಯಗಳ ಮೇಲೆ ನಿಯಂತ್ರಣ ಮಾಡುವುದು ಹಾಗೂ ವಿಶ್ವವಿದ್ಯಾಲಯದ ಆಸ್ತಿ ಮತ್ತು ಹೂಡಿಕೆಗಳ ನಿರ್ವಹಣೆ ಮಾಡುವುದು. ವಾರ್ಷಿಕ ಲೆಕ್ಕಪತ್ರಗಳು, ಅಂದಾಜುಗಳು ಮತ್ತು ಆಯವ್ಯಯಗಳನ್ನು ಸಿದ್ದಪಡಿಸುವುದು. ನಗದು ಹಣ ಮತ್ತು ಬ್ಯಾಂಕ್ ಖಾತೆಗಳ ಮೇಲ್ವಿಚಾರಣೆ ನಡೆಸುವುದು. ವಿಶ್ವವಿದ್ಯಾಲಯಕ್ಕೆ ಬರಬೇಕಾದ ಸ್ವೀಕೃತಿಗಳನ್ನು ಕಾಲಕಾಲಕ್ಕೆ ವಸೂಲಿಸುವ ಬಗ್ಗೆ ಮೇಲ್ವಿಚಾರಣೆ ಮಾಡುವುದು. "ವಿಶ್ವವಿದ್ಯಾಲಯದ ಪರಿನಿಯಮಗಳು, ಅಧ್ಯಾದೇಶಗಳು ಮತ್ತು ನಿಬಂಧನೆಗಳಲ್ಲಿ ನಿಗದಿಪಡಿಸಿರುವ ಹಾಗೂ ಕಾಲ ಕಾಲಕ್ಕೆ ಕುಲಪತಿಗಳು ಹಾಗೂ ಕುಲಸಚಿವರು ಪ್ರತ್ಯಾಯೋಜಿಸುವ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. |

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಮಂಜೂರಾದ/ಭರ್ತಿಯಾದ ಮತ್ತು ಖಾಲಿ ಇರುವ ಹುದ್ದೆಗಳ ವಿವರ:**

ವಿಶ್ವವಿದ್ಯಾಲಯವು ನೀಡಿರುವ ದೃಢೀಕೃತ ಮಾಹಿತಿಯಂತೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಮಂಜೂರಾದ/ ಭರ್ತಿಯಾದ ಹಾಗೂ ಖಾಲಿಯಿರುವ ಹುದ್ದೆಗಳ ವಿವರಗಳು ಕೆಳಕಂಡಂತಿರುತ್ತವೆ.

| ಕ್ರ.ಸಂ | ವಿವರಗಳು | ಮಂಜೂರಾದ ಹುದ್ದೆಗಳು | | | ಭರ್ತಿಯಾಗಿರುವ ಹುದ್ದೆಗಳು | | | ಖಾಲಿ ಇರುವ ಹುದ್ದೆಗಳು | | |
|---|---|---|---|---|---|---|---|---|---|---|
| | | ಯುಜಿಸಿ | ರಾಜ್ಯ ವೇತನ | ಒಟ್ಟು | ಯುಜಿಸಿ | ರಾಜ್ಯ ವೇತನ | ಒಟ್ಟು | ಯುಜಿಸಿ | ರಾಜ್ಯ ವೇತನ | ಒಟ್ಟು |
| 1 | ಬೋಧಕ | 45 | 26 | 71 | 22 | 16 | 38 | 23 | 10 | 33 |
| 2 | ಬೋಧಕೇತರ | 11 | 51 | 62 | 04 | 35 | 39 | 7 | 16 | 23 |
| | **ಒಟ್ಟು** | **56** | **77** | **133** | **26** | **51** | **77** | **30** | **26** | **56** |

ವಿಶ್ವವಿದ್ಯಾಲಯವು ಮಂಜೂರಾದ ಹುದ್ದೆಗಳು, ಭರ್ತಿಯಾಗಿರುವ ಹುದ್ದೆಗಳು ಹಾಗೂ ಖಾಲಿ ಇರುವ ಹುದ್ದೆಗಳು ಹಾಗೂ ಸದರಿ ಹುದ್ದೆಗಳಿಗೆ ನಿಗದಿಪಡಿಸಿರುವ ವೇತನ ಶ್ರೇಣಿಯನ್ನು ಒಳಗೊಂಡ, ಶ್ರೇಣಿ ವಹಿಯನ್ನು ನಿರ್ವಹಿಸಿರುವುದಿಲ್ಲ. ಆದ್ದರಿಂದ, ಇನ್ನು ಮುಂದೆ ಸದರಿ ವಹಿಯನ್ನು ನಿರ್ವಹಿಸಿ, ಮುಂದಿನ ಲೆಕ್ಕಪರಿಶೋಧನೆಗೆ ಒದಗಿಸುವಂತೆ ತಿಳಿಸಿದೆ.

## 2020–21ನೇ ಸಾಲಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಲೆಕ್ಕಪರಿಶೋಧನಾ ವರದಿ:–

| ಪದನಾಮ | ಹೆಸರು ಮತ್ತು ಸೇವಾ ಅವಧಿ |
|---|---|
| **ಲೆಕ್ಕಪರಿಶೋಧನಾ ಅವಧಿ** | ದಿನಾಂಕ: 01.04.2020 ರಿಂದ 31.03.2021 |
| **ವಾರ್ಷಿಕ ಲೆಕ್ಕಪತ್ರ ಪರಿಶೋಧನೆ ಪ್ರಾರಂಭ ದಿನಾಂಕ ಮತ್ತು ಮುಕ್ತಾಯದ ದಿನಾಂಕ** | ದಿನಾಂಕ: 17.05.2022 ರಿಂದ 30.06.2022 |
| **ಲೆಕ್ಕಪರಿಶೋಧನೆಗೆ ಬಳಸಿದ ಮಾನವ ದಿನಗಳು** | 136 ಮಾನವ ದಿನಗಳು (ರಜಾ ದಿನಗಳನ್ನು ಹೊರತುಪಡಿಸಿ) |
| **ಲೆಕ್ಕಪರಿಶೋಧನಾ ತಂಡ** | ಶ್ರೀಮತಿ ಧನಲಕ್ಷ್ಮಿ, ಲೆಕ್ಕಪರಿಶೋಧನಾಧಿಕಾರಿ<br>ಶ್ರೀ ವೆಂಕಟೇಶ್.ಕೆ, ಲೆಕ್ಕಾಧೀಕ್ಷಕರು<br>ಶ್ರೀಮತಿ ಸವಿತ ಕೆ.ಜೆ., ಲೆಕ್ಕಪರಿಶೋಧಕರು<br>ಶ್ರೀಮತಿ ದುರ್ಗಾದೇವಿ ಡಿ. ಲೆಕ್ಕಪರಿಶೋಧಕರು |
| **ಲೆಕ್ಕಪರಿಶೋಧನಾ ವರದಿಯ ಪುನರ್ ಪರಿಶೀಲನಾಧಿಕಾರಿಗಳು** | **ಶ್ರೀ ಕುಪ್ಪೂರಲಿಂಗಯ್ಯ ಬಿ.,**<br>ಅಪರ ನಿರ್ದೇಶಕರು<br>ಬೆಂಗಳೂರು ಪ್ರಾಂತೀಯ ಕಛೇರಿ<br>ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು<br>ಲೆಕ್ಕಪತ್ರ ಇಲಾಖೆ, ಬೆಂಗಳೂರು |
| **ಲೆಕ್ಕ ಪರಿಶೋಧನಾ ವರದಿಯ ಪುನರ್ ಪರಿಶೀಲನಾ ದಿನಾಂಕ** | 16.07.2022 |

1. **ಲೆಕ್ಕಪರಿಶೋಧನಾ ವ್ಯಾಪ್ತಿ:**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಕಾಯ್ದೆ 2009 ರ ಕಲಂ 57(3) ರನ್ವಯ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲು ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನಾ ಇಲಾಖೆ, ಬೆಂಗಳೂರು ಇವರಿಗೆ ಅಧಿಕಾರ ವಹಿಸಲಾಗಿರುತ್ತದೆ. ಅದರಂತೆ 2020–21ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಂಡು ವರದಿಯನ್ನು ಸಿದ್ಧಪಡಿಸಿ ಸಲ್ಲಿಸಲಾಗಿರುತ್ತದೆ.

ಲೆಕ್ಕಪರಿಶೋಧನಾ ಕಾರ್ಯದಲ್ಲಿ ಮೈಸೂರು ಸ್ಥಳೀಯ ನಿಧಿ ಲೆಕ್ಕಪರಿಶೋಧನಾ ಕೈಪಿಡಿ (ಕೈಪಿಡಿ) ಅಧ್ಯಾಯ–1 ನಿಯಮ 4 ರಿಂದ 72 ಮತ್ತು ಅಧ್ಯಾಯ–4, ನಿಯಮ 217 ರಿಂದ 242 ರಲ್ಲಿ ನೀಡಿರುವ ನಿರ್ದೇಶನಗಳನ್ನು ಪಾಲಿಸಲಾಗಿದೆ. ಕೈಪಿಡಿಯ ನಿಯಮ 217ರಲ್ಲಿ ನೀಡಿರುವ ನಿರ್ದೇಶನದನ್ವಯ, ಕಾಯಿದೆಯ ಕಲಂ 4 ರಲ್ಲಿ ವಿಶ್ವವಿದ್ಯಾಲಯಕ್ಕೆ ಪ್ರದತ್ತವಾದ ಅಧಿಕಾರಗಳು, ಕಲಂ 29 ಮತ್ತು ಕಲಂ 31 ರಲ್ಲಿ ಅನುಕ್ರಮವಾಗಿ ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿಗೆ ಪ್ರದತ್ತವಾದ ಅಧಿಕಾರಗಳು, ಕಲಂ 32 ರಲ್ಲಿ ಹಣಕಾಸು ಸಮಿತಿಗೆ ವಹಿಸಲಾದ ಪ್ರಕಾರ್ಯಗಳು ಮತ್ತು ಕಲಂ 15 ರಲ್ಲಿ ಕುಲಪತಿಗಳಿಗೆ ಪ್ರದತ್ತವಾದ ಅಧಿಕಾರಗಳನ್ನು ಗಮನದಲ್ಲಿಟ್ಟುಕೊಂಡು ಲೆಕ್ಕಪರಿಶೋಧನೆ ಮಾಡಲಾಗಿದೆ.

**2. ಲೆಕ್ಕಪರಿಶೋಧನಾ ವರದಿಯಲ್ಲಿ ಉಲ್ಲೇಖಿಸಿರುವ ನಿಯಮಾವಳಿಗಳು:**

ಅ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ – 2009, ಪರಿನಿಯಮಗಳು, ಆಧ್ಯಾದೇಶಗಳು, ವಿನಿಯಮಗಳು ಮತ್ತು ನಿಯಮಗಳು.

ಆ. ಕರ್ನಾಟಕ ನಾಗರಿಕ ಸೇವಾ ನಿಯಮಗಳು.

ಇ. ಕರ್ನಾಟಕ ಆರ್ಥಿಕ ಸಂಹಿತೆ–1958.

ಈ. ಸಾದಿಲ್ವಾರು ವೆಚ್ಚ ಕೈಪಿಡಿ–1958.

ಉ. ಆಯವ್ಯಯ ಕೈಪಿಡಿ.

ಊ. ಕರ್ನಾಟಕ ಲೋಕೋಪಯೋಗಿ ಇಲಾಖೆ ಸಂಹಿತೆ ಸಂಪುಟ 1 ಮತ್ತು 2.

ಋ. ಕರ್ನಾಟಕ ಲೋಕೋಪಯೋಗಿ ಲೆಕ್ಕಪತ್ರ ಸಂಹಿತೆ 1 ಮತ್ತು 2.

ಎ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮ 2000.

**3. ವಿಶ್ವವಿದ್ಯಾಲಯವು ಪರಿನಿಯಮಗಳನ್ನು ರಚಿಸಿಕೊಳ್ಳದೆ ಕಾರ್ಯನಿರ್ವಹಿಸುತ್ತಿರುವುದು.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2020–21ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ರಚಿಸಿಕೊಂಡಿರುವ ಪರಿನಿಯಮಗಳ ಕುರಿತು ಪರಿಶೀಲಿಸಿದಾಗ, ವಿಶ್ವವಿದ್ಯಾಲಯವು 2008–09 ರಿಂದ ಕಾರ್ಯಾರಂಭವಾಗಿದ್ದು, 11 ವರ್ಷಗಳು ಪೂರ್ಣಗೊಂಡಿದ್ದರೂ ಸಹ, ಇದುವರೆಗೂ ವಿಶ್ವವಿದ್ಯಾಲಯವು ಯಾವುದೇ ಪರಿನಿಯಮಗಳನ್ನು ರಚಿಸಿಕೊಳ್ಳದೇ ಕಾರ್ಯನಿರ್ವಹಿಸುತ್ತಿದೆ. ವಿಶ್ವವಿದ್ಯಾಲಯ ಪರಿನಿಯಮಗಳಿಗೆ ಸಂಬಂಧಿಸಿದಂತೆ, ಹಿಂದಿನ ಲೆಕ್ಕ ತನಿಖೆಗಳಲ್ಲೂ ಆಕ್ಷೇಪಿಸಿದ್ದು, ಈ ವಿಷಯದ ಕುರಿತು ವಿಶ್ವವಿದ್ಯಾಲಯವು ಅಗತ್ಯ ಕ್ರಮಗಳನ್ನು ಕೈಗೊಳ್ಳದಿರುವುದು ಕಂಡುಬಂದಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮ 2009ರ ಅಧ್ಯಾಯ–5ರ ನಿಯಮ 38 ರನ್ವಯ ವಿಶ್ವವಿದ್ಯಾಲಯಗಳು ಪರಿನಿಯಮಗಳನ್ನು ರಚಿಸಿಕೊಂಡು ಕಾರ್ಯ ನಿರ್ವಹಿಸಬೇಕಾಗಿರುತ್ತದೆ. ಅಲ್ಲದೇ ಸದರಿ ಅಧಿನಿಯಮದ ಕಲಂ 54 ರ ಅನ್ವಯ ವಿಶ್ವವಿದ್ಯಾಲಯವು ತನ್ನ ನಿಧಿಯ ಬಳಕೆಗೆ ಪರಿನಿಯಮಗಳನ್ನು ರಚಿಸತಕ್ಕದಾಗಿದ್ದು, ಅಂತಹ ಯಾವುದೇ ಪರಿನಿಯಮಗಳನ್ನು ರಚಿಸದೇ 2020–21 ನೇ ಸಾಲಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009ರ ನಿಯಮ 38 ಹಾಗೂ 54 ಅನ್ನು ಉಲ್ಲಂಘಿಸಿ, ಕಾರ್ಯನಿರ್ವಹಿಸಿರುವುದು ಮತ್ತು ತನ್ನ ನಿಧಿಯನ್ನು ಬಳಸಿಕೊಂಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಇದನ್ನು ಲೆಕ್ಕಪರಿಶೋಧನೆಯಲ್ಲಿ ಗಂಭೀರವಾಗಿ ಪರಿಗಣಿಸಿದ್ದು, ಕೂಡಲೇ ಈ ಬಗ್ಗೆ ಪರಿನಿಯಮಗಳನ್ನು ರಚಿಸಿಕೊಂಡು ಕಾರ್ಯ ನಿರ್ವಹಿಸಲು ಸೂಚಿಸಿದೆ.

**3.1 ವಾರ್ಷಿಕ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನಾ ವರದಿಗಳಿಗೆ ತೆಗೆದುಕೊಳ್ಳಬೇಕಾದ ಕ್ರಮಗಳು.**

ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಗಳ ಅಧಿನಿಯಮ 2009 ರ ನಿಯಮ–57(3) ರನ್ವಯ ವರ್ಷಕ್ಕೊಮ್ಮೆ ಏಪ್ರಿಲ್ ತಿಂಗಳಲ್ಲಿ ವಿಶ್ವವಿದ್ಯಾಲಯದ ಲೆಕ್ಕಪತ್ರಗಳನ್ನು ರಾಜ್ಯ ಲೆಕ್ಕಪತ್ರ ನಿಯಂತ್ರಕರು ಪರಿಶೋಧಿಸತಕ್ಕದ್ದು. ನಿಯಮ–57(4) ರನ್ವಯ ಹಾಗೆ ಪರಿಶೋಧಿಸಿದ ಲೆಕ್ಕಪತ್ರಗಳನ್ನು ವಿದ್ಯಾವಿಷಯಕ ಪರಿಷತ್ತಿನ ಮುಂದೆ ಮತ್ತು ಸಿಂಡಿಕೇಟಿನ ಮುಂದೆ ಮಂಡಿಸತಕ್ಕದ್ದು ಹಾಗೂ ತದನಂತರ ಪ್ರತಿ ವರ್ಷ ಸೆಪ್ಟೆಂಬರ್ ಕೊನೆಯೊಳಗೆ ತನ್ನ ಆಕ್ಷೇಪಣೆಗಳೊಡನೆ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು, ರಾಜ್ಯ ಸರ್ಕಾರವು ಅದನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು. 2008–09 ರಿಂದ 2019–20 ನೇ ಸಾಲಿನವರೆಗಿನ ಲೆಕ್ಕ ಪರಿಶೋಧನೆಯಲ್ಲಿ ಕಂಡುಬಂದಂತಹ ಆಕ್ಷೇಪಣೆ ಕಂಡಿಕೆಗಳಿಗೆ ಸೂಕ್ತವಾದ ಕ್ರಮ ವಹಿಸುವುದು ಮತ್ತು ವಸೂಲಾತಿ ಕಂಡಿಕೆಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟವರಿಂದ ಕೂಡಲೇ ವಸೂಲಾತಿ ಮಾಡುವುದು.

4. **2020–21ನೇ ಸಾಲಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸಿದ ಅಧಿಕಾರಿಗಳ ವಿವರಗಳು:**

| ಪದನಾಮ | ಹೆಸರು ಮತ್ತು ಸೇವಾ ಅವಧಿ |
|---|---|
| **ಕುಲಪತಿಗಳು** | ಪ್ರೊ॥ ಗಿರೀಶ್‌ಚಂದ್ರ (ಪ್ರ) ಿ ದಿನಾಂಕ : 01.04.2020 ರಿಂದ 29.09.2020<br>ಪ್ರೊ॥ ಕಾ.ಇ ದೇವನಾಥನ್, ದಿನಾಂಕ 30.09.2020 ರಿಂದ 31.03.2021 |
| **ಕುಲಸಚಿವರು** | ಪ್ರೊ॥ ವೀರನಾರಾಯಣ ಪಾಂಡುರಂಗಿ (ಪ್ರ), ದಿನಾಂಕ:01.04.2020 ರಿಂದ 30.11.2020<br>ಪ್ರೊ॥ ಕೊಟ್ರೇಶ್ ಎಂ, ದಿನಾಂಕ:01.12.2020 ರಿಂದ 31.03.2021 |
| **ಪರೀಕ್ಷಾ ನಿಯಂತ್ರಕರು** | ಡಾ. ಸಿ ಪಾಲಯ್ಯ, ದಿನಾಂಕ:01.04.2020 ರಿಂದ 31.03.2021 |
| **ವಿತ್ತಾಧಿಕಾರಿಗಳು** | ಶ್ರೀ ಪಂಚಲಿಂಗಸ್ವಾಮಿ ಎಸ್. ದಿನಾಂಕ:01.04.2020 ರಿಂದ 31.03.2021 |
| **ನಿರ್ದೇಶಕರು** | ವಿದ್ವಾನ್ ಪ್ರಕಾಶ್ ಆರ್. ಪಾಗೋಜಿ (ಪ್ರ), ದಿನಾಂಕ:01.04.2020 ರಿಂದ 31.03.2021 |

5. **ವಿಶ್ವವಿದ್ಯಾಲಯವು ಅಳವಡಿಸಿಕೊಂಡಿರುವ ಲೆಕ್ಕಪದ್ಧತಿ:**

2020–21ನೇ ಸಾಲಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಲಾಗಿ, ನಗದು ಆಧಾರಿತ (Cash Basis system) ಪದ್ಧತಿಯನ್ನು Tally ತಂತ್ರಾಂಶದಲ್ಲಿ ಅಳವಡಿಸಿಕೊಂಡಿರುತ್ತಾರೆ. ಭಾರತೀಯ ಲೆಕ್ಕಪತ್ರ ಮಾನದಂಡಗಳ (Indian Accounting standards) ಅನ್ವಯ ದ್ವಿ–ನಮೂದು ಪದ್ಧತಿಯಲ್ಲಿ ಕಡ್ಡಾಯವಾಗಿ ಪಾಲಿಸಬೇಕಾದ ಸಂಚಯ ಪದ್ಧತಿಯನ್ನು ಸಂಪೂರ್ಣವಾಗಿ ಪಾಲಿಸಬೇಕಿದ್ದು, ವಾರ್ಷಿಕ ಲೆಕ್ಕಪತ್ರದಲ್ಲಿ ಸತ್ಯ ಮತ್ತು ನ್ಯಾಯೋಚಿತ (True & Fair) ಸಂಪೂರ್ಣ ಮತ್ತು ನೈಜವಾದ (Complete & Correctness) ವ್ಯವಹಾರಗಳನ್ನು ಮಂಡನೆ ಮಾಡಿದಂತಾಗಿರುವುದಿಲ್ಲ.

6. **ಲೆಕ್ಕಪತ್ರಗಳ ಸಲ್ಲಿಕೆ:–**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2020–21ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು 41ನೇ ಹಣಕಾಸು ಸಮಿತಿ ಪರಿಶೀಲಿಸಿ ದಿನಾಂಕ: 14.02.2022 ರಂದು ಅನುಮೋದಿಸಿ ಶಿಫಾರಸ್ಸು ಮಾಡಿರುವುದನ್ನು ದಿನಾಂಕ: 16.02.2022ರ 32ನೇ ಪ್ರಶಿಕ್ಷಣ ಸಮಿತಿ ಸಭೆ ಹಾಗೂ ದಿನಾಂಕ: 18.02.2022 ರ ಸಿಂಡಿಕೇಟ್‌ನ 61ನೇ ಸಭೆಯು ಅಂಗೀಕರಿಸಿರುತ್ತದೆ. ಸದರಿ ಅನುಮೋದಿತ ವಾರ್ಷಿಕ ಲೆಕ್ಕಪತ್ರಗಳನ್ನು ಸಂಸ್ಕೃತ ವಿಶ್ವವಿದ್ಯಾಲಯದ ವಿತ್ತಾಧಿಕಾರಿಗಳ ಪತ್ರ ಸಂಖ್ಯೆ: ಕಸಂವಿ/ಲೆಕ್ಕ ಪರಿಶೋಧನೆ/09/2020–21, ದಿನಾಂಕ: 18.03.2022 ರಂದು ಅಪರ ನಿರ್ದೇಶಕರು, ಬೆಂಗಳೂರು ಪ್ರಾಂತೀಯ ಕಛೇರಿ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು ಕಛೇರಿಗೆ ಸಲ್ಲಿಸಲಾಗಿರುತ್ತದೆ.

7. **ಲೆಕ್ಕಪರಿಶೋಧನಾ ಟಿಪ್ಪಣಿಗಳ ವಿಲೇವಾರಿ:–**

ಸಂಸ್ಕೃತ ವಿಶ್ವವಿದ್ಯಾಲಯದಿಂದ 2020–21ನೇ ಸಾಲಿನಲ್ಲಿ ಯಾವುದೇ ಮಾಸಿಕ ಲೆಕ್ಕಪತ್ರಗಳು, ಸ್ವೀಕೃತಿಯಾದ ನಗದು ಖಾತೆಯ ರಸೀದಿಗಳು, ಮತ್ತು ಇತರೆ ಖಾತೆಗಳ ಆದಾಯಗಳ ವಿವರಗಳನ್ನು ಕಳುಹಿಸದೇ ಇರುವುದರಿಂದ ಲೆಕ್ಕಪರಿಶೋಧನಾ ಟಿಪ್ಪಣಿಗಳನ್ನು ನೀಡಿರುವುದಿಲ್ಲ ಹಾಗೂ ಟಿಪ್ಪಣಿಗಳ ವಿಲೇವಾರಿ ಮಾಡಿರುವುದಿಲ್ಲ.

**8. ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೂಚಿಸಿದ ಗುರುತರ ಆಕ್ಷೇಪಣೆಗಳು ಮತ್ತು ವಸೂಲಾತಿ ಪ್ರಕರಣಗಳ ಇತ್ಯರ್ಥಕ್ಕೆ ವಿಶ್ವವಿದ್ಯಾಲಯ ತೆಗೆದುಕೊಂಡಿರುವ ಕ್ರಮಗಳು.**

2008–09 ರಿಂದ 2019–20ನೇ ಸಾಲಿನವರೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳು ವಿಶ್ವವಿದ್ಯಾಲಯದ ಕಾರ್ಯ ವ್ಯಾಪ್ತಿಯಲ್ಲಿ ಬರುವ ವಿವಿಧ ವಿಭಾಗಗಳಲ್ಲಿ ನಡೆಸಲಾದ ವಹಿವಾಟುಗಳ ಸ್ಥಳೀಯ ಲೆಕ್ಕಪರಿಶೋಧನೆಯನ್ನು ಕೈಗೊಂಡು ವರದಿಗಳನ್ನು ಜಾರಿಮಾಡಲಾಗಿರುತ್ತದೆ. ಲೆಕ್ಕಪರಿಶೋಧನಾ ವರದಿಗಳಲ್ಲಿ ತಿಳಿಸಿರುವ ಆಕ್ಷೇಪಣೆಗಳು ಮತ್ತು ವಸೂಲಾತಿ ಪ್ರಕರಣಗಳ ಇತ್ಯರ್ಥದ ಬಗ್ಗೆ, ವಿಶ್ವವಿದ್ಯಾಲಯದ ಅಧಿಕಾರಿಗಳು ಆಸಕ್ತಿ ತೋರಿಸದ ಕಾರಣ 2008–09 ರಿಂದ 2019–20ನೇ ಸಾಲಿನವರೆಗಿನ ಆಕ್ಷೇಪಾರ್ಹ ವಹಿವಾಟುಗಳು ಮತ್ತು ವಸೂಲಾತಿ ಪ್ರಕರಣಗಳ ಬಾಬ್ತು ಅನುಕ್ರಮವಾಗಿ ಏರಿಕೆಯಾಗಿರುತ್ತದೆ. ಅನುಪಾಲನಾ ವರದಿಗಳನ್ನು ಸಕಾಲದಲ್ಲಿ ಸಲ್ಲಿಸದ ಕಾರಣ ವರದಿಗಳಲ್ಲಿ ಸೂಚಿಸಿರುವ ಆಕ್ಷೇಪಣೆಗಳು, ವಸೂಲಾತಿ ಪ್ರಕರಣಗಳು ಅದೇ ರೀತಿ ಪ್ರತಿ ವರ್ಷಗಳಲ್ಲಿ ಪುನರಾವರ್ತನೆಗೊಳ್ಳುತ್ತಿವೆ. ವಸೂಲಾತಿಗೆ ಸೂಚಿಸಿರುವ ಹೆಚ್ಚುವರಿ ವೇತನ ಭತ್ಯೆಗಳು, ತೆರಿಗೆಗಳು, ವೇತನ ನಿಗಧಿಯಲ್ಲಿ ಲೋಪಗಳು, ಓವರ್ ಟೈಂ ಕೆಲಸಕ್ಕೆ ನಿಯಮಬಾಹಿರವಾಗಿ ಪಾವತಿಸಿರುವ ಹೆಚ್ಚುವರಿ ಭತ್ಯೆಗಳು, ಇತ್ಯಾದಿಗಳು ಸಕಾಲದಲ್ಲಿ ವಸೂಲಾತಿ ಆಗದಿದ್ದರೆ ಅಂತಹ ಬಾಬ್ತುಗಳು ವಸೂಲಾಗದ ಹಂತ ತಲುಪಿ ವಿಶ್ವವಿದ್ಯಾಲಯಕ್ಕೆ ನಷ್ಟ ಉಂಟಾಗುತ್ತದೆ. ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಳಂಬ ಉಂಟಾದಲ್ಲಿ ವಿಶ್ವವಿದ್ಯಾಲಯದ ಹಣಕಾಸಿನ ಮೇಲಿನ ನಿಯಂತ್ರಣ ಮತ್ತಷ್ಟು ದುರ್ಬಲವಾಗಿ ಹಣಕಾಸಿನ ದುರುಪಯೋಗ ಮತ್ತು ನಷ್ಟದ ಪ್ರಕರಣಗಳು ಉಂಟಾಗಲು ಅವಕಾಶ ನೀಡಿದಂತಾಗುವುದು. ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣೆ ಮತ್ತು ವಸೂಲಾತಿ ಮೊಬಲಗಿನ ತೀರುವಳಿಗೆ ಸರ್ಕಾರಿ ಆದೇಶ ಸಂಖ್ಯೆ: ಇಡಿ 20 ಯುಎನ್ಇ 21, ಬೆಂಗಳೂರು, ದಿನಾಂಕ:09.11.2021 ರಂತೆ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿಕೊಂಡು ಕಾಲಮಿತಿಯಲ್ಲಿ ಅನುಪಾಲನಾ ವರದಿಗಳನ್ನು ಸಲ್ಲಿಸುವುದು ಅವಶ್ಯಕವೆಂದು ಅಭಿಪ್ರಾಯಪಡಲಾಗಿದೆ.

**ಕರ್ನಾಟಕ ಸಂಸ್ಕೃತ "ವಿಶ್ವವಿದ್ಯಾಲಯದ 2008–09 ರಿಂದ 2019–20ನೇ ಸಾಲಿನವರೆಗೆ ಬಾಕಿ ಇರುವ ಆಕ್ಷೇಪಣೆ ಮೊತ್ತ ಮತ್ತು ವಸೂಲಾತಿ ಮೊತ್ತದ ಕಂಡಿಕೆಯ ವಿವರಗಳ ತ:ಖ್ತೆ**

(ಮೊತ್ತ ರೂ.ಗಳಲ್ಲಿ)

| ವರ್ಷ | ಲೆಕ್ಕಪರಿಶೋಧನಾ ವರದಿಗಳ ಪ್ರಕಾರ | | | | ತೀರುವಳಿ ಮಾಡಿದ ವಿವರ | | | | ಬಾಕಿ ಉಳಿದ ವಿವರ | | | |
|---|---|---|---|---|---|---|---|---|---|---|---|---|
| | ಆಕ್ಷೇಪಣೆ | | ವಸೂಲಾತಿ | | ಆಕ್ಷೇಪಣೆ | | ವಸೂಲಾತಿ | | ಆಕ್ಷೇಪಣೆ | | ವಸೂಲಾತಿ | |
| | ಕಂಡಿಕೆ ಸಂಖ್ಯೆ | ಮೊತ್ತ | ಕಂಡಿಕೆ ಸಂಖ್ಯೆ | ಮೊತ್ತ | ಕಂಡಿಕೆ ಸಂಖ್ಯೆ | ಮೊತ್ತ | ಕಂಡಿಕೆ ಸಂಖ್ಯೆ | ಮೊತ್ತ | ಕಂಡಿಕೆ ಸಂಖ್ಯೆ | ಮೊತ್ತ | ಕಂಡಿಕೆ ಸಂಖ್ಯೆ | ಮೊತ್ತ |
| **1** | **2** | **3** | **4** | **5** | **6** | **7** | **8** | **9** | **10** | **11** | **12** | **13** |
| 2008–09 ರಿಂದ 2010–11 | 3 | 2107369 | 1 | 24000 | – | – | – | – | 3 | 2107369 | 1 | 24000 |
| 2011–12 | 18 | 9912345 | 6 | 70368 | – | – | – | – | 18 | 9912345 | 6 | 70368 |
| 2012–13 ರಿಂದ 2014–15 | 58 | 252323437 | 19 | 2916029 | – | – | – | – | 58 | 252323437 | 19 | 2916029 |
| 2015–16 | 14 | 86171747 | 3 | 435533 | – | – | – | – | 14 | 86171747 | 3 | 435533 |
| 2016–17 | 7 | 2051433 | 5 | 2158738 | 1 | 753097 | 2 | 1684526 | 6 | 1298336 | 3 | 474212 |
| 2017–18 | 16 | 15247239 | 9 | 1669870 | – | – | – | – | 16 | 15247239 | 9 | 1669870 |
| 2018–19 | 24 | 64058827 | 19 | 4663930 | – | – | 7 | 607327 | 24 | 64058827 | 12 | 4056603 |
| 2019–20 | 23 | 107282153 | 8 | 2584216 | – | – | – | – | 22 | 107282153 | 8 | 2584216 |
| **ಒಟ್ಟು** | **163** | **539154550** | **70** | **14522684** | **1** | **753097** | **9** | **2291853** | **162** | **538401453** | **61** | **12230831** |

ಕರ್ನಾಟಕ ಆರ್ಥಿಕ ಇಲಾಖೆಯಿಂದ ಬಿಡುಗಡೆಯಾಗಿರುವ “Hand Book of Instructions for the Speedy Settlement of Audit Observations, Inspection Reports Speedy disposal of Audit Paragraphs and Timely action on matter pertaining to the public Accounts committee, The Committee on public undertaking” ಎಂಬ ಮಾರ್ಗಸೂಚಿಯಂತೆ ಸೂಕ್ತ ಕ್ರಮ ವಹಿಸಿ ಲೆಕ್ಕಪರಿಶೋಧನಾ ವರದಿಗಳಲ್ಲಿನ ಕಂಡಿಕೆಗಳ ತೀರುವಳಿಗೆ ಅಗತ್ಯ ಕ್ರಮವಹಿಸಲು ಸೂಚಿಸಿದೆ.

**8.1 ಲೆಕ್ಕಪರಿಶೋಧನಾ ತೀರುವಳಿ ವಹಿಯನ್ನು ನಿರ್ವಹಿಸದಿರುವುದು:**

ಲೆಕ್ಕಪರಿಶೋಧನಾ ತೀರುವಳಿ ವಹಿಯನ್ನು ನಿರ್ವಹಿಸಿ, ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ. ವಹಿಯನ್ನು ಪ್ರತಿ ಆರ್ಥಿಕ ವರ್ಷದ ಲೆಕ್ಕ ತನಿಖೆ ವರದಿಗಳ ಸಂಕ್ಷಿಪ್ತ ವಿವರಗಳನ್ನು ದಾಖಲಿಸಿಕೊಂಡು ಸಂಬಂಧಿಸಿದ ಕಂಡಿಕೆಗಳಿಗೆ ಸೂಕ್ತ ಹಾಗೂ ಸಮರ್ಥನೀಯವಾದ ಅನುಪಾಲನಾ ಉತ್ತರಗಳನ್ನು ದಾಖಲಿಸಿಕೊಂಡು, ಕಂಡಿಕೆಗಳ ತೀರುವಳಿಯಾದ ಪಕ್ಷದಲ್ಲಿ ಕಂಡಿಕೆಗಳನ್ನು ತೀರುವಳಿ ಮಾಡಿದ ವಿವರವನ್ನು ಕೆಂಪು ಶಾಯಿಯಲ್ಲಿ ನಮೂದಿಸಿಕೊಂಡು ದೃಢೀಕರಣದೊಂದಿಗೆ ಮುಂದಿನ ತಪಾಸಣೆಗೆ ಹಾಜರುಪಡಿಸುವಂತೆ ಸೂಚಿಸಿದೆ.

**8.2 ಲೆಕ್ಕಪರಿಶೋಧನಾ ವಿಚಾರಣಾ ಪತ್ರಗಳಿಗೆ ಕೈಗೊಂಡ ಕ್ರಮ.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2020–21ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಕೈಗೊಂಡಿದ್ದು, ಒಟ್ಟಾರೆ **48** ಲೆಕ್ಕವಿಚಾರಣಾ ಪತ್ರಗಳನ್ನು ನೀಡಿದ್ದು, ವಿಶ್ವವಿದ್ಯಾಲಯದಿಂದ **48** ಲೆಕ್ಕವಿಚಾರಣಾ ಪತ್ರಗಳಿಗೆ ಉತ್ತರಗಳನ್ನು ನೀಡಿರುತ್ತಾರೆ.

**9. ಆಯವ್ಯಯ ಅಂದಾಜು ಮತ್ತು ವಾರ್ಷಿಕ ಲೆಕ್ಕಪತ್ರಗಳು**

ವಿಶ್ವವಿದ್ಯಾಲಯದ ಆಯ–ವ್ಯಯ ಕುರಿತಂತೆ ಪ್ರತಿ ವರ್ಷವು ಅಂದಾಜಿಸಿದ ಆಯ–ವ್ಯಯಗಳ ಅಂದಾಜನ್ನು ಸಿಂಡಿಕೇಟ್‌ನಿಂದ ಅನುಮೋದನೆ ಪಡೆದು ಅಂದಾಜಿನ ಪರಿಧಿಯಲ್ಲಿ ವ್ಯಯಗಳನ್ನು ಮಾಡಲಾಗುತ್ತದೆ. ಒಂದು ವೇಳೆ ಅಂದಾಜುಗಳ ಮೊತ್ತಗಳನ್ನು ಮೀರಿ ವೆಚ್ಚಗಳನ್ನು ಭರಿಸಬೇಕಾದ ಸಂದರ್ಭದಲ್ಲಿ ಹೆಚ್ಚುವರಿ ವೆಚ್ಚ ಭರಿಸಲಾಗುವ ಮೊತ್ತಗಳಿಗೆ ಹಣಕಾಸು ಸಮಿತಿಯ ಶಿಫಾರಸ್ಸಿನೊಂದಿಗೆ ಸಿಂಡಿಕೇಟ್ ಅನುಮೋದನೆ ಅಗತ್ಯವಾಗಿರುತ್ತದೆ. ಹೆಚ್ಚುವರಿ ವೆಚ್ಚಗಳು ಅನಿವಾರ್ಯ ಸಂದರ್ಭಗಳಲ್ಲಿ ವ್ಯಯಿಸಲು ಮಾತ್ರ ವಿನಾಯಿತಿಯಿದ್ದು, ಇದೇ ಕ್ರಮಗಳು ಪುನರಾವರ್ತನೆಯಾದರೆ ಆಯ–ವ್ಯಯ ಅಂದಾಜುಗಳಿಗೆ ಮಾನ್ಯತೆ ಇಲ್ಲದಂತಾಗುತ್ತದೆ ಹಾಗೂ ಈ ಅಂದಾಜುಗಳು ವಾಸ್ತವತೆಗೆ ಸಮೀಪವಾಗಿರುವುದಿಲ್ಲವೆಂಬುದಾಗಿ ಪರಿಗಣಿಸಲಾಗುತ್ತದೆ. ಇದೇ ರೀತಿ ರಾಜಸ್ವ ಅಂದಾಜುಗಳಿಗೂ ಅನ್ವಯಿಸಲಿದ್ದು, ರಾಜಸ್ವ ಅಂದಾಜುಗಳಿಗಿಂತ ಕಡಿಮೆ ರಾಜಸ್ವ ಸಂಗ್ರಹವಾಗಿರುತ್ತದೆ ಹಾಗೂ ಇತರೆ ಎಲ್ಲಾ ವಿಷಯದಲ್ಲೂ ಮುಂದುವರೆದರೆ ಅವೈಜ್ಞಾನಿಕ ಪದ್ಧತಿಯಲ್ಲಿ ಆಯ–ವ್ಯಯ ಅಂದಾಜುಗಳನ್ನು ತಯಾರಿಸಿರುವುದನ್ನು ಬಿಂಬಿಸುತ್ತದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2020–21ನೇ ಸಾಲಿನಲ್ಲಿ ಅಂದಾಜಿಸಿದ ಆಯ–ವ್ಯಯ ಹಾಗೂ ವಾಸ್ತವಿಕ ಅಂಕಿ–ಅಂಶಗಳ ಕುರಿತು ಪರಿಶೀಲನೆ ಕೈಗೊಳ್ಳಲಾಗಿರುವಂತೆ, ರಾಜಸ್ವ ಹಾಗೂ ವೆಚ್ಚಗಳಲ್ಲಿ ಏರುಪೇರುಗಳನ್ನು ಗಮನಿಸಿದ್ದು, ಆಯ–ವ್ಯಯದ ಅಂದಾಜುಗಳಿಗೂ ವಾಸ್ತವಿಕ ರಾಜಸ್ವ ಹಾಗೂ ವೆಚ್ಚಗಳಿಗೆ ಸಮೀಕರಿಸಿರುವುದರ ಬಗ್ಗೆ ಸ್ಪಷ್ಟತೆ ಇರುವುದಿಲ್ಲ.

ತಃಖ್ತೆಯಲ್ಲಿ ತೋರಿಸಲಾಗಿರುವ ವೆಚ್ಚಗಳು ಹೆಚ್ಚುವರಿಯಾಗಿರುವುದು ಹೊರತುಪಡಿಸಿದರೆ, ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಉಳಿದ ಎಲ್ಲಾ ವೆಚ್ಚಗಳ ಅಂದಾಜು ಹಾಗು ವಾಸ್ತವಿಕ ವೆಚ್ಚಗಳನ್ನು ಪರಿಗಣಿಸಿದಲ್ಲಿ, ವಾಸ್ತವಿಕ ವೆಚ್ಚಗಳಿಗಿಂತ ಅಂದಾಜುಗಳೆ ಹೆಚ್ಚಾಗಿದ್ದು, ಶೇಕಡ 20 ರಿಂದ 30 ರವರೆಗೆ

ಅಂತರವಿರುತ್ತದೆ ಹಾಗೂ ಕೆಲವು ವೆಚ್ಚಗಳ ಅಂದಾಜುಗಳಲ್ಲಿ ಶೇಕಡ 40 ರಿಂದ 90 ರಷ್ಟು ವಾಸ್ತವಿಕ ವೆಚ್ಚಗಳು ಕಡಿಮೆಯಾಗಿರುತ್ತದೆ. ಉದಾಹರಣೆಗೆ **ಆಡಳಿತಾಂಗ ವೆಚ್ಚ**– ಅಂದಾಜು ರೂ.1,25,02,900/– ಆಗಿದ್ದು, ವಾಸ್ತವಿಕ ವೆಚ್ಚ ರೂ.75,71,087/– ಆಗಿದ್ದು, ವ್ಯತ್ಯಾಸ ರೂ.49,31,813/–ಗಳು ಆಗಿರುತ್ತದೆ. ಇದು ಶೇಕಡಾ 40 ರಷ್ಟು ಹೆಚ್ಚಿನ ಅಂದಾಜು ಆಗಿರುತ್ತದೆ. **ಅಧ್ಯಯನಾಂಗ ಲೆಕ್ಕಶೀರ್ಷಿಕೆಯಲ್ಲಿ** ರೂ.14,00,000/– ಅಂದಾಜು ಇದ್ದು ಕೇವಲ ರೂ.1,41,739/–ಗಳನ್ನು ಮಾತ್ರ ವೆಚ್ಚ ಭರಿಸಿದ್ದು, ವ್ಯತ್ಯಾಸವು ಶೇಕಡಾ 90 ರಷ್ಟು ಇರುತ್ತದೆ. ಇದರಿಂದ ವಿಶ್ವವಿದ್ಯಾಲಯದ ಅಂದಾಜುಗಳು ವೈಜ್ಞಾನಿಕ ಮಾನದಂಡದ ಆಧಾರದ ಮೇಲೆ ಅಂದಾಜಿಸಿರುವುದಿಲ್ಲ ಎಂಬುದು ಕಂಡುಬಂದಿರುತ್ತದೆ. ಆದ್ದರಿಂದ 2020–21ನೇ ಸಾಲಿನ ವಾರ್ಷಿಕ ಆಯವ್ಯಯ ಅಂದಾಜು ಮತ್ತು ವಾರ್ಷಿಕ ಲೆಕ್ಕಪತ್ರಗಳಲ್ಲಿನ ಅಂಕಿ ಅಂಶಗಳನ್ನು ಲೆಕ್ಕಪರಿಶೋಧನೆಯಲ್ಲಿ ದೃಢೀಕರಿಸಲು ಸಾಧ್ಯವಾಗಿರುವುದಿಲ್ಲ. ವಿವರ ಕೆಳಕಂಡಂತ್ತಿದೆ.

| **2020–21ನೇ ಸಾಲಿನ ಅಂದಾಜು ಆಯ (ರೂ.ಗಳಲ್ಲಿ)** | **2020–21ನೇ ಸಾಲಿನ ಒಟ್ಟು ಸ್ವೀಕೃತಿಗಳು (ರೂ.ಗಳಲ್ಲಿ)** | **ವ್ಯತ್ಯಾಸ (ರೂ.ಗಳಲ್ಲಿ)** |
|---|---|---|
| 70,74,44,380.00 | 70,87,69,714.00 | +13,25,334.00 |
| **2020–21ನೇ ಸಾಲಿನ ಅಂದಾಜು ವ್ಯಯ (ರೂ.ಗಳಲ್ಲಿ)** | **2020–21ನೇ ಸಾಲಿನ ಒಟ್ಟು ವೆಚ್ಚಗಳು (ರೂ.ಗಳಲ್ಲಿ)** | **ವ್ಯತ್ಯಾಸ (ರೂ.ಗಳಲ್ಲಿ)** |
| 70,74,44,380.00 | 71,23,80,877.00 | +49,36,497.00 |

**9.1 ಆಯವ್ಯಯ ಅಂದಾಜು ಪಟ್ಟಿ ಸಿದ್ದಪಡಿಸುವಲ್ಲಿನ ಪ್ರಮುಖ ನ್ಯೂನತೆಗಳು ಈ ಕೆಳಗಿನಂತಿವೆ:**

1. ಆಯವ್ಯಯವನ್ನು ಪರಿಶೀಲಿಸಲಾಗಿ, ಸ್ವೀಕೃತಿ ಮತ್ತು ಪಾವತಿಗಳ ಸಮರ್ಪಕ ವರ್ಗೀಕರಣವಿಲ್ಲದೇ ಅಂದಾಜನ್ನು ತಯಾರಿಸಲಾಗಿದ್ದು, ಇದರಿಂದ ನಿಖರವಾಗಿ ಸ್ವೀಕೃತಿ ಮತ್ತು ಪಾವತಿಗಳ ವಾಸ್ತವಿಕ ಅಂದಾಜನ್ನು ತಯಾರಿಸಿರುವುದಿಲ್ಲ.

2. ಆಯವ್ಯಯ ತಯಾರಿಸುವ ಮುನ್ನ, ಹಿಂದಿನ ಸಾಲಿನ ವಾಸ್ತವಿಕ ವೆಚ್ಚಗಳೊಡನೆ, ಪ್ರಸ್ತುತ ಸಾಲಿನ ಆಯವ್ಯಯ ಅಂದಾಜು ಮತ್ತು ಮುಂದಿನ ಸಾಲಿಗೆ ಆಯವ್ಯಯ ಅಂದಾಜು ತಯಾರಿಸುವ ಸಮಯದಲ್ಲಿನ ವಾಸ್ತವಿಕ ಮತ್ತು ಪರಿಷ್ಕೃತ ಅಂದಾಜುಗಳ ಆಧಾರದ ಮೇಲೆ ತಯಾರಿಸುವುದು ವೈಜ್ಞಾನಿಕವಾದ ಕ್ರಮವಾಗಿರುತ್ತದೆ. ಪ್ರಸ್ತುತ ಅಂದಾಜನ್ನು ಈ ಆಧಾರದ ಮೇಲೆ ತಯಾರಿಸದೇ ಹಿಂದಿನ ಸಾಲಿನ ಅಂದಾಜುಗಳಲ್ಲಿ ಏರಿಕೆ ಮಾಡಿ ಪ್ರಸ್ತಾವನೆ ಸಲ್ಲಿಸಿರುವುದು ಕಂಡುಬಂದಿರುತ್ತದೆ. ಇದು ಸರಿಯಾದ ಕ್ರಮವಾಗಿರುವುದಿಲ್ಲ.

3. ವಿಶ್ವವಿದ್ಯಾಲಯವು ಪ್ರತಿ ಬಿಲ್ಲಿನ ಪಾವತಿಗೂ ಮುನ್ನ ಸದರಿ ವೆಚ್ಚದ ಲೆಕ್ಕಶೀರ್ಷಿಕೆಯಲ್ಲಿ ಇದುವರೆಗೆ ವಿನಿಯೋಗಿಸಲ್ಪಟ್ಟ ವೆಚ್ಚ, ಪ್ರಸ್ತುತ ವೆಚ್ಚ, ಉಳಿಕೆಯಾದ ಅನುದಾನದ ವಿವರಗಳನ್ನು ನಮೂದಿಸದೇ ಪಾವತಿಸಲಾಗುತ್ತಿದ್ದು, ಆಯವ್ಯಯದ ಮೇಲೆ ಆಂತರಿಕ ನಿಯಂತ್ರಣವೇ ಇರುವುದಿಲ್ಲ.

4. ಪ್ರಸ್ತುತ ಆಯಾ ಸಾಲಿನ ವಾರ್ಷಿಕ ಆಯವ್ಯಯದ ಅವಕಾಶಗಳನ್ನು ಕಲ್ಪಿಸುವ ಬಗ್ಗೆ ಯಾವ ರೀತಿ ಪ್ರಸ್ತಾವನೆಗಳನ್ನು ವಿಶ್ವವಿದ್ಯಾಲಯದ ವಿಭಾಗದಿಂದ ಪಡೆಯಲಾಗುತ್ತಿದೆ ಎಂಬುದನ್ನು ವಿವರಿಸಲು ತಿಳಿಸಿದೆ. ಅವಕಾಶದಲ್ಲಿನ ಸಂಪೂರ್ಣ ಅನುದಾನವು ಭರಿಸದೇ ನಿರರ್ಥಕವಾಗಿರುತ್ತದೆ. ಇದರಿಂದ ಅವೈಜ್ಞಾನಿಕವಾಗಿ ಆಯವ್ಯಯ ಪ್ರಸ್ತಾವನೆಯನ್ನು ತಯಾರಿಸಿರುವುದರಿಂದ ಒಟ್ಟಾರೆ ವಿಶ್ವವಿದ್ಯಾಲಯದ ಕ್ರೋಢೀಕೃತ ಸ್ವೀಕೃತಿ ಮತ್ತು ವೆಚ್ಚದಲ್ಲಿನ ಆರ್ಥಿಕ ವ್ಯತ್ಯಾಸದ ಅಸಮತೋಲನ ಎದ್ದುಕಾಣುತ್ತದೆ.

5. ವಿಶ್ವವಿದ್ಯಾಲಯದ ಆಯ–ವ್ಯಯ ಕುರಿತಂತೆ, ಪ್ರತಿ ವರ್ಷವು ಅಂದಾಜಿಸಿದ ಆಯ–ವ್ಯಯಗಳ ಅಂದಾಜನ್ನು ಸಿಂಡಿಕೇಟ್‌ನಿಂದ ಅನುಮೋದನೆ ಪಡೆದು, ಅಂದಾಜಿನ ಪರಿಧಿಯಲ್ಲಿ ವ್ಯಯಗಳನ್ನು ಮಾಡಬೇಕಾಗಿರುತ್ತದೆ. ಒಂದು ವೇಳೆ ಅಂದಾಜುಗಳ ಮೊತ್ತಗಳನ್ನು ಮೀರಿ ವೆಚ್ಚಗಳನ್ನು ಭರಿಸಬೇಕಾದ ಸಂದರ್ಭದಲ್ಲಿ ಹೆಚ್ಚುವರಿ ವೆಚ್ಚ ಭರಿಸಲಾಗುವ ಮೊತ್ತಗಳಿಗೆ ಹಣಕಾಸು ಸಮಿತಿಯ ಶಿಫಾರಸ್ಸಿನೊಂದಿಗೆ ಸಿಂಡಿಕೇಟ್ ಅನುಮೋದನೆ ಅಗತ್ಯವಾಗಿರುತ್ತದೆ. ಹೆಚ್ಚುವರಿ ವೆಚ್ಚಗಳನ್ನು ಅನಿವಾರ್ಯ ಸಂದರ್ಭಗಳಲ್ಲಿ ವ್ಯಯಿಸಲು ಮಾತ್ರ ವಿನಾಯಿತಿಯಿದ್ದು, ಇದೇ ಕ್ರಮಗಳು ಪುನರಾವರ್ತನೆಯಾದರೆ ಆಯ–ವ್ಯಯ ಅಂದಾಜುಗಳಿಗೆ ಮಾನ್ಯತೆ ಇಲ್ಲದಂತಾಗುತ್ತದೆ ಹಾಗೂ ಈ ಅಂದಾಜುಗಳು ವಾಸ್ತವತೆಗೆ ಸಮೀಪವಾಗಿರುವುದಿಲ್ಲವೆಂದು ಪರಿಗಣಿಸಲಾಗುತ್ತದೆ.

6. ಇದೇ ರೀತಿ ರಾಜಸ್ವ ಅಂದಾಜುಗಳಿಗೂ ಅನ್ವಯಿಸಲಿದ್ದು, ರಾಜಸ್ವ ಅಂದಾಜುಗಳಿಗಿಂತ ಕಡಿಮೆ ರಾಜಸ್ವ ಸಂಗ್ರಹ ಎಲ್ಲಾ ವಿಷಯದಲ್ಲೂ ಮುಂದುವರೆದರೆ ಅವೈಜ್ಞಾನಿಕ ಪದ್ಧತಿಯಲ್ಲಿ ಆಯ–ವ್ಯಯ ಅಂದಾಜುಗಳು ಮಾಡಲಾಗಿರುವುದನ್ನು ಬಿಂಬಿಸುತ್ತದೆ. ವಿಶ್ವವಿದ್ಯಾಲಯವು 2020–21 ನೇ ಸಾಲಿನಲ್ಲಿ ಅಂದಾಜಿಸಿದ ಆಯ–ವ್ಯಯ ಹಾಗೂ ವಾಸ್ತವಿಕ ಅಂಕಿ ಅಂಶಗಳ ಕುರಿತು ಪರಿಶೀಲಿಸಿದಾಗ, ರಾಜಸ್ವ ಹಾಗೂ ವೆಚ್ಚಗಳಲ್ಲಿ ಏರುಪೇರುಗಳನ್ನು ಗಮನಿಸಿದ್ದು, ಆಯ–ವ್ಯಯದ ಅಂದಾಜುಗಳು ವಾಸ್ತವಿಕ ಅಂಶಗಳಿಗೆ ಸಮೀಪವಾಗಿಲ್ಲದಿರುವುದು ಸ್ಪಷ್ಟವಾಗುತ್ತದೆ.

ಈ ರೀತಿಯ ಪದ್ಧತಿಯನ್ನು ಗಮನಿಸಿದಾಗ ಸಕ್ಷಮ ಪ್ರಾಧಿಕಾರವು ವಿವಿಧ ವಿಭಾಗಗಳಿಂದ ಪೂರ್ವ ಪ್ರಸ್ತಾವನೆಯನ್ನು ಪಡೆಯದೇ, ಸ್ವೀಕೃತಿ ಮತ್ತು ವೆಚ್ಚಗಳ ಸಮರ್ಪಕ ವರ್ಗೀಕರಣವಿಲ್ಲದೇ ಆಯವ್ಯಯದಲ್ಲಿ ಅವಕಾಶ ಕಲ್ಪಿಸಿರುವುದು ಕಂಡುಬಂದಿದೆ. ಆಯವ್ಯಯವನ್ನು ಹಿಂದಿನ ವರ್ಷಗಳಲ್ಲಿಯೂ ಸಹ ತಾರ್ಕಿಕವಾಗಿ ಮತ್ತು ವೈಜ್ಞಾನಿಕವಾಗಿ ತಯಾರಿಸಿರುವುದು ಕಂಡುಬಂದಿರುವುದಿಲ್ಲ. ಒಟ್ಟಾರೆ ವಿಶ್ವವಿದ್ಯಾಲಯದ ಆಯವ್ಯಯವನ್ನು ಅವೈಜ್ಞಾನಿಕವಾಗಿ ತಯಾರಿಸಲಾಗಿದೆ.

| **2020–21ನೇ ಸಾಲಿನ ಅಂದಾಜು ಆಯ (ರೂ.ಗಳಲ್ಲಿ)** | **2020–21ನೇ ಸಾಲಿನ ಒಟ್ಟು ಸ್ವೀಕೃತಿಗಳು (ರೂ.ಗಳಲ್ಲಿ)** | **ವ್ಯತ್ಯಾಸ (ರೂ.ಗಳಲ್ಲಿ)** |
|---|---|---|
| 70,74,44,380.00 | 70,87,69,714.00 | +13,25,334.00 |
| **2020–21ನೇ ಸಾಲಿನ ಅಂದಾಜು ವ್ಯಯ (ರೂ.ಗಳಲ್ಲಿ)** | **2020–21ನೇ ಸಾಲಿನ ಒಟ್ಟು ವೆಚ್ಚಗಳು (ರೂ.ಗಳಲ್ಲಿ)** | **ವ್ಯತ್ಯಾಸ (ರೂ.ಗಳಲ್ಲಿ)** |
| 70,74,44,380.00 | 71,23,80,877.00 | +49,36,497.00 |

ಮುಂದಿನ ಆರ್ಥಿಕ ವರ್ಷಗಳ ಆಯವ್ಯಯವನ್ನು ತಯಾರಿಸುವಾಗ, ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ವಾಸ್ತವಿಕ ಅಂಕಿ–ಅಂಶಗಳನ್ನು ಪ್ರತಿಬಿಂಬಿಸುವ ಮತ್ತು ಆಯವ್ಯಯ ಕೈಪಿಡಿಯ ನಿಯಮಗಳನ್ವಯ ವೈಜ್ಞಾನಿಕ ರೀತಿಯಲ್ಲಿ ಆಯವ್ಯಯ ಅಂದಾಜನ್ನು ತಯಾರಿಸಲು ಸೂಚಿಸಿದೆ.

ಹಣಕಾಸು ಅಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರು ಲೆಕ್ಕಪರಿಶೋಧನೆಗೆ ಒದಗಿಸಿರುವ ಆಯವ್ಯಯ ಹಾಗೂ ವಾರ್ಷಿಕ ಲೆಕ್ಕಪತ್ರಗಳ ಅಂಕಿಅಂಶಗಳೊಂದಿಗೆ ಸಮೀಕರಿಸಿ ವಿಚಲನಾಪಟ್ಟಿಯನ್ನು ತಯಾರಿಸಿದ್ದು, ವಿವರಗಳನ್ನು **ಅನುಬಂಧ– 1**ರಲ್ಲಿ ಲಗತ್ತಿಸಿದೆ.

**10. ಪ್ರವೇಶ ಶುಲ್ಕವನ್ನು ವಸೂಲಿ ಮಾಡದಿರುವ ಒಟ್ಟು ಮೊತ್ತ ರೂ.52,500/–ಗಳ ವಸೂಲಾತಿ.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2020–21ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ವಿವಿಧ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಲಾದ ಪ್ರವೇಶ ಶುಲ್ಕಕ್ಕೆ ಸಂಬಂಧಿಸಿದಂತೆ, ಒದಗಿಸಲಾದ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ವಿಶ್ವವಿದ್ಯಾಲಯವು ವಿವಿಧ ಕೋರ್ಸುಗಳ ಪ್ರವೇಶ ಶುಲ್ಕಕ್ಕೆ

ಸಂಬಂಧಿಸಿದಂತೆ, ಸ್ವೀಕೃತಿಯಾದ ಮೊತ್ತ ರೂ. 48,89,401/– ಹಾಗೂ ವಿಳಂಬ ಶುಲ್ಕ ರೂ: 28,500.00 ಗಳಿಗೆ ರಸೀದಿಗಳನ್ನು ಒದಗಿಸಿದ್ದು, ವಿಶ್ವವಿದ್ಯಾಲಯಕ್ಕೆ ಬರಬೇಕಾದ ಪ್ರವೇಶ ಶುಲ್ಕಕ್ಕೆ ಸಂಬಂಧಿಸಿದಂತೆ, ಪ್ರತ್ಯೇಕವಾಗಿ ಕೋರ್ಸ್‌ವಾರು ಬೇಡಿಕೆ, ಸಂಗ್ರಹಣೆ ಹಾಗೂ ಬಾಕಿಯ ಬಗ್ಗೆ ಪೂರ್ಣಪ್ರಮಾಣದ ಮಾಹಿತಿಯನ್ನು ಒದಗಿಸದೇ ಇರುವುದರಿಂದ ವಿಶ್ವವಿದ್ಯಾಲಯಕ್ಕೆ ಬರಬೇಕಾದ ಪ್ರವೇಶ ಶುಲ್ಕ ಸ್ವೀಕೃತಿಗಳ ಬಗ್ಗೆ ಲೆಕ್ಕಪರಿಶೋಧನೆಯಲ್ಲಿ ದೃಢೀಕರಿಸಲು ಸಾಧ್ಯವಾಗಿರುವುದಿಲ್ಲ. ಸದರಿ ವಹಿಗಳನ್ನು ನಿರ್ವಹಿಸುವ ಬಗ್ಗೆ ಕೂಡಲೇ ಸೂಕ್ತ ಕ್ರಮ ವಹಿಸಲು ತಿಳಿಸಿದೆ. ವಾರ್ಷಿಕ ಲೆಕ್ಕಪತ್ರಗಳಲ್ಲಿಯೂ ಸಹ ಪ್ರವೇಶ ಶುಲ್ಕದ ವಿವರಗಳನ್ನು ಕ್ರೋಢಿಕರಿಸಿ ವಿವಿಧ ಶೀರ್ಷಿಕೆ ಗಳಲ್ಲಿ ದಾಖಲಿಸಿದ್ದು, ವಿಭಾಗವಾರು ಸಲ್ಲಿಸಿರುವ ಸ್ವೀಕೃತವಾದ ವಾಸ್ತವಿಕ ಮೊತ್ತಕ್ಕೂ ಹಾಗೂ ವಾರ್ಷಿಕ ಲೆಕ್ಕಪತ್ರದಲ್ಲಿನ ಸ್ವೀಕೃತಿಗೂ ಹೊಂದಾಣಿಕೆ ಮಾಡುವುದು ಕಷ್ಟಕರವಾಗಿರುತ್ತದೆ.

ಮುಂದುವರೆದು, ವಿಶ್ವವಿದ್ಯಾಲಯವೇ ಒದಗಿಸಿರುವ ಮಾಹಿತಿಯಂತೆ 2020–21ನೇ ಸಾಲಿಗೆ ಸಂಬಂಧಿಸಿದಂತೆ, ಸಮಾಜ ಕಲ್ಯಾಣ ಇಲಾಖೆಯಿಂದ ರೂ.52,500/– ಪ್ರವೇಶ ಶುಲ್ಕ ವಿಶ್ವವಿದ್ಯಾಲಯಕ್ಕೆ ಬರಲು ಬಾಕಿ ಇದ್ದು, ಸದರಿ ಮೊತ್ತವನ್ನು ಸಂಬಂಧಿಸಿದವರಿಂದ ವಸೂಲಿ ಮಾಡಲು ಈವರೆಗೂ ಕ್ರಮ ವಹಿಸದೇ ಇರುವ ಬಗ್ಗೆ ಸೂಕ್ತ ಸ್ಪಷ್ಟೀಕರಣವನ್ನು ಲೆಕ್ಕಪರಿಶೋಧನೆಗೆ ಒದಗಿಸುವಂತೆ ತಿಳಿಸಿ, ಲೆಕ್ಕ ವಿಚಾರಣಾ ಪತ್ರ ಸಂಖ್ಯೆ: 14/ 2021–22, ದಿನಾಂಕ: 26.05.2022 ನ್ನು ನೀಡಲಾಗಿತ್ತು, ವಿಶ್ವವಿದ್ಯಾಲಯವು ಒದಗಿಸಿರುವ ಅನುಸರಣೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಮರುಭರಣ ಮಾಡಲು ಪತ್ರ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಪ್ರವೇಶ ಶುಲ್ಕ ರಿಯಾಯಿತಿ ನೀಡಿರುವ ಮೊತ್ತ ರೂ. 52,500.00 ಸಮಾಜ ಕಲ್ಯಾಣ ಇಲಾಖೆ ಯಿಂದ ವಸೂಲಿಸಿ, ವಿಶ್ವವಿದ್ಯಾಲಯದ ಖಾತೆಗೆ ಜಮೆ ಮಾಡುವಂತೆ ತಿಳಿಸಿದೆ. ವಿವರಗಳನ್ನು **ಅನುಬಂಧ–2** ರಲ್ಲಿ ಲಗತ್ತಿಸಿದೆ.

### 10.1 ಪರೀಕ್ಷಾ ಶುಲ್ಕವನ್ನು ವಸೂಲಿ ಮಾಡದಿರುವ ಒಟ್ಟು ಮೊತ್ತ ರೂ.1,09,930/–ಗಳ ವಸೂಲಾತಿ.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2020–21ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲಾಗಿದ್ದು, ಸದರಿ ಲೆಕ್ಕಪರಿಶೋಧನೆಯಲ್ಲಿ ವಿವಿಧ ಕೋರ್ಸ್‌ಗಳ ಪರೀಕ್ಷೆಗಳಿಗೆ ಸ್ವೀಕರಿಸಲಾದ ಪರೀಕ್ಷಾ ಶುಲ್ಕಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯವು ಒದಗಿಸಿದ ರಸೀದಿಗಳನ್ನು ಪರಿಶೀಲಿಸಲಾಯಿತು. ವಿವರಗಳು ಕೆಳಕಂಡಂತಿದೆ.

| ಕ್ರ. ಸಂ. | ವಿವರಗಳು | ಸ್ವೀಕರಿಸಲಾದ ಪರೀಕ್ಷಾ ಶುಲ್ಕದ ಮೊತ್ತ (ರೂ.ಗಳಲ್ಲಿ) |
|---|---|---|
| 1 | ಅಧೀನ ಮಹಾವಿದ್ಯಾಲಯಗಳ ಪರೀಕ್ಷೆಗಳು | 15,30,150.00 |
| 2 | ಜ್ಯೋತಿಷ್ಯ & ಪರಿಸರದ ಇತರೆ ಪರೀಕ್ಷೆಗಳು | 3,79,640.00 |
| | **ಒಟ್ಟು ರೂ:** | **19,09,790.00** |

ವಿಶ್ವವಿದ್ಯಾಲಯವೇ ದೃಢೀಕರಿಸಿ ಒದಗಿಸಿರುವ ಮಾಹಿತಿಯಂತೆ 2020–21ನೇ ಸಾಲಿಗೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯಕ್ಕೆ ಬರಬೇಕಾಗಿರುವ ಸಮಾಜ ಕಲ್ಯಾಣ ಇಲಾಖೆಯಿಂದ ರೂ: 1,09,930/– ಗಳ ಪರೀಕ್ಷಾ ಶುಲ್ಕ ವಿಶ್ವವಿದ್ಯಾಲಯಕ್ಕೆ ಬರಲು ಬಾಕಿ ಇದ್ದು, ಸದರಿ ಮೊತ್ತವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಮರುಭರಣ ಮಾಡಿಕೊಂಡಿರುವ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವಂತೆ ಲೆಕ್ಕವಿಚಾರಣಾ ಪತ್ರ ಸಂಖ್ಯೆ: 13, ದಿ.23.05.2022ರಲ್ಲಿ ಕೋರಲಾಗಿದ್ದು, ವಿಶ್ವವಿದ್ಯಾಲಯವು ಒದಗಿಸಿರುವ ಅನುಸರಣೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಮರುಭರಣ ಮಾಡಲು ಪತ್ರ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಪರೀಕ್ಷಾ ಶುಲ್ಕ ರಿಯಾಯಿತಿ ನೀಡಿರುವ ಮೊತ್ತ ರೂ. 1,09,930.00 ಸಮಾಜ ಕಲ್ಯಾಣ ಇಲಾಖೆ ಯಿಂದ ವಸೂಲಿಸಿ, ವಿಶ್ವವಿದ್ಯಾಲಯದ ಖಾತೆಗೆ ಜಮೆ ಮಾಡುವಂತೆ ತಿಳಿಸಿದೆ. ವಿವರಗಳನ್ನು **ಅನುಬಂಧ–3** ರಲ್ಲಿ ಲಗತ್ತಿಸಿದೆ.

**10.2 ಡಿಗ್ರಿ ಸರ್ಟಿಫಿಕೇಟ್‌ಗೆ ಸಂಬಂಧಿಸಿದಂತೆ ಕಡಿಮೆ ಶುಲ್ಕವನ್ನು ಪಡೆದಿರುವ ಮೊತ್ತ ರೂ. 13,150/– ವಸೂಲಾತಿ**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ 2020–21ನೇ ಸಾಲಿನಲ್ಲಿ ಡಿಗ್ರಿ ಸರ್ಟಿಫಿಕೇಟ್‌ಗಾಗಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿ, ಶುಲ್ಕವನ್ನು ಸಂದಾಯಪಡಿಸಿದ್ದು, ನಿಗದಿತ ಶುಲ್ಕಕ್ಕಿಂತ ಕಡಿಮೆ ಶುಲ್ಕವನ್ನು ವಸೂಲಿ ಮಾಡಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ವಿವರಣೆಯನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಲೆಕ್ಕವಿಚಾರಣೆ ಪತ್ರ ಸಂಖ್ಯೆ 45, ದಿ.24.06.2022ರಲ್ಲಿ ಕೋರಲಾಗಿ, ನೀಡಿರುವ ಉತ್ತರದಲ್ಲಿ ಪರಿಶಿಷ್ಟ ಜಾತಿ/ಪಂಗಡಗಳು/ಪ್ರವರ್ಗ–1ರ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ಪಡೆಯಲು ರಿಯಾಯಿತಿ ನೀಡಿರುವುದಾಗಿ ತಿಳಿಸಿದ್ದು, ಸದರಿ ಮೊಬಲಗು ರೂ.13,150/–ಗಳನ್ನು ಸಮಾಜ ಕಲ್ಯಾಣ ಇಲಾಖೆಯಿಂದ ವಸೂಲಿಸಿ, ವಿಶ್ವವಿದ್ಯಾಲಯದ ಖಾತೆಗೆ ಜಮೆ ಮಾಡುವಂತೆ ತಿಳಿಸಿದೆ. ವಿವರಗಳನ್ನು **ಅನುಬಂಧ–4** ರಲ್ಲಿ ಲಗತ್ತಿಸಿದೆ.

## ವಿಶ್ವವಿದ್ಯಾಲಯದ ನಿಧಿಗಳು

### 11. ವಿಶ್ವವಿದ್ಯಾಲಯಕ್ಕೆ ಹಣಕಾಸಿನ ಹರಿವು

ವಿಶ್ವವಿದ್ಯಾಲಯಕ್ಕೆ ಈ ಕೆಳಕಂಡವುಗಳು ಪ್ರಮುಖ ಹಣಕಾಸಿನ ಮೂಲಗಳಾಗಿರುತ್ತವೆ.

**ಅ)**.ಆಂತರಿಕ ಮೂಲಗಳಿಂದ ಆದಾಯ– ವಿದ್ಯಾರ್ಥಿಗಳ ಪ್ರವೇಶ ಶುಲ್ಕಗಳು, ಪರೀಕ್ಷಾ ಶುಲ್ಕಗಳು, ವಿಶ್ವವಿದ್ಯಾಲಯಗಳ ಕಟ್ಟಡಗಳ ಬಾಡಿಗೆ, ವಿಶ್ವವಿದ್ಯಾಲಯದ ನಿಧಿಯ ಹೂಡಿಕೆ ಮೇಲಿನ ಬಡ್ಡಿಯಿಂದ ಬರುವ ಆದಾಯ ಹಾಗೂ ಇತ್ಯಾದಿ.

**ಆ)**. ರಾಜ್ಯ ಸರ್ಕಾರವು ವೇತನ– ಭತ್ಯೆಗಳಿಗಾಗಿ, ಪಿಂಚಣಿ ಹಾಗೂ ಶಿಷ್ಯವೇತನಗಳಿಗಾಗಿ ನೀಡುವ ಅನುದಾನ

**ಇ)**. ಸರ್ಕಾರ ಹಾಗೂ ಸಾರ್ವಜನಿಕರಿಂದ ಬರುವ ದತ್ತಿಗಳು ಹಾಗೂ ಕೊಡುಗೆಗಳು



**12. ವಿಶ್ವವಿದ್ಯಾಲಯದ ನಿಧಿಗಳ ಹೂಡಿಕೆಗಳ ವಿವರ:–**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ತನ್ನ ಉದ್ದೇಶಿತ ಉನ್ನತ ಶಿಕ್ಷಣ ಪ್ರಸರಣಾ ಕಾರ್ಯ ಚಟುವಟಿಕೆಗಳಿಗಾಗಿ ಅಗತ್ಯವಿರುವ ಹಣಕಾಸು ನಿಧಿಗಳನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009 ರ ಅಧ್ಯಾಯ 8, ನಿಯಮ 51 ರಿಂದ 54 ರನ್ವಯ ನಿರ್ವಹಿಸಲಾಗುತ್ತಿದ್ದು, ವಿಷಯಾಧಾರಿತವಾಗಿ ವರ್ಗೀಕರಿಸಲಾಗಿದೆ. ಈ ನಿಧಿಗಳಿಗೆ ರಾಜಸ್ವ ಮೂಲಗಳು ಪ್ರಮುಖವಾಗಿ ಕೇಂದ್ರ ಸರ್ಕಾರವು ನೀಡುವ ಅನುದಾನ, ವಿಶ್ವವಿದ್ಯಾಲಯ ಸ್ವತ್ತುಗಳಿಂದ ಸ್ವೀಕರಿಸಿದ ಆದಾಯ, ಹೂಡಿಕೆಗಳಿಂದ ಸ್ವೀಕರಿಸಿದ ಆದಾಯ, ರಾಜ್ಯ ಸರ್ಕಾರದ ಅನುದಾನ, ರಾಜ್ಯ ಸರ್ಕಾರದ ಸಮೂಹ ಅನುದಾನಗಳು, ಸಂಯೋಜನಾ ಶುಲ್ಕ, ಪ್ರವೇಶಾತಿ ಮತ್ತು ಪರೀಕ್ಷಾ ಶುಲ್ಕ ಹಾಗೂ ಇತರೆ ಶುಲ್ಕಗಳು ಹಾಗೂ ಮೂಲದಿಂದ ಸ್ವೀಕರಿಸಿದ ಆದಾಯಗಳನ್ನು ಒಳಗೊಂಡಿರುತ್ತದೆ.

ವಿಶ್ವವಿದ್ಯಾಲಯವು ಎಸ್.ಬಿ.ಐ ಬ್ಯಾಂಕ್ ಒಂದರಲ್ಲೇ ನಿಶ್ಚಿತ ಠೇವಣಿ ಮಾಡಿರುವ ಕುರಿತು ರಚಿಸಿಕೊಂಡಿರುವ ಹೂಡಿಕೆ ನೀತಿ (Investment Policy) ಹಾಗೂ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ವಿವರಗಳನ್ನು ಒದಗಿಸುವಂತೆ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ: 39, ದಿ.18.06.2022 ರಂದು ನೀಡಲಾಗಿತ್ತು. ದಿನಾಂಕ: 29.06.2022 ರಂದು ವಿಶ್ವವಿದ್ಯಾಲಯವು ನೀಡಿರುವ ಅನುಸರಣಾ ಉತ್ತರದಲ್ಲಿ ಯಾವುದೇ ಹೂಡಿಕೆ ನೀತಿಯನ್ನು ರಚಿಸಿಕೊಂಡಿರುವುದಿಲ್ಲ ಎಂದು ತಿಳಿಸಿರುತ್ತಾರೆ.

**13. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳಲ್ಲಿ ಅನುಸರಿಸಬೇಕಾದ ನಿಯಮಗಳು ಹಾಗೂ 2020–21ನೇ ಸಾಲಿನ ಹಣಕಾಸು ವಹಿವಾಟಗಳ ವಿವರಗಳು:–**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ದಿನಾಂಕ: 31.03.2021 ರ ಅಂತ್ಯಕ್ಕೆ ಒದಗಿಸಿರುವ ಅಡಾವೆ ಪತ್ರ, ಸ್ವೀಕೃತಿ ಮತ್ತು ಪಾವತಿ, ಆದಾಯ ಮತ್ತು ವೆಚ್ಚ ತಃಖ್ತೆಗಳನ್ನೊಳಗೊಂಡ ವಾರ್ಷಿಕ ಹಣಕಾಸು ಲೆಕ್ಕಪತ್ರಗಳನ್ನು, ವಿಶ್ವವಿದ್ಯಾಲಯವು ಅಳವಡಿಸಿಕೊಂಡಿರುವ ಲೆಕ್ಕಪತ್ರ ನಿರ್ವಹಣಾ ನೀತಿಗಳು ಮತ್ತು ಲೆಕ್ಕಪತ್ರಗಳ ಕುರಿತು ನೀಡಲಾಗಿರುವ ವಿವರಣೆಗಳನ್ನಾಧರಿಸಿ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲಾಗಿದೆ.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ದ್ವಿನಮೂದು ಪದ್ಧತಿಯಲ್ಲಿ ಲೆಕ್ಕಪತ್ರಗಳನ್ನು ತಯಾರಿಸಿದ್ದು, ಇದಕ್ಕಾಗಿ Tally ತಂತ್ರಾಂಶವನ್ನು ಬಳಸಿಕೊಂಡಿದೆ. ಲೆಕ್ಕಪತ್ರ ನಿರ್ವಹಣೆಗಾಗಿ M/s D.N. Joshi & Co., ಬೆಂಗಳೂರು ಸಂಸ್ಥೆಯನ್ನು ನೇಮಿಸಿಕೊಳ್ಳಲಾಗಿದೆ. ವಿಶ್ವವಿದ್ಯಾಲಯದ ವಿವಿಧ ಇಲಾಖೆಯಿಂದ ಮಾಹಿತಿಯು ಹಣಕಾಸು ಅಧಿಕಾರಿಗಳ ಕಛೇರಿಯ ಮೂಲಕ ಸದರಿ ಸಂಸ್ಥೆಯ ಸಿಬ್ಬಂದಿಯಿಂದ Tally ತಂತ್ರಾಂಶದಲ್ಲಿ ಕ್ರೋಢೀಕರಿಸಿ ಲೆಕ್ಕಪತ್ರವನ್ನು ನಿರ್ವಹಿಸಲಾಗಿದೆ.

ಸಂಸ್ಕೃತ ವಿಶ್ವವಿದ್ಯಾಲಯವು ಒಟ್ಟು 11 ಬ್ಯಾಂಕ್ ಖಾತೆಗಳನ್ನು ಎಸ್.ಬಿ.ಐ ನಲ್ಲಿ ಹೊಂದಿದ್ದು, ಇವುಗಳ ಪೈಕಿ 10 ಉಳಿತಾಯ ಖಾತೆ ಮತ್ತು 1 ಚಾಲ್ತಿ ಖಾತೆ ಇರುತ್ತದೆ. ಬ್ಯಾಂಕ್‌ನ ವಿವಿಧ ಖಾತೆಗಳ ವಹಿವಾಟುಗಳ ವಿವರಗಳನ್ನು **ಅನುಬಂಧ–5** ರಲ್ಲಿ ಲಗತ್ತಿಸಿದೆ. ಎಲ್ಲಾ ಬ್ಯಾಂಕ್ ಖಾತೆಗಳ ಘೋಷ್ವಾರೆ ಕೆಳಕಂಡಂತ್ತಿರುತ್ತದೆ.

| Opening Balance | Receipts | Total | Payment | Closing Balance |
|---|---|---|---|---|
| 14,47,82,995.40 | 52,61,16,782.42 | 67,08,99,777.82 | 56,42,55,161.29 | 10,62,95,259.43 |

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ದಪಡಿಸುವಾಗ ಈ ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ತಯಾರಿಸಲು ಸೂಚಿಸಿದೆ.

**ಅ. ಜಮೆ ಖರ್ಚು ಪಟ್ಟಿ (Receipt and Payments A/c)**

ಜಮೆ ಖರ್ಚು ಪಟ್ಟಿಯು ವಾಸ್ತವಿಕ ಜಮೆ ಮತ್ತು ಖರ್ಚಿನ ಸಾರಾಂಶ ತಿಳಿಸುವ ಪಟ್ಟಿಯಾಗಿರುತ್ತದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರದಲ್ಲಿ ಜಮೆ ಖರ್ಚು ಪಟ್ಟಿಯು ವಾಸ್ತವಿಕ ಜಮೆಯಲ್ಲದ ಇತರೆ ಆದಾಯವನ್ನು ಕೂಡ ಒಳಗೊಂಡಿರುತ್ತದೆ. ಇದರಿಂದ ಜಮೆ ಖರ್ಚು ಪಟ್ಟಿಯನ್ನು ದೃಢೀಕರಿಸಲು ಸಾಧ್ಯವಿಲ್ಲ. ಜಮೆ ಖರ್ಚು ಪಟ್ಟಿಯನ್ನು ಕೇವಲ ವಾಸ್ತವಿಕ ಜಮೆ ಮತ್ತು ಖರ್ಚುಗಳನ್ನು ಮಾತ್ರ ಪರಿಗಣಿಸಿ ತಯಾರಿಸಿ ಆಡಳಿತ ಮಂಡಳಿಯಲ್ಲಿ ಅನುಮೋದನೆಗಾಗಿ ಮಂಡಿಸತಕ್ಕದ್ದು.

**ಆ. ಶೀರ್ಷಿಕೆವಾರು ವೆಚ್ಚ ಭರಿಸದಿರುವುದು (Payment ledger misclassification)**

2020–21ನೇ ಸಾಲಿನಲ್ಲಿ ವಿವಿಧ ಖಾತೆಯಡಿ ವೆಚ್ಚ ಭರಿಸಿದ್ದು, ಆಯ–ವ್ಯಯದಲ್ಲಿ ಹಂಚಿಕೆಯಾಗಿರುವ ಶೀರ್ಷಿಕೆವಾರು ವೆಚ್ಚ ಭರಿಸದೇ ಬೇರೆ ಬೇರೆ ಶೀರ್ಷಿಕೆಯಡಿಯಲ್ಲಿ ಅಂದರೆ, ಮುಂಗಡ ಪಡೆದು ಆಯಾ ಶೀರ್ಷಿಕೆಯಲ್ಲಿ ತೋರಿಸದೆ, ಸಮಾರಂಭಗಳ ವೆಚ್ಚ, ಕಛೇರಿ ವೆಚ್ಚ ಎಂದು ತೋರಿಸುತ್ತಾರೆ. ಈ ರೀತಿ ಆಯಾ ಶೀರ್ಷಿಕೆಯ ಹೊರತಾಗಿ ಬೇರೆ ಶೀರ್ಷಿಕೆಯಡಿಯಲ್ಲಿ ವೆಚ್ಚ ಭರಿಸಿರುವುದರಿಂದ ವಾರ್ಷಿಕ ಲೆಕ್ಕಪತ್ರಗಳಲ್ಲಿನ ಶೀರ್ಷಿಕೆವಾರು ವೆಚ್ಚದ ನೈಜ ಚಿತ್ರಣ ಸಿಗುವುದಿಲ್ಲ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.

**ಇ. ಸ್ವೀಕೃತಿಗಳನ್ನು ಶೀರ್ಷಿಕೆವಾರು ವರ್ಗೀಕರಿಸದಿರುವುದು:– (Receipt ledger misclassification)**

2020–21ನೇ ಸಾಲಿನಲ್ಲಿ ವಿವಿಧ ಖಾತೆಯಡಿ ಆದಾಯಗಳನ್ನು ಸ್ವೀಕರಿಸಿದ್ದು, ಆದಾಯಗಳ ವರ್ಗೀಕರಣದಲ್ಲಿ ಸ್ಪಷ್ಟತೆಯಿರುವುದಿಲ್ಲ. ಪ್ರವೇಶ ಶುಲ್ಕದ ಖಾತೆಯಲ್ಲಿ, ಇತರೆ ಖಾತೆಗಳ ಸ್ವೀಕೃತಿಗಳನ್ನು ಜಮೆ ಮಾಡಲಾಗಿದೆ ಹಾಗೂ ಬಹುತೇಕ ಖಾತೆಗಳಲ್ಲಿ ನೇರ ಜಮೆ, ಇತರೆ ಜಮೆಯೆಂದು ನಮೂದಿಸಿದ್ದು, ಈ ಆದಾಯಗಳನ್ನು ಗುರುತಿಸಿರುವುದಿಲ್ಲ ಮತ್ತು ಇವುಗಳ ವರ್ಗೀಕರಣ ಮಾಡಿರುವುದಿಲ್ಲ. ಆದ್ದರಿಂದ, ಈ ಆದಾಯಗಳ ಉದ್ದೇಶ ಹಾಗೂ ಅವುಗಳ ಮೂಲಗಳನ್ನು ಗುರುತಿಸದೇ ಇರುವುದರಿಂದ, ಆದಾಯಗಳಾಗದೇ, ಹೊಣೆಗಾರಿಕೆಗಳು ಆಗಿರಬಹುದು. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.

**14. ಹೂಡಿಕೆಗಳು:–**

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಕಲಂ 46(2) ರನ್ವಯ ವಿಶ್ವವಿದ್ಯಾಲಯದ ನಿಧಿಗಳನ್ನು ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ, 1943 ರಲ್ಲಿ ಪರಿಭಾಷಿಸಿರುವಂತೆ, ಅನುಸೂಚಿತ ಬ್ಯಾಂಕ್ ಅಥವಾ ಬ್ಯಾಂಕಿಂಗ್ ಕಂಪನಿಗಳು ಉದ್ಯಮಗಳ ಅರ್ಜನೆ ಮತ್ತು ವರ್ಗಾವಣೆ ಅಧಿನಿಯಮ 1970ರ ಮೇರೆಗೆ ರಚಿತವಾದ ಹೊಸ ಸಂವಾದಿ ಬ್ಯಾಂಕ್‌ನಲ್ಲಿ ಇಡತಕ್ಕದ್ದು ಹಾಗೂ ವಿಶ್ವವಿದ್ಯಾಲಯದ ನಿಧಿಗಳನ್ನು ಬ್ಯಾಂಕ್‌ಗಳ ಮೂಲಕ ವ್ಯವಸ್ಥಿತ ನಿರ್ವಹಣೆಯನ್ನು ರಾಜ್ಯ ಸರ್ಕಾರದ ಆರ್ಥಿಕ ಇಲಾಖೆ ಹೊರಡಿಸಿರುವ **ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ. 38 ಟಿಎಆರ್ 2018 ದಿನಾಂಕ: 27.08.2018**ರಲ್ಲಿ ನಿಗಮ, ಮಂಡಳಿ, ಸ್ಥಳೀಯ ಸಂಸ್ಥೆಗಳು, ಪ್ರಾಧಿಕಾರಗಳು ಹಾಗೂ ಸ್ವಾಯತ್ತ ಸಂಸ್ಥೆಗಳು ತಮ್ಮಲ್ಲಿರುವ ಹೆಚ್ಚುವರಿ ನಿಧಿಯನ್ನು (Excess Fund) ಹೂಡಿಕೆ ಮಾಡುವಾಗ ಅನುಸರಿಸಬೇಕಾದ ಮಾರ್ಗಸೂಚಿಗಳ ಬಗ್ಗೆ ವಿವರಿಸಲಾಗಿದ್ದು, ಸದರಿ ಸುತ್ತೋಲೆಯ ಕ್ರಮಸಂಖ್ಯೆ 05 ರಂತೆ ಮೇಲ್ಕಂಡ ಸಂಸ್ಥೆಗಳು ರೂ. 1.00 ಕೋಟಿ ಅಥವಾ ಅದಕ್ಕಿಂತ ಹೆಚ್ಚು ಮೊತ್ತವನ್ನು ಹೂಡಿಕೆ ಮಾಡುವಾಗ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸ್ಪರ್ಧಾತ್ಮಕ ದರಪಟ್ಟಿಗಳನ್ನು ಕರೆದು ಹೆಚ್ಚು ಬಡ್ಡಿ ಮೊತ್ತವನ್ನು ನಮೂದಿಸಿರುವ ಬ್ಯಾಂಕುಗಳ ವಿವರಗಳನ್ನು ಮಾರ್ಗಸೂಚಿಗಳನ್ವಯ ಪರಿಶೀಲಿಸಿ ತದನಂತರ ಹೂಡಿಕೆ ಮಾಡಬೇಕಾಗಿರುತ್ತದೆ.

ಮಾರ್ಗಸೂಚಿಯಲ್ಲಿ ನೀಡಿರುವಂತೆ ಹೂಡಿಕೆಗಳನ್ನು ನಿರ್ವಹಿಸಬೇಕಾಗಿರುತ್ತದೆ ಹಾಗೂ ಪರಿಣಾಮಕಾರಿ ಹೂಡಿಕೆ ನೀತಿಯನ್ನು ರಚಿಸಿಕೊಂಡು ಸೂಕ್ತ ರೀತಿಯಲ್ಲಿ ಹೂಡಿಕೆ ಮಾಡಲು ಸೂಚಿಸಿದೆ. ಮುಂದುವರೆದು, ಹೂಡಿಕೆಗಳ ಕುರಿತು ಬ್ಯಾಂಕ್ ದೃಢೀಕರಣ ಒದಗಿಸಿರುವುದಿಲ್ಲ.

ಲೆಕ್ಕವಿಚಾರಣೆ ಪತ್ರ ಸಂ.47, ದಿನಾಂಕ 29.06.2022ರಲ್ಲಿ ಹೂಡಿಕೆಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ನೀಡುವಂತೆ ಕೋರಲಾಗಿ, ನೀಡಿರುವ ಅನುಸರಣೆ ರೀತ್ಯಾ ವಿಶ್ವವಿದ್ಯಾಲಯದ ಹೂಡಿಕೆಗಳು ವಿವರ ಕೆಳಕಂಡಂತಿದೆ:-

| | |
|---|---|
| ಆರಂಭಿಕ ಶಿಲ್ಕು ರೂ. | **5,23,63,818.00** |
| 2020-21ನೇ ಸಾಲಿನ ಹೂಡಿಕೆಗಳು | 1,50,000.00 |
| **ಸ್ವೀಕೃತಿ (ಬಡ್ಡಿ ಮೊತ್ತ)** | **31,90,415.00** |
| ಒಟ್ಟು | **5,57,04,233.00** |
| **TDS** | 4,55,271.00 |
| ನಿಶ್ಚಿತ ಠೇವಣಿಯನ್ನು ಹಿಂಪಡೆದಿರುವುದು | **17,72,383.00** |
| ಅಂತಿಮ ಶಿಲ್ಕು ರೂ. | **5,34,76,579.00** |

**ಆದರೆ 2019-20ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಹೂಡಿಕೆಗಳ ಅಂತಿಮ ಶಿಲ್ಕು ರೂ.7,70,71,660.00 ಗಳಾಗಿದ್ದು, ಇದು 2020-21ನೇ ಸಾಲಿನ ಆರಂಭಿಕ ಶಿಲ್ಕು ಆಗಬೇಕಾಗಿರುತ್ತದೆ. ಆದ್ದರಿಂದ 2020-21ನೇ ಸಾಲಿನ ಹೂಡಿಕೆಗಳ ಬಗ್ಗೆ ಸ್ಪಷ್ಟ ಮಾಹಿತಿ ಇರುವುದಿಲ್ಲ.**

### 14.1 Corpus fund.

2020-21ನೇ ಸಾಲಿನ ಅಡಾವೆ ಪತ್ರದಲ್ಲಿ ಹೊಣೆಗಾರಿಕೆಯಲ್ಲಿ Corpus fund ಶೀರ್ಷಿಕೆಯಡಿಯಲ್ಲಿ ರೂ.57,320/- ಗಳೆಂದು ನಮೂದಿಸಲಾಗಿದೆ. ನಿರ್ದಿಷ್ಟ ಚಟುವಟಿಕೆಗಳಿಗೆ ಹಣಕಾಸು ಒದಗಿಸಲು Corpus ನಿಧಿಯನ್ನು ರಚಿಸಲಾಗಿದೆ. ಪರಿನಿಯಮಗಳನ್ನು ರಚಿಸಿ ಅದರಂತೆ, ಹಣಕಾಸಿಗೆ ಸಂಬಂಧಿಸಿದಂತೆ ಮೊತ್ತವನ್ನು ಹೂಡಿಕೆಯನ್ನಾಗಿಟ್ಟು ಅದರ ಬಡ್ಡಿಯಿಂದ ನಿರ್ದಿಷ್ಟ ಚಟುವಟಿಗಳಿಗೆ ಬಳಸಬಹುದಾಗಿದೆ. ಈ ಬಗ್ಗೆ ವಿಚಾರಣಾ ಪತ್ರ ಸಂಖ್ಯೆ: 48, ದಿನಾಂಕ: 29.06.2022 ರಂದು ಕೇಳಲಾಗಿತ್ತು. ವಿಶ್ವವಿದ್ಯಾಲಯ ಆರಂಭದಿಂದಲೂ Corpus ನಿಧಿಯನ್ನು ಬಳಸದೇ/ ಹೆಚ್ಚಿಸದೇ ಇರುವುದು ಕಂಡುಬಂದಿದೆ. ಸೂಕ್ತ ಪರಿನಿಯಮ ಹಾಗೂ ಮಾರ್ಗಸೂಚಿಗಳನ್ನು (Operational Guidelines) ರಚಿಸಿಕೊಂಡು Corpus ನಿಧಿಯನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಸೂಚಿಸಿದೆ.

### 14.2 ವಿದ್ಯಾರ್ಥಿ ವೇತನ ಖಾತೆ (Scholarship A/c) ಸಂಬಂಧಿಸಿದಂತೆ ರೂ.8,68,900/-ಗಳ ಆಕ್ಷೇಪಣೆ.

2020-21ನೇ ಸಾಲಿನಲ್ಲಿ ವಿದ್ಯಾರ್ಥಿವೇತನ ಖಾತೆಯನ್ನು ಪರಿಶೀಲಿಸಲಾಗಿ, ಆರಂಭಿಕ ಶಿಲ್ಕು ರೂ.8,68,900/-ಗಳಿದ್ದು, ಸದರಿ ಸಾಲಿನಲ್ಲಿ ಸರ್ಕಾರದಿಂದ ಯಾವುದೇ ವಿದ್ಯಾರ್ಥಿವೇತನವು ಬಿಡುಗಡೆಯಾಗಿರುವುದಿಲ್ಲ. 2016-17ನೇ ಸಾಲಿನಲ್ಲಿ ಇಡಿ 297 ಯುಎನ್ಇ 2016, ಬೆಂಗಳೂರು, ದಿ.13.02.2016 ರಲ್ಲಿ 80 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಸದರಿ ಆದೇಶದಲ್ಲಿ ಇಡಿ69 ಹೆಚ್‌ಪಿಯು 2016, ದಿನಾಂಕ 25.04.2016ರರಲ್ಲಿ ನಿಗದಿಪಡಿಸಿರುವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ ಎಂದು ತಿಳಿಸಿದ್ದು, ಸದರಿ ಪತ್ರದ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ. ಈ ಬಗ್ಗೆ 2020-21ನೇ ಸಾಲಿನಲ್ಲಿ ಯಾವುದೇ ವಿದ್ಯಾರ್ಥಿಗೆ ವಿತರಣೆ ಮಾಡಿರುವುದಿಲ್ಲ. ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದಂತೆ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಲೆಕ್ಕವಿಚಾರಣೆ ಪತ್ರ ಸಂ.03. ದಿನಾಂಕ 19.05.2022ರಲ್ಲಿ ಕೋರಲಾಗಿ ಅನುಸರಣೆಯನ್ನು ಒದಗಿಸಿದ್ದು, ಸದರಿ ಮೊಬಲಗನ್ನು ಸರ್ಕಾರದ ಮುಂದಿನ ನಿರ್ದೇಶನದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ.

ಸದರಿ ಮೊಬಲಗಿನ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವವರೆಗೆ ಅಡಾವೆ ಪತ್ರದಲ್ಲಿ ನಮೂದಿಸಿರುವ ಮೊಬಲಗು ರೂ.8,68,900/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**14.3 ಬೇಡಿಕೆ ಹುಂಡಿಗಳನ್ನು ನಗದೀಕರಿಸಿಕೊಳ್ಳದೇ ಉಳಿಸಿಕೊಂಡಿರುವುದು. ರೂ.12,960/–ಗಳ ವಸೂಲಾತಿ.**

ಅಡಾವೆ ಪತ್ರದಲ್ಲಿ ಎಲ್ಲಾ ಬ್ಯಾಂಕ್ ಖಾತೆಗಳ ಅಂತಿಮ ಶಿಲ್ಕನ್ನು ಲೆಕ್ಕ ಸಮನ್ವಯ ಪಟ್ಟಿಯೊಂದಿಗೆ ಪರಿಶೀಲಿಸಿದಾಗ, ಹಿಂದಿನ ಸಾಲಿನ ಬೇಡಿಕೆ ಹುಂಡಿಗಳ ಒಟ್ಟು ಮೊತ್ತ ರೂ. **12,960.00** ನಗದಾಗದಿರುವುದು ಕಂಡುಬಂದಿರುತ್ತದೆ. ವಿಶ್ವವಿದ್ಯಾಲಯವು ಈ ಬಗ್ಗೆ ಬ್ಯಾಂಕ್‌ನೊಂದಿಗೆ ಪತ್ರ ವ್ಯವಹಾರ ನಡೆಸಿದ್ದು, ತಾಂತ್ರಿಕ ದೋಷಗಳ ಕಾರಣದಿಂದಾಗಿ ಜಮೆಗೊಂಡಿರುವುದಿಲ್ಲ ಎಂದು ತಿಳಿಸಿರುತ್ತಾರೆ. ನಗದೀಕರಿಸಲು ಸಾಧ್ಯವಾಗದ ಬೇಡಿಕೆ ಹುಂಡಿಗಳನ್ನು ಸೂಕ್ತ ಲೆಕ್ಕ ನಮೂದಿನಿಂದ ಸಮನ್ವಯಗೊಳಿಸುವುದು ಅತ್ಯವಶ್ಯಕವಾಗಿದೆ. ಬ್ಯಾಂಕ್ ಅಧಿಕಾರಿಗಳೊಂದಿಗೆ ಮತ್ತೊಮ್ಮೆ ಪತ್ರ ವ್ಯವಹಾರ ನಡೆಸಿ ಕೂಡಲೇ ನಗದೀಕರಣಗೊಳಿಸಿಕೊಳ್ಳುವುದು. ಈ ಬಗ್ಗೆ ಆಡಳಿತಾತ್ಮಕ ಕ್ರಮ ಕೈಗೊಂಡು ರೂ.12,960/– ಗಳನ್ನು ಬ್ಯಾಂಕುಗಳಿಂದ ವಸೂಲಿಸಿ ವಿಶ್ವವಿದ್ಯಾಲಯದ ನಿಧಿಗೆ ಜಮೆ ಮಾಡಲು ಸೂಚಿಸಿದೆ.

| ಖಾತೆ ಸಂಖ್ಯೆ | ದಿನಾಂಕ | ಚೆಕ್/ಡಿ.ಡಿ ಸಂಖ್ಯೆ | ಚೆಕ್/ಡಿ.ಡಿ. ದಿನಾಂಕ | ಜಮೆ ಮೊತ್ತ (ರೂ.ಗಳಲ್ಲಿ) |
|---|---|---|---|---|
| 64187713727 (Exam Section) | 04.12.2019 | 157071 | 04.12.2019 | 170.00 |
| 64181271353 (Prasaranga section) | 29.06.2019 | 268095 | 29.06.2019 | 6,490.00 |
| 64069994360 (Finance Office a/c) | 04.02.2020 | 180593 | 28.01.2020 | 500.00 |
| | 29.02.2020 | 547712 | 17.02.2020 | 1,000.00 |
| | 29.02.2020 | 268553 | 28.02.2020 | 1,800.00 |
| | 02.09.2020 | 388596 | 27.08.2020 | 1,000.00 |
| | 02.09.2020 | 388599 | 27.08.2020 | 1,000.00 |
| | 02.09.2020 | 388598 | 27.08.2020 | 1,000.00 |
| | | | **ಒಟ್ಟು ಮೊತ್ತ** | **12,960.00** |

**14.4 ನಗದು ಪುಸ್ತಕ:–**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಜಮೆ ಮತ್ತು ಪಾವತಿಗಳಿಗೆ ಸಂಬಂಧಿಸಿದಂತೆ ಒಟ್ಟು 11 ಎಸ್.ಬಿ.ಐ. ಖಾತೆಗಳಲ್ಲಿ ವಹಿವಾಟನ್ನು ನಡೆಸಿದ್ದು, ಜಮೆ ಮತ್ತು ಪಾವತಿಗಳಿಗೆ ಸಂಬಂಧಿಸಿದಂತೆ ನಗದು ಪುಸ್ತಕವನ್ನು ನಿರ್ವಹಿಸಿರುವುದಿಲ್ಲ.

ಕರ್ನಾಟಕ ಆರ್ಥಿಕ ಸಂಹಿತೆ 1958 ರ ಆರ್ಟಿಕಲ್ 327 ರಿಂದ 331 ರ ಅನ್ವಯ ನಗದು ಪುಸ್ತಕವನ್ನು ನಿರ್ವಹಿಸಬೇಕಾಗಿರುತ್ತದೆ ಹಾಗೂ ಪ್ರತಿ ತಿಂಗಳ ಕೊನೆಯ ದಿನಾಂಕದಂದು ನಗದು ಪುಸ್ತಕವನ್ನು ಮುಕ್ತಾಯ ಮಾಡಿ ಬಟವಾಡೆ ಅಧಿಕಾರಿಯು ದೃಢೀಕರಣದೊಂದಿಗೆ ನಗದು ಪುಸ್ತಕದಲ್ಲಿ ಸಹಿ ಮಾಡಬೇಕಾಗಿರುತ್ತದೆ. ವಿಶ್ವವಿದ್ಯಾಲಯದ ಪ್ರವೇಶ ಶುಲ್ಕಗಳು, ಸರ್ಕಾರ ಮತ್ತು ಸರ್ಕಾರೇತರ ಅನುದಾನಗಳ ಸ್ವೀಕೃತಿಗಳು, ಕಾಮಗಾರಿ ವೆಚ್ಚಗಳು, ಸರಕು ಸಂಗ್ರಹಣಾ ಪಾವತಿಗಳು, ಉತ್ತರ ಪುಸ್ತಕಗಳ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಸಂಭಾವನೆ, ಪ್ರಯಾಣ ಭತ್ಯೆ, ಸಂಚಾರ ಭತ್ಯೆ, ಪರೀಕ್ಷಾ ಕಾರ್ಯಕ್ಕೆ ಸಂಬಂಧಿಸಿದಂತೆ ಸಂಗ್ರಹಣೆ ಮಾಡಲಾದ ವಿವಿಧ ರೀತಿಯ ಲೇಖನ

ಸಾಮಗ್ರಿಗಳ ವೆಚ್ಚ, ಜಾಹೀರಾತು ವೆಚ್ಚ, ಕಛೇರಿ ವೆಚ್ಚ, ವಾಹನ ಬಾಡಿಗೆ ಇತ್ಯಾದಿ ವೆಚ್ಚಕ್ಕೆ ಸಂಬಂಧಿಸಿದಂತೆ ಚೆಕ್ಕುಗಳ ಮೂಲಕ ಹಣ ಪಾವತಿಸಿರುವುದು ಕಂಡುಬರುತ್ತದೆ. ಆದರೆ, ಜಮೆ ಮತ್ತು ಪಾವತಿಗಳ ದೈನಂದಿನ ಹಣಕಾಸು ವ್ಯವಹಾರಗಳನ್ನು ದಾಖಲಿಸಲು ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ 327 ರಿಂದ 331ರ ನಿಯಮದಂತೆ ಸಾಮಾನ್ಯ ನಗದುಪುಸ್ತಕವನ್ನು ನಿರ್ವಹಿಸಿರುವುದಿಲ್ಲ. ಮುಂದುವರೆದು, ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ 4(ಬಿ) (ii) ರಲ್ಲಿನ ನಿಯಮಗಳನ್ನು ಅನುಷ್ಠಾನಗೊಳಿಸಿಲ್ಲ. ಮೇಲ್ಕಂಡ ನಿಯಮಗಳಂತೆ ಕಡ್ಡಾಯವಾಗಿ ಪ್ರತಿ ಲೆಕ್ಕಖಾತೆಗೆ ಪ್ರತ್ಯೇಕವಾಗಿ ನಗದು ಪುಸ್ತಕವನ್ನು ನಿರ್ವಹಿಸುವಂತೆ ಸೂಚಿಸಲಾಗಿದೆ.

**14.5 2020–21ನೇ ಸಾಲಿನ ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಟ್ಟಂತೆ ಸ್ಥಿರಾಸ್ತಿ ಮತ್ತು ಚರಾಸ್ತಿಗಳ ಪೀಠೋಪಕರಣ, ವಾಹನಗಳು ಮತ್ತು ಇತರೆ ದಾಸ್ತಾನುಗಳ ನಿರ್ವಹಣೆಯಾಗಿರುವುದಿಲ್ಲ.**

ವಿಶ್ವವಿದ್ಯಾಲಯ ದಾಖಲೆಗಳು ಲೆಕ್ಕಪತ್ರಕ್ಕೆ ಹೊಂದಿಕೊಳ್ಳುವಂತೆ ನೋಡಿಕೊಳ್ಳುವುದು ಅತ್ಯಾವಶ್ಯಕ. ಸೂಕ್ತ ದಾಖಲಾತಿ ಮತ್ತು ಲೆಕ್ಕಪತ್ರ ಇಲ್ಲದಲ್ಲಿ ಆಸ್ತಿಯನ್ನು ವಿಶ್ವವಿದ್ಯಾಲಯ ಕಳೆದುಕೊಳ್ಳುವ ಸಂಭವವಿರುತ್ತದೆ. ದಾಖಲಾತಿ ಮತ್ತು ಲೆಕ್ಕಪತ್ರಗಳನ್ನು ಕ್ರಮಬದ್ಧಗೊಳಿಸಲು ಸೂಚಿಸಿದೆ. ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟ ಎಲ್ಲಾ ಸ್ಥಿರ ಮತ್ತು ಚರಾಸ್ತಿಗಳು, ಪೀಠೋಪಕರಣಗಳು, ವಾಹನಗಳು ಇತರೆ ವಸ್ತುಗಳ ದಾಸ್ತಾನು ವಹಿಗಳನ್ನು ನಿರ್ವಹಿಸಿ, ಪ್ರತಿ ವರ್ಷದ ಮಾರ್ಚ್ ಮಾಹೆಯ ಅಂತ್ಯಕ್ಕೆ ಭೌತಿಕ ದಾಸ್ತಾನು ಪರಿಶೀಲನೆ ನಡೆಸಲು ಸೂಚಿಸಿದೆ.

**15. ಆಸ್ತಿಗಳ ಸೃಜನೆಗೆ ಬಿಡುಗಡೆಯಾದ ಸಹಾಯಾನುದಾನವನ್ನು ಮಾರ್ಗಪಲ್ಲಟ (Diversion of Fund) ಮಾಡಿ ಇತರೆ ಖರ್ಚುಗಳಿಗೆ ಬಳಸಿಕೊಂಡಿರುವುದು ಹಾಗೂ ಪೂರ್ಣ ಪ್ರಮಾಣಕ್ಕೆ ಬಳಕೆ ಪ್ರಮಾಣ ಪತ್ರ ಸಲ್ಲಿಸಿರುವುದು.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ED.106/HPU/2020 ದಿನಾಂಕ:18.08.2020ರಲ್ಲಿ ಲೆಕ್ಕಶೀರ್ಷಿಕೆ 2202–05–103–0–23–103 ಅಡಿಯಲ್ಲಿ ಆಸ್ತಿಗಳ ಸೃಜನೆಗಾಗಿ ಸರ್ಕಾರದಿಂದ ಒಟ್ಟು 1 ಕೋಟಿ (25,00,000*2 & 50,00,000 * 1 ಕಂತುಗಳು) ಸಹಾಯಾನುದಾನ ಬಿಡುಗಡೆ ಮಾಡಿರುತ್ತದೆ. ಇದನ್ನು ಅಭಿವೃದ್ಧಿ ಅನುದಾನ (Developmental Grant) ಶೀರ್ಷಿಕೆಯಲ್ಲಿ ನಿರ್ವಹಿಸಿದ್ದು, 2020–21ನೇ ಸಾಲಿನಲ್ಲಿ ರೂ.1,30,54,538/– ಗಳು ವೆಚ್ಚವಾಗಿರುತ್ತದೆ. ಸದರಿ ವೆಚ್ಚವನ್ನು ಆದಾಯ ಮತ್ತು ವೆಚ್ಚ ತಃಖ್ತೆ (Income & Expenditure) ರಾಜಸ್ವ ವೆಚ್ಚವಾಗಿ Revenue Expenditure ತೋರಿಸಲಾಗಿದೆ. ಆಸ್ತಿಗಳ ಸೃಜನೆಗೆ ನೀಡಿದ ಸಹಾಯಾನುದಾನವನ್ನು ಇತರೆ ಉದ್ದೇಶಗಳಿಗಾಗಿ ಬಳಸಿಕೊಂಡಿದ್ದು, ಈ ಬಗ್ಗೆ ವಿವರಣೆ ನೀಡುವಂತೆ, ವಿಚಾರಣಾ ಪತ್ರ ಸಂಖ್ಯೆ: 36, ದಿ:17.06.2022 ರಲ್ಲಿ ಕೋರಲಾಗಿತ್ತು. ನೀಡಿರುವ ಅನುಸರಣೆಯಲ್ಲಿ ಅನುದಾನವನ್ನು ವೆಚ್ಚ ಮಾಡಿರುವ ವಿವರಗಳನ್ನು ಸಲ್ಲಿಸಿದ್ದು, ವಿಶ್ವವಿದ್ಯಾಲಯದ ದೈನಂದಿನ ನಿರ್ವಹಣೆ ಮತ್ತು ಅಭಿವೃದ್ಧಿ ಕಾರ್ಯಗಳಿಗಾಗಿ ಇದೇ ಅನುದಾನದ ಮೇಲೆ ಅವಲಂಬಿತವಾಗಿರುವುದಾಗಿ ತಿಳಿಸಿರುತ್ತಾರೆ. ಈ ಬಗ್ಗೆ ಸರ್ಕಾರದೊಂದಿಗೆ ಪತ್ರ ವ್ಯವಹಾರ ನಡೆಸಿ ಸರಿಪಡಿಸಿಕೊಳ್ಳಲು ಸೂಚಿಸಿದೆ.

**16. ಬ್ಲಾಕ್ ಗ್ರಾಂಟ್ ಖಾತೆಯ ವಿವರಗಳು. (Block Grants)**

2020–21ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಿದಾಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ 11 ಅನುದಾನಿತ ಸಂಸ್ಕೃತ ಕಾಲೇಜುಗಳು ಹಾಗೂ 281 ಅನುದಾನಿತ ಪಾಠಶಾಲೆಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವೇತನ ಮತ್ತು ಇತರೆ ಭತ್ಯೆಗಳು, ನಿವೃತ್ತಿ ವೇತನಗಳಿಗೆ ಸಂಬಂಧಿಸಿದ ಪಾವತಿಗಳಿಗೆ ಸಂಬಂಧಿಸಿದಂತೆ, ಸರ್ಕಾರದಿಂದ ಅನುದಾನವನ್ನು ಸ್ವೀಕರಿಸಲಾಗುತ್ತಿದೆ. ವಿಶ್ವವಿದ್ಯಾಲಯವು ಇದನ್ನು ಪ್ರತ್ಯೇಕ ಖಾತೆಯಲ್ಲಿ ನಿರ್ವಹಿಸುತ್ತಿದ್ದು, ಸದರಿ ಅನುದಾನದ ಬ್ಯಾಂಕ್ ಉಳಿತಾಯ ಖಾತೆಯ ಸಂಖ್ಯೆ:

64140220134 ರ ಸ್ವೀಕೃತಿ ಮತ್ತು ಪಾವತಿಗಳನ್ನು ಪರಿಶೀಲಿಸಲಾಗಿ, ವಾರ್ಷಿಕ ಲೆಕ್ಕಪತ್ರಗಳನ್ವಯ, ಆರ್ಥಿಕ ಪರಿಸ್ಥಿತಿ ಈ ಕೆಳಕಂಡಂತಿರುತ್ತದೆ:

**ಬ್ಲಾಕ್ ಗ್ರಾಂಟ್ ಖಾತೆಯ ಎಸ್.ಬಿ.ಐ.ಉಳಿತಾಯ ಖಾತೆ ಸಂಖ್ಯೆ: 64140220134**

**(ರೂ. ಗಳಲ್ಲಿ)**

| **ವಿವರಗಳು** | | |
|---|---|---|
| **ಸ್ವೀಕೃತಿಗಳು** | | |
| ಪ್ರಾರಂಭ ಶಿಲ್ಕು | | **7,78,27,995.00** |
| ಸರ್ಕಾರದಿಂದ ಅನುದಾನ ಬಿಡುಗಡೆ | 41,34,09,148.00 | |
| ಇತರೆ ಸ್ವೀಕೃತಿಗಳು | 51,267.00 | |
| ಬಡ್ಡಿ ಸ್ವೀಕೃತಿ | 17,01,884.00 | |
| **ಒಟ್ಟು ಸ್ವೀಕೃತಿ** | | **41,51,62,299.00** |
| **ಪಾವತಿಗಳು** | | |
| ವೇತನ ಪಾವತಿ | 40,81,16,361.00 | |
| ತುಟ್ಟಿಭತ್ಯೆ ವ್ಯತ್ಯಾಸದ ಮೊತ್ತ ಪಾವತಿ | 1,60,77,866.00 | |
| ನಿವೃತ್ತ ನೌಕರರಿಗೆ ಗಳಿಕೆ ರಜೆ ನಗದೀಕರಣ ಸೌಲಭ್ಯ | 2,18,66,916.00 | |
| ಬೋಧಕೇತರ ಸಿಬ್ಬಂದಿಗಳಿಗೆ ಗಳಿಕೆರಜೆ ನಗಧೀಕರಣ ಸೌಲಭ್ಯ | 2,98,860.00 | |
| ಬ್ಯಾಂಕ್ ಶುಲ್ಕ | 0 | |
| ಹಣಕಾಸು ಅಧಿಕಾರಿಗಳ ಖಾತೆಗೆ ವರ್ಗಾವಣೆ | 59,61,069.00 | **45,23,21,072.00** |
| **ಅಂತಿಮ ಶಿಲ್ಕು** | **ರೂ.** | **4,06,69,222.00** |

2020–21ನೇ ಸಾಲಿನಲ್ಲಿ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಅನುದಾನಿತ ಕಾಲೇಜುಗಳು ಹಾಗೂ ಪಾಠಶಾಲೆಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವೇತನ ಹಾಗೂ ಭತ್ಯೆಗಳಿಗಾಗಿ, ರಾಜ್ಯ ಸರ್ಕಾರದಿಂದ ರೂ.41,34,09,148.00ಗಳ ಬ್ಲಾಕ್ ಗ್ರಾಂಟ್ ಬಿಡುಗಡೆಯಾಗಿದ್ದು, ಒಟ್ಟು ರೂ.45,23,21,072.00ಗಳು ವೆಚ್ಚವಾಗಿರುತ್ತದೆ. ಲೆಕ್ಕಪರಿಶೋಧನೆಗೆ ಒದಗಿಸಲಾದ ಅನುದಾನಿತ ಸಂಸ್ಕೃತ ಕಾಲೇಜುಗಳ ಹಾಗೂ ಪಾಠಶಾಲೆಗಳ ಏಪ್ರಿಲ್–2020 ರಿಂದ ಮಾರ್ಚ್–2021 ರವರೆಗೆ ಮಾಹೆವಾರು ಪಾವತಿಸಲಾದ ವೇತನ ಮತ್ತು ಭತ್ಯೆಗಳು, ನಿವೃತ್ತಿ ವೇತನಕ್ಕೆ ಸಂಬಂಧಿಸಿದ ಪಾವತಿಗಳು ಹಾಗೂ ಇತರೆ ವೆಚ್ಚಗಳ ವಿವರಗಳ ವಿಶ್ವವಿದ್ಯಾಲಯವು ಪರೀಕ್ಷಾರ್ಥ ತಪಾಸಣೆಯನ್ನು ಮಾಡಲಾಗಿದೆ. ಸದರಿ ವೇತನ ಹಾಗೂ ಇತರೆ ಪಾವತಿಗಳನ್ನು ಮಾಡುವ ಮುನ್ನ ಕೆಳಕಂಡಂತೆ ಪರಿಶೀಲಿಸಿ ಪಾವತಿಸಲು ಸೂಚಿಸಿದೆ.

1. ಸದರಿ ಅನುದಾನಿತ/ಅನುದಾನರಹಿತ ಕಾಲೇಜುಗಳು ಮತ್ತು ಪಾಠಶಾಲೆಗಳು ಸಲ್ಲಿಸುವ ವೇತನ ಬಿಲ್ಲುಗಳು/ವೇತನೇತರ ಬಿಲ್ಲುಗಳಲ್ಲಿ ನಮೂದಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಅಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ವಿಶ್ವವಿದ್ಯಾಲಯವು ಭೌತಿಕವಾಗಿ ಪರಿಶೀಲಿಸಿ ಖಾತ್ರಿಪಡಿಸಿಕೊಳ್ಳುವುದು.
2. ಸದರಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಸೇವಾ ಪುಸ್ತಕಗಳ ಆಂತರಿಕ ಪರಿಶೋಧನೆಯನ್ನು ವಿಶ್ವವಿದ್ಯಾಲಯದಿಂದ ಮಾಡುವುದು.
3. ಕಾಲೇಜು/ಪಾಠಶಾಲಾ ಸಿಬ್ಬಂದಿಗಳ ವೇತನ ನಿಗದಿ, ವೇತನ ಬಡ್ತಿ, ಇತರೆ ಆರ್ಥಿಕ ಸೌಲಭ್ಯಗಳನ್ನು ಪಾವತಿಸುವ ಮುನ್ನ ಸೇವಾ ಪುಸ್ತಕಗಳನ್ನು ಪರಿಶೀಲಿಸಿ, ದೃಢೀಕರಿಸಿ ಪಾವತಿಸಬೇಕಾಗಿರುತ್ತದೆ.

4. ಅನುದಾನಿತ ಕಾಲೇಜು/ಪಾಠಶಾಲಾ ಸಿಬ್ಬಂದಿಗಳ ರಜಾ ಖಾತೆಯ ಮಾಹಿತಿಗಳು ಹಾಗೂ ಗಳಿಕೆ ರಜಾ ವೇತನ ಪಾವತಿಯಲ್ಲಿ ಆಡಳಿತ ಮಂಡಳಿಗಳು ಒದಗಿಸಿರುವ ಮಾಹಿತಿಯನ್ನು, ವಿಶ್ವವಿದ್ಯಾಲಯವು ರಜಾ ಖಾತೆಯ ಮಾಹಿತಿಗಳನ್ನು ಪರಿಶೀಲಿಸಿ ಪಾವತಿಸಬೇಕಾಗಿರುತ್ತದೆ.
5. ವಿಶ್ವವಿದ್ಯಾಲಯವು ಅನುದಾನಿತ/ಅನುದಾನರಹಿತ ಕಾಲೇಜುಗಳು ಮತ್ತು ಪಾಠಶಾಲೆಗಳ ವೇತನ ಬಿಲ್ಲುಗಳನ್ನು ಪಾವತಿಸುತ್ತಿದ್ದು, ಹಿಂದಿನ ಮಾಹೆಯ ಬಿಲ್ಲುಗಳಲ್ಲಿ ಕಟಾಯಿಸಲಾಗುತ್ತಿರುವ ಶಾಸನಬದ್ಧ ಹಾಗೂ ವೈಯಕ್ತಿಕ ಕಟಾವಣೆಗಳು ಸಂಬಂಧಿಸಿದ ಇಲಾಖೆಗಳಿಗೆ ಹಾಗೂ ಖಾತೆಗಳಿಗೆ ಜಮೆಯಾಗುತ್ತಿರುವ ಬಗ್ಗೆ, ಮುಂದಿನ ಮಾಹೆಯ ವೇತನವನ್ನು ಪಾವತಿಸುವ ಮುನ್ನ ಖಾತ್ರಿಪಡಿಸಿಕೊಳ್ಳುವುದು.

ವಿಶ್ವವಿದ್ಯಾಲಯವು ಅನುದಾನಿತ/ಅನುದಾನರಹಿತ ಕಾಲೇಜುಗಳು ಮತ್ತು ಪಾಠಶಾಲೆಗಳಿಗೆ ಬಟವಾಡೆ ಅಧಿಕಾರಿಯಾಗಿ ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ (49) ರಿಂದ (57) ರ ಅನುಸಾರ, ಕಾರ್ಯ ನಿರ್ವಹಿಸಬೇಕಾಗಿರುತ್ತದೆ. ಆದ್ದರಿಂದ ಮೇಲ್ಕಂಡ ಅಂಶಗಳ ಬಗ್ಗೆ ಗಮನ ಹರಿಸಿ ಸೂಕ್ತ ಕ್ರಮ ಕೈಗೊಂಡು ನಿಯಮಾನುಸಾರ ವೇತನ ಮತ್ತು ವೇತನೇತರ ಬಿಲ್ಲುಗಳನ್ನು ಪಾವತಿಸಲು ಸೂಚಿಸಿದೆ.

**17. ಯು.ಜಿ.ಸಿ ವೇತನ ಶ್ರೇಣಿಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಸೇವಾ ವಹಿಯಲ್ಲಿನ ನ್ಯೂನತೆಗಳ ಬಗ್ಗೆ.**

**ಸಾಮಾನ್ಯ ನ್ಯೂನತೆಗಳು.**

ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಹಾಗೂ ಸಹಾಯಕ ಪ್ರಾಧ್ಯಾಪಕರು, ಸಹಾಯಕ ಗ್ರಂಥಪಾಲಕರ ಹುದ್ದೆಯ ನೇಮಕಾತಿ ಪೂರ್ವದಲ್ಲಿ ನೇಮಕಾತಿಗೆ ಆಯ್ಕೆಗೊಂಡ ಅಭ್ಯರ್ಥಿಗಳ ನಡತೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 75 ಸೆ/ನೆ/ನಿ 2018 ದಿನಾಂಕ:15.02.2018 ರನ್ವಯ ಪೊಲೀಸ್ ಠಾಣೆಯಿಂದ ವರದಿ ಪಡೆದು ನಂತರ ನೇಮಕಾತಿ ಆದೇಶವನ್ನು ಹೊರಡಿಸಬೇಕಾಗಿರುತ್ತದೆ. ಆದರೆ, ವಿಶ್ವವಿದ್ಯಾಲಯದಲ್ಲಿ ನೇಮಕಗೊಂಡ ಸಿಬ್ಬಂದಿಗಳ ಪರೀಕ್ಷಾ ಅವಧಿ ಘೋಷಣೆ ಮಾಡುವ ಸಂದರ್ಭದಲ್ಲಿ ಸದರಿ ನಿಯಮವನ್ನು ಪಾಲಿಸಲಾಗುತ್ತಿದೆ. ಇನ್ನು ಮುಂದೆ ಸದರಿ ನಿರ್ದೇಶನವನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

- ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಹಾಗೂ ಸಹಾಯಕ ಪ್ರಾಧ್ಯಾಪಕರು, ಸಹಾಯಕ ಗ್ರಂಥಪಾಲಕರ ಹುದ್ದೆಯ ನೇಮಕಾತಿ ಪೂರ್ವದಲ್ಲಿ ನೇಮಕಾತಿಗೆ ಆಯ್ಕೆಗೊಂಡ ಅಭ್ಯರ್ಥಿಗಳ ಶೈಕ್ಷಣಿಕ ಪ್ರಮಾಣ ಪತ್ರಗಳನ್ನು ಹಾಗೂ ಜಾತಿ ಪ್ರಮಾಣ ಪತ್ರಗಳಿಗೆ ಸಂಬಂಧಪಟ್ಟ ವಿಶ್ವವಿದ್ಯಾಲಯ/ ಪಿ.ಯು ಮಂಡಳಿ/ ಎಸ್.ಎಸ್.ಎಲ್.ಸಿ ಬೋರ್ಡ್‌ಗೆ ಹಾಗೂ ತಹಶಿಲ್ದಾರ್‌ರವರಿಗೆ ಕಳುಹಿಸಿ ಪ್ರಮಾಣ ಪತ್ರಗಳ ಸಿಂಧುತ್ವದ ಕುರಿತು ವರದಿಯನ್ನು ಪಡೆಯಬೇಕಾಗಿರುತ್ತದೆ. ಇನ್ನು ಮುಂದೆ ಸದರಿ ನಿರ್ದೇಶನವನ್ನು ಕಟ್ಟುನಿಟ್ಟಾಗಿ ಪಾಲಿಸುವುದು.
- ಸಿಬ್ಬಂದಿಗಳ ವೈಯಕ್ತಿಕ ಕಡತಗಳಲ್ಲಿ ರಜಾ ಅರ್ಜಿ ಪ್ರಪತ್ರ ಹಾಗೂ ರಜೆ ಮಂಜೂರಾತಿ ಪತ್ರಗಳನ್ನು ನಿರ್ವಹಿಸಿರುವುದಿಲ್ಲ. ಸೇವಾವಹಿಗಳಲ್ಲಿಯೂ ಸಹ ರಜೆ ಪಡೆದ ಕುರಿತು ಯಾವುದೇ ವಿವರಗಳನ್ನು ನಮೂದಿಸಿರುವುದಿಲ್ಲ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದು.
- ಸೇವಾವಹಿಗಳ ಪುಟ ಸಂಖ್ಯೆ 3 ರಿಂದ 6ರ ವರೆಗಿನ ಪ್ರಮಾಣ ಪತ್ರಗಳನ್ನು ದೃಢೀಕರಿಸಿರುವುದಿಲ್ಲ.

**18. ಯು.ಜಿ.ಸಿ. ವೇತನ ಶ್ರೇಣಿಯಲ್ಲಿ ವೇತನ ಪಡೆಯುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ಪರೀಕ್ಷಾರ್ಥ ಅವಧಿಯನ್ನು ಘೋಷಿಸಿರುವ ಬಗ್ಗೆ.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2020–21ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲಾಗಿದ್ದು, ಲೆಕ್ಕಪರಿಶೋಧನೆಗೆ ಒದಗಿಸಿರುವ ಮಾಹಿತಿಯಂತೆ, ವಿಶ್ವವಿದ್ಯಾಲಯದಲ್ಲಿ ಯು.ಜಿ.ಸಿ. ವೇತನ

ಶ್ರೇಣಿಯಲ್ಲಿ ವೇತನ ಪಡೆಯುತ್ತಿರುವ ಒಟ್ಟು 25 ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, ದಿನಾಂಕ: 31.03.2021ರ ಅಂತ್ಯಕ್ಕೆ ಒಟ್ಟು 23 ಬೋಧಕ ಸಿಬ್ಬಂದಿಗಳ ಮತ್ತು 2 ಬೋಧಕೇತರ ಸಿಬ್ಬಂದಿಗಳ ಪರೀಕ್ಷಾರ್ಥ ಅವಧಿಯನ್ನು ಘೋಷಿಸಲಾಗಿದೆ.

ಆದರೆ, ಬೋಧಕ ಸಿಬ್ಬಂದಿಗಳ ಪರೀಕ್ಷಾರ್ಥ ಅವಧಿಯನ್ನು ಘೋಷಿಸಲು 2017–18 ರವರೆಗೆ ಕೇವಲ ಎರಡು ವರ್ಷಗಳ ಸೇವಾ ಅವಧಿಯನ್ನು ಮಾತ್ರ ಪರಿಗಣಿಸಿದ್ದು, 2018–19 ರಿಂದ ಸದರಿ ಬೋಧಕ ಸಿಬ್ಬಂದಿಗಳಿಂದ PBAS(Performance based Self appraisal System) ಪಡೆದುಕೊಂಡು ಪರೀಕ್ಷಾರ್ಥ ಅವಧಿಯ ಘೋಷಣೆಯನ್ನು ಮಾಡುತ್ತಿದ್ದು, ಉಳಿದಂತೆ ಯಾವುದೇ ಮಾನದಂಡಗಳನ್ನು ಅನುಸರಿಸಿರುವುದು ಕಂಡುಬಂದಿರುವುದಿಲ್ಲ.

ಸರ್ಕಾರದ ಆದೇಶ ಸಂಖ್ಯೆ: ED 37 UNE 2009, BANGALORE, DATED: **24–12–2009** ರ ಕ್ರಮ ಸಂಖ್ಯೆ: 7(x) ರಲ್ಲಿ ಬೋಧಕ ಸಿಬ್ಬಂದಿಗಳ ಪರೀಕ್ಷಾರ್ಥ ಅವಧಿ ಘೋಷಣೆಗೆ ಸಂಬಂಧಿಸಿದಂತೆ ಕೆಳಕಂಡಂತೆ ಉಲ್ಲೇಖಿಸಲಾಗಿರುತ್ತದೆ.

> "As from 11.07.2009 the qualifications of NET/SLET is compulsory in addition to the departmental examinations General Law Part – I and Part – II besides Accounts Higher and Orientation Course being conducted by the Department of Higer Education"

ಆದರೆ, ಅನುಬಂಧದಲ್ಲಿ ಲಗತ್ತಿಸಿರುವ ಬೋಧಕ ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ಪರಿಶೀಲಿಸಿದಾಗ, ಮೇಲ್ಕಂಡ ಪರೀಕ್ಷಾರ್ಥ ಅವಧಿ ಘೋಷಣೆಗೆ ಸರ್ಕಾರದ ಆದೇಶದಂತೆ, ಅನುಸರಿಸಬೇಕಾದ ಮಾನದಂಡಗಳನ್ನು ಅನುಸರಿಸದೇ ಘೋಷಣೆ ಮಾಡಿರುವುದು ಕಂಡುಬಂದಿರುತ್ತದೆ.

ಮುಂದುವರೆದು, ಯು.ಜಿ.ಸಿ. ವೇತನ ಶ್ರೇಣಿಯಲ್ಲಿ ವೇತನ ಪಡೆಯುತ್ತಿರುವ ಬೋಧಕೇತರ ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ, ಪರೀಕ್ಷಾರ್ಥ ಅವಧಿ ಘೋಷಣೆಗೆ ಕೇವಲ ಎರಡು ವರ್ಷಗಳ ಸೇವಾ ಅವಧಿಯನ್ನು ಮಾತ್ರ ಪರಿಗಣಿಸಿದ್ದು, ಅವರಿಗೆ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣಗೊಳ್ಳುವ ಬಗ್ಗೆ ಸರ್ಕಾರದಿಂದ ವಿನಾಯಿತಿಯನ್ನು ನೀಡಿದಲ್ಲಿ ಮಾಹಿತಿಯನ್ನು ಒದಗಿಸುವಂತೆ ತಿಳಿಸಿ, ಲೆಕ್ಕ ವಿಚಾರಣಾ ಪತ್ರ ಸಂಖ್ಯೆ: 46, ದಿನಾಂಕ: 29.06.2022 ನ್ನು ನೀಡಲಾಗಿತ್ತು. ವಿಶ್ವವಿದ್ಯಾಲಯವು ದಿನಾಂಕ:29.06.2022 ರಂದು ನೀಡಿರುವ ಅನುಸರಣಾ ಉತ್ತರದಲ್ಲಿ ಸಾಮಾನ್ಯವಾಗಿ ವಿಶ್ವವಿದ್ಯಾಲಯದಲ್ಲಿ ಯು.ಜಿ.ಸಿ ವೇತನ ಶ್ರೇಣಿಯ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವುದನ್ನು ಬಗ್ಗೆ ಸರ್ಕಾರದಿಂದ ವಿನಾಯಿತಿಯನ್ನು ನೀಡಿರುವ ಯಾವುದೇ ಮಾಹಿತಿ ಇರುವುದಿಲ್ಲ. ಸಹಾಯಕ ಪ್ರಾಧ್ಯಾಪಕರಾದ ಡಾ: ವನರಾಜ ಬಿ.ಕೆ ಇವರು ಇಲಾಖಾ ಪರೀಕ್ಷೆಗಳನ್ನು ತೇರ್ಗಡೆ ಹೊಂದಿರುವುದಾಗಿ ತಿಳಿಸಿದ್ದು, ನಿಗದಿತ ಇಲಾಖಾ ಪರೀಕ್ಷೆಗಳನ್ನು ತೇರ್ಗಡೆ ಹೊಂದಲು ತಿಳಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ. ಆದ್ದರಿಂದ ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು, ವಿಶ್ವವಿದ್ಯಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಯು.ಜಿ.ಸಿ ವೇತನ ಶ್ರೇಣಿಯ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಇಲಾಖಾ ಪರೀಕ್ಷೆಯನ್ನು ತೆಗೆದುಕೊಂಡು ಸಂಬಂಧಪಟ್ಟ ಪ್ರಮಾಣ ಪತ್ರಗಳನ್ನು ಪಡೆದು ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ.

**19. ವಿಶ್ವವಿದ್ಯಾಲಯದ ರಾಜ್ಯ ವೇತನ ಶ್ರೇಣಿಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ನಿಗದಿತ ಇಲಾಖಾ ಪರೀಕ್ಷೆಗಳನ್ನು ತೆಗೆದುಕೊಳ್ಳದೇ ಇರುವುದು.**

**ಅ)** ವಿಶ್ವವಿದ್ಯಾಲಯದ ಸುತ್ತೋಲೆ ಸಂಖ್ಯೆ: ಕಸಂವಿ/ಇಪನಿ/2016/2019-20/106, ದಿನಾಂಕ: 29.06.2019ರಲ್ಲಿ, ರಾಜ್ಯ ವೇತನ ಶ್ರೇಣಿಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ಇಲಾಖಾ ಪರೀಕ್ಷೆಗಳನ್ನು ನಿಗದಿಪಡಿಸಿ ಆದೇಶ ಹೊರಡಿಸಲಾಗಿದ್ದು, ಸದರಿ ಆದೇಶದಲ್ಲಿ ವಿಶ್ವವಿದ್ಯಾಲಯದ ನೌಕರನು ಆಯಾ ಹುದ್ದೆಗೆ ನಿಗದಿಪಡಿಸಿರುವ ವಿಷಯಗಳಲ್ಲಿ ಆತನು ಸೇವೆಗೆ ಸೇರಿದ ದಿನಾಂಕದಿಂದ ಅವನ ಖಾಯಂ ಪೂರ್ವಾವಧಿ ಸೇವೆಯನ್ನು ತೃಪ್ತಿಕರ ಎಂದು ಘೋಷಿಸುವ ಒಳಗಾಗಿ ಅಂದರೆ ಎರಡು ವರ್ಷದೊಳಗೆ ಉತ್ತೀರ್ಣರಾಗತಕ್ಕದ್ದು, ತಪ್ಪಿದಲ್ಲಿ ನೌಕರನಿಗೆ ನಿಗದಿಪಡಿಸಿದ ವಿಷಯಗಳ ಉತ್ತೀರ್ಣನಾಗುವವರೆಗೆ ಆತನ ಪರೀಕ್ಷಾ ಪೂರ್ವ ಸೇವಾವಧಿ ಕರ್ನಾಟಕ ನಾಗರೀಕ ಸೇವಾ (ಪರೀಕ್ಷತಾ) ಅವಧಿಯನ್ನು ನಿಯಮಗಳು 1977ರ ಪ್ರಕಾರ, ಆತನ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಲಾಗಿದೆ. ಈ ಬಗ್ಗೆ ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾಗಿ, 2020-21ನೇ ಸಾಲಿನಲ್ಲಿ ಅಧಿಕಾರಿ/ಸಿಬ್ಬಂದಿಗಳು ತಮ್ಮ ಪರೀಕ್ಷತಾ ಅವಧಿ ಘೋಷಣಾ ಪೂರ್ವದಲ್ಲಿ ನಿಗದಿಪಡಿಸಿರುವ ಇಲಾಖಾ ಪರೀಕ್ಷೆಗಳನ್ನು ತೆಗೆದುಕೊಂಡು ತೇರ್ಗಡೆಯಾಗದಿದ್ದರೂ ಸಹ, ಅವರ ಪರೀಕ್ಷತಾ ಅವಧಿಯನ್ನು ಘೋಷಿಸಿ, ಅವರಿಗೆ ವಾರ್ಷಿಕ ವೇತನ ಬಡ್ತಿಯ ಸೌಲಭ್ಯವನ್ನು ಸಹ ನೀಡಲಾಗಿದೆ. ವಿವರಗಳು ಕೆಳಕಂಡಂತಿರುತ್ತವೆ.

| ಕ್ರ.ಸಂ. | ಹೆಸರು | ಪದನಾಮ | ತೆಗೆದುಕೊಳ್ಳಬೇಕಾದ ಇಲಾಖಾ ಪರೀಕ್ಷೆಗಳು |
|---|---|---|---|
| 1 | ಪಿ.ಆರ್. ಪಾಗೋಜಿ | ಉಪ ಕುಲಸಚಿವರು | 1. University Office Manual<br>2. PWD higher Part I & II |
| 2 | ಡಾ॥ ಸಂತೋಷ ಎಸ್ ಹಾನಗಲ್ಲ | ಉಪ ನಿರ್ದೇಶಕರು | 1. University Office Manual<br>2. Translation Text Examination |
| 3 | ಶ್ರೀ ಮಹಾವೀರ್ | ಸಿಸ್ಟಮ್ ಅನಾಲಿಸ್ಟ್ | 1. University Office Manual<br>2. Accounts Higher |
| 4 | ಡಾ॥ ಗೋವಿಂದ ಬಿ | ಉಪ ನಿರ್ದೇಶಕರು | 1. University Office Manual<br>2. youth Service Manual<br>3. Translation Text Examination |
| 5 | ವೆಂಕಟೇಶ ವಿ | ಸಹಾಯಕ ಕುಲಸಚಿವರು | University Office Manual |
| 6 | ಶಿವಮೂರ್ತಿ ಎಂ | ಸಹಾಯಕ ಕುಲಸಚಿವರು | University Office Manual |
| 7 | ಡಾ: ಮಲ್ಲನಗೌಡ ಎಸ್ | ಉಪ ನಿರ್ದೇಶಕರು | University Office Manual |
| 8 | ತಿಮ್ಮಣ್ಣ ಆರ್ | ಯೋಜನ ಸಹಾಯಕರು | University Office Manual |
| 9 | ಉದಯನ ಹೆಗ್ಡೆ | -"- | 1. University Office Manual |
| 10 | ಶೃತಿ ಹೆಚ್.ಕೆ | -"- | 1. University Office Manual |
| 11 | ರಾಜಶೇಖರ ಕೆ.ಕೆ | -"- | 1. University Office Manual |
| 12 | ತೇಜಸ್ವಿನಿ ಡಿ | -"- | 1. University Office Manual<br>2. General Law Part-1 & Part-2 |
| 13 | ಜ್ಯೋತಿ ಹೆಚ್.ಪಿ | -"- | 1. University Office Manual |
| 14 | ಶಾಕುಂತಲಭಟ್ | -"- | 1. University Office Manual |
| 15 | ಸಾವಿತ್ರಿ ಪೂಜಾರಿ | -"- | 1. University Office Manual |
| 16 | ನಾರಾಯಣಸ್ವಾಮಿ ಎಂ.ಎಸ್ | -"- | 1. University Office Manual |
| 17 | ರಾಘವ ಕೆ.ಎಲ್ | -"- | 1. University Office Manual |
| 18 | ಜಗನ್ನಾಥ್ ಪೂಜಾರ | -"- | 1. University Office Manual |

| | | | |
|---|---|---|---|
| 19 | ಗಿರೀಶ್ ಭಟ್ | –"– | 1. University Office Manual |
| 20 | ವಿಜಯಲಕ್ಷ್ಮಿ ಕೆ.ಜಿ | –"– | 1. University Office Manual |
| 21 | ಕಾಂತಾಮಣಿ | –"– | 1. University Office Manual |
| 22 | ತೇಜಸ್ವಿನಿ ಬಿದರಿ | –"– | 1. University Office Manual |
| 23 | ಹೇಮರಾಜ್ ಎನ್.ಎಸ್ | –"– | 1. University Office Manual |
| 24 | ವಾಲ್ಮೀಕರಾಮ | –"– | 1. University Office Manual |
| 25 | ಚಂದ್ರಶೇಖರ ಸಿ.ಪಾಟೀಲ್ | –"– | 1. University Office Manual |
| 26 | ನಾಗೇಂದ್ರ ಮೂರ್ತಿ ಆರ್ | ಕಂಪ್ಯೂಟರ್ ಆಪರೇಟರ್ | University Office Manual |
| 27 | ಲೋಕೇಶ ವಿ.ಹೆಚ್ | ಹಿರಿಯ ಸಹಾಯಕರು | University Office Manual |
| 28 | ಪ್ರಶಾಂತ್ ರಡರಟ್ಟಿ | ಗ್ರಂಥಾಲಯ ಸಹಾಯಕರು | University Office Manual |
| 29 | ಗುರುಪ್ರಸಾದ್ ಆರ್ | ಸಹಾಯಕರು | 1. University Office Manual |
| 30 | ಗಣೇಶ ಎಂ | ಸಹಾಯಕರು | University Office Manual |
| 31 | ವಿದ್ಯಾಶಂಕರ ಎಂ.ಎಸ್ | ಡಾಟಾ ಎಂಟ್ರಿ ಆಪರೇಟರ್ | University Office Manual |
| 32 | ಶಿವಕುಮಾರ್ ಹೆಚ್ | ವಾಹನ ಚಾಲಕರು | 1. University Office Manual<br>2. Accounts Lower |
| 33 | ದಿವಾಕರ್ ಕೆ.ಬಿ | ವಾಹನ ಚಾಲಕರು | University Office Manual |
| 34 | ಸುರೇಶ ಎಸ್.ಟಿ | ಕಿರಿಯ ಸಹಾಯಕರು | University Office Manual |
| 35 | ಸಿದ್ದಯ್ಯ ಎಸ್ | ಅತಿಥಿ ಗೃಹ ಮೇಲ್ವಿಚಾರಕರು | 1. University Office Manual<br>2. Accounts Lower |
| 36 | ಪವನ್‌ಕುಮಾರ ಬಿ | ಟೆಲಿಫೋನ್ ಆಪರೇಟರ್ | University Office Manual |
| 37 | ಸುರೇಶ ಬಿ.ಆರ್ | ಕಿರಿಯ ಸಹಾಯಕರು | University Office Manual |
| 38 | ಮಂಜುನಾಥ ಕೋಟಿ | ಕಿರಿಯ ವಾಹನ ಚಾಲಕರು | University Office Manual |
| 39 | ಗಿರೀಶ ಸಿ.ಬಿ | ಟೆಲಿಫೋನ್ ಆಪರೇಟರ್ | University Office Manual |
| 40 | ಶ್ರೀನಿವಾಸ ಮೂರ್ತಿ | ಕಿರಿಯ ಸಹಾಯಕರು | 1. University Office Manual<br>2. Accounts Lower |
| 41 | ಮಂಗಳ ಎಂ | ಅಡುಗೆ ಸಹಾಯಕರು | 1. University Office Manual<br>2. Accounts Lower |

ಈ ಬಗ್ಗೆ ಕೂಡಲೇ ಕ್ರಮ ವಹಿಸಿ, ಮೇಲ್ಕಂಡ ಅಧಿಕಾರಿ/ನೌಕರರು ವಿಶ್ವವಿದ್ಯಾಲಯವು ನಿಗದಿಪಡಿಸಿರುವ ಇಲಾಖಾ ಪರೀಕ್ಷೆಗಳನ್ನು ತೆಗೆದುಕೊಂಡು ತೇರ್ಗಡೆ ಹೊಂದಿರುವ ಬಗ್ಗೆ, ಪ್ರಮಾಣ ಪತ್ರಗಳನ್ನು ಪಡೆದು ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ.

**20. ರಾಜ್ಯ ವೇತನ ಶ್ರೇಣಿಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಸೇವಾ ಪುಸ್ತಕಗಳ ಪರಿಶೀಲನೆ :**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2020–21ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ರಾಜ್ಯ ವೇತನ ಶ್ರೇಣಿಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಸೇವಾ ಪುಸ್ತಕಗಳ ಪರಿಶೀಲಿಸಲಾಗಿ, ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತವೆ:

1. ಸೇವಾ ಪುಸ್ತಕದಲ್ಲಿ ಜನ್ಮ ದಿನಾಂಕವನ್ನು ದೃಢೀಕರಿಸಿರುವುದಿಲ್ಲ.
2. ಪ.ಜಾತಿ/ಪ.ಪಂಗಡ/ಹಿಂದುಳಿದ ವರ್ಗಗಳ ನೌಕರರ ಜಾತಿ ಪ್ರಮಾಣ ಪತ್ರವನ್ನು ಸೇವಾ ಪುಸ್ತಕದಲ್ಲಿ ಅಂಟಿಸಿರುವುದಿಲ್ಲ.
3. ಪುಟ ಸಂಖ್ಯೆ (3) ರಿಂದ (6)ರವರೆಗಿನ ಪ್ರಮಾಣ ಪತ್ರಗಳನ್ನು ದೃಢೀಕರಣ ಮಾಡಿರುವುದಿಲ್ಲ.

4. ಜಂಟಿ ಭಾವಚಿತ್ರಗಳನ್ನು ಲಗತ್ತಿಸಿರುವುದಿಲ್ಲ.
5. ನಿವೃತ್ತಿ ವೇತನದ ಸೌಲಭ್ಯಕ್ಕಾಗಿ ನಾಮ ನಿರ್ದೇಶನಗಳನ್ನು ಪಡೆದಿರುವುದಿಲ್ಲ.
6. ವಿಶ್ವವಿದ್ಯಾಲಯವು ನಿಗದಿಪಡಿಸಿದ ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವ ಬಗ್ಗೆ ಸೇವಾ ಪುಸ್ತಕದಲ್ಲಿ ದಾಖಲಿಸಿರುವುದಿಲ್ಲ.
7. ಸೇವಾ ಪುಸ್ತಕದಲ್ಲಿ ಸಿಬ್ಬಂದಿಗಳು ಪಡೆದಿರುವ ವಿವಿಧ ರೀತಿಯ ರಜೆಗಳು, ಗಳಿಕೆ ರಜೆ ನಗದೀಕರಣ ಸೌಲಭ್ಯ ಇತ್ಯಾದಿಗಳನ್ನು ಸಮರ್ಪಕವಾಗಿ ದಾಖಲಿಸಿರುವುದಿಲ್ಲ. ಹಾಗೂ ಇದಕ್ಕೆ ಸಂಬಂಧಿಸಿದಂತೆ, ವೈಯಕ್ತಿಕ ಕಡತಗಳಲ್ಲಿ ರಜಾ ಅರ್ಜಿ ಪ್ರಪತ್ರ, ನೌಕರರ ಮನವಿಗಳು, ಗಳಿಕೆ ರಜೆ/ಪರಿವರ್ತಿತ/ಹೆರಿಗೆ/ಪಿತೃತ್ವ ರಜೆ/ತರಬೇತಿ ರಜೆಗಳಿಗೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದ ರಜಾ ಮಂಜೂರಾತಿ ಆದೇಶಗಳು ಲಭ್ಯವಿರುವುದಿಲ್ಲ. ಇದನ್ನು ಕಡ್ಡಾಯವಾಗಿ ನಿರ್ವಹಿಸುವುದು.
8. ಕೆ.ಸಿ.ಎಸ್. ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ ನಿಯಮಗಳು 2012ರ ನಿಯಮ (3)ರನ್ವಯ, ಪ್ರತಿಯೊಬ್ಬ ನೌಕರರಿಗೆ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಕಡ್ಡಾಯಗೊಳಿಸಲಾಗಿರುತ್ತದೆ. ಅದರಂತೆ ವಿಶ್ವವಿದ್ಯಾಲಯದ ಎಲ್ಲಾ ಅಧಿಕಾರಿ/ನೌಕರರಿಗೆ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ತೆಗೆದುಕೊಳ್ಳುವ ಬಗ್ಗೆ ಸೂಕ್ತ ಕ್ರಮ ವಹಿಸುವುದು.
9. ರಾಜ್ಯ ವೇತನ ಶ್ರೇಣಿಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಪೂರ್ವದಲ್ಲಿ ನೇಮಕಾತಿಗೆ ಆಯ್ಕೆಗೊಂಡ ಅಭ್ಯರ್ಥಿಗಳ ನಡತೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 75 ಸೆ/ನೆ/ನಿ 2018 ದಿನಾಂಕ:15.02.2018 ರನ್ವಯ ಪೊಲೀಸ್ ಠಾಣೆಯಿಂದ ವರದಿ ಪಡೆದು ನಂತರ ನೇಮಕಾತಿ ಆದೇಶವನ್ನು ಹೊರಡಿಸಬೇಕಾಗಿರುತ್ತದೆ. ಆದರೆ ವಿಶ್ವವಿದ್ಯಾಲಯದಲ್ಲಿ ನೇಮಕಗೊಂಡ ಸಿಬ್ಬಂದಿಗಳ ಪರೀಕ್ಷತಾ ಅವಧಿ ಘೋಷಣೆ ಮಾಡುವ ಸಂದರ್ಭದಲ್ಲಿ ಸದರಿ ನಿಯಮವನ್ನು ಪಾಲಿಸಲಾಗುತ್ತಿದೆ. ಇನ್ನು ಮುಂದೆ ಸದರಿ ನಿರ್ದೇಶನವನ್ನು ಕಟ್ಟುನಿಟ್ಟಾಗಿ ಪಾಲಿಸುವುದು.
10. ರಾಜ್ಯ ವೇತನ ಶ್ರೇಣಿಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಪೂರ್ವದಲ್ಲಿ ನೇಮಕಾತಿಗೆ ಆಯ್ಕೆಗೊಂಡ ಅಭ್ಯರ್ಥಿಗಳ ಶೈಕ್ಷಣಿಕ ಪ್ರಮಾಣ ಪತ್ರಗಳನ್ನು ಹಾಗೂ ಜಾತಿ ಪ್ರಮಾಣ ಪತ್ರಗಳಿಗೆ ಸಂಬಂಧಪಟ್ಟ ವಿಶ್ವವಿದ್ಯಾಲಯ/ ಪಿ.ಯು ಮಂಡಳಿ/ ಎಸ್.ಎಸ್.ಎಲ್.ಸಿ ಬೋರ್ಡ್‌ಗೆ ಹಾಗೂ ತಹಶಿಲ್ದಾರ್‌ರವರಿಗೆ ಕಳುಹಿಸಿ ಪ್ರಮಾಣ ಪತ್ರಗಳ ಸಿಂಧುತ್ವದ ಕುರಿತು ವರದಿಯನ್ನು ಪಡೆಯಬೇಕಾಗಿರುತ್ತದೆ. ಇನ್ನು ಮುಂದೆ ಸದರಿ ನಿರ್ದೇಶನವನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

**21 ಕಾವಲುಗಾರ ಹುದ್ದೆಯಿಂದ ಕಿರಿಯ ವಾಹನ ಚಾಲಕರ ಹುದ್ದೆಗೆ ಮೇಲ್ದರ್ಜೆಗೇರಿಸಿ ವೇತನವನ್ನು ಪಾವತಿಸಿರುವ ವೇತನ ಮೊತ್ತ ರೂ.3,83,112/-ಗಳ ಆಕ್ಷೇಪಣೆ.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2020-21ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಬೋಧಕೇತರ ಸಿಬ್ಬಂದಿಗಳ ಸೇವಾವಹಿಯನ್ನು ಶ್ರೀ ಮಂಜುನಾಥ ಕೋಟಿ ಇವರನ್ನು ದಿನಾಂಕ:10.12.2012ರಂದು ವಿಶ್ವವಿದ್ಯಾಲಯದಲ್ಲಿ ಸೃಜಿಸಲಾಗಿರುವ ಗ್ರೂಪ್ "ಡಿ" ಶ್ರೇಣಿಯ ಕಾವಲುಗಾರ ಹುದ್ದೆಗೆ ವೇತನ ಶ್ರೇಣಿ 9600-14550 ರಲ್ಲಿ ನೇಮಿಸಿಕೊಂಡಿದ್ದು, ಸದರಿ ಹುದ್ದೆಯಲ್ಲಿ ದಿನಾಂಕ:16.04.2017 ರವರೆಗೆ ಸೇವೆ ಸಲ್ಲಿಸಿರುತ್ತಾರೆ. ವಿಶ್ವವಿದ್ಯಾಲಯದ ಆದೇಶ ಸಂಖ್ಯೆ: ಕಸಂವಿ/ಬೋಧಕೇತರ/ಸಿ.ಕಾ.01/2012-13, ದಿನಾಂಕ:17.04.2017 ರನ್ವಯ ಸದರಿಯವರನ್ನು ಗ್ರೂಪ್ "ಡಿ" ಶ್ರೇಣಿಯ ಕಾವಲುಗಾರರ ಹುದ್ದೆಯಿಂದ "ಕಿರಿಯ ವಾಹನ ಚಾಲಕರ" ಹುದ್ದೆಗೆ ಮೇಲ್ದರ್ಜೆಗೇರಿಸಿ, ಹಾಲಿ ಪಡೆಯುತ್ತಿದ್ದ ವೇತನ ಶ್ರೇಣಿ 9600-14550 ರಿಂದ 11600-21000 ಕ್ಕೆ ನಿಗದಿಪಡಿಸಿ ವೇತನವನ್ನು ಪಾವತಿಸಲಾಗುತ್ತಿದೆ.

ಈ ಬಗ್ಗೆ ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಶೀಲಿಸಿದಾಗ, ವಿಶ್ವವಿದ್ಯಾಲಯಕ್ಕೆ "ಕಿರಿಯ ವಾಹನ ಚಾಲಕ' ಹುದ್ದೆಯು ಮಂಜೂರಾಗಿರುವುದಿಲ್ಲ. ಆದ್ದರಿಂದ ಸದರಿಯವರನ್ನು ಕಾವಲುಗಾರರ ಹುದ್ದೆಯಿಂದ "ಕಿರಿಯ ವಾಹನ ಚಾಲಕರ" ಹುದ್ದೆಗೆ ಮೇಲ್ದರ್ಜೆಗೇರಿಸಲು ಸರ್ಕಾರದ ಅನುಮೋದನೆಯನ್ನು ಪಡೆಯಲಾಗಿದ್ದಲ್ಲಿ ಅದರ ಪ್ರತಿ ಹಾಗೂ ಈ ಬಗ್ಗೆ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಅವಶ್ಯಕ ತಿದ್ದುಪಡಿಯನ್ನು ಮಾಡಿಕೊಂಡಿರುವ ಪ್ರತಿಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವಂತೆ ತಿಳಿಸಿ ಲೆಕ್ಕವಿಚಾರಣಾ ಪತ್ರ ಸಂಖ್ಯೆ: 22, ದಿನಾಂಕ: 09.06.2022ರಲ್ಲಿ ನೀಡಲಾಗಿರುತ್ತದೆ. ವಾಹನ ಚಾಲಕರ ಕೊರತೆ ಇದ್ದುದರಿಂದ ಕಾಲೇಜು ಶಿಕ್ಷಣ ಇಲಾಖೆಯ ಆದೇಶದಲ್ಲಿ ಡಿ ಗ್ರೂಪ್ ನೌಕರರನ್ನು ವಾಹನ ಚಾಲಕರಾಗಿ ಬಡ್ತಿ ನೀಡಿರುವುದನ್ನು ಪರಿಗಣಿಸಿ, ಕಿರಿಯ ವಾಹನ ಚಾಲಕರ ಹುದ್ದೆಗೆ ಮೇಲ್ದರ್ಜೆಗೇರಿಸಿ ಪದೋನ್ನತಿ ನೀಡಲಾಗಿದೆ ಎಂದು ತಿಳಿಸಿರುತ್ತಾರೆ. ಮಂಜೂರಾದ ಹುದ್ದೆ ಇಲ್ಲದೇ ಪದೋನ್ನತಿ ನೀಡಿರುವುದರಿಂದ ಮಂಜುನಾಥ ಕೋಟಿ, ಕಿರಿಯ ವಾಹನ ಚಾಲಕರು ಇವರಿಗೆ 2020-21ರಲ್ಲಿ ಪಾವತಿಸಿರುವ ವೇತನ ರೂ.3,83,112/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**21.1 ಅತಿಥಿ ಗೃಹ ಮೇಲ್ವಿಚಾರಕರಿಗೆ ವೇತನ ಶ್ರೇಣಿಯನ್ನು ಪರಿಷ್ಕರಿಸಿ ವೇತನ ಪಾವತಿಸಿರುವ ಮೊತ್ತ ರೂ.3,81,778/- ಗಳ ಆಕ್ಷೇಪಣೆ.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2020-21ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಬೋಧಕೇತರ ಸಿಬ್ಬಂದಿಗಳ ಸೇವಾವಹಿಯನ್ನು ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ಪರಿಶೀಲಿಸಿದಾಗ, ಶ್ರೀ ಸಿದ್ಧಯ್ಯ, ಅತಿಥಿ ಗೃಹ ಮೇಲ್ವಿಚಾರಕರು, ಇವರನ್ನು ದಿನಾಂಕ:11.10.2013 ರಲ್ಲಿ, ವಿಶ್ವವಿದ್ಯಾಲಯದ ವೃಂದ ನೇಮಕಾತಿ ನಿಯಮಗಳನ್ವಯ, ವೇತನ ಶ್ರೇಣಿ 10,400-16,400 ರಲ್ಲಿ ವಿಶ್ರಾಂತಿ ಗೃಹ ಮೇಲ್ವಿಚಾರಕ (ಕೇರ್ ಟೇಕರ್) ರಾಗಿ ನೇಮಕಾತಿ ಮಾಡಿಕೊಳ್ಳಲಾಗಿದೆ. ಸದರಿಯವರ ಕೋರಿಕೆಯ ಮೇರೆಗೆ ವಿಶ್ವವಿದ್ಯಾಲಯದ ಆದೇಶ ಸಂಖ್ಯೆ: ಕ.ಸಂ.ವಿ.ವಿ.ಗೃ. ಮೇ-01/13-14 ದಿನಾಂಕ: 08.05.2015 & ವಿಶ್ವವಿದ್ಯಾಲಯದ ಆದೇಶ ಸಂಖ್ಯೆ: ಕ.ಸಂ.ವಿ.ವಿ.ಗೃ.ಮೇ. 01/13-14 ದಿನಾಂಕ: 03.06.2015ರ ಅನ್ವಯ, ಇವರ ವೇತನವನ್ನು ರೂ: 11,600/- ಗಳಿಗೆ ಪರಿಷ್ಕರಿಸಿ, ದ್ವಿತೀಯ ದರ್ಜೆ ಸಹಾಯಕರ ವೇತನ ಶ್ರೇಣಿಗೆ ಉನ್ನತೀಕರಿಸಿದೆ. ನೇಮಕಾತಿ ಹೊಂದಿದ ದಿನಾಂಕದಿಂದ ವೇತನವನ್ನು ಪರಿಷ್ಕರಿಸಿ ಪಾವತಿಸಲಾಗಿದೆ. ವಿಶ್ವವಿದ್ಯಾಲಯವು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಗತ್ಯ ತಿದ್ದುಪಡಿ ಮಾಡದೇ, ನೇರವಾಗಿ ವೇತನ ಶ್ರೇಣಿಯನ್ನು ಉನ್ನತೀಕರಿಸಿರುವುದು, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ಉಲ್ಲಂಘನೆಯಾಗಿರುತ್ತದೆ. ಈ ಬಗ್ಗೆ 2018-19 ಮತ್ತು 2019-20ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿಯೂ ಸಹ ಆಕ್ಷೇಪಿಸಲಾಗಿದ್ದು, ಸಿಬ್ಬಂದಿಯವರ ವೇತನ ಶ್ರೇಣಿಯನ್ನು ಪರಿಷ್ಕರಿಸಲು ವಿಶ್ವವಿದ್ಯಾಲಯವು ಹೊಂದಿರುವ ಅಧಿಕಾರ ಪ್ರತ್ಯಾಯೋಜನೆ ಹಾಗೂ ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ತಿದ್ದುಪಡಿ ಮಾಡಿರುವ ಬಗ್ಗೆ ವಿವರಗಳನ್ನು ಒದಗಿಸುವಂತೆ ಕೋರಲಾಗಿತ್ತು. ಆದರೆ, ವಿಶ್ವವಿದ್ಯಾಲಯವು ಯಾವುದೇ ಅನುಸರಣಾ ಉತ್ತರವನ್ನು ಒದಗಿಸಿರುವುದಿಲ್ಲ.

ಮುಂದುವರೆದು 2020-21ನೇ ಸಾಲಿನಲ್ಲಿಯೂ ಸಹ ಸದರಿಯವರಿಗೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ನಿಗದಿಪಡಿಸಿರುವ ವೇತನವನ್ನೇ ಪಾವತಿಸಿದ್ದು, ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸದೇ ನೇರವಾಗಿ ವೇತನ ಶ್ರೇಣಿಯನ್ನು ಮೇಲ್ದರ್ಜೆಗೇರಿಸಿ ವೇತನ ಪಾವತಿಸುತ್ತಿರುವುದು ಕರ್ನಾಟಕ ನಾಗರೀಕ ಸೇವಾ ನಿಯಮಗಳ ಉಲ್ಲಂಘನೆಯಾಗಿರುತ್ತದೆ. ಈ ಬಗ್ಗೆ ವಿವರಣೆಯನ್ನು ಒದಗಿಸುವಂತೆ ಲೆಕ್ಕವಿಚಾರಣಾ ಪತ್ರ ಸಂಖ್ಯೆ:23, ದಿನಾಂಕ:09.06.2022ರಲ್ಲಿ ಕೋರಲಾಗಿ, ಆದರೆ ವಿಶ್ವವಿದ್ಯಾಲಯವು ಈ ಬಗ್ಗೆ ಪರಿನಿಯಮಗಳನ್ನು ತಿದ್ದುಪಡಿ ಮಾಡಲಾಗಿದ್ದು, ಸಿಂಡಿಕೇಟ್ ಅನುಮೋದನೆ ಪಡೆದು ಸರ್ಕಾರದ ಅನುಮತಿಗಾಗಿ ಸಲ್ಲಿಸಲಾಗುವುದು ಎಂದು ತಿಳಿಸಿರುತ್ತಾರೆ. ಸದರಿಯವರಿಗೆ 2020-21ನೇ ಸಾಲಿನಲ್ಲಿ ಪಾವತಿಸಲಾದ ವೇತನ ಒಟ್ಟು ರೂ.3,81,778/-ಗಳನ್ನು ಆಕ್ಷೇಪಣೆಯಲ್ಲಿರಿಸಲಾಗಿದೆ.

**21.2. ಹಿರಿಯ ಸಹಾಯಕರ ಹುದ್ದೆಯ ನೇರ ನೇಮಕಾತಿ ಒಟ್ಟು ಮೊತ್ತ ರೂ.6,65,343/–ಗಳ ಆಕ್ಷೇಪಣೆ.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2020–21ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಬೋಧಕೇತರ ಸಿಬ್ಬಂದಿಗಳ ಸೇವಾವಹಿಯನ್ನು ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ 2 ಹಿರಿಯ ಸಹಾಯಕರ ಹುದ್ದೆಗಳನ್ನು ಸೃಜಿಸಿದ್ದು, ಸಹಾಯಕರ ಹುದ್ದೆಯಲ್ಲಿ 5 ವರ್ಷ ಸೇವೆ ಸಲ್ಲಿಸಿರುವ ನೌಕರರಿಗೆ ಮುಂಬಡ್ತಿ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಿಕೊಳ್ಳಲಾಗಿದೆ. ಆದರೆ ಸೇವಾ ಪುಸ್ತಕಗಳನ್ನು ಪರಿಶೀಲಿಸಿದಾಗ, ಶ್ರೀ ಚಂದ್ರಶೇಖರ ಸಿ. ಪಾಟೀಲ್ ಇವರನ್ನು 371 ಜೆ ಮೀಸಲಾತಿ ಅನ್ವಯ ಹಿರಿಯ ಸಹಾಯಕರ ಹುದ್ದೆಗೆ ನೇರ ನೇಮಕಾತಿ ಮಾಡಿಕೊಂಡು ಭರ್ತಿ ಮಾಡಿಕೊಳ್ಳಲಾಗಿದೆ.

ಈ ರೀತಿ ಮುಂಬಡ್ತಿಗೆ ಮೀಸಲಾಗಿದ್ದ ಹುದ್ದೆಯನ್ನು, 371 ಜೆ ಮೀಸಲಾತಿಯಲ್ಲಿ ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಂಡಿರುವುದು ವೃಂದ ಮತ್ತು ನೇಮಕಾತಿ ನಿಯಮಗಳ ಉಲ್ಲಂಘನೆಯಾಗಿದ್ದು, ಈ ಬಗ್ಗೆ ವಿವರಣೆಯನ್ನು ನೀಡುವಂತೆ ಲೆಕ್ಕ ವಿಚಾರಣಾ ಸಂಖ್ಯೆ: 21, ದಿನಾಂಕ: 09.06.2022 ರಲ್ಲಿ ಕೋರಲಾಗಿತ್ತು. ಈ ಬಗ್ಗೆ ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೂಕ್ತ ತಿದ್ದುಪಡಿಯನ್ನು ಮಾಡಿಕೊಳ್ಳದೇ ಮುಂಬಡ್ತಿ ಹುದ್ದೆಯನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿ 2020–21ನೇ ಸಾಲಿನಲ್ಲಿ ಪಾವತಿಸಿರುವ ಮೊತ್ತ ರೂ. 6,65,343/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**21.3. ಶ್ರೀ ರಂಗಸ್ವಾಮಿ, ಕಾವಲುಗಾರ ಇವರ ಅನಧಿಕೃತ ಗೈರುಹಾಜರಿ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2020–21ನೇ ಸಾಲಿನ ಲೆಕ್ಕಪರಿಶೋಧನೆ ಚಾಲ್ತಿಯಲ್ಲಿದ್ದು, ವಿಶ್ವವಿದ್ಯಾಲಯದ ಸೇವಾ ಪುಸ್ತಕಗಳನ್ನು ಪರಿಶೀಲಿಸಲಾಗಿ ಶ್ರೀ ಆರ್.ರಂಗಸ್ವಾಮಿ, ಕಾವಲುಗಾರ ಇವರು ದಿನಾಂಕ 03.09.2017 ರಿಂದ 03.12.2021 ರವರೆಗೆ ಅನಧಿಕೃತ ಗೈರುಹಾಜರಿ ಆಗಿದ್ದು, ಸದರಿಯವರ ಮೇಲೆ ಕೈಗೊಂಡ ಶಿಸ್ತು ಕ್ರಮದ ಬಗ್ಗೆ ವಿವರಣೆಯನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಲೆಕ್ಕವಿಚಾರಣೆ ಪತ್ರ ಸಂ.37, ದಿ.17.06.2022ರಲ್ಲಿ ಕೋರಲಾಗಿ, ನೀಡಿರುವ ಅನುಸರಣೆಯಲ್ಲಿ ಸದರಿಯವರು ಅನಾರೋಗ್ಯದ ಬಳಲುತ್ತಿರುವುದರಿಂದ ಗೈರುಹಾಜರಿಯನ್ನು ವೇತನರಹಿತ ರಜೆಯನ್ನಾಗಿ ಪರಿಗಣಿಸಿ, ಶಿಸ್ತುಕ್ರಮವನ್ನು ಬಾಕಿ ಇರಿಸಿ ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳಲಾಗಿದೆ. ಸದ್ಯದಲ್ಲೇ ಬಾಕಿ ವಿಚಾರಣೆಯನ್ನು ನಡೆಸಿ ಶಿಸ್ತುಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ. ಶೀಘ್ರವಾಗಿ ಬಾಕಿ ವಿಚಾರಣೆಯನ್ನು ನಡೆಸಿ ಸದರಿಯವರ ವಿರುದ್ಧ ಸಿ.ಸಿ.ಎ. ನಿಯಮಗಳನ್ವಯ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.

**21.4. ಶ್ರೀ ಪ್ರಸನ್ನಕುಮಾರ. ಪಿ. ಜವಾನ ಇವರ ಅನಧಿಕೃತ ಗೈರುಹಾಜರಿ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸೇವಾ ಪುಸ್ತಕಗಳನ್ನು ಪರಿಶೀಲಿಸಲಾಗಿ ಶ್ರೀ ಪ್ರಸನ್ನಕುಮಾರ.ಪಿ, ಜವಾನ ಇವರು ಪದೇ ಪದೇ ಅನಧಿಕೃತ ಗೈರುಹಾಜರಿ ಆಗುತ್ತಿದ್ದು ಹಾಗೂ ಕಚೇರಿ ವೇಳೆಯಲ್ಲಿ ಮದ್ಯಪಾನ ಮಾಡಿ ದುರ್ವರ್ತನೆ ತೋರಿರುವುದರಿಂದ ದಿನಾಂಕ 05.05.2018 ರಿಂದ ಅಮಾನತ್ತಿನಲ್ಲಿರಿಸಲಾಗಿದೆ. ನಂತರ ದಿನಾಂಕ 18.01.2020ರಿಂದ ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಮಹಾವಿದ್ಯಾಲಯ, ಗೋಕರ್ಣ ಇಲ್ಲಿಗೆ ನಿಯೋಜಿಸಲಾಗಿದ್ದು, ಸದರಿಯವರು ಕರ್ತವ್ಯಕ್ಕೆ ಹಾಜರಾಗುತ್ತಿರುವುದಿಲ್ಲ ಎಂಬುದಾಗಿ ಮಹಾವಿದ್ಯಾಲಯದ ಪ್ರಾಚಾರ್ಯರು ತಿಳಿಸಿರುತ್ತಾರೆ. ನಂತರ ಸದರಿಯವರ ಮೇಲೆ ಕೈಗೊಂಡ ಶಿಸ್ತು ಕ್ರಮದ ಬಗ್ಗೆ ವಿವರಣೆಯನ್ನು ಕೂಡಲೇ ಲೆಕ್ಕಪರಿಶೋಧನೆಗೆ ಒದಗಿಸಲು ಲೆಕ್ಕವಿಚಾರಣೆ ಪತ್ರ ಸಂ.38, ದಿನಾಂಕ 18.06.2022ರಲ್ಲಿ ಕೋರಲಾಗಿ, ಸದರಿಯವರ ಮೇಲೆ ದಿನಾಂಕ 01.09.2021ರಂದು ದೋಷಾರೋಪಣಾ ಪಟ್ಟಿ ಅನುಬಂಧ–1 ರಿಂದ 4 ಅನ್ನು ಜಾರಿಗೊಳಿಸಿ, ಇದುವರೆಗೂ ಯಾವುದೇ ಉತ್ತರ ಬಾರದೆ ಇರುವುದರಿಂದ, ಆದಷ್ಟು ಬೇಗ ಸೂಕ್ತ ಕ್ರಮ

ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ. ಶೀಘ್ರವಾಗಿ ವಿಚಾರಣೆಯನ್ನು ನಡೆಸಿ ಸದರಿಯವರ ವಿರುದ್ದ ಸಿಸಿಎ ನಿಯಮಗಳನ್ವಯ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.

**22. ಯೋಜನಾ ಸಹಾಯಕರ ಹುದ್ದೆಗಳಿಗೆ ನೇಮಕಾತಿ ಮಾಡಿಕೊಂಡು ಬೋಧಕೇತರ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2020-21ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಿದಾಗ, ಸರ್ಕಾರದ ಆದೇಶ ಸಂಖ್ಯೆ: ಇಡಿ 91 ಯುಆರ್‌ಸಿ 2010, ದಿನಾಂಕ: 25.01.2011 ರಲ್ಲಿ, ಯುಜಿಸಿ ವೇತನ ಪಡೆಯುವ ಬೋಧಕ ಹುದ್ದೆಗಳು 45, **ರಾಜ್ಯ ವೇತನ ಪಡೆಯುವ ಒಟ್ಟು 26 ಬೋಧಕ ಹುದ್ದೆಗಳು,** ಯುಜಿಸಿ ವೇತನ ಪಡೆಯುವ ಬೋಧಕೇತರ ಹುದ್ದೆಗಳು 11 ಹಾಗೂ ರಾಜ್ಯ ವೇತನ ಪಡೆಯುವ ಒಟ್ಟು 51 ಬೋಧಕೇತರ ಹುದ್ದೆಗಳು ಒಟ್ಟು 133 ಹುದ್ದೆಗಳನ್ನು ಸೃಜಿಸಲು ಅನುಮತಿ ನೀಡಿ, ಸದರಿ ಹುದ್ದೆಗಳನ್ನು ಭರ್ತಿ ಮಾಡುವಾಗ ಜಾರಿಯಲ್ಲಿರುವ ಯುಜಿಸಿ/ರಾಜ್ಯ ಸರ್ಕಾರದ ನೇಮಕಾತಿ ನಿಯಮಗಳು, ಮೀಸಲಾತಿ ನಿಯಮಗಳು ಪಾಲಿಸತಕ್ಕದೆಂದು ಹಾಗೂ ಈ ಬಗ್ಗೆ ಸೂಕ್ತ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಿದ್ಧಪಡಿಸಿ, ಸರ್ಕಾರಕ್ಕೆ ಸಲ್ಲಿಸತಕ್ಕದೆಂದು ತಿಳಿಸಲಾಗಿದೆ.

ಅದರಂತೆ, ವಿಶ್ವವಿದ್ಯಾಲಯವು ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಯಾರಿಸಿ, **ರಾಜ್ಯ ವೇತನ ಪಡೆಯುವ ಒಟ್ಟು 26 ಬೋಧಕ ಹುದ್ದೆಗಳ ಬದಲಾಗಿ, 26 ಯೋಜನಾ ಸಹಾಯಕರ(ಶೈಕ್ಷಣಿಕ) ಹುದ್ದೆಗಳನ್ನು** ಅಳವಡಿಸಿ, (ಬಿ ವೃಂದದ ಹುದ್ದೆಯ ವೇತನ ಶ್ರೇಣಿ 10800-20025 ನಿಗದಿಪಡಿಸಿ) ಸರ್ಕಾರದ ಅನುಮೋದನೆಯನ್ನು ಪಡೆಯಲಾಗಿದೆ. ಈ ಬಗ್ಗೆ ರಾಜ್ಯ ವೇತನ ಪಡೆಯುವ ಬೋಧಕ ಹುದ್ದೆಗಳ ಹಾಗೂ ವಿಶ್ವವಿದ್ಯಾಲಯದಲ್ಲಿ ನೇಮಕಗೊಂಡಿರುವ ಯೋಜನಾ ಸಹಾಯಕರ (ಸಂಶೋಧನಾ ಸಹಾಯಕರು) ಹುದ್ದೆಗಳ ವಿದ್ಯಾರ್ಹತೆ ಹಾಗೂ ನಿಗದಿಪಡಿಸಿರುವ ವೇತನಗಳಲ್ಲಿ ಸಾಮ್ಯತೆಯಿರುವ ಬಗ್ಗೆ ಲೆಕ್ಕಪರಿಶೋಧನೆಯಲ್ಲಿ ಮಾಹಿತಿಗಳನ್ನು ಪರಿಶೀಲಿಸಲು ಸ್ಪಷ್ಟ ಲಭ್ಯವಿರುವುದಿಲ್ಲ.

ಪ್ರಸ್ತುತ ಒಟ್ಟು 17 ಜನ ಯೋಜನಾ ಸಹಾಯಕರುಗಳು (ಸಂಶೋಧನಾ ಸಹಾಯಕರು) ವಿಶ್ವವಿದ್ಯಾಲಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ವಿವರಗಳು ಕೆಳಕಂಡಂತಿವೆ.

| ಕ್ರ. ಸಂ. | ಹೆಸರು | ನೇಮಕಾತಿ ಹೊಂದಿದ ವರ್ಷ | 2020-21ನೇ ಸಾಲಿನಲ್ಲಿ ಪಾವತಿಸಿರುವ ವೇತನ ರೂ.ಗಳಲ್ಲಿ |
|---|---|---|---|
| 1 | ತಿಮ್ಮಣ್ಣ ಆರ್. | 2013 | 765345.00 |
| 2 | ಉದಯನ ಹಗಡೆ | 2013 | 365353.00 |
| 3 | ಶ್ರುತಿ ಹೆಚ್.ಕೆ. | 2013 | 765345.00 |
| 4 | ರಾಜಶೇಖರ ಕೆ.ಕೆ. | 2013 | 765345.00 |
| 5 | ತೇಜಸ್ವಿನಿ ಡಿ. | 2013 | 752334.00 |
| 6 | ಜ್ಯೋತಿ ಹೆಚ್.ಪಿ. | 2013 | 765345.00 |
| 7 | ಶಕುಂತಲಾ ಭಟ್ | 2013 | 765345.00 |
| 8 | ಸಾವಿತ್ರಿ ಪೂಜಾರಿ | 2013 | 766845.00 |
| 9 | ರಾಘವ ಕೆ.ಎಲ್. | 2013 | 660048.00 |
| 10 | ನಾರಾಯಣಸ್ವಾಮಿ ಎಂ.ಎಸ್. | 2014 | 754080.00 |
| 11 | ಜಗನ್ನಾಥ ಪೂಜಾರ ಆರ್. | 2017 | 720108.00 |
| 12 | ಗಿರೀಶ್ ಭಟ್ | 2018 | 711180.00 |

| | | | |
|---|---|---|---|
| 13 | ವಿಜಯಲಕ್ಷ್ಮಿ ಕೆ.ಜಿ. | 2018 | 711180.00 |
| 14 | ಕಾಂತಮಣಿ | 2018 | 711180.00 |
| 15 | ತೇಜಸ್ವಿನಿ ಬಿದರಿ | 2018 | 711180.00 |
| 16 | ಹೇಮರಾಜ ಎನ್.ಎಸ್. | 2018 | 702252.00 |
| 17 | ವಾಲ್ಮೀಕರಾಮ | 2018 | 702252.00 |
| | **ಒಟ್ಟು ರೂ:** | | **1,20,94,717.00** |

ಸದರಿ ನೇಮಕಾತಿಗಳಿಗೆ ಸಂಬಂಧಿಸಿದಂತೆ, ಕೆಳಕಂಡ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವಂತೆ ಕೋರಿ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 19, ದಿನಾಂಕ: 03.06.2022 ನ್ನು ನೀಡಲಾಗಿತ್ತು.

1. ಯೋಜನಾ ಸಹಾಯಕರ(ಸಂಶೋಧನಾ ಸಹಾಯಕರು) ಹುದ್ದೆಗೆ ನಿಗದಿಪಡಿಸಲಾದ ಕೆಲಸ ಕಾರ್ಯಗಳು.
2. ನೇಮಕಗೊಂಡ ದಿನಾಂಕದಿಂದ ಇದುವರೆಗೆ ಕೈಗೊಂಡಿರುವ ಸಂಶೋಧನೆಗಳ ವಿವರಗಳು(ಸಿಬ್ಬಂದಿವಾರು ಪ್ರತ್ಯೇಕವಾಗಿ ನೀಡುವುದು)
3. ಯೋಜನಾ ಸಹಾಯಕರ (ಸಂಶೋಧನಾ ಸಹಾಯಕರು) ಹುದ್ದೆಗಳು "ಬಿ" ವೃಂದದ ಹುದ್ದೆಯಾಗಿದ್ದು, ಪ್ರಸ್ತುತ ವೇತನ ಶ್ರೇಣಿ (40900–78200) ಗಳನ್ನು ನಿಗದಿಪಡಿಸಲಾಗಿದೆ. ಆದರೆ ಲೆಕ್ಕಪರಿಶೋಧನೆಯಲ್ಲಿ ಗಮನಿಸಿರುವಂತೆ ಸದರಿ ಯೋಜನಾ ಸಹಾಯಕರುಗಳು 'ಸಿ' ವೃಂದದ ಲಿಪಿಕ ಹುದ್ದೆಯ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದು, ಅವರಿಗೆ "ಬಿ" ವೃಂದದ ವೇತನವನ್ನು ಪಾವತಿಸಿ, ವಿಶ್ವವಿದ್ಯಾಲಯವು ಹೆಚ್ಚುವರಿ ಮೊತ್ತವನ್ನು ಭರಿಸಿದ್ದು, ಇದರಿಂದ ವಿಶ್ವವಿದ್ಯಾಲಯಕ್ಕೆ ನಷ್ಟ ಉಂಟಾಗಿರುತ್ತದೆ. ಈ ಬಗ್ಗೆ ಸೂಕ್ತ ಸ್ಪಷ್ಟೀಕರಣವನ್ನು ಲೆಕ್ಕಪರಿಶೋಧನೆಗೆ ಒದಗಿಸುವುದು.

**4.** ವಿಶ್ವವಿದ್ಯಾಲಯವು ಸರ್ಕಾರದಿಂದ ಹುದ್ದೆ ಮಂಜೂರಾಗಿದೆಯೆಂಬ ಒಂದೇ ಕಾರಣದಿಂದ ಯೋಜನಾ ಸಹಾಯಕರ(ಸಂಶೋಧನಾ ಸಹಾಯಕರ) ಹುದ್ದೆಗಳನ್ನು ಭರ್ತಿ ಮಾಡಿಕೊಂಡು ಅವರಿಗೆ ನೀಡಬೇಕಾದ ಕೆಲಸ ಕಾರ್ಯಗಳ ಬಗ್ಗೆ ಮುಂದಾಲೋಚನೆಯಿಲ್ಲದೇ, 2013 ರಲ್ಲಿ 10 ಜನ ಯೋಜನಾ ಸಹಾಯಕರನ್ನು ನೇಮಕ ಮಾಡಿಕೊಂಡಿದ್ದು, ಸದರಿ ಅವಧಿಯಲ್ಲಿ ಅವರಿಗೆ ನೀಡಬೇಕಾದ ಕೆಲಸ ಕಾರ್ಯಗಳ ಬಗ್ಗೆ ಸ್ಪಷ್ಟತೆಯಿಲ್ಲದೇ ಇದ್ದರೂ ಸಹ 2014, 2017 ಮತ್ತು 2018 ರಲ್ಲಿ ಮತ್ತೊಮ್ಮೆ 7 ಜನ ಯೋಜನಾ ಸಹಾಯಕರನ್ನು (ಸಂಶೋಧನಾ ಸಹಾಯಕರು) ನೇಮಕ ಮಾಡಿಕೊಂಡು ಅವರಿಗೆ ವೇತನ ಪಾವತಿಸಿಕೊಂಡು ಬರಲಾಗುತ್ತಿದೆ. ಆದರೆ ಅವರಿಗೆ ಯೋಜನಾ ಸಹಾಯಕರಿಗೆ ನಿಗದಿಪಡಿಸಲು ಕೆಲಸವನ್ನು ಹಂಚಿಕೆ ಮಾಡದೇ ಲಿಪಿಕ ವರ್ಗದ ('ಸಿ' ವೃಂದದ) ಹುದ್ದೆಗಳಲ್ಲಿ ಕೆಲಸ ಕಾರ್ಯಗಳನ್ನು ಹಂಚಿಕೆ ಮಾಡಿರುವ ಬಗ್ಗೆ ಸೂಕ್ತ ವಿವರಣೆಯನ್ನು ನೀಡುವುದು. ಅಲ್ಲದೇ ವಿಶ್ವವಿದ್ಯಾಲಯದಲ್ಲಿ "ಸಿ' ವೃಂದದ ಲಿಪಿಕ ವರ್ಗದ ಸಿಬ್ಬಂದಿಗಳ ಕೊರತೆಯಿದ್ದಲ್ಲಿ, ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದು ಹುದ್ದೆಗಳನ್ನು ಸೃಜನೆ ಮಾಡಿಕೊಂಡು ವೃಂದ ಮತ್ತು ನೇಮಕಾತಿಗಳಿಗೆ ಸೂಕ್ತ ತಿದ್ದುಪಡಿಯನ್ನು ತರಲು ಕ್ರಮ ವಹಿಸದೇ, ಹೆಚ್ಚಿನ ವೇತನ ಶ್ರೇಣಿಯನ್ನು ಒಳಗೊಂಡಿರುವ ಯೋಜನಾ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಿ, ಅವರಿಗೆ ಕೆಳಗಿನ ದರ್ಜೆಯ ಹುದ್ದೆಯ ಕರ್ತವ್ಯಗಳನ್ನು ನೀಡಿ ಹೆಚ್ಚುವರಿ ವೇತನ ಪಾವತಿಸಿರುವುದರಿಂದ ಸದರಿ ಹುದ್ದೆಗಳ ಸೃಜನೆಯ ಉದ್ದೇಶ ಸಫಲವಾಗಿರುವುದಿಲ್ಲ. ಕರ್ನಾಟಕ ನಾಗರೀಕ ಸೇವಾ ನಿಯಮಗಳಲ್ಲಿ ಕೆಳಗಿನ ಶ್ರೇಣಿಯ ನೌಕರರಿಗೆ ಮೇಲಿನ ಶ್ರೇಣಿಯ ಹುದ್ದೆಯ ಪ್ರಭಾರವನ್ನು ನೀಡಿ, ಪ್ರಭಾರ ಭತ್ಯೆಯನ್ನು ನೀಡಲು ಅವಕಾಶವಿದ್ದು, ಮೇಲಿನ ದರ್ಜೆಯ ಹುದ್ದೆಗಳಿಗೆ ಕೆಳಗಿನ ಶ್ರೇಣಿಯ ಕೆಲಸವನ್ನು ನೀಡಿ, ಹೆಚ್ಚುವರಿ ವೇತನ ಪಾವತಿಸಲು ಅವಕಾಶವಿರುವುದಿಲ್ಲ. ಈ ಬಗ್ಗೆ ಸೂಕ್ತ ವಿವರಣೆಯನ್ನು ಲೆಕ್ಕಪರಿಶೋಧನೆಗೆ ಒದಗಿಸುವುದು.

ಆದರೆ ಮೇಲ್ಕಂಡ ಅಂಶಗಳ ಬಗ್ಗೆ ವಿಶ್ವವಿದ್ಯಾಲಯವು ಅನುಸರಣೆಯನ್ನು ಒದಗಿಸಿದ್ದು, ಪ್ರತಿಯೊಬ್ಬ ಯೋಜನಾ ಸಹಾಯಕರು ನಿರ್ವಹಿಸುತ್ತಿರುವ ಕಾರ್ಯಗಳ ವಿವರಗಳನ್ನು ನೀಡಿರುತ್ತಾರೆ. ನೀಡಿರುವ ಉತ್ತರವನ್ನು ಪರಿಶೀಲಿಸಲಾಗಿ ಹೆಚ್ಚಿನ ಕಾರ್ಯಗಳು 'ಸಿ' ವೃಂದದ ಲಿಪಿಕ ಹುದ್ದೆಯ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದು, ಮೇಲ್ಕಂಡ

ಯೋಜನಾ ಸಹಾಯಕರನ್ನು(ಸಂಶೋಧನಾ ಸಹಾಯಕರು) ವಿಶ್ವವಿದ್ಯಾಲಯವು ನೇಮಿಸಿಕೊಂಡಿರುವ ಬಗ್ಗೆ ಸೂಕ್ತ ಸಮರ್ಥನೆಯನ್ನು ಒದಗಿಸುವುದು.

**23. ಆಕಸ್ಮಿಕ ವೆಚ್ಚಗಳು:–**

**23.1 ಹೊರಗುತ್ತಿಗೆ ನೌಕರರ ಸೇವೆಯನ್ನು ಪಡೆದಿರುವ ಕ್ರಮದಲ್ಲಿ ಕಂಡುಬಂದ ನ್ಯೂನತೆಗಳು:–**

2020–21ನೇ ಸಾಲಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಕಚೇರಿ ಕರ್ತವ್ಯ ನಿರ್ವಹಿಸಲು ಹೊರಗುತ್ತಿಗೆ ಆಧಾರದಲ್ಲಿ "S.A Manpower Services Pvt Ltd" ಇವರಿಂದ 5 ಜನ ನೌಕರರ ಸೇವೆಯನ್ನು ಪಡೆಯಲಾಗಿದ್ದು, 2020–21ನೇ ಸಾಲಿನಲ್ಲಿ ರೂ.12,04,043/–ಗಳನ್ನು ಪಾವತಿಸಲಾಗಿರುತ್ತದೆ. ಇದಕ್ಕೆ ಸಂಬಂಧಿಸಿದ ಟೆಂಡರ್ ಕಡತವನ್ನು ಪರಿಶೀಲಿಸಲಾಗಿ ಕೆಳಕಂಡ ನ್ಯೂನ್ಯತೆಗಳು ಕಂಡುಬಂದಿರುತ್ತವೆ.

1. ದಿನಾಂಕ 04.03.2020 ರಿಂದ 26.03.2020ರವರೆಗೆ ಅಲ್ಪಾವಧಿ ಟೆಂಡರ್ ಅನ್ನು ಕರೆಯಲಾಗಿದೆ. ಆದರೆ ಕೆ.ಟಿ.ಪಿ.ಪಿ ಕಾಯ್ದೆ 2000ರ ನಿಯಮ 17(1ರಲ್ಲಿ ಟೆಂಡರ್ ಅನ್ನು ಸಲ್ಲಿಸಲು ಕನಿಷ್ಟ ಸಮಯವನ್ನು ಕೆಳಕಂಡಂತೆ ನಿಗದಿಪಡಿಸಬೇಕಾಗಿರುತ್ತದೆ.

   ಅ) ರೂ.2 ಕೋಟಿಗಳವರೆಗಿನ ಮೌಲ್ಯದ ಟೆಂಡರ್‌ಗಳಿಗೆ 30 ದಿನಗಳು

   ಆ) ರೂ.2 ಕೋಟಿಗಳಿಗಿಂತ ಹೆಚ್ಚಿನ ಮೌಲ್ಯದ ಟೆಂಡರ್‌ಗಳಿಗೆ 60 ದಿನಗಳನ್ನು ನಿಗದಿಪಡಿಸಬೇಕಾಗಿರುತ್ತದೆ.

2. (1)ನೇ ಉಪನಿಯಮದ ಗೊತ್ತುಪಡಿಸಲಾದ ಸಮಯದಲ್ಲಿ ಯಾವುದೇ ಕಡತವನ್ನು ಮಾಡಬೇಕಾದಲ್ಲಿ ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕಿಂತ ಹಿರಿಯ ಪ್ರಾಧಿಕಾರಿಯು ಲಿಖಿತ ಕಾರಣಗಳನ್ನು ದಾಖಲುಮಾಡಿ ಅಧಿಕೃತಗೊಳಿಸಬೇಕಾಗಿರುತ್ತದೆ.

3. ಟೆಂಡರ್ ಕರೆಯಲು ಸಿಂಡಿಕೇಟ್‌ನ ಅನುಮತಿ ಪಡೆದಿರುವ ಪತ್ರ ಲಭ್ಯವಿಲ್ಲ.

4. Technical E-portal ಪ್ರತಿ ಲಭ್ಯವಿಲ್ಲ.

5. ಟೆಂಡರ್‌ನಲ್ಲಿ ಭಾಗವಹಿಸಿರುವ ಸಂಸ್ಥೆಗಳಿಗೆ ಸಂಬಂಧಿಸಿದಂತೆ E-portal price bidding ಪ್ರತಿ ಲಭ್ಯವಿಲ್ಲ.

6. ಇದು ಏಕ ಬಿಡ್ ಟೆಂಡರ್ ಆಗಿರುತ್ತದೆ. ಕರ್ನಾಟಕ ಸರ್ಕಾರದ ಸುತ್ತೋಲೆ ಸಂ. ಆಇ 576 ವೆಚ್ಚ 12 2018, ದಿ.22.05.2018ರ ರೀತ್ಯಾ ಏಕ್ ಬಿಡ್ ಟೆಂಡರ್ ಅನ್ನು ಪರಿಗಣಿಸಲೇಬೇಕಾದ ಅನಿವಾರ್ಯ ಸಂದರ್ಭಗಳಲ್ಲಿ ಟೆಂಡರ್ ದರಗಳು ಅಂದಾಜು ಮೊತ್ತಕ್ಕಿಂತ ಶೇ.5ಕ್ಕಿಂತ ಹೆಚ್ಚುವರಿಯಾಗಿದ್ದಲ್ಲಿ ದರ ಸಂಧಾನ ಮಾಡುವುದನ್ನು ಕಡ್ಡಾಯಗೊಳಿಸಿದೆ. ಈ ಪ್ರಕರಣದಲ್ಲಿ ಏಕ ಬಿಡ್ ಅನುಮೋದಿಸಬೇಕಾದ ಅನಿವಾರ್ಯ ಸಂಧರ್ಭವನ್ನು ನಮೂದಿಸಿರುವುದಿಲ್ಲ. ಹಾಗೂ ಟೆಂಡರ್ ಅಂದಾಜು ಮೌಲ್ಯವನ್ನು ನಮೂದಿಸಿರುವುದಿಲ್ಲ,

7. ಟೆಂಡರ್‌ಗೆ ಸಂಬಂಧಿಸಿದ ಪೂರಕ ದಾಖಲಾತಿಗಳು ಕಡತದಲ್ಲಿ ಲಭ್ಯವಿರುವುದಿಲ್ಲ.

ಮೇಲ್ಕಂಡ ನ್ಯೂನತೆಗಳಿಗೆ ವಿವರಣೆಯನ್ನು ನೀಡುವಂತೆ ಲೆಕ್ಕವಿಚಾರಣೆ ಪತ್ರ ಸಂ.02, ದಿ.19.05.2022ರಂದು ಕೋರಲಾಗಿ, ನೀಡಿರುವ ಅನುಸರಣೆಯು ಸಮಂಜಸವಾಗಿಲ್ಲದಿರುವುದರಿಂದ ಏಕ್ ಬಿಡ್ ಟೆಂಡರ್ ಮೂಲಕ ಅಂಗೀಕರಿಸಿ ಕಚೇರಿ ಕರ್ತವ್ಯ ನಿರ್ವಹಿಸಲು ಹೊರಗುತ್ತಿಗೆ ಆಧಾರದಲ್ಲಿ "S.A

Manpower Services Pvt Ltd" ಮಾನವ ಸೇವೆಗಳನ್ನು ಪಡೆದಿರುವುದನ್ನು ಲೆಕ್ಕಪರಿಶೋಧನೆಯು ಆಕ್ಷೇಪಿಸಿದೆ.

**23.2 ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳ ಮುದ್ರಣಕ್ಕಾಗಿ Mehra computer System Ltd ಇವರಿಗೆ ಪಾವತಿಸಿರುವ ಮೊಬಲಗು ರೂ.27,09,140/- ಆಕ್ಷೇಪಣೆ**

2020-21ನೇ ಸಾಲಿನಲ್ಲಿ Mehra computer System Ltd ಇವರಿಗೆ ಪಾಠಶಾಲಾ ವಿಭಾಗದ ಪ್ರಶ್ನೆಪತ್ರಿಕೆ, ಉತ್ತರ ಪತ್ರಿಕೆ, ಪ್ರವೇಶ ಪತ್ರ ಇತ್ಯಾದಿಗಳ ಮುದ್ರಣಕ್ಕಾಗಿ ರೂ.27,09,140/-ಗಳನ್ನು ಪಾವತಿಸಿರುವುದು ಕಂಡುಬಂದಿರುತ್ತದೆ. ದರಪಟ್ಟಿ/ಟೆಂಡರ್ ಇಲ್ಲದೇ ಕೆ.ಟಿ.ಪಿ.ಪಿ ನಿಯಮಗಳನ್ನು ಉಲ್ಲಂಘಿಸಿ ಖರೀದಿ ಪ್ರಕ್ರಿಯೆ ಕೈಗೊಂಡಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ವಿವರಣೆಯನ್ನು ಕೂಡಲೇ ಲೆಕ್ಕಪರಿಶೋಧನೆಗೆ ಒದಗಿಸಲು ಸೂಚಿಸಿದೆ. ಪಾವತಿ ವಿವರಗಳು ಕೆಳಕಂಡಂತಿರುತ್ತವೆ.

| ಕ್ರ.ಸಂ | ವೋಚರ್ ಸಂಖ್ಯೆ | ಚೆಕ್ ಸಂಖ್ಯೆ, ದಿನಾಂಕ | ಮೊಬಲಗು |
|---|---|---|---|
| 1 | 151 | 469542, ದಿ.29.07.2020 | 17,28,000/- |
| 2 | 178 | 469543 ದಿ.29.07.2020 | 9,81,140/- |
| ಒಟ್ಟು | | | **27,09,140/-** |

ಈ ಬಗ್ಗೆ ಲೆಕ್ಕವಿಚಾರಣೆ ಪತ್ರ ಸಂ.06, ದಿ.20.05.2022ರಲ್ಲಿ ಕೋರಲಾಗಿ ಅನುಸರಣೆಯನ್ನು ನೀಡಿದ್ದು, ದಿನಾಂಕ 31.12.2018 ರಂದು ಪ್ರಶ್ನೆಪತ್ರಿಕೆ, ಉತ್ತರಪತ್ರಿಕೆ, ಪ್ರವೇಶ ಪತ್ರ ಮುದ್ರಣಕ್ಕಾಗಿ ಕೆ.ಟಿ.ಪಿ.ಪಿ ಕಾಯ್ದೆ 1999ರ ರೀತ್ಯಾ 4(ಜಿ) ವಿನಾಯಿತಿ ಕೋರಿ ಪತ್ರ ಬರೆದಿದ್ದು, ದಿನಾಂಕ 11.10.2021ರ ಪತ್ರದಲ್ಲಿ ಪ್ರಶ್ನೆ ಪತ್ರಿಕೆ ಮುದ್ರಣಕ್ಕೆ ಅನುಮತಿ ನೀಡಿದ್ದರಿಂದ ತಪ್ಪಾಗಿ ಅರ್ಥೈಸಿಕೊಂಡು ಉತ್ತರಪತ್ರಿಕೆ, ಪ್ರವೇಶ ಪತ್ರ ಮುದ್ರಣ ಮಾಡಿಸಿರುವುದಾಗಿ ತಿಳಿಸಿರುತ್ತಾರೆ. ಪರಿಶೀಲಿಸಲಾಗಿ ವಿನಾಯಿತಿಯಲ್ಲಿ ದಿನಾಂಕ 11.10.2021ರಲ್ಲಿ ನೀಡಿದ್ದು, ಮೇಲ್ಕಂಡ ಖರೀದಿಯು 2020-21ನೇ ಸಾಲಿನದ್ದಾಗಿರುತ್ತದೆ. ಅಂದರೆ ವಿನಾಯಿತಿ ನೀಡಿರುವ ದಿನಾಂಕಕ್ಕಿಂತ ಹಿಂದಿನ ದಿನಾಂಕದಾಗಿರುತ್ತವೆ. ಆದ್ದರಿಂದ ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿ, ಟೆಂಡರ್ ನಡೆಸದೇ ಮುದ್ರಣ ಪ್ರಕಿಯೆ ನಡೆಸಿ Mehra computer System Ltd ರವರಿಗೆ 2020-21ನೇ ಸಾಲಿನಲ್ಲಿ ಪಾವತಿಸಿರುವ ಮೊಬಲಗು ರೂ. ರೂ.27,09,140/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**23.3 ಪದವಿ ವಿಭಾಗದ ಪ್ರಶ್ನೆಪತ್ರಿಕೆ, ಉತ್ತರ ಪತ್ರಿಕೆ, ಪ್ರವೇಶ ಪತ್ರ ಮುದ್ರಣಕ್ಕಾಗಿ Kiran Enterprises ಇವರಿಗೆ ಪಾವತಿಸಿರುವ ಮೊತ್ತ ರೂ,1,81,720/- ಆಕ್ಷೇಪಣೆ-**

2020-21ನೇ ಸಾಲಿನಲ್ಲಿ Kiran Enterprises ಇವರಿಗೆ ಪದವಿ/ಸ್ನಾತಕೋತ್ತರ ವಿಭಾಗದ ಪ್ರಶ್ನೆಪತ್ರಿಕೆ, ಉತ್ತರ ಪತ್ರಿಕೆ, ಪ್ರವೇಶ ಪತ್ರ ಇತ್ಯಾದಿಗಳ ಮುದ್ರಣಕ್ಕಾಗಿ ವೋಚರ್ ಸಂಖ್ಯೆ 372, ಚೆಕ್ ಸಂಖ್ಯೆ 469547, ದಿ.01.12.2020ರಲ್ಲಿ ರೂ.1,81,720/-ಗಳನ್ನು ಪಾವತಿಸಿರುವುದು ಕಂಡುಬಂದಿರುತ್ತದೆ. ಟೆಂಡರ್ ಇಲ್ಲದೇ ಕೆ.ಟಿ.ಪಿ.ಪಿ ನಿಯಮಗಳನ್ನು ಉಲ್ಲಂಘಿಸಿ, ಬಿಲ್‌ಗಳನ್ನು ವಿಭಜಿಸಿ ಖರೀದಿ ಪ್ರಕ್ರಿಯೆ ಕೈಗೊಂಡಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ವಿವರಣೆಯನ್ನು ಒದಗಿಸುವಂತೆ ಲೆಕ್ಕವಿಚಾರಣೆ ಪತ್ರ ಸಂ.07, ದಿ.20.05.2022ರಂದು ಕೋರಲಾಗಿ,

ಮ್ಯಾನುವೆಲ್ ಟೆಂಡರ್ ಮೂಲಕ ನಡೆಸಿರುವುದಾಗಿ ತಿಳಿಸಿರುತ್ತಾರೆ. ಆದರೆ, ಕಡತದನ್ವಯ ದರಪಟ್ಟಿ ಮೂಲಕ ಖರೀದಿಸಿರುವುದು ಕಂಡುಬಂದಿರುತ್ತದೆ. ಆದ್ದರಿಂದ ರೂ.1,81,720/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**23.4 ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿ ಟೆಂಡರ್ ಪ್ರಕ್ರಿಯೆ ನಡೆಸದೇ ದರಪಟ್ಟಿ ಮೂಲಕ ವಾಹನ ಬಾಡಿಗೆ ಪಡೆದಿರುವ ಮೊತ್ತ ರೂ.60,000/– ಗಳ ವಸೂಲಾತಿ.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ 2020–21ನೇ ಸಾಲಿನಲ್ಲಿ ಮಾರುತಿ ಸ್ವಿಫ್ಟ್ ಡಿಸೈರ್ ವಾಹನವನ್ನು ಬಾಡಿಗೆಗೆ ಪಡೆದು ಮಾಹೆಯಾನ ರೂ.35,000/–ಗಳಂತೆ ರೂ.4,20,000/–ಗಳನ್ನು ಪಾವತಿಸಿದ್ದು, ಈ ಸಂಬಂಧಪಟ್ಟ ಮಾಹಿತಿಗಳನ್ನು ಹಾಗೂ ದಾಖಲಾತಿಗಳನ್ನು ಒದಗಿಸುವಂತೆ ಲೆಕ್ಕವಿಚಾರಣೆ ಪತ್ರ ಸಂ.15 ದಿ:26.05.2022ರಲ್ಲಿ ಕೋರಲಾಗಿ, ನೀಡಿರುವ ಉತ್ತರದಲ್ಲಿ ಹಣಕಾಸು ಅಧಿಕಾರಿಗಳಿಗೆ ತಾತ್ಕಾಲಿಕ ವಾಹನ ವ್ಯವಸ್ಥೆ ಮಾಡಲು ದರಪಟ್ಟಿ ಮೂಲಕ ನಾಗೇಶ್ ಟ್ರಾವೆಲ್ಸ್‌ರವರಿಂದ ಪಡೆಯಲಾಗಿದೆ ಎಂದು ತಿಳಿಸಿರುತ್ತಾರೆ. ಸರ್ಕಾರಿ ಆದೇಶ ಸಂ.ಸಿಆಸುಇ 96 ಶಿವಾನಿ 2012, ದಿನಾಂಕ:23.08.2012ರಲ್ಲಿ ಮಾಸಿಕ ರೂ.30,000/–ಗಳನ್ನು ನಿಗದಿಪಡಿಸಲಾಗಿರುತ್ತದೆ. ಸರ್ಕಾರಿ ಆದೇಶವನ್ನು ಮೀರಿ ಹೆಚ್ಚುವರಿಯಾಗಿ ಪಾವತಿಸಿರುವ ವಾಹನ ಬಾಡಿಗೆ ಮೊತ್ತ ರೂ.60,000/–ಗಳನ್ನು ವಸೂಲಾತಿಗೆ ಸೂಚಿಸಿದೆ.

**23.5 ಜಾಹೀರಾತು ವೆಚ್ಚಕ್ಕಾಗಿ Four wind Mass Communication Services ಇವರಿಗೆ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತ ರೂ.50,794/– ವಸೂಲಾತಿ**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2020–21ನೇ ಸಾಲಿನಲ್ಲಿ ಜಾಹೀರಾತು ವೆಚ್ಚಕ್ಕಾಗಿ ರೂ.12,04,312/–ಗಳನ್ನು ಪಾವತಿ ಮಾಡಿದ್ದು, ಈ ಬಗ್ಗೆ ಕಡತವನ್ನು ಪರಿಶೀಲಿಸಲಾಗಿ ಮಾನ್ಯ ಕುಲಪತಿಗಳ ನೇಮಕಾತಿಗಾಗಿ ಜಾಹೀರಾತು ನೀಡಲು ಉಪ–ನಿರ್ದೇಶಕರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು ಇವರು 1. ವಿಜಯವಾಣಿ, 2. ಉದಯವಾಣಿ, 3. ಟೈಮ್ಸ್ ಆಫ್ ಇಂಡಿಯ, 4. ದಿ ಹಿಂದು, 5. ಇಂಡಿಯನ್ ಎಕ್ಸ್‌ಪ್ರೆಸ್, 6. ದೈನಿಕ್ ಜಾಗರಣ್, 7. ಅಮರ ಉಜಾಲ ಒಟ್ಟು 7 ದಿನಪತ್ರಿಕೆಗಳಲ್ಲಿ ಜಾಹೀರಾತು ನೀಡಲು ಆದೇಶಿಸಿರುತ್ತಾರೆ. ಆದರೆ, Four wind Mass Communication Services ಇವರಿಗೆ ಪಾವತಿಸಿರುವ ಬಿಲ್ಲನ್ನು ಪರಿಶೀಲಿಸಲಾಗಿ ಮೇಲ್ಕಂಡ 7 ಪತ್ರಿಕೆಗಳ ಜೊತೆಗೆ ನ್ಯೂ ಇಂಡಿಯ ಎಕ್ಸ್‌ಪ್ರೆಸ್ ಪತ್ರಿಕೆ ಸೇರಿ 8 ದಿನಪತ್ರಿಕೆಗಳಲ್ಲಿ ಜಾಹೀರಾತು ನೀಡಿ ರೂ.48,375/– + ಜಿ.ಎಸ್.ಟಿ 2,419= ಒಟ್ಟು ರೂ.50794/– ಗಳನ್ನು ಹೆಚ್ಚುವರಿಯಾಗಿ ಪಾವತಿಸಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ವಿವರಣೆಯನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಲೆಕ್ಕವಿಚಾರಣೆ ಪತ್ರ ಸಂ.34, ದಿನಾಂಕ:15.06.2022ರಲ್ಲಿ ಕೋರಲಾಗಿ, ನೀಡಿರುವ ಅನುಸರಣೆಯಲ್ಲಿ ಮಾನ್ಯ ಕುಲಪತಿಗಳ ನೇಮಕಾತಿಗಾಗಿ ಪತ್ರಿಕಾ ಜಾಹಿರಾತು ನೀಡಿರುವ Four wind Mass Communication Services ಹೆಚ್ಚುವರಿ ಶುಲ್ಕವನ್ನು ಮರುಪಾವತಿಸಲು ಪತ್ರ ವ್ಯವಹಾರ ಮಾಡಲಾಗಿದೆ. ಆದಷ್ಟು ಬೇಗ ವಸೂಲಿ ಮಾಡಲಾಗುವುದು ಎಂದು ತಿಳಿಸಿರುತ್ತಾರೆ. ಸದರಿ ಮೊಬಲಗನ್ನು ಸಂಬಂಧಿಸಿದವರಿಂದ ವಸೂಲಿಸಿ ವಿಶ್ವವಿದ್ಯಾಲಯದ ಖಾತೆಗೆ ಜಮಾ ಮಾಡುವವರೆಗೆ ರೂ.50,794/–ಗಳನ್ನು ವಸೂಲಾತಿಯಲ್ಲಿಡಲಾಗಿದೆ.

**24 ಸರ್ಕಾರಿ ವಾಹನಗಳಿಗೆ ಖಾಸಗಿ ಸಂಸ್ಥೆಗಳಿಗೆ ಪಡೆದಿರುವ ವಿಮಾ ಮೊತ್ತದ ಬಗ್ಗೆ**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2020–21ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ 3 ವಾಹನಗಳ ಪೈಕಿ ಕೆಎ–04, ಎಂಯು 527 ವಾಹನದ ವಿಮೆಯನ್ನು ನ್ಯಾಷನಲ್ ಇನ್ಸೂರೆನ್ಸ್ ಕಂಪನಿ ಇವರಿಂದ ಪಡೆದಿದ್ದು, ಉಳಿದ 2 ವಾಹನಗಳಾದ ಕೆಎ–01 ಎಂ.ಆರ್–8751, ಹಾಗೂ ಕೆಎ–04 ಎಂಕ್ಯೂ–7762 ಗಳ ವಿಮೆಯನ್ನು ರಿಲಯನ್ಸ್ ಜನರಲ್ ಇನ್ಸೂರೆನ್ಸ್ ಇವರಿಂದ ಪಡೆಯಲಾಗಿದೆ. ಸರ್ಕಾರಿ ವಾಹನಗಳ ವಿಮೆಯನ್ನು ಏಕೆ ಖಾಸಗಿ ಸಂಸ್ಥೆಗಳಿಂದ

ಪಡಯಲಾಗಿದೆ ಎಂಬ ಬಗ್ಗೆ ವಿವರಣೆಯನ್ನು ನೀಡಲು ಲೆಕ್ಕವಿಚಾರಣೆ ಪತ್ರ ಸಂಖ್ಯೆ. 33, ದಿನಾಂಕ: 14.06.2022ರಲ್ಲಿ ಕೋರಲಾಗಿ, ಅನುಸರಣೆಯನ್ನು ಸಲ್ಲಿಸಿದ್ದು, ಮಾಹಿತಿಯ ಕೊರತೆಯಿಂದ ರಿಲಯನ್ಸ್ ಜನರಲ್ ಇನ್ಸೂರೆನ್ಸ್ ಇವರಿಂದ ವಾಹನ ವಿಮೆಯನ್ನು ಪಡೆದಿರುವುದಾಗಿ ತಿಳಿಸಿರುತ್ತಾರೆ. ಇನ್ನೂ ಮುಂದೆ ಸರ್ಕಾರಿ ಸಾಮ್ಯದ ಸಂಸ್ಥೆಗಳಿಂದ ವಾಹನ ವಿಮೆ ಪಡೆಯಲು ಸೂಚಿಸಿದೆ.

**25 ವಿಶ್ವವಿದ್ಯಾಲಯವು ನಿರ್ವಹಿಸಿರುವ ಗ್ರಂಥಾಲಯಕ್ಕೆ ಸಂಬಂಧಿಸಿದ ವಿವರಗಳು.**
**ಅ) ಗ್ರಂಥಾಲಯ ಪುಸ್ತಕಗಳ ದಾಸ್ತಾನು ವಿವರಗಳು.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಗ್ರಂಥಾಲಯ ಪುಸ್ತಕಗಳ ದಾಸ್ತಾನಿನ ವಿವರಗಳು ಈ ಕೆಳಕಂಡಂತಿದೆ:-

| ವಿವರ | 2020-21 |
|---|---|
| 01.04.2020 ಕ್ಕೆ ಪ್ರಾರಂಭಿಕ ಶಿಲ್ಕು | **2201** |
| 2020-21ನೇ ಸಾಲಿನ ಸ್ವೀಕೃತಿಗಳು ಖರೀದಿ-<br>ದೇಣಿಗೆ ನೀಡಿರುವ ಪುಸ್ತಕಗಳು- | **33**<br>- |
| **ಒಟ್ಟು** | 2234 |

**ಆ) ಇಂಡೆಂಟ್ ವಹಿಯನ್ನು ನಿರ್ವಹಿಸದಿರುವುದು.**

ವಿಶ್ವವಿದ್ಯಾಲಯದ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಖರೀದಿಸುವ ಬಗ್ಗೆ, ವಿವಿಧ ವಿಭಾಗಗಳ ಮುಖ್ಯಸ್ಥರುಗಳಿಂದ ಸ್ವೀಕರಿಸಲಾದ ಪುಸ್ತಕಗಳ ಬೇಡಿಕೆಯ ಬಗ್ಗೆ ಇಂಡೆಂಟ್ ವಹಿಯನ್ನು 2020-21ನೇ ಸಾಲಿನಲ್ಲಿ ಸಮರ್ಪಕವಾಗಿ ನಿರ್ವಹಿಸಿರುವುದಿಲ್ಲ.

**ಇ) ಆಕ್ಸೆಷನ್ ರಿಜಿಸ್ಟರ್ ಅನ್ನು ಪೂರ್ಣ ಪ್ರಮಾಣದಲ್ಲಿ ನಿರ್ವಹಿಸದೇ ಇರುವುದು.**

ವಿಶ್ವವಿದ್ಯಾಲಯವು ಖರೀದಿಸಿದ ಪ್ರತಿಯೊಂದು ಪುಸ್ತಕದ ಹೆಸರು, ಲೇಖಕರ ಹೆಸರು, ಪ್ರಕಾಶಕರ ಹೆಸರು ಮತ್ತು ಪುಸ್ತಕದ ಮೊತ್ತದ ವಿವರಗಳು ಗ್ರಂಥಾಲಯದ ಆಕ್ಸೆಷನ್ ರಿಜಿಸ್ಟರ್‌ನಲ್ಲಿ ನಮೂದಾಗಬೇಕಾಗಿದ್ದು, ಆಕ್ಸೇಷನ್ ರಿಜಿಸ್ಟರ್ ಅನ್ನು ಪರಿಶೀಲಿಸಿದಾಗ, ಮಾಹಿತಿಗಳನ್ನು ಪೂರ್ಣ ಪ್ರಮಾಣದಲ್ಲಿ ನಿರ್ವಹಿಸದಿರುವುದು ಕಂಡುಬಂದಿರುತ್ತದೆ.

ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಯು.ಜಿ.ಸಿ. ವೇತನ ಪಡೆಯುವ 3 ಜನ ಸಹಾಯಕ ಗ್ರಂಥಪಾಲಕರು ಹಾಗೂ ರಾಜ್ಯ ವೇತನ ಪಡೆಯುವ ಒಬ್ಬರು ಗ್ರಂಥಾಲಯ ಸಹಾಯಕರು ಒಟ್ಟು 4 ಜನ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದು, ಗ್ರಂಥಾಲಯದಲ್ಲಿ ನಿರ್ವಹಿಸಬೇಕಾದ ಮೂಲ ವಹಿಗಳಾದ ಆಕ್ಸೆಷನ್ ರಿಜಿಸ್ಟರ್, ಇಂಡೆಂಟ್ ವಹಿ ಮತ್ತು ಇತರೆ ವಹಿಗಳನ್ನು ಇದುವರೆಗೂ ಸಹ ನಿರ್ವಹಿಸದೇ ಇರುವುದು ಸದರಿ ಸಿಬ್ಬಂದಿಗಳ ಕರ್ತವ್ಯ ನಿರ್ಲಕ್ಷ್ಯತೆಯನ್ನು ತೋರಿಸುತ್ತದೆ. ಆದ್ದರಿಂದ ಮಂಜೂರಾದ ಹುದ್ದೆಗಳಿಗೆದುರಾಗಿ ಭರ್ತಿ ಮಾಡಿರುವ ಸಿಬ್ಬಂದಿಗಳ ನೇಮಕಾತಿಯ ಉದ್ದೇಶವೇ ಸಫಲವಾಗಿರುವುದಿಲ್ಲ. ಹಾಗೂ ಇವರಿಗೆ ಪಾವತಿಸಿರುವ ವೇತನವು ಸಹ ವಿಶ್ವವಿದ್ಯಾಲಯಕ್ಕೆ ಹೊರೆಯಾಗಿರುತ್ತದೆ. ಆದ್ದರಿಂದ ಈ ಬಗ್ಗೆ ಕೂಡಲೇ ವಿಶ್ವವಿದ್ಯಾಲಯದ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವುದು ಅತ್ಯಗತ್ಯವಾಗಿರುತ್ತದೆ.

**26 ವಾರ್ಷಿಕ ದಾಸ್ತಾನಿನ ಭೌತಿಕ ಪರಿಶೀಲನೆ ನಡೆಸದಿರುವುದು :**

ಕರ್ನಾಟಕ ಆರ್ಥಿಕ ಸಂಹಿತೆ–1958 ಅನುಚ್ಛೇಧ– 169 ರಲ್ಲಿ ಕಚೇರಿಯ ಪೀಠೋಪಕರಣ ಮತ್ತು ಕಚೇರಿಯ ದಾಸ್ತಾನನ್ನು ಕಚೇರಿಯ ಮುಖ್ಯಸ್ಥರು ಅಥವಾ ಕಚೇರಿಯ ಇತರೆ ಪತ್ರಾಂಕಿತ ಅಧಿಕಾರಿಯು ವರ್ಷಕ್ಕೊಮ್ಮೆ ಏಪ್ರಿಲ್ ಮಾಹೆಯಲ್ಲಿ ವಾರ್ಷಿಕ ದಾಸ್ತಾನಿನ ಭೌತಿಕ ಪರಿಶೀಲನೆಯನ್ನು ಕೈಗೊಂಡು ಪ್ರಮಾಣ ಪತ್ರವನ್ನು ದೃಢೀಕರಿಸಿ ತನ್ನ ಮೇಲಾಧಿಕಾರಿಗಳಿಗೆ/ನಿಯಂತ್ರಣಾಧಿಕಾರಿಗಳಿಗೆ ಸಲ್ಲಿಸಬೇಕಾಗಿರುತ್ತದೆ. ಆದರೆ 2020–21 ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಗ್ರಂಥಾಲಯ ಪುಸ್ತಕಗಳ ವಾರ್ಷಿಕ ದಾಸ್ತಾನಿನ ಭೌತಿಕ ಪರಿಶೀಲನೆ ಕೈಗೊಂಡು ದೃಢೀಕರಿಸಿರುವುದಿಲ್ಲ.

**27 ವಿಶ್ವವಿದ್ಯಾಲಯದ ಪ್ರಸಾರಾಂಗದ ಪುಸ್ತಕಗಳ ಮಾರಾಟ.**

2020–21 ನೇ ಸಾಲಿನಲ್ಲಿ, ವಿಶ್ವವಿದ್ಯಾಲಯದ ಪಠ್ಯಪುಸ್ತಕಗಳ ದಾಸ್ತಾನು ವಹಿಯನ್ನು ಪರಿಶೀಲಿಸಲಾಗಿದ್ದು, ವಿವರಗಳು ಕೆಳಕಂಡಂತಿರುತ್ತವೆ:

| ವಿವರಗಳು | ಸಂಖ್ಯೆ |
|---|---|
| ಪ್ರಾರಂಭ ಶಿಲ್ಕು | 40311 |
| ಸ್ವೀಕೃತಿಯಾದ ಪುಸ್ತಕಗಳು | – |
| ಒಟ್ಟು ಪುಸ್ತಕಗಳು | 40311 |
| ವಿತರಿಸಿದ ಪುಸ್ತಕಗಳ ಮಾರಾಟ<br>ಪ.ಜಾತಿ/ಪಂಗಡ ವಿದ್ಯಾರ್ಥಿಗಳಿಗೆ ಉಚಿತ ವಿತರಣೆ | 2376<br>– |
| ಅಂತಿಮ ಶಿಲ್ಕು | 37935 |

ಒಟ್ಟು 2376 ಪಠ್ಯ ಪುಸ್ತಕಗಳ ಮಾರಾಟದಿಂದ ವಿಶ್ವವಿದ್ಯಾಲಯಕ್ಕೆ ರೂ.1,31,410/– ಗಳು ಸ್ವೀಕೃತವಾಗಿರುತ್ತದೆ.

ಕರ್ನಾಟಕ ಆರ್ಥಿಕ ಸಂಹಿತೆ–1958 ಅನುಚ್ಛೇಧ– 169 ರಲ್ಲಿ ಕಚೇರಿಯ ಪೀಠೋಪಕರಣ ಮತ್ತು ಕಚೇರಿಯ ದಾಸ್ತಾನನ್ನು ಕಚೇರಿಯ ಮುಖ್ಯಸ್ಥರು ಅಥವಾ ಕಚೇರಿಯ ಇತರೆ ಪತ್ರಾಂಕಿತ ಅಧಿಕಾರಿಯು ವರ್ಷಕ್ಕೊಮ್ಮೆ ಏಪ್ರಿಲ್ ಮಾಹೆಯಲ್ಲಿ ವಾರ್ಷಿಕ ದಾಸ್ತಾನಿನ ಭೌತಿಕ ಪರಿಶೀಲನೆಯನ್ನು ಕೈಗೊಂಡು ಪ್ರಮಾಣ ಪತ್ರವನ್ನು ದೃಢೀಕರಿಸಿ ತನ್ನ ಮೇಲಾಧಿಕಾರಿಗಳಿಗೆ/ ನಿಯಂತ್ರಣಾಧಿಕಾರಿಗಳಿಗೆ ಸಲ್ಲಿಸಬೇಕಾಗಿರುತ್ತದೆ. ಆದರೆ, 2020–21 ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗದ ವಾರ್ಷಿಕ ದಾಸ್ತಾನಿನ ಭೌತಿಕ ಪರಿಶೀಲನೆ ಕೈಗೊಂಡು ದೃಢೀಕರಿಸಿರುವುದಿಲ್ಲ.

**28 ಸಾಮಾನ್ಯ ಅಭಿಪ್ರಾಯ:**

1. ವಿಶ್ವವಿದ್ಯಾಲಯವು ಕಡ್ಡಾಯವಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009ರ ನಿಯಮ (38) ಹಾಗೂ (54)ರ ಅನ್ವಯ, ಪರಿನಿಯಮಗಳನ್ನು ರಚಿಸಿಕೊಂಡು ಕಾರ್ಯನಿರ್ವಹಿಸುವುದು.
2. ವಾರ್ಷಿಕ ಲೆಕ್ಕಪತ್ರಗಳ ದೃಢೀಕರಣದಲ್ಲಿ ತಿಳಿಸಿರುವ ಅಂಶಗಳನ್ನು ಸರಿಪಡಿಸಿಕೊಂಡು ಮುಂದಿನ ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸುವುದು.
3. ವಾರ್ಷಿಕ ಲೆಕ್ಕಪತ್ರಗಳ ಪರಿಶೀಲನೆಯಲ್ಲಿ ಲೋಪದೋಷಗಳನ್ನು ಸರಿಪಡಿಸಿಕೊಂಡು ಸೂಕ್ತ ಲೆಕ್ಕ ನಮೂದಿನೊಂದಿಗೆ ಲೆಕ್ಕಪತ್ರಗಳನ್ನು ನಿರ್ವಹಿಸಲು ಸೂಚಿಸಿದೆ ಹಾಗೂ ಸಮರ್ಪಕ ಲೆಕ್ಕ ನೀತಿಯನ್ನು ಅಳವಡಿಸಿ ದಾಖಲಾತಿಗಳನ್ನು ನಿರ್ವಹಿಸಿ, ಪೂರ್ಣ ಮಾಹಿತಿ ನೀಡುವಂಥಹ ಲೆಕ್ಕಪತ್ರಗಳನ್ನು ತಯಾರಿಸಲು ಸೂಚಿಸಿದೆ.

4. ಹಣಕಾಸಿನ ವಹಿವಾಟು ನಡೆಸುವ ಎಲ್ಲಾ ನಗದು ವಹಿಯನ್ನು ಕಡ್ಡಾಯವಾಗಿ ನಿರ್ವಹಿಸತಕ್ಕದ್ದು.
5. ಹಿಂದಿನ ವರ್ಷಗಳ ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳನ್ನು ಇತ್ಯರ್ಥಗೊಳಿಸುವ ಸಲುವಾಗಿ ಸೂಕ್ತ ಅನುಪಾಲನಾ ವರದಿಗಳನ್ನು ಸಲ್ಲಿಸುವುದು ಹಾಗೂ ಈ ಬಗ್ಗೆ ಆಗಿರುವ ಪ್ರಗತಿಯನ್ನು ಲೆಕ್ಕಪರಿಶೋಧನಾ ತೀರುವಳಿ ವಹಿಯನ್ನು ನಿರ್ವಹಿಸಿ ದಾಖಲಿಸುವುದು.
6. ಆಯವ್ಯಯವನ್ನು ವೈಜ್ಞಾನಿಕವಾಗಿ ವಾಸ್ತವಿಕ ಖರ್ಚುಗಳ ಆಧಾರದ ಮೇಲೆ ತಯಾರಿಸುವುದು.
7. ವಿಶ್ವವಿದ್ಯಾಲಯವು ಸ್ವೀಕೃತಿಗಳಿಗೆ ಸಂಬಂಧಿಸಿದಂತೆ, ಡಿ.ಸಿ.ಬಿ ವಹಿಗಳನ್ನು ನಿರ್ವಹಿಸುವುದು ಮತ್ತು ಸ್ವೀಕೃತಿಗಳು ಬ್ಯಾಂಕ್ ಖಾತೆಗೆ ಜಮೆ ಆಗಿರುವುದನ್ನು ಖಚಿತಪಡಿಸಿಕೊಳ್ಳಲು ಕಡ್ಡಾಯವಾಗಿ ಲೆಕ್ಕ ಸಮನ್ವಯ (Reconciliation) ಕಾರ್ಯವನ್ನು ಕೈಗೊಳ್ಳುವುದು ಅಗತ್ಯವಿದೆ.
8. ಅನುದಾನಿತ ಮತ್ತು ಅನುದಾನರಹಿತ ಕಾಲೇಜು ಹಾಗೂ ಪಾಠಶಾಲೆಗಳ ವೇತನ ಬಿಲ್ಲುಗಳ ಪಾವತಿಗೆ ಸಂಬಂಧಿಸಿದಂತೆ, ಅವುಗಳ ಆಂತರಿಕ ಲೆಕ್ಕಪರಿಶೋಧನೆ ಕೈಗೊಳ್ಳುವುದು ಹಾಗೂ ಈ ಬಗ್ಗೆ ವಿಶ್ವವಿದ್ಯಾಲಯವು ಈ ಬಗ್ಗೆ ನಿಯಂತ್ರಣ ಹೊಂದುವುದು.
9. ಸರ್ಕಾರದಿಂದ ಕಾಲಕಾಲಕ್ಕೆ ಬಿಡುಗಡೆಯಾಗುವ ಅನುದಾನವನ್ನು ಉದ್ದೇಶಿತ ಕಾರ್ಯಕ್ರಮಗಳಿಗಾಗಿ ಸಕಾಲದಲ್ಲಿ ವೆಚ್ಚ ಭರಿಸುವುದು.
10. ವಿಶ್ವವಿದ್ಯಾಲಯವು ಸಿಬ್ಬಂದಿ ಶಾಖೆಗೆ ಸಂಬಂಧಿಸಿದಂತೆ, ಕಡ್ಡಾಯವಾಗಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 1958ರ ನಿಯಮಗಳನ್ನು ಪಾಲಿಸುವುದು.
11. ವಿಶ್ವವಿದ್ಯಾಲಯವು ಸರಕು ಮತ್ತು ಸೇವೆಗಳ ಖರೀದಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು 2000 ಗಳ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.
12. ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿಗಳನ್ನು ನೇಮಿಸುವಾಗ, ಮಂಜೂರಾದ ಹುದ್ದೆಗಳಿಗೆದುರಾಗಿ ನೇಮಿಸಿಕೊಂಡಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.
13. ಅಂಕಪಟ್ಟಿ, ಪ್ರಮಾಣ ಪತ್ರಗಳು, ಪ್ರಶ್ನೆಪತ್ರಿಕೆಗಳು ಹಾಗೂ ಉತ್ತರಪತ್ರಿಕೆಗಳು ವಿಶ್ವವಿದ್ಯಾಲಯದ ಪ್ರಮುಖ ದಾಖಲೆಗಳಾಗಿದ್ದು, ಇವುಗಳ ದಾಸ್ತಾನು ಹಾಗೂ ವಿತರಣಾ ವಹಿಯನ್ನು ಕಡ್ಡಾಯವಾಗಿ ನಿರ್ವಹಿಸತಕ್ಕದ್ದು.
14. ವಿಶ್ವವಿದ್ಯಾಲಯವು ಕಾಮಗಾರಿಗಳನ್ನು ಕೈಗೊಳ್ಳುವಾಗ, ಲೋಕೋಪಯೋಗಿ ಇಲಾಖಾ ಸಂಹಿತೆ ಹಾಗೂ ಕೆ.ಟಿ.ಪಿ.ಪಿ ಗಳನ್ನು ಗಮನದಲ್ಲಿಟ್ಟುಕೊಂಡು ನಿರ್ವಹಿಸುವುದು.
15. ಶಾಸನಬದ್ಧ ತೆರಿಗೆಗಳನ್ನು ಕಟಾಯಿಸಿ ಸಂಬಂಧಿಸಿದ ಶೀರ್ಷಿಕೆಗೆ ಜಮಾ ಮಾಡುವುದು.
16. ಸಂಕ್ಷಿಪ್ತ ಸಾದಿಲ್ವಾರು ವೆಚ್ಚದ ಬಿಲ್ಲಿನಲ್ಲಿ ಹಣವನ್ನು ಸೆಳೆದು, ವೆಚ್ಚ ಭರಿಸುವುದನ್ನು ಸಂಪೂರ್ಣವಾಗಿ ನಿಯಂತ್ರಿಸುವುದು.
17. ಯು.ಜಿ.ಸಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ನೇಮಕಾತಿ, ಪರೀಕ್ಷಾರ್ಥ ಅವಧಿ ಘೋಷಣೆ, ವಾರ್ಷಿಕ ಬಡ್ತಿ ಹಾಗೂ ವೇತನ ಪರಿಷ್ಕರಣೆಗಳನ್ನು ಯು.ಜಿ.ಸಿ ಮಾರ್ಗಸೂಚಿಗಳ ಅನುಸಾರವಾಗಿ ಮಾಡುವುದು.
18. ಸರ್ಕಾರದಿಂದ ಹುದ್ದೆಗಳು ಮಂಜೂರಾಗಿದೆ ಎಂಬ ಒಂದೇ ಕಾರಣಕ್ಕೆ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಬದಲು ವಿಶ್ವವಿದ್ಯಾಲಯದ ಅವಶ್ಯಕತೆಗನುಸಾರವಾಗಿ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳುವುದು.
19. ಲೆಕ್ಕಪತ್ರ ನಿರ್ವಹಣೆಯಲ್ಲಿ ಸ್ವೀಕೃತಿ ಹಾಗೂ ಪಾವತಿಗಳ ವರ್ಗೀಕರಣವನ್ನು ಸೂಕ್ತ ಲೆಕ್ಕಶೀರ್ಷಿಕೆಗಳಡಿಯಲ್ಲಿ ನಿರ್ವಹಿಸುವುದು.
20. ಲೆಕ್ಕಪರಿಶೋಧನೆ ದಾಖಲಾತಿಗಳನ್ನು ಸಲ್ಲಿಸದಿರುವುದು/ಅಪೂರ್ಣ ದಾಖಲೆಗಳನ್ನು ಸಲ್ಲಿಸುವುದರಿಂದ ಲೆಕ್ಕಪರಿಶೋಧನೆಯಲ್ಲಿ ಉಂಟಾಗುವ ಅಡಚಣೆಯನ್ನು ಗಮನಿಸಿ, ಈ ಸಮಸ್ಯೆಯನ್ನು ಪರಿಹರಿಸುವಲ್ಲಿ ಪರಿಣಾಮಕಾರಿ ಆಡಳಿತಾತ್ಮಕ ಕ್ರಮ ಕೈಗೊಳ್ಳತಕ್ಕದ್ದು.

21. ಲೆಕ್ಕಪತ್ರಗಳ ನಿರ್ವಹಣೆಯಲ್ಲಿ & ಹಣಕಾಸು ವಹಿವಾಟುಗಳಲ್ಲಿ ಲೆಕ್ಕಪರಿಶೋಧನೆಯಲ್ಲಿ ಗಮನಿಸಿ ವರದಿ ಮಾಡಲಾದ ನ್ಯೂನತೆಗಳನ್ನು ಸರಿಪಡಿಸಿಕೊಂಡು, ಹಣಕಾಸು ನಿರ್ವಹಣೆಯಲ್ಲಿ ಶಿಸ್ತು ರೂಢಿಸಿ ಕೊಳ್ಳುವುದು ಹಾಗೂ ಈ ನ್ಯೂನತೆಗಳಿಗೆ ಕಾರಣರಾದ ಅಧಿಕಾರಿ/ಸಿಬ್ಬಂದಿಗಳ ಮೇಲೆ ಸೂಕ್ತ ಆಡಳಿತಾತ್ಮಕ ಶಿಸ್ತು ಕ್ರಮ ಕೈಗೊಳ್ಳುವುದು.

ಮೇಲ್ಕಂಡ ನ್ಯೂನತೆಗಳನ್ನು ಸರಿಪಡಿಸಿಕೊಂಡು ವಿಶ್ವವಿದ್ಯಾಲಯದ ಸ್ಥಾಪನೆಯ ಸದುದ್ದೇಶವನ್ನು ಕಾರ್ಯಗತಗೊಳಿಸುವ ಸಲುವಾಗಿ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಸೂಚಿಸಿದೆ.

ಅಪರ ನಿರ್ದೇಶಕರು
ಬೆಂಗಳೂರು ಪ್ರಾಂತೀಯ ಕಛೇರಿ
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು
ಲೆಕ್ಕಪತ್ರ ಇಲಾಖೆ, ಬೆಂಗಳೂರು

ಕರ್ನಾಟಕ ಸರ್ಕಾರ

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ

ಮತ್ತು ಲೆಕ್ಕಪತ್ರ ಇಲಾಖೆ

# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2016–17ನೇ ಸಾಲಿನ

# ವಾರ್ಷಿಕ ಲೆಕ್ಕಪರಿಶೋಧನಾ ವರದಿ

## ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2016–17ನೇ ಸಾಲಿನವಾರ್ಷಿಕ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ವಿವರಗಳು

| ಕ್ರ. ಸಂ. | ಕಂಡಿಕೆ ಸಂಖ್ಯೆ | ಸಂಕ್ಷಿಪ್ತ ವಿವರಗಳು | ಆಕ್ಷೇಪಣೆ ಮೊಬಲಗು ರೂ. | ವಸೂಲಾತಿ ಮೊಬಲಗು ರೂ. |
|---|---|---|---|---|
| | | **ಹಣಕಾಸು ವಹಿವಾಟುಗಳಲ್ಲಿ ಕಂಡುಬಂದ ಪ್ರಮುಖ ಪ್ರಕರಣಗಳು** | | |
| 1. | 1 | ಬ್ಯಾಂಕ್ ಲೆಕ್ಕ ಸಮನ್ವಯಮಾಡಿಕೊಳ್ಳದಿರುವುದು | – | 3,91,250 |
| 2. | 2 | ಎನ್‌ಪಿಎಸ್ ಸಿಬ್ಬಂದಿಯ 2012 ರಿಂದ ಜುಲೈ 2014ರ ಮಾಹೆವರೆಗಿನ ಎನ್‌ಪಿಎಸ್ ಮೊತ್ತವನ್ನು ವೇತನದಲ್ಲಿ ಕಟಾಯಿಸದಿರುವುದು | 7,53,097 | 7,53,097 |
| 3. | 3 | ಅನುದಾನಿತ ಸಂಸ್ಕೃತ ಕಾಲೇಜುಗಳ ಬೋಧಕ ವರ್ಗದ ಗಳಿಕೆ ರಜೆ ನಗದೀಕರಣದ ಪಾವತಿಸಿರುವುದು | – | 9,31,429 |
| 4. | 4 | ಗೃಹ ನಿರ್ವಹಣಾ ವೆಚ್ಚ ಪಾವತಿಸಿರುವುದು | – | 72,000 |
| 5. | 5 | ಬ್ಯಾಂಕ್ ಚಾರ್ಜಸ್ | – | 10,962 |
| 6. | 6 | ಬ್ಯಾಂಕ್ ಪಾಸ್‌ಶೀಟ್‌ನಲ್ಲಿ ನಮೂದಾಗದಿರುವ ಡಿ.ಡಿ.ಗಳು | 2,82,922 | – |
| 7. | 7 | ಅತಿಥಿಗೃಹದ ಮೇಲ್ವಿಚಾರಕರ ನೇಮಕಾತಿ | 2,61,781 | – |
| 8. | 8 | ವಿಶ್ವವಿದ್ಯಾಲಯದ ಲೆಕ್ಕಪತ್ರಗಳ ತಯಾರಿಕೆಯ ಸಲುವಾಗಿ ಮೆ: ಶಾಂಡಿಲ್ಯ ಇನ್ಫೋಟೆಕ್, ಬೆಂಗಳೂರು ಸಂಸ್ಥೆಗೆ ಪಾವತಿಸಿರುವುದು | 3,60,000 | – |
| 9. | 9 | ಎನ್.ಎಸ್.ಎಸ್ ಶಿಬಿರದ ವೋಚರ್‌ಗಳ ಪರಿಶೀಲನೆ: | 2,62,250 | – |
| 10. | 10 | ಮೊಬೈಲ್ ಬಿಲ್ಲುಗಳ ಪಾವತಿ: | 34,083 | – |
| 11. | 11 | ಅಂಕಪಟ್ಟಿ ಮುದ್ರಣ ಕಾರ್ಯದ ಸಲುವಾಗಿ ಮೆ: ಹೈಟೆಕ್ ಪ್ರಿಂಟರ್ಸ್, ಬೆಂಗಳೂರು ಇವರಿಗೆ ಪಾವತಿಸಿರುವುದು | 97,300 | – |
| | | **ಒಟ್ಟುಮೊತ್ತ ರೂ.** | **20,51,433** | **21,58,738** |

**-sd/-**
**ಅಪರ ನಿರ್ದೇಶಕರು,**
**ಬೆಂಗಳೂರು ಪ್ರಾಂತೀಯ ಕಛೇರಿ,**
**ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು**
**ಲೆಕ್ಕಪತ್ರ ಇಲಾಖೆ, ಬೆಂಗಳೂರು**

# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2016–17ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.

## 1. ಪೀಠಿಕೆ:

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮ 2009ರ ಕಾಲಂ 41, ಕಾಲಂ 7(೧ತ) ರನ್ವಯ 2010 ರಿಂದ ಅಸ್ತಿತ್ವಕ್ಕೆ ಬಂದಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ಶಾಸ್ತ್ರೀಯವಾಗಿ ಸಂಸ್ಕೃತ ಕಲಿಕೆ ಪದ್ಧತಿಯನ್ನು ಉಳಿಸಿಕೊಳ್ಳಲು, ಸಾಂಪ್ರದಾಯಿಕ ಹಾಗೂ ಆಧುನಿಕ ಕಲಿಕೆ ಪದ್ಧತಿ ನಡುವಿನ ಅಂತರ ಕಡಿಮೆಗೊಳಿಸುವುದು, ಸಂಸ್ಕೃತ ಭಾಷೆ, ಸಾಹಿತ್ಯ, ವೇದಿಕ ಅಧ್ಯಯನ ಮತ್ತು ಶಾಸ್ತ್ರಗಳ ಅಧ್ಯಯನಗಳ ಬಗ್ಗೆ ಸೂಕ್ತ ಮತ್ತು ವ್ಯವಸ್ಥಿತವಾದ ಶಿಕ್ಷಣ, ತರಬೇತಿ ಮತ್ತು ಸಂಶೋಧನೆಗಳನ್ನು ನಡೆಸುವ ಉದ್ದೇಶವನ್ನು ವಿಶ್ವವಿದ್ಯಾಲಯವು ಹೊಂದಿರುತ್ತದೆ.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009ರ ಕಲಂ 57(3) ರನ್ವಯ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲು ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪತ್ರ ಹಾಗೂ ಲೆಕ್ಕಪರಿಶೋಧನೆ ಇಲಾಖೆ, ಬೆಂಗಳೂರು ಇವರಿಗೆ ಅಧಿಕಾರವಿರುತ್ತದೆ. ಅದರಂತೆ, 2016–17ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಂಡು ಕರಡು ವರದಿಯನ್ನು ಸಿದ್ದಪಡಿಸಿ ಸಲ್ಲಿಸಲಾಗಿರುತ್ತದೆ.

## ವಿಶ್ವವಿದ್ಯಾಲಯದ ಆಡಳಿತ ವರ್ಗ:

| | | | |
|---|---|---|---|
| 1. | ಮಾನ್ಯ ಕುಲಪತಿಗಳು | : | **ಪ್ರೊ. ಪದ್ಮಶೇಖರ್**<br>(01.04.2016 ರಿಂದ 31.03.2017) |
| 2. | ಕುಲಸಚಿವರು (ಆಡಳಿತ) | : | **ಪ್ರೊ. ವೈ.ಎಸ್. ಸಿದ್ದೇಗೌಡ**<br>(01–04–2016 ರಿಂದ 08–12–2016)<br>**ಶ್ರೀಮತಿ ಎಂ. ಶಿಲ್ಪ**<br>(08–12–2016 ರಿಂದ 31–03–2017) |
| 3. | ವಿತ್ತಾಧಿಕಾರಿಗಳು | : | **ವಿದ್ವಾನ್ ಪಿ.ಆರ್. ಪಾಗೋಜಿ**<br>(01–04–2016 ರಿಂದ 31–03–2017) |

**<u>ಲೆಕ್ಕಪರಿಶೋಧನಾ ತಂಡ:</u>**

| | | | |
|---|---|---|---|
| 1. | ಲೆಕ್ಕಪರಿಶೋಧನಾ ತಂಡ | : | **ಶ್ರೀ ಶಂಕರ ಶರ್ಮ, ಲೆಪಅ**<br>**ಶ್ರೀಮತಿ ಅನಿತಾ ಜಿ., ಲೆಕ್ಕಾಧೀಕ್ಷಕರು**<br>**ಶ್ರೀ ರಾಜ್‌ಕುಮಾರ್ ದಳವಾಯಿ, ಲೆಕ್ಕಾಧೀಕ್ಷಕರು** |
| 2. | ಲೆಕ್ಕಪರಿಶೋಧನಾ ಅವಧಿ | : | **2016–17** |
| 3. | ಲೆಕ್ಕಪರಿಶೋಧನೆಯ ಪ್ರಾರಂಭ ಮತ್ತು ಮುಕ್ತಾಯದ ದಿನಾಂಕಗಳು | : | **21.10.2017 ರಿಂದ 28.12.2017ರ ವರೆಗೆ** |
| 4. | ಲೆಕ್ಕಪರಿಶೋಧನೆಗೆ ತೆಗೆದುಕೊಂಡ ಮಾನವದಿನಗಳು | : | **92 ಏಕ ಮಾನವ ದಿನಗಳು** |
| 5. | ಲೆಕ್ಕಪರಿಶೋಧನಾ ಕರಡು ವರದಿಯ ಪುನರ್ ಪರಿಶೀಲನಾಧಿಕಾರಿಗಳು | : | **ಶ್ರೀ ಎನ್. ಬಿ. ಶಿವರುದ್ರಪ್ಪ, ಕೆ.ಎಸ್.ಎ.ಎಸ್.**<br>ಅಪರ ನಿರ್ದೇಶಕರು,<br>ಬೆಂಗಳೂರು ಪ್ರಾಂತೀಯ ಕಛೇರಿ,<br>ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಇಲಾಖೆ. |
| 6. | ಪುನರ್ ಪರಿಶೀಲನಾ ದಿನಾಂಕ | : | **22.01.2018** |

## ಭಾಗ–1

1. **ಲೆಕ್ಕಪರಿಶೋಧನಾ ವ್ಯಾಪ್ತಿ:**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಕಾಯ್ದೆ 2009ರಕಲಂ 57(3) ರನ್ವಯ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲು ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನಾ ಇಲಾಖೆ, ಬೆಂಗಳೂರು ಇವರಿಗೆ ಅಧಿಕಾರ ವಹಿಸಲಾಗಿರುತ್ತದೆ. ಅದರಂತೆ 2016–17ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಂಡು ಕರಡು ವರದಿಯನ್ನು ಸಿದ್ಧಪಡಿಸಿ ಸಲ್ಲಿಸಲಾಗಿರುತ್ತದೆ.

ಕರ್ನಾಟಕ ಸಂಸ್ಕೃತವಿಶ್ವವಿದ್ಯಾಲಯದ 2016–17ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಹಣಕಾಸು ಸಮಿತಿ ಪರಿಶೀಲಿಸಿ ದಿನಾಂಕ: 26.05.2017ರಂದು ಅನುಮೋದಿಸಿ ಶಿಫಾರಸ್ಸು ಮಾಡಿರುವುದನ್ನು ದಿನಾಂಕ: 01.06.2017 ರಂದು ಸಿಂಡಿಕೇಟ್ ಸಭೆ ಅಂಗೀಕರಿಸಿರುತ್ತದೆ. ಸದರಿ ಅನುಮೋದಿತ ವಾರ್ಷಿಕ ಲೆಕ್ಕಪತ್ರಗಳನ್ನು ಸಂಸ್ಕೃತ ವಿಶ್ವವಿದ್ಯಾಲಯದ ವಿತ್ತಾಧಿಕಾರಿಗಳ ಪತ್ರ ಸಂಖ್ಯೆ: ಕಸಂವಿ/ಲೆಪಕ/10/2017–18 ದಿನಾಂಕ: 07.06.2017 ರಂದು ಅಪರ ನಿರ್ದೇಶಕರು, ಬೆಂಗಳೂರು ಪ್ರಾಂತೀಯ ಕಛೇರಿ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು ಕಛೇರಿಗೆ ಸಲ್ಲಿಸಲಾಗಿರುತ್ತದೆ.

2. **ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ:**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009ರ ಕಲಂ 5ರಲ್ಲಿ ವಿಶ್ವವಿದ್ಯಾಲಯಕ್ಕೆ ಪ್ರದತ್ತವಾದ ಅಧಿಕಾರ, ಕಲಂ 22 ಮತ್ತು 25ರಲ್ಲಿ ಅನುಕ್ರಮವಾಗಿ ಪ್ರಶಾಸನ (ಸಿಂಡಿಕೇಟ್) ಸಭೆ ಮತ್ತು ಪ್ರಶಿಕ್ಷಣ ಪರಿಷತ್ತಿಗೆ,ಕಲಂ 13 ಮತ್ತು 69ರಲ್ಲಿ ಕುಲಪತಿಗಳಿಗೆ ಪ್ರದತ್ತವಾದ ಅಧಿಕಾರಗಳನ್ನು, ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ ಪರಿನಿಯಮ 2011 ಗಮನದಲ್ಲಿಟ್ಟುಕೊಂಡು ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ಮಾಡಲಾಗಿರುತ್ತದೆ.

3. **ಲೆಕ್ಕಪರಿಶೋಧನಾ ಕಾರ್ಯದಲ್ಲಿ ಆಧಾರವಾಗಿರುವ ಇನ್ನಿತರೆ ನಿಯಮಾವಳಿಗಳು**

ಅ) ಕರ್ನಾಟಕ ನಾಗರೀಕ ಸೇವಾ ನಿಯಮಗಳು.

ಆ) ಕರ್ನಾಟಕ ಆರ್ಥಿಕ ಸಂಹಿತೆ–1958.

ಇ) ಸಾದಿಲ್ವಾರು ವೆಚ್ಚ ಕೈಪಿಡಿ–1958.

ಈ) ಆಯವ್ಯಯ ಕೈಪಿಡಿ.

ಉ) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮ 2000.

ಊ) ಸರ್ಕಾರಿ ಆದೇಶಗಳು.

ಋ) ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮ.

## 4. **2016–17ನೇ ಸಾಲಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಯೋಜನೆಗೆ ಒಳಪಟ್ಟ ಕಾಲೇಜು ಹಾಗೂ ಪಾಠಶಾಲೆಗಳ ವಿವರ:**

- ವಿಶ್ವವಿದ್ಯಾಲಯದ ಘಟಕ ಸ್ನಾತಕ/ಸ್ನಾತಕೋತ್ತರ ಕಾಲೇಜುಗಳು– 02
- ಸರ್ಕಾರಿ ಸಂಸ್ಕೃತ ಕಾಲೇಜು, ಮೇಲುಕೋಟೆ– 01
- ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ಅನುದಾನಿತ ಸ್ನಾತಕ/ಸ್ನಾತಕೋತ್ತರ ಸಂಸ್ಕೃತ ಕಾಲೇಜುಗಳು–10
- ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ಅನುದಾನಿತ ಇಂಟಿಗ್ರೇಟೆಡ್ ಕನ್ನಡ ಪಂಡಿತ ಕಾಲೇಜು– 01
- ವಿಶ್ವವಿದ್ಯಾಲಯ ಮಾನ್ಯತೆ ಪಡೆದ ಅನುದಾನ ರಹಿತ ಸ್ನಾತಕ/ಸ್ನಾತಕೋತ್ತರ ಸಂಸ್ಕೃತ ಕಾಲೇಜುಗಳು–17
- ಒಟ್ಟು ವಿದ್ಯಾರ್ಥಿಗಳು – 3072
- **ಪಾಠಶಾಲೆಗಳು:**

| | | | |
|---|---|---|---|
| | ಅನುದಾನಿತ ಸಂಸ್ಕೃತ ಪಾಠಶಾಲೆಗಳು | – | 247 |
| | ಅನುದಾನರಹಿತ ಸಂಸ್ಕೃತ ಪಾಠಶಾಲೆಗಳು | – | 319 |
| | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | – | 48,480 |

- **ವಲಯಗಳು:**
  1. ಬೆಂಗಳೂರು ವಲಯ
  2. ಮೈಸೂರು ವಲಯ
  3. ಗುಲ್ಬರ್ಗಾ ವಲಯ
  4. ಚಿತ್ರದುರ್ಗ ವಲಯ
  5. ಧಾರವಾಡ ವಲಯ
  6. ಬೆಳಗಾವಿ ವಲಯ
- **ವಿಶ್ವವಿದ್ಯಾಲಯದಲ್ಲಿ ನಡೆಯುವ ತರಗತಿಗಳು**
  1. ಸಂಸ್ಕೃತ ಸಂಜೆ ಕಾಲೇಜು, ವಿ.ವಿ. ಆವರಣ, ಬೆಂಗಳೂರು
  2. ಸಂಸ್ಕೃತ ಸಂಜೆ ಕಾಲೇಜು, ಧಾರವಾಡ
  3. ಎಂ.ಫಿಲ್. ತರಗತಿಗಳು (ವಿಶಿಷ್ಟಾಚಾರ್ಯ)
  4. ಪಿಹೆಚ್.ಡಿ. (ವಿದ್ಯಾವಾರಿಧಿ)
  5. ಡಿಪ್ಲೋಮಾ ಇನ್ ಹಸ್ತಪ್ರತಿ ಶಾಸ್ತ್ರ
  6. ಡಿಪ್ಲೋಮಾ ಇನ್ ಸಂಸ್ಕೃತ
  7. ಸರ್ಟಿಫಿಕೇಟ್ ಕೋರ್ಸ್ ಇನ್ ಸಂಸ್ಕೃತ

- **ನಿಕಾಯಗಳ ವಿವರ:**
  1. ವೇದಾಧ್ಯಯನಗಳ ನಿಕಾಯ
  2. ಭಾಷಾ ನಿಕಾಯ
  3. ಶಾಸ್ತ್ರಗಳ ನಿಕಾಯ
  4. ವೇದಾಂತ ನಿಕಾಯ
  5. ಪ್ರಾಚೀನ ಭಾರತೀಯ ವಿಜ್ಞಾನಗಳ ನಿಕಾಯ
- **ವಿಶ್ವವಿದ್ಯಾಲಯ ನೀಡುವ ಪದವಿಗಳು:**
  1. ಬಿ.ಎ. ವಿದ್ವನ್ಮಧ್ಯಮಾಪಠ್ಯಕ್ರಮದ ಅವಧಿ 03 ವರ್ಷಗಳು
  2. ಎಂ.ಎ. ವಿದ್ವದುತ್ತಮಾ ಪಠ್ಯಕ್ರಮದ ಅವಧಿ 02 ವರ್ಷಗಳು
- **ಹೊಸದಾಗಿ ಮಾನ್ಯತೆ ಪಡೆದ ಸಂಶೋಧನ ಕೇಂದ್ರಗಳು–12**

**1. ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಸೂಚಿಸಿದ ಆಕ್ಷೇಪಣೆಗಳು ಮತ್ತು ವಸೂಲಾತಿ ಪ್ರಕರಣಗಳ ಇತ್ಯರ್ಥಕ್ಕೆ ವಿಶ್ವವಿದ್ಯಾಲಯಗಳ ತೆಗೆದುಕೊಂಡ ಕ್ರಮಗಳ ವಿವರ:**

ವಿಶ್ವವಿದ್ಯಾಲಯದ ಅಧಿನಿಯಮ 1994ರ ಕಲಂ 43(2)(5) ಪ್ರಕಾರ ಪ್ರತಿ ವರ್ಷ ಬಿಡುಗಡೆಯಾಗುವ ಲೆಕ್ಕಪರಿಶೋಧನಾ ವರದಿಗಳಿಗೆ ಕಂಡಿಕೆವಾರು ಉತ್ತರಗಳನ್ನು ತಯಾರಿಸಿ ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಿ, ಅನುಮೋದನೆ ಪಡೆದು ಪೂರಕ ದಾಖಲೆಗಳೊಂದಿಗೆ ಅನುಸರಣಾ ವರದಿಯನ್ನು ಕಂಡಿಕೆಗಳ ತೀರುವಳಿಗಾಗಿ ಸಲ್ಲಿಸಬೇಕಾಗಿದೆ. ನಿಗಧಿತ ಅವಧಿಯಲ್ಲಿ ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಿತ ಹಾಗೂ ವಸೂಲಾತಿ ಕಂಡಿಕೆಗಳ ತೀರುವಳಿ/ವಿಲೇವಾರಿಗಾಗಿ ಕ್ರಮ ಕೈಗೊಳ್ಳದೇ ಇದ್ದಲ್ಲಿ ಕಾಲ ಕ್ರಮೇಣ ನ್ಯೂನತೆ/ನಷ್ಟಕ್ಕೆ ಕಾರಣರಾದ ಸಂಬಂಧಿಸಿದ ವ್ಯಕ್ತಿಗಳ ವರ್ಗಾವಣೆ, ನಿವೃತ್ತಿ ಅಥವಾ ಮರಣ ಇತ್ಯಾದಿಗಳ ಕಾರಣದಿಂದಾಗಿ ಆಕ್ಷೇಪಣೆ ಹಾಗೂ ವಸೂಲಾತಿಗೆ ಸೂಚಿಸಿರುವ ಮೊತ್ತಗಳು ಇತ್ಯರ್ಥವಾಗದೆ ಸಂಸ್ಥೆಗೆ ನಷ್ಟವಾಗುವ ಸಂಭವ ಹೆಚ್ಚಾಗಿರುತ್ತದೆ. ವಿವರಗಳನ್ನು ***ಅನುಬಂಧ–1ರಲ್ಲಿ*** ಲಗತ್ತಿಸಿದೆ.

2008–09 ರಿಂದ 2015–16ನೇ ಸಾಲುಗಳ ಲೆಕ್ಕಪರಿಶೋಧನಾ ವರದಿಯಲ್ಲಿ ಆಕ್ಷೇಪಣೆ ಮೊತ್ತ ರೂ. 35,05,14,898–00 ಹಾಗೂ ವಸೂಲಾತಿ ರೂ. 34,45,930–00ಗಳಿದ್ದು, ಇವುಗಳ ಇತ್ಯರ್ಥಕ್ಕೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದ್ಯತೆ ಮೇಲೆ ಕ್ರಮ ಕೈಗೊಳ್ಳದಿದ್ದಲ್ಲಿ ಹಣಕಾಸಿನ ಪ್ರಕರಣಗಳು ಪುನರಾವರ್ತನೆಯಾಗಲು ಅವಕಾಶ ಕಲ್ಪಿಸಿದಂತಾಗುವುದು.

| ಕ್ರ. ಸಂ. | ಕಂಡಿಕೆ ಸಂಖ್ಯೆ | ಲೆಕ್ಕಪರಿಶೋಧನಾ ಆಕ್ಷೇಪಣೆ/ವಸೂಲಾತಿ | ಅನುಸರಣೆಗಳು | ಸಹಾಯಕ ನಿಯಂತ್ರಕರ ಶಿಫಾರಸ್ಸು | ನಿಯಂತ್ರಕರ ಷರಾ |
|---|---|---|---|---|---|
| 01 | 01 | **ವಿಶ್ವವಿದ್ಯಾಲಯದ ಲೆಕ್ಕಪತ್ರ ನಿರ್ವಹಣೆ:**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಯವು 2016–17ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ದ್ವಿನಮೂದು ಪದ್ದತಿಯಲ್ಲಿ ಟ್ಯಾಲಿ ತಂತ್ರಾಂಶದೊಂದಿಗೆ ವಾರ್ಷಿಕ ಲೆಕ್ಕಪತ್ರಗಳನ್ನು ನಿರ್ವಹಣೆ ಮಾಡಲಾಗಿದೆ. ಲೆಕ್ಕಪತ್ರಗಳನ್ನು ಪರಿಶೀಲಿಸಲಾಗಿ ದಿನಾಂಕ: 1.4.2016 ರಿಂದ 31.3.2017 ವರೆಗಿನ Balance Sheetನ Fixed Assetsನಲ್ಲಿ ವಿಶ್ವವಿದ್ಯಾಲಯವು ಬೆಂಗಳೂರಿನ ಚಾಮರಾಜಪೇಟೆಯ ಸರ್ವೆ ನಂಬರ್ 1647 ರಲ್ಲಿ 4670.6 ಚ.ಮೀ. ವಿಸ್ತೀರ್ಣದಲ್ಲಿ “A” ಖಾತಾದೊಂದಿಗೆ ಹೊಂದಿರುವ ಕಟ್ಟಡ ಮತ್ತು ಮೈಸೂರಿನ ಸಯ್ಯಾಜಿರಾವ್ ರಸ್ತೆಯ ಸರ್ವೆ ನಂಬರ್ 10ರಲ್ಲಿ 15574 ಚ.ಮೀ ವಿಸ್ತೀರ್ಣದಲ್ಲಿ ಹೊಂದಿರುವ ಕಟ್ಟಡ ಹಾಗೂ ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ತಿಪ್ಪಸಂದ್ರ ಗ್ರಾಮದ ಸರ್ವೆ ನಂಬರ್ 40 ರಲ್ಲಿ ಹೊಂದಿರುವ 100 ಎಕರೆ ಜಮೀನಿನ ಮೌಲ್ಯವನ್ನು Fixed Assetsನಲ್ಲಿ ನಮೂದಿಸಬೇಕಾಗಿದ್ದು, ಸದರಿ ಜಮೀನು ಹಾಗೂ ಕಟ್ಟಡದ ಮೌಲ್ಯವನ್ನು ವಾರ್ಷಿಕ ಲೆಕ್ಕಪತ್ರಗಳಲ್ಲಿ ಪರಿಗಣಿಸಿರುವುದಿಲ್ಲ.<br>ವಿಶ್ವವಿದ್ಯಾಲಯಕ್ಕೆ ಸಂಘ ಸಂಸ್ಥೆಗಳಿಂದ/ವ್ಯಕ್ತಿಗಳಿಂದ ಬರಬೇಕಾದ ಮೊತ್ತವನ್ನು (All types of Receivables) Current Assetsನಲ್ಲಿ ನಮೂದಿಸಬೇಕಾಗಿದ್ದು, ಈ ಮೌಲ್ಯವನ್ನು ಸಹ ನಮೂದಿಸಿರುವುದಿಲ್ಲ. ಉದಾ: ದರೇಸ ಪಬ್ಲಿಕೇಶನ್ ಹಾಗೂ ಡಿ.ಎಸ್ ಲೋಕಪ್ಪ ಇವರಿಂದ ಪ್ರಕಾಶನ ಹಾಗೂ ಮಾರಾಟದ ಕರಾರಿಗೆ ಸಂಬಂಧಿಸಿದಂತೆ, ದರೇಸ ಪಬ್ಲಿಕೇಶನ್ ಇವರಿಂದ ರೂ. 1.00 ಲಕ್ಷ ಹಾಗೂ ಡಿ.ಎಸ್. ಲೋಕಪ್ಪ ಇವರಿಂದ ರೂ. 1.00 ಲಕ್ಷ ಬರಬೇಕಾಗಿದ್ದು, ಈ ಮೊತ್ತ ವಿಶ್ವವಿದ್ಯಾಲಯಕ್ಕೆ 2017–18ನೇ ಸಾಲಿನಲ್ಲಿ ಸಂದಾಯವಾಗಿರುತ್ತದೆ. ಆದರೆ, ಈ ಮೊತ್ತ ರೂ. 2.00 ಲಕ್ಷ Current Assetsನಲ್ಲಿ ನಮೂದಾಗಿರುವುದಿಲ್ಲ. | **ಕ್ರಮವಹಿಸಲಾಗುವುದು.** | | |

| | | | | | |
|---|---|---|---|---|---|
| 02 | 02 | **ಲೆಕ್ಕಪತ್ರಗಳ ಸಿದ್ಧತೆ ಮತ್ತು ಸಲ್ಲಿಕೆಯಲ್ಲಿ ವಿಳಂಬ:**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2016–17ನೇ ಸಾಲಿನಲ್ಲಿ ಹಣಕಾಸು ಅಧಿಕಾರಿಗಳು ವಿಶ್ವವಿದ್ಯಾಲಯ ನಿಧಿಯ ಹಣಕಾಸು ವ್ಯವಹಾರಗಳನ್ನು ನಿರ್ವಹಿಸಿರುತ್ತಾರೆ.<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009ರ ಕಲಂ 57(3) ರಲ್ಲಿ ಪ್ರದತ್ತವಾದ ಅಧಿಕಾರದಂತೆ ವಿಶ್ವವಿದ್ಯಾಲಯದ ಲೆಕ್ಕಪತ್ರಗಳನ್ನು ಪ್ರಧಾನ ನಿರ್ದೇಶಕರು, ಕ.ರಾ.ಲೆ & ಲೆ ಇಲಾಖೆ, ಬೆಂಗಳೂರು ಇವರು ಏಪ್ರಿಲ್ ತಿಂಗಳಲ್ಲಿ ಲೆಕ್ಕಪರಿಶೋಧನೆ ಮಾಡಬೇಕಿರುತ್ತದೆ. 2016–17ನೇ ಸಾಲಿನ ಅನುಮೋದಿತ ಲೆಕ್ಕಪತ್ರಗಳನ್ನು ಹಣಕಾಸು ಅಧಿಕಾರಿಗಳು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು ಇವರು 2016–17ನೇ ಸಾಲಿನ ಲೆಕ್ಕಪತ್ರಗಳನ್ನು ಇವರ ಪತ್ರ ಸಂಖ್ಯೆ: ಕಸಂವಿ/ಲೆ.ಪ 13/2016–17 ದಿನಾಂಕ: 07.06.2017 ರಂದು ದೃಢೀಕರಿಸಿ ಸಲ್ಲಿಸಿರುತ್ತಾರೆ. ವಿಶ್ವವಿದ್ಯಾಲಯವು ಲೆಕ್ಕಪತ್ರಗಳ ಸಿದ್ದತೆಯಲ್ಲಿ ಮತ್ತು ಲೆಕ್ಕಪರಿಶೋಧನೆಗೆ ಸಲ್ಲಿಸುವಲ್ಲಿ ಅಧಿನಿಯಮ 2009 ರಲ್ಲಿನ ಮಾರ್ಗಸೂಚಿಗಳ ಪಾಲನೆ ಮಾಡಿರುವುದಿಲ್ಲ. | **ಇನ್ನು ಮುಂದೆ ವಿಳಂಬವಾಗದಂತೆ ಕ್ರಮವಹಿಸಲಾಗುವುದು.** | | |
| 03 | 03 | **ಮಾಸಿಕ ಲೆಕ್ಕಪತ್ರಗಳನ್ನು ಸಲ್ಲಿಸಿರುವ ಬಗ್ಗೆ:**<br>ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿನ ದಿನಾಂಕ 20.11.2004ರ ಸಭೆಯ ನಡವಳಿಯಲ್ಲಿ ಪ್ರತಿ ತಿಂಗಳು ವಿಶ್ವವಿದ್ಯಾಲಯದ ವಿವಿಧ ಖಾತೆಗಳ ಜಮಾ–ಖರ್ಚಿನ ವಿವರಗಳನ್ನೊಳಗೊಂಡ ತಃಖ್ತೆಯನ್ನು ಸಿದ್ದಪಡಿಸಿ, ಮಾಸಿಕವಾರು ಲೆಕ್ಕ ಹೊಂದಾಣಿಕೆಯನ್ನು ಮಾಡಿ ಅದರ ಪ್ರತಿಗಳನ್ನು ಪ್ರಾಂತೀಯ ಕಛೇರಿ, ಬೆಂಗಳೂರು ಇವರ ಕಛೇರಿಗೆ ಕಳುಹಿಸಿಕೊಡುವಂತೆ ನಿರ್ದೇಶನವಿದೆ. ಸದರಿ ನಡವಳಿಯಲ್ಲಿನ ನಿರ್ದೇಶನ, ಕರ್ನಾಟಕ ಆರ್ಥಿಕ ಸಂಹಿತೆ 1958 ರ ಅನುಚ್ಛೇದ 301(8) ರ ಟಿಪ್ಪಣಿಯ ನಿರ್ದೇಶನಗಳನ್ನು ಮತ್ತು ಕರ್ನಾಟಕ ಲೋಕಲ್ ಫಂಡ್ ಆಡಿಟ್ ಮ್ಯಾನುಯಲ್ ನಿಯಮ 220 ರಂತೆ ಮಾಸಿಕ ಜಮಾ ಖರ್ಚಿನ ಅಂಕಿ ಅಂಶಗಳ ತಃಖ್ತೆಯನ್ನು ಹಣಕಾಸು ಅಧಿಕಾರಿಗಳು ನಿಯತಕಾಲಿಕವಾಗಿ ಸಲ್ಲಿಸಿರುತ್ತಾರೆ. | | | |

| | | | | | |
|---|---|---|---|---|---|
| 04 | 04 | **ವಿಶ್ವವಿದ್ಯಾಲಯದ ನಿಧಿಯ ನಿರ್ವಹಣೆ ಹಾಗೂ ಹಣಕಾಸು ವೆಚ್ಚಗಳನ್ನು ನಿಯಂತ್ರಿಸುವ ಪರಿನಿಯಮಗಳನ್ನು ಹಾಗೂ ಆರ್ಥಿಕ ಪ್ರತ್ಯಾಯೋಜನೆಯನ್ನು ರಚಿಸಿಕೊಳ್ಳದೆ ವೆಚ್ಚಗಳನ್ನು ಭರಿಸಿರುವುದು.**<br>ವಿಶ್ವವಿದ್ಯಾಲಯವು ಸ್ಥಾಪಿತವಾಗಿ 4 ವರ್ಷಗಳು ಕಳೆದರೂ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಕಾಯ್ದೆ 2009ರ ಕಲಂ 40 ರಲ್ಲಿ ಸ್ಪಷ್ಟ ಸೂಚನೆಯಿರುವಂತೆ, ವಿಶ್ವವಿದ್ಯಾಲಯದ ನಿಧಿಗಳ ನಿರ್ವಹಣೆ ಹಾಗೂ ವೆಚ್ಚಗಳನ್ನು ಭರಿಸುವ ಮಿತಿ ಮತ್ತು ವಿಧಾನಗಳ ಕುರಿತ ಯಾವುದೇ ಹಣಕಾಸು ವಿಷಯಗಳಿಗೆ ಸಂಬಂಧಪಟ್ಟ ಪರಿನಿಯಮಗಳು (Statutes) ಈವರೆವಿಗೂ ರಚಿಸಿಕೊಂಡಿರುವುದಿಲ್ಲ. ಈ ಕುರಿತು ಹಿಂದಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ಹಲವು ಬಾರಿ ವಿಷಯ ಪ್ರಸ್ತಾಪಿಸಿ ಹಣಕಾಸು ನಿರ್ವಹಣೆ ಹಾಗೂ ನಿಯಂತ್ರಣಕ್ಕೆ ಸಂಬಂಧಿಸಿದ ಅಗತ್ಯ ಪರಿನಿಯಮಗಳನ್ನು ಹಾಗೂ ಆರ್ಥಿಕ ಪ್ರತ್ಯಾಯೋಜನೆಗಳನ್ನು ರಚಿಸಿಕೊಳ್ಳಲು ತಿಳಿಸಿದರೂ ಈವರೆವಿಗೂ ಈ ಬಗ್ಗೆ ಕ್ರಮಕೈಗೊಳ್ಳದಿರುವುದು ಕಂಡುಬಂದಿದೆ. ನಿರ್ದಿಷ್ಟವಾದ, ಹಣಕಾಸು ವಿಷಯದ ಪರಿನಿಯಮಗಳಿಲ್ಲದೆ ವಿಶ್ವವಿದ್ಯಾಲಯದಲ್ಲಿ ಪರೀಕ್ಷಾ ಕಾರ್ಯಗಳ ಸಂಭಾವನೆಗಳನ್ನು ನಿಗದಿಪಡಿಸುವಿಕೆ ಮತ್ತು ಕಾಲಕಾಲಕ್ಕೆ ಸಂಬಂಧಿಸಿದವರ ಬೇಡಿಕೆಯಂತೆ ಅದರ ಪರಿಷ್ಕರಣೆ, ಮೌಲ್ಯಮಾಪನ ಸಂಭಾವನೆಗಳ ಪಾವತಿ, ವಿಮಾನ ಪ್ರಯಾಣ ದರ ಹಾಗೂ ಸಂಬಂಧಿಸಿದ ಇತ್ಯಾದಿ ವೆಚ್ಚಗಳ ಪಾವತಿಗಳನ್ನು ಮಾಡಲಾಗುತ್ತಿದ್ದು, ಪರಿನಿಯಮಗಳನ್ನು ರಚಿಸಿಕೊಳ್ಳಲು ಸೂಕ್ತ ಕ್ರಮವಹಿಸುವಂತೆ ಸೂಚಿಸಿದೆ.<br>**2016–17ನೇ ಸಾಲಿನ ಪ್ರಾರಂಭಿಕ ಶಿಲ್ಕು, ಸ್ವೀಕೃತಿ, ಪಾವತಿ, ಹೂಡಿಕೆಗಳಲ್ಲಿ ಹಣ ಸಂದಾಯ ಮತ್ತು ಅಂತಿಮ ಶಿಲ್ಕುಗಳು ಹಾಗೂ ಅಡಾವೆ ಪತ್ರಿಕೆಗಳ ಸ್ಥಿತಿ**<br>ವಿಶ್ವವಿದ್ಯಾಲಯದ 2016–17ನೇ ಸಾಲಿನ ಸಿಂಡಿಕೇಟ್ ಹಾಗೂ ಹಣಕಾಸು ಸಮಿತಿ ಅನುಮೋದಿತ ಲೆಕ್ಕಪತ್ರಗಳನ್ನು ಪರಿಶೀಲಿಸಲಾಗಿ, ವಾರ್ಷಿಕ ಲೆಕ್ಕಪತ್ರದಲ್ಲಿದ್ದಂತೆ ವಿಶ್ವವಿದ್ಯಾಲಯದ ಪ್ರಾರಂಭಿಕ ಶಿಲ್ಕು, ಸ್ವೀಕೃತಿಗಳು, ವೆಚ್ಚಗಳು ಹಾಗೂ ಅಂತಿಮ ಶಿಲ್ಕುಗಳ ವಿವರಗಳು ಕೆಳಕಂಡಂತಿದೆ. | **ಪರಿನಿಯಮಗಳನ್ನು ರಚಿಸಿಕೊಳ್ಳಲು ಕ್ರಮವಹಿಸಲಾಗುವುದು.** | | |

**2016–17**

| ವಿವರಗಳು | ಮೊತ್ತ (ರೂ. ಗಳಲ್ಲಿ) |
|---|---|
| **ಪ್ರಾರಂಭಿಕ ಶಿಲ್ಕು (01.04.2016)** | 7,69,22,539.00 |
| 2016–17ನೇ ಸಾಲಿನ ಒಟ್ಟು ಸ್ವೀಕೃತಿಗಳು (Includes Revenue Reciepts + Other Receipts) | 36,90,66,210.00 |
| **ಒಟ್ಟು** | **44,59,88,749.00** |
| 2016–17ನೇ ಸಾಲಿನ ಒಟ್ಟು ಪಾವತಿಗಳು (ನಿಶ್ಚಿತ ಠೇವಣಿಗಳಲ್ಲಿನ ಹೂಡಿಕೆಯೂ ಸೇರಿ) | 36,28,87,348.50 |
| **ಅಂತಿಮ ಶಿಲ್ಕು (31.03.2017)** | 8,31,01,400.50 |
| **ಒಟ್ಟು** | **44,59,88,749.00** |

**2016–17ನೇ ಸಾಲಿನ ವಿಶ್ವವಿದ್ಯಾಲಯದ ಹೂಡಿಕೆಗಳು**

| ವಿವರಗಳು | ಮೊತ್ತ (ರೂ. ಗಳಲ್ಲಿ) |
|---|---|
| ದಿನಾಂಕ: 01.04.2016ರಲ್ಲಿ ಇದ್ದಂತೆ ಠೇವಣಿಗಳಲ್ಲಿನ ಹೂಡಿಕೆಗಳ ಪ್ರಾರಂಭಿಕ ಶಿಲ್ಕು | 8,24,98,724 |
| (+) 2016–17ನೇ ಸಾಲಿನಲ್ಲಿ ಠೇವಣಿಗಳಲ್ಲಿ ಹೂಡಿಕೆ ಮಾಡಲಾದ ಮೊತ್ತ | 1,13,32,392 |
| (–) ನಗದೀಕರಣವಾದ ಠೇವಣಿಗಳು | 11,32,391 |
| ದಿನಾಂಕ: 31.03.2017ರ ಅಂತ್ಯಕ್ಕೆ ಠೇವಣಿಗಳಲ್ಲಿನ ಹೂಡಿಕೆಗಳ ಅಂತಿಮ ಶಿಲ್ಕು | **9,26,98,725** |

2016–17ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಹೂಡಿಕೆಗಳಿಂದ ಸ್ವೀಕೃತವಾಗಿರುವ ಒಟ್ಟು ಬಡ್ಡಿ ಮೊತ್ತ ರೂ. 34,88,676/–ಗಳು ಆಗಿರುತ್ತದೆ.

ದಿನಾಂಕ: 31.03.2017ನೇ ಸಾಲಿನ ಅಂತ್ಯಕ್ಕೆವಿಶ್ವವಿದ್ಯಾಲಯದ ಅಡಾವೆ ಪತ್ರಿಕೆ/

**University Balance Sheet as on 31.03.2017**

| LIABILITIES | Amount | ASSETS | Amount |
|---|---|---|---|
| Capital A/c | 33,92,375.00 | Fixed Deposits | 55,58,195.00 |
| Current Liabilities | 62,83,647.00 | Investments | 9,89,62,422.00 |
| Reserve and Surplus | 17,53,37,019.50 | Current Assets | 8,34,66,641.50 |
| Excess of Income over Expenditure | 29,74,217.00 | | |
| **TOTAL** | **18,79,87,258.50** | **TOTAL** | **18,79,87,258.50** |

ವಿಶ್ವವಿದ್ಯಾಲಯದ ಈ ಮೇಲಿನ ವಾರ್ಷಿಕ ಲೆಕ್ಕಪತ್ರಗಳು ಒಟ್ಟು 3849 ಹಣಕಾಸು ವಹಿವಾಟುಗಳ ವೋಚರ್‌ಗಳನ್ನು ದಾಖಲಿಸಿ ಲೆಡ್ಜರ್‌ಗಳಲ್ಲಿ ವರ್ಗೀಕರಿಸುವ ಮೂಲಕ ಸಿದ್ದಪಡಿಸಿದ್ದು, ಲೆಕ್ಕಪರಿಶೋಧನೆಯಲ್ಲಿ ಆಯ್ದ ವೋಚರ್‌ಗಳ ಪರೀಕ್ಷಾರ್ಥ ಪರಿಶೀಲನೆಯನ್ನು ಅಗತ್ಯ ದಾಖಲೆ/ ಕಡತಗಳೊಂದಿಗೆ ಕೈಗೊಳ್ಳಲಾಗಿರುತ್ತದೆ.

**ವಿಶ್ವವಿದ್ಯಾಲಯದ ಲೆಕ್ಕಪತ್ರದ ವೋಚರ್‌ಗಳಸಂಕ್ಷಿಪ್ತ ಮಾಹಿತಿ ಕೆಳಕಂಡಂತಿದೆ**

| ಕ್ರಮ ಸಂಖ್ಯೆ | ವಿವರಗಳು | ದಾಖಲಿಸಿರುವ ವೋಚರ್‌ಗಳ ಸಂಖ್ಯೆ |
|---|---|---|
| 1. | ಸ್ವೀಕೃತಿ ವೋಚರ್‌ಗಳು | 2244 |
| 2. | ಪಾವತಿ ವೋಚರ್‌ಗಳು | 1069 |
| 3. | ಜರ್ನಲ್ ವೋಚರ್‌ಗಳು | 448 |
| 4. | ಕಾಂಟ್ರಾ ವೋಚರ್‌ಗಳು | 88 |
| | ಒಟ್ಟು | 3849 |

| | | | | | |
|---|---|---|---|---|---|
| | | ವಿಶ್ವವಿದ್ಯಾಲಯದ ಲೆಕ್ಕಪತ್ರಗಳನ್ನು ಪರಿಶೀಲಿಸಲಾಗಿರುವಂತೆ 2016–17ನೇ ಸಾಲಿನಲ್ಲಿ ಒಟ್ಟು 11 ಬ್ಯಾಂಕ್ ಖಾತೆಗಳನ್ನು ನಿರ್ವಹಿಸಿದ್ದು, ಇದರಲ್ಲಿ 3 ಬ್ಯಾಂಕ್ ಖಾತೆಗಳನ್ನು ಮುಕ್ತಾಯ–ಗೊಳಿಸಲಾಗಿರುತ್ತದೆ. ವಿಶ್ವವಿದ್ಯಾಲಯದ ಸ್ವೀಕೃತಿಗಳಿಗೆಂದೇ ನಿರ್ವಹಿಸಲಾದ ಬ್ಯಾಂಕ್ ಖಾತೆಗಳಿಂದ ವೆಚ್ಚಗಳಿಗಾಗಿ ಪಾವತಿಗಳ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆಯಾದ ವಿವರಗಳನ್ನು **ಅನುಬಂಧ–3ರಲ್ಲಿ** ನೀಡಲಾಗಿದೆ. | | | |
| **05** | **05** | **ವಿಶ್ವವಿದ್ಯಾಲಯದ ಆಯ–ವ್ಯಯದ ಅಂದಾಜು ಹಾಗೂ ವಾಸ್ತವಿಕ ಅಂಕಿಅಂಶಗಳು:**<br>ವಿಶ್ವವಿದ್ಯಾಲಯದ ಆಯ–ವ್ಯಯ ಕುರಿತಂತೆ ಪ್ರತಿ ವರ್ಷವು ಅಂದಾಜಿಸಿದ ಆಯ–ವ್ಯಯಗಳ ಅಂದಾಜನ್ನು ಸಿಂಡಿಕೇಟ್‌ನಿಂದ ಅನುಮೋದನೆ ಪಡೆದು ಅಂದಾಜಿನ ಪರಿಧಿಯಲ್ಲಿ ವ್ಯಯಗಳನ್ನು ಮಾಡಲಾಗುತ್ತದೆ. ಒಂದು ವೇಳೆ ಅಂದಾಜುಗಳ ಮೊತ್ತಗಳನ್ನು ಮೀರಿ ವೆಚ್ಚಗಳನ್ನು ಭರಿಸಬೇಕಾದ ಸಂದರ್ಭದಲ್ಲಿ ಹೆಚ್ಚುವರಿ ವೆಚ್ಚ ಭರಿಸಲಾಗುವ ಮೊತ್ತಗಳಿಗೆ ಪೂರಕ ಅಂದಾಜು ಪಟ್ಟಿಯನ್ನು ಹಣಕಾಸು ಸಮಿತಿಯ ಶಿಫಾರಸ್ಸಿನೊಂದಿಗೆ ಸಿಂಡಿಕೇಟ್ ಅನುಮೋದನೆ ಅಗತ್ಯವಾಗಿರುತ್ತದೆ. ಹೆಚ್ಚುವರಿ ವೆಚ್ಚಗಳು ಅನಿವಾರ್ಯ ಸಂದರ್ಭಗಳಲ್ಲಿ ವ್ಯಯಿಸಲು ಮಾತ್ರ ವಿನಾಯಿತಿಯಿದ್ದು, ಇದೇ ಕ್ರಮಗಳು ಪುನರಾವರ್ತನೆಯಾದರೆ ಆಯ–ವ್ಯಯ ಅಂದಾಜುಗಳಿಗೆ ಮಾನ್ಯತೆ ಇಲ್ಲದಂತಾಗುತ್ತದೆ ಹಾಗೂ ಈ ಅಂದಾಜುಗಳು ವಾಸ್ತವತೆಗೆ ಸಮೀಪವಾಗಿರುವುದಿಲ್ಲವೆಂಬುದಾಗಿ ಪರಿಗಣಿಸಲಾಗುತ್ತದೆ. ಇದೇ ರೀತಿ ರಾಜಸ್ವ ಅಂದಾಜುಗಳಿಗೂ ಅನ್ವಯಿಸಲಿದ್ದು, ರಾಜಸ್ವ ಅಂದಾಜುಗಳಿಗಿಂತ ಕಡಿಮೆ ರಾಜಸ್ವ ಸಂಗ್ರಹ ಎಲ್ಲಾ ವಿಷಯದಲ್ಲೂ ಮುಂದುವರೆದರೆ ಆಯ–ವ್ಯಯ ಅಂದಾಜುಗಳು ವಾಸ್ತವಿಕತೆಯನ್ನು ಬಿಂಬಿಸುವುದಿಲ್ಲ. ವಿಶ್ವವಿದ್ಯಾಲಯವು 2016–17ನೇ ಸಾಲಿನಲ್ಲಿ ಅಂದಾಜಿಸಿದ ಆಯ–ವ್ಯಯ ಹಾಗೂ ವಾಸ್ತವಿಕ ಅಂಕಿ ಅಂಶಗಳ ಕುರಿತು ಪರಿಶೀಲನೆ ಕೈಗೊಳ್ಳಲಾಗಿರುವಂತೆ, ರಾಜಸ್ವ ಹಾಗೂ ವೆಚ್ಚಗಳಲ್ಲಿ ಏರುಪೇರುಗಳನ್ನು ಗಮನಿಸಿದ್ದು, ಆಯ–ವ್ಯಯದ ಅಂದಾಜುಗಳು ವಾಸ್ತವಿಕ ಸಾಮೀಪ್ಯತೆಗೆ ಸಮೀಕರಿಸಿರುವ ಬಗ್ಗೆ ಸ್ಪಷ್ಟವಾಗುವುದಿಲ್ಲ. ವಿವರಗಳನ್ನು ***ಅನುಬಂಧ–4ರಲ್ಲಿ*** ಲಗತ್ತಿಸಿದೆ. | **ಇನ್ನುಮುಂದೆ ಈ ಬಗ್ಗೆ ಸಮರ್ಪಕವಾಗಿ ಕ್ರಿಯಾಯೋಜನೆಯನ್ನು ತಯಾರಿಸಲಾಗುವುದು.** | | |

**Budget Variance for the year 2016-17** (Rs. In Lakhs)

| Heads | Budget Estimates 2016-17 | Actuals during 2016-17 | Difference | Difference in % |
|---|---|---|---|---|
| **Receipts** | | | | |
| Exam Fee | 33.00 | 34.04 | **1.04** | (+)03.15% |
| Evening College Fee | 4.50 | 2.04 | **2.46** | (-)45.33% |
| Jyotishya diplomo& Certificate course fee | 13.00 | 18.03 | **5.03** | (+)38.69% |
| Convocation Certificate fee | 1.50 | 1.75 | **0.25** | (+) 16.67 |
| **Expenditures** | | | | |
| Pay & Allowances | 815.00 | 396.40 | **418.60** | (-) 48.63% |
| Adalithaanga | 408.00 | 41.63 | **366.37** | (-) 10.20% |
| Adhyanaanga | 97.00 | 3.96 | **93.04** | (-) 44.00% |
| Directorate | 44.00 | 4.62 | **39.38** | (-) 10.50% |
| Pareekshaanga | 95.00 | 16.65 | **78.35** | (-)17.52% |
| Prasaraanga | 40.96 | 2.97 | **37.99** | (-) 7.25% |

ತಃಖ್ತೆಯಲ್ಲಿ ತೋರಿಸಲಾಗಿರುವ ವೆಚ್ಚಗಳು ಹೆಚ್ಚುವರಿಯಾಗಿರುವುದು ಹೊರತುಪಡಿಸಿದರೆ, ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಉಳಿದ ಎಲ್ಲಾ ವೆಚ್ಚಗಳ ಅಂದಾಜು ಹಾಗು ವಾಸ್ತವಿಕ ವೆಚ್ಚಗಳನ್ನು ಪರಿಗಣಿಸಿದಲ್ಲಿ, ವಾಸ್ತವಿಕ ವೆಚ್ಚಗಳಿಗಿಂತ ಅಂದಾಜುಗಳೇ ಹೆಚ್ಚಾಗಿದ್ದು, ಶೇಕಡ 40 ರಿಂದ 49ರ ವರೆಗೆ ಅಂತರವಿರುತ್ತದೆ. ಹಾಗೂ ಕೆಲವು ವೆಚ್ಚಗಳ ಅಂದಾಜುಗಳಲ್ಲಿ ಶೇಕಡ 50 ರಿಂದ 100 ರಷ್ಟು ಯಾವುದೇ ವಾಸ್ತವಿಕ ವೆಚ್ಚಗಳು ಆಗದೆ ಇರುತ್ತದೆ. ಇದರಿಂದ ವಿಶ್ವವಿದ್ಯಾಲಯದ ಅಂದಾಜುಗಳು ವೈಜ್ಞಾನಿಕ ಮಾನದಂಡದ ಮೇಲೆ ಅಂದಾಜಿಸದಿರುವುದು ಕಂಡುಬರುತ್ತದೆ.

| | | | | | |
|---|---|---|---|---|---|
| **06** | **06** | **ವಿಶ್ವವಿದ್ಯಾಲಯದ ಲೆಕ್ಕಪತ್ರಗಳ ಕುರಿತು ಲೆಕ್ಕಪರಿಶೋಧನಾ ವಿಶ್ಲೇಷಣೆ:**<br>ವಿಶ್ವವಿದ್ಯಾಲಯವು ವ್ಯವಸ್ಥಿತವಾಗಿ ಲೆಕ್ಕಪತ್ರಗಳನ್ನು ನಿರ್ವಹಿಸುವ ಸಮರ್ಪಕ ಮಾನವ ಸಂಪನ್ಮೂಲ ಹಾಗೂ ಲೆಕ್ಕಪತ್ರಗಳ ತಂತ್ರಾಂಶವನ್ನು ಅಳವಡಿಸಿಕೊಂಡಿದ್ದರೂ, ದ್ವಿ ನಮೂದು | **ಪರಿಶೀಲಿಸಲಾಗುವುದು.** | | |

| | | | | | |
|---|---|---|---|---|---|
| | | ಪದ್ಧತಿಯ ಪ್ರಮುಖ ಅಂಶವಾದ ಸಂಚಯನ ಪದ್ಧತಿಯನ್ನು ಅಳವಡಿಸಿಕೊಳ್ಳದೇ ನಗದು ವಹಿವಾಟು ಆಧಾರಿತ ಲೆಕ್ಕಪತ್ರಗಳನ್ನು ನಿರ್ವಹಿಸುತ್ತಿರುವುದು ವರದಿಯ ಕಂಡಿಕೆ 4ರಲ್ಲಿ ಪ್ರಸ್ತಾಪಿಸಿರುವಂತೆ ಸಮಂಜಸವಾಗಿರುವುದಿಲ್ಲ.<br>ಡಿ.ಸಿ.ಬಿ. ತಃಖ್ತೆಯನ್ನು ಪೂರ್ಣವಾಗಿ ಸಿದ್ಧಪಡಿಸಿದಲ್ಲಿ ಹಾಗೂ ಸರಕು ಮತ್ತು ಸೇವೆಗಳನ್ನು ಪಡೆದು ಅರ್ಹ ಬಿಲ್ಲುಗಳನ್ನು ಸ್ವೀಕರಿಸಿದ ಕೂಡಲೇ ವೆಚ್ಚಗಳನ್ನು ಪರಿಗಣಿಸುವ ವ್ಯವಸ್ಥೆಯನ್ನು ಜಾರಿಗೊಳಿಸಿದಲ್ಲಿ ಸಂಚಯನ ಪದ್ಧತಿಯ ಅಳವಡಿಕೆಯಲ್ಲಿ ಪ್ರಗತಿ ಕಾಣಬಹುದಾಗಿದೆ ಹಾಗೂ ಈ ಪದ್ಧತಿಯ ಅಳವಡಿಕೆಯಿಂದ ಲೆಕ್ಕಪತ್ರಗಳಲ್ಲಿ ನೈಜವಾದ ಹಾಗೂ ನ್ಯಾಯೋಚಿತ ಅಂಕಿಅಂಶಗಳನ್ನು ತೋರಿಸಿದಂತಾಗುತ್ತದೆ. ಇದಲ್ಲದೆ, ರಾಜಸ್ವ ಸ್ವೀಕೃತಿಯ ನಿಖರವಾದ ವರ್ಗೀಕರಣಕ್ಕೆ ಮತ್ತಷ್ಟೂ ಒತ್ತು ನೀಡುವ ಅವಶ್ಯಕತೆಯಿದ್ದು, ಸಮರ್ಪಕವಾದ ವರ್ಗೀಕೃತ ದಾಖಲೆಗಳನ್ನು ಲೆಕ್ಕಪತ್ರಗಳಲ್ಲಿ ಅಳವಡಿಸಿದರೆ ಲೆಕ್ಕಪತ್ರ ನಿರ್ವಹಣೆಯಲ್ಲಿ ಪೂರ್ಣವಾದ ಸುಧಾರಣೆ ಕಾಣಬಹುದಾಗಿದೆ. ಅಂತಿಮವಾಗಿ, ಪಾವತಿಗಳ ಖಾತೆಗಳಲ್ಲಿ ಅವಶ್ಯವಿರುವ ಮೊತ್ತಗಳಿಲ್ಲದೆ ಹೆಚ್ಚುವರಿಯಾಗಿ ಚೆಕ್‌ಗಳನ್ನು ಪಾವತಿಸಿರುವುದು ಕಂಡುಬಂದಿದ್ದು, ವಿಶ್ವವಿದ್ಯಾಲಯವು ಅಳವಡಿಸಿಕೊಂಡಿರುವ ನಗದು ಆಧಾರಿತ ವಹಿವಾಟುಗಳ ಲೆಕ್ಕಪತ್ರದ ನಿಯಮಗಳ ವಿರುದ್ಧವಾದ ಕ್ರಮವಾಗಿರುವುದನ್ನು ವಿಶ್ವವಿದ್ಯಾಲಯವು ಗಮನಿಸಬೇಕಾಗಿರುತ್ತದೆ. | | | |
| 07 | 07 | **ಲೆಕ್ಕಪರಿಶೋಧನಾ ಅಭಿಪ್ರಾಯ:**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ದಿನಾಂಕ: 31.03.2017ರ ಅಂತ್ಯಕ್ಕೆ ಇರುವ ಅಡಾವೆ ಪತ್ರಿಕೆ, ರಾಜಸ್ವ ಮತ್ತು ವೆಚ್ಚಗಳ ತಃಖ್ತೆ ಹಾಗೂ ಸ್ವೀಕೃತಿ ಮತ್ತು ಪಾವತಿಗಳ ತಃಖ್ತೆಗಳನ್ನೊಳಗೊಂಡ ವಾರ್ಷಿಕ ಹಣಕಾಸು ಲೆಕ್ಕಪತ್ರಗಳನ್ನು ವಿಶ್ವವಿದ್ಯಾಲಯವು ಅಳವಡಿಸಿಕೊಂಡಿರುವ ಲೆಕ್ಕಪತ್ರ ನಿರ್ವಹಣಾ ನೀತಿಗಳು ಮತ್ತು ಲೆಕ್ಕಪತ್ರಗಳ ಕುರಿತು ನೀಡಲಾಗಿರುವ ವಿವರಣೆಗಳನ್ನಾಧರಿಸಿ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲಾಗಿದೆ.<br>ಲೆಕ್ಕಪರಿಶೋಧನೆಯ ಹೊಣೆಯು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳ ಆಧಾರದ ಮೇಲೆ ವಿಶ್ವವಿದ್ಯಾಲಯದ ಹಣಕಾಸು ಲೆಕ್ಕಪತ್ರಗಳ ಕುರಿತು ಅಭಿಪ್ರಾಯ ವ್ಯಕ್ತಪಡಿಸುವ ಮಿತಿಗೆ ಸೀಮಿತವಾಗಿರುತ್ತದೆ. ವಿಶ್ವವಿದ್ಯಾಲಯಕ್ಕೆ ಅನ್ವಯಿಸುವಂತಹ ಕಾಯ್ದೆ, ನಿಯಮಗಳು ಮತ್ತು | **ಗಮನಿಸಿದೆ.** | | |

| | | | | | |
|---|---|---|---|---|---|
| | | ಇತರೆ ಶಾಸನಗಳಲ್ಲಿ ಕಲ್ಪಿಸಲಾದ ಅವಕಾಶಗಳು ಹಾಗೂ ಲೆಕ್ಕಪರಿಶೋಧನಾ ವಿಧಾನಗಳ ಅನುಸಾರ ಲೆಕ್ಕಪರಿಶೋಧನೆಯನ್ನು ಕೈಗೊಂಡಿರುತ್ತದೆ.<br>ಈ ಲೆಕ್ಕಪರಿಶೋಧನೆಯಲ್ಲಿ ಪರೀಕ್ಷಾರ್ಥವಾಗಿ ಕೈಗೊಳ್ಳಲಾದ ಹಣಕಾಸು ವಹಿವಾಟುಗಳ ಪರಿಶೀಲನೆ, ತೋರಿಸಲಾಗಿರುವ ಮೊತ್ತಕ್ಕೆ ಆಧಾರವಾಗಿರುವಂತಹ ವೋಚರ್‌ಗಳು ಮತ್ತು ವಾರ್ಷಿಕ ಲೆಕ್ಕಪತ್ರಗಳಲ್ಲಿ ಬಹಿರಂಗಪಡಿಸಲಾದ ಅಂಶಗಳು ಒಳಗೊಂಡಿರುತ್ತದೆ. ವಿಶ್ವವಿದ್ಯಾಲಯದ ಲೆಕ್ಕಪತ್ರಗಳಲ್ಲಿ ಲೆಕ್ಕಪತ್ರ ನಿರ್ವಹಣೆಯ ತತ್ವಗಳ ಅಳವಡಿಕೆ, ವಿಶ್ವವಿದ್ಯಾಲಯದ ಆಡಳಿತದಿಂದ ಮಾಡಲಾದ ಪ್ರಮುಖವಾದ ಅಂದಾಜುಗಳು ಹಾಗೂ ಒಟ್ಟಾರೆಯಾಗಿ ವಾರ್ಷಿಕ ಲೆಕ್ಕಪತ್ರಗಳ ಮಂಡನೆ ಮಾಡಲಾದ ಕುರಿತು ಮೌಲೀಕರಣದ ಅಂಶಗಳೂ ಸಹ ಈ ಲೆಕ್ಕಪರಿಶೋಧನೆಯಲ್ಲಿ ಒಳಗೊಂಡಿರುತ್ತದೆ. ಲೆಕ್ಕಪರಿಶೋಧನಾ ಸಮಯದಲ್ಲಿ ಲಭ್ಯವಿದ್ದ ದಾಖಲೆಗಳ ಆಧಾರದ ಮೇಲೆ ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತದೆ.<br>ಲೆಕ್ಕಪರಿಶೋಧನೆಯ ಅಭಿಪ್ರಾಯದಂತೆ ಹಾಗೂ ಲೆಕ್ಕಪರಿಶೋಧನೆಗೆ ದೊರಕಿರುವ ಮಾಹಿತಿಗಳು ಮತ್ತು ವಿವರಣೆಗಳನುಸಾರ ಈ ವರದಿಯಲ್ಲಿ ಪ್ರಸ್ತಾಪಿಸಲಾದ ಕಂಡಿಕೆಗಳಲ್ಲಿರುವ ಅಂಶಗಳನ್ವಯ ವಿಶ್ವವಿದ್ಯಾಲಯಕ್ಕೆ ಅನ್ವಯಿಸುವ ಕಾಯ್ದೆ, ನಿಯಮಗಳು, ಶಾಸನಗಳಲ್ಲಿರುವ ಅವಕಾಶಗಳು ಮತ್ತು ಲೆಕ್ಕಪತ್ರ ನಿರ್ವಹಣೆಯ ತತ್ವಗಳನ್ವಯ ಪಾಲಿಸದಿರುವ ಅಂಶಗಳನ್ನು ಕುರಿತು ವರದಿಯಲ್ಲಿ ಕಂಡಿಕೆಗಳನ್ನಾಗಿ ತರಲಾಗಿದೆ. | | | |

**-sd/-**
**ಅಪರ ನಿರ್ದೇಶಕರು,**
**ಬೆಂಗಳೂರು ಪ್ರಾಂತೀಯ ಕಛೇರಿ,**
**ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು**
**ಲೆಕ್ಕಪತ್ರ ಇಲಾಖೆ, ಬೆಂಗಳೂರು**

## ಭಾಗ–3

## ಹಣಕಾಸು ವಹಿವಾಟುಗಳಲ್ಲಿ ಕಂಡುಬಂದ ಪ್ರಮುಖ ಪ್ರಕರಣಗಳು

| ಕ್ರ. ಸಂ. | ಕಂಡಿಕೆ ಸಂಖ್ಯೆ | ಲೆಕ್ಕಪರಿಶೋಧನಾ ಆಕ್ಷೇಪಣೆ/ವಸೂಲಾತಿ | ಅನುಸರಣೆಗಳು | ಸಹಾಯಕ ನಿಯಂತ್ರಕರ ಶಿಫಾರಸ್ಸು | ನಿಯಂತ್ರಕರ ಷರಾ |
|---|---|---|---|---|---|
| **08** | **01** | **ಬ್ಯಾಂಕ್ ಲೆಕ್ಕ ಸಮನ್ವಯ ವಸೂಲಾತಿ ಮೊತ್ತ ರೂ. 3,91,250.00**<br>ದಿನಾಂಕ: 31.03.2017 ರ ಅಂತ್ಯಕ್ಕೆ ನಗದು ಪುಸ್ತಕದ ಅಂತಿಮ ಶಿಲ್ಕಿಗೂ ಹಾಗೂ ಬ್ಯಾಂಕ್ ಪಾಸ್‌ಶೀಟ್‌ನ ಅಂತಿಮ ಶಿಲ್ಕಿಗೂ ಇರುವ ವ್ಯತ್ಯಾಸದ ವಿವರಗಳನ್ನು ಬ್ಯಾಂಕ್ ಲೆಕ್ಕಸಮನ್ವಯ ತಃಖ್ತೆಯಲ್ಲಿ ನಮೂದಿಸಿದ್ದು, ಈ ಮೊತ್ತವು ಸುಮಾರು 1 ರಿಂದ 2 ವರ್ಷಗಳ ಹಳೆಯದಾಗಿರುತ್ತದೆ. ಈ ಮೊತ್ತ ಬ್ಯಾಂಕಿನಿಂದ ವಿಶ್ವವಿದ್ಯಾಲಯದ ಖಾತೆಗೆ ಜಮೆ ಆಗಬೇಕಾಗಿದ್ದು, ಸಂಬಂಧಪಟ್ಟ ಬ್ಯಾಂಕ್‌ಗಳಿಂದ ವಸೂಲಿ ಮಾಡಬೇಕಾಗಿರುತ್ತದೆ. ವಿವರಗಳು ಕೆಳಕಂಡಂತಿವೆ. | **ಬ್ಯಾಂಕ್‌ನೊಂದಿಗೆ ಪತ್ರ ವ್ಯವಹಾರ ಮಾಡಲಾಗಿದೆ. ಕ್ರಮ ಕೈಗೊಳ್ಳಲಾಗುವುದು.** | | |

| ಕ್ರ. ಸಂ. | ಬ್ಯಾಂಕ್ ಹೆಸರು | ಬ್ಯಾಂಕ್ ಖಾತೆ ಸಂಖ್ಯೆ | ಬ್ಯಾಂಕ್‌ನಿಂದ ವಿಶ್ವವಿದ್ಯಾಲಯದ ಖಾತೆಗೆ ಜಮೆ ಆಗಬೇಕಾದ ಮೊತ್ತ |
|---|---|---|---|
| 1 | ಎಸ್.ಬಿ.ಎಂ. ಚಾಮರಾಜಪೇಟೆ | 64187713727 | 89,780.00 |
| 2 | ---""--- | 64069994360 | 3,01,470.00 |
| | | ಒಟ್ಟು ಮೊತ್ತ | 3,91,250.00 |

ಈ ಮೊತ್ತವನ್ನು ಸಂಬಂಧಪಟ್ಟ ಬ್ಯಾಂಕ್‌ನಿಂದ ತೀರುವಳಿ ಪಡೆಯಬೇಕಾಗಿದ್ದು, ರೂ. 3,91,250.00 ಗಳನ್ನು ವಸೂಲಾತಿಗೆ ಇಡಲಾಗಿದೆ.ವಿವರಗಳು ***ಅನುಬಂಧ–5ರಲ್ಲಿ*** ಲಗತ್ತಿಸಿದೆ.

<table>
<tr>
<td>09</td>
<td>02</td>
<td>
ಎನ್‌ಪಿಎಸ್ ಸಿಬ್ಬಂದಿಯ 2012 ರಿಂದ ಜುಲೈ 2014ರ ಮಾಹೆವರೆಗಿನ ಎನ್‌ಪಿಎಸ್ ಮೊತ್ತವನ್ನು ವೇತನದಲ್ಲಿ ಕಟಾಯಿಸದಿರುವ ಮೊತ್ತ ರೂ. 7,53,097.00/– ವಸೂಲಾತಿ ಹಾಗೂ ವಿಶ್ವವಿದ್ಯಾಲಯದ ವಂತಿಕೆಯ ಮೊತ್ತ ರೂ. 7,53,097.00/– ಆಕ್ಷೇಪಣೆ
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯವು ಎನ್‌ಎಸ್‌ಡಿಎಲ್ ರವರಿಂದ ದಿನಾಂಕ: 8.9.2016ರಲ್ಲಿ ಎನ್‌ಪಿಎಸ್ ವಂತಿಕೆ ಸಲುವಾಗಿ ಡಿಟಿಎ, ಡಿಟಿಒ ಹಾಗೂ ಡಿಡಿಒ ಕೋಡ್‌ಗಳನ್ನು ಪಡೆಯಲಾಗಿದೆ.
<table>
<tr><th>ಕ್ರಸಂ.</th><th>ಕೋಡ್ ಸಂಖ್ಯೆ</th></tr>
<tr><td>1.</td><td>D.T.A Registration No. 3102540</td></tr>
<tr><td>2.</td><td>D.T.O Registration No. 4043782</td></tr>
<tr><td>3.</td><td>D.D.O Registration No. SGV 210358 F</td></tr>
</table>
ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ 46 ಎನ್‌ಪಿಎಸ್ ನೌಕರರ PRAN ಸಂಖ್ಯೆಯನ್ನು NSDL ರವರಿಂದ ಪಡೆದಿದ್ದು, ಜುಲೈ 2014 ರಿಂದ ಮಾರ್ಚ್ 2017 ಮಾಹೆವರೆಗಿನ NPS Employee Contribution ಮೊತ್ತಕ್ಕೆ Employeer Contribution ವಂತಿಕೆ ಶೇ.10ರಷ್ಟು ಸೇರಿಸಿ NPS Trust Account ಸಂಖ್ಯೆ: 3102540ಕ್ಕೆ NEFT ಮೂಲಕ ಈ ಕೆಳಕಂಡಂತೆ ಪಾವತಿಸಲಾಗಿದೆ.
<table>
<tr><th>ಕ್ರ. ಸಂ.</th><th>ಎನ್‌ಪಿಎಸ್ ವಂತಿಕೆ ಅವಧಿ</th><th>ನೌಕರರ ವಂತಿಕೆ</th><th>ಸಂಸ್ಥೆಯ ವಂತಿಕೆ</th><th>ಒಟ್ಟು ವಂತಿಕೆ</th><th>ಚೆಕ್ ಸಂಖ್ಯೆ</th><th>ದಿನಾಂಕ</th></tr>
<tr><td>1.</td><td>1/2017 ರಿಂದ 5/2017</td><td>903877</td><td>903877</td><td>1807754</td><td>311931</td><td>16.9.2017</td></tr>
<tr><td>2.</td><td>1/2016 ರಿಂದ12/2016</td><td>2041559</td><td>2041559</td><td>4083118</td><td>311940</td><td>23.9.2017</td></tr>
<tr><td>3.</td><td>1/2015 ರಿಂದ 12/2015</td><td>1698301</td><td>1698301</td><td>3396062</td><td>311979</td><td>23.10.2017</td></tr>
</table>
</td>
<td>ನೌಕರರಿಂದ ಈ ಮೊತ್ತವನ್ನು ಕಟಾವಣೆ ಮಾಡಿ ಇದರೊಂದಿಗೆ ಸಂಸ್ಥೆಯ ವಂತಿಕೆ ಸೇರಿಸಿ NPS TRUSTಗೆ ಜಮಾ ಮಾಡಲಾಗಿದೆ.</td>
<td></td>
<td></td>
</tr>
</table>

<table>
<tr><td></td><td></td><td>
<table>
<tr><td>4.</td><td>8/2014 ರಿಂದ 12/2014</td><td>611355</td><td>611355</td><td>1222710</td><td>692527</td><td>4.11.2017</td></tr>
<tr><td></td><td>ಒಟ್ಟು</td><td>5254822</td><td>5254822</td><td>10509644</td><td></td><td></td></tr>
</table>
8/2014 ರಿಂದ 5/2017 ಮಾಹೆವರೆಗಿನ ಎನ್‌ಪಿಎಸ್ ವಂತಿಕೆಯ ಮೊತ್ತವನ್ನು ಎನ್‌ಪಿಎಸ್ ಟ್ರಸ್ಟ್ ಖಾತೆಗೆ ಪಾವತಿಸಲಾಗಿದೆ.
2012–13 ಹಾಗೂ ಜುಲೈ 2014 ಮಾಹೆವರೆವಿಗೆ ಎನ್‌ಪಿಎಸ್ ನೌಕರರ ವೇತನದಲ್ಲಿ ಎನ್‌ಪಿಎಸ್ ವಂತಿಕೆಯನ್ನು ಕಟಾಯಿಸಿರುವುದಿಲ್ಲ. ಸದರಿ ನೌಕರರಿಂದ ಕಟಾಯಿಸಬೇಕಾಗಿರುವ ಮೊತ್ತ ರೂ. <u>7,53,097.00</u>/– ಆಗಿರುತ್ತದೆ. ಈ ಮೊತ್ತಕ್ಕೆ ವಿಶ್ವವಿದ್ಯಾಲಯದ ವಂತಿಕೆಯ ಮೊತ್ತ ರೂ. <u>7,53,097.00</u>– ಗಳನ್ನು ಸೇರಿಸಿ ಒಟ್ಟು ರೂ.15,06,794.00 ಗಳ ಮೊತ್ತ ಎನ್‌ಪಿಎಸ್ ವಂತಿಕೆಗೆ ಜಮೆ ಮಾಡಬೇಕಾಗಿರುತ್ತದೆ. ಈ ಮೊತ್ತವನ್ನು ಎನ್‌ಪಿಎಸ್ ಖಾತೆಗೆ ಜಮೆ ಮಾಡುವವರೆವಿಗೆ ರೂ. <u>7,53,097.00</u>/–ಗಳನ್ನು ವಸೂಲಾತಿಗಾಗಿ ಸೂಚಿಸಿದೆ. ಹಾಗೂ ರೂ. <u>7,53,097.00</u>/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.
</td><td></td><td></td><td></td></tr>
<tr><td>10</td><td>03</td><td>
ಅನುದಾನಿತ ಸಂಸ್ಕೃತ ಕಾಲೇಜುಗಳ ಬೋಧಕ ವರ್ಗದ ಗಳಿಕೆ ರಜೆ ನಗದೀಕರಣದ ರೂ. 9,31,429.00 ವಸೂಲಾತಿ
2016–17ನೇ ಸಾಲಿನ ಅನುದಾನಿತ ಸಂಸ್ಕೃತ ಕಾಲೇಜುಗಳ ಬೋಧಕ ಮತ್ತು ಬೋಧಕೇತರ ವರ್ಗದ ನೌಕರರ ಗಳಿಕೆ ರಜೆ ನಗದೀಕರಣ ವಹಿಯನ್ನು ಪರಿಶೀಲಿಸಲಾಗಿ ಒಟ್ಟು ರೂ. 13,27,807/– ಮೊತ್ತ ಗಳಿಕೆ ರಜೆ ನಗದೀಕರಣ ಸಲುವಾಗಿ ಬಿಡುಗಡೆ ಮಾಡಲಾಗಿದೆ.
2016–17ನೇ ಸಾಲಿನಲ್ಲಿ ಅನುದಾನಿತ 5 ಕಾಲೇಜಿನ ಬೋಧಕ ವರ್ಗದ 37 ಮಂದಿಗೆ ರೂ. 9,31,429/– ಹಣವನ್ನು ಗಳಿಕೆ ರಜೆ ನಗದೀಕರಣ ಸಲುವಾಗಿ ಪಾವತಿಸಲಾಗಿದೆ.
ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 113 ರಂತೆ ಒಂದು ಕ್ಯಾಲೆಂಡರ್ ವರ್ಷದಲ್ಲಿ 10 ದಿನಗಳ ಗಳಿಕೆ ರಜೆ ಪಡೆಯುವ ಸರ್ಕಾರಿ ನೌಕರನು ಗಳಿಕೆ ರಜೆ ಪಡೆಯಲು ಅರ್ಹನಾಗಿರುವುದಿಲ್ಲ. ರಜಾ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುವ ಸರ್ಕಾರಿ ನೌಕರರು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 118 ರನ್ವಯ ಗಳಿಕೆ ರಜೆ ನಗದೀಕರಣ ನೀಡಲು ಅವಕಾಶ
</td><td>ಈಗಾಗಲೇ ಕಾಲೇಜು ಪ್ರಾಂಶುಪಾಲರಿಗೆ ಪತ್ರ ಬರೆಯಲಾಗಿದ್ದು, ಕಟಾವಣೆ ಮಾಡಲು ಕ್ರಮ ವಹಿಸಲಾಗಿದೆ.</td><td></td><td></td></tr>
</table>

| | | | | | |
|---|---|---|---|---|---|
| | | ಇರುವುದಿಲ್ಲ. ಈ ಬಗ್ಗೆ ವಿವರಣೆ ನೀಡಲು ವಿಚಾರಣಾ ಪತ್ರ ಸಂಖ್ಯೆ 5/2017-18 ದಿನಾಂಕ: 16.11.2017 ರಲ್ಲಿ ಕೋರಿದ್ದು, ದಿನಾಂಕ: 24-11-2017 ರಲ್ಲಿ ನೀಡಿರುವ ವಿವರಣೆ ಸಮರ್ಪಕವಾಗಿರುವುದಿಲ್ಲ. ಆದ್ದರಿಂದ ಗಳಿಕೆ ರಜೆ ನಗದೀಕರಣದ ಮೊತ್ತ ರೂ. 9,31,429/- ವಸೂಲಾತಿಗಾಗಿ ಸೂಚಿಸಿದೆ. ವಿವರಗಳನ್ನು ***ಅನುಬಂಧ-6ರಲ್ಲಿ*** ಲಗತ್ತಿಸಿದೆ. | | | |
| **11** | **04** | **ಗೃಹ ನಿರ್ವಹಣಾ ವೆಚ್ಚ ರೂ. 72,000/- ವಸೂಲಾತಿ**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿನ ದಿನಾಂಕ: 22.12.2015ರ 31ನೇ ಪ್ರಶಾಸನ ಸಮಿತಿ ಸಭೆಯಲ್ಲಿ ಕುಲಪತಿಗಳು, ಕುಲಸಚಿವರು, ಹಣಕಾಸು ಅಧಿಕಾರಿಗಳು ಗೃಹ ನಿರ್ವಹಣಾ ವೆಚ್ಚವನ್ನು ಭರಿಸಲು ಪ್ರತಿ ಮಾಹೆ ರೂ. 3,000/- ಗಳನ್ನು ಬಿಡುಗಡೆ ಮಾಡಲು ಅನುಮೋದನೆ ನೀಡಲಾಗಿರುತ್ತದೆ.<br>ಅದರಂತೆ, 2016-17ನೇ ಸಾಲಿನಲ್ಲಿ ಒಟ್ಟು ರೂ. 1,08,000/- (ಒಂದು ಲಕ್ಷದ ಎಂಟು ಸಾವಿರ ಮಾತ್ರ) ಪಾವತಿಸಲಾಗಿರುತ್ತದೆ. ಆದರೆ ನಿಯಮಗಳಲ್ಲಿ ಕುಲಪತಿಗಳಿಗೆ ಮಾತ್ರ ಗೃಹ ನಿರ್ವಹಣಾ ವೆಚ್ಚವನ್ನು ಭರಿಸಲು ಅವಕಾಶವಿರುತ್ತದೆ. ಆದ್ದರಿಂದ ಕುಲಸಚಿವರು, ಹಣಕಾಸು ಅಧಿಕಾರಿಗಳ ಗೃಹ ನಿರ್ವಹಣಾ ವೆಚ್ಚದ ಮೊತ್ತ ರೂ. (12*6)72,000/- ಬಗ್ಗೆ ವಿವರಣೆ ನೀಡಲು ಲೆಕ್ಕವಿಚಾರಣಾ ಪತ್ರ ಸಂಖ್ಯೆ: 13/2017-18 ದಿನಾಂಕ: 20.11.2017 ಕೋರಿದ್ದು, ದಿನಾಂಕ: 24.11.2017ರಲ್ಲಿ ನೀಡಿರುವ ವಿವರಣೆ ಅಪೂರ್ಣವಾಗಿರುತ್ತದೆ. ಆದ್ದರಿಂದ ಗೃಹ ನಿರ್ವಹಣಾ ವೆಚ್ಚದ ಮೊತ್ತ ರೂ.72,000/-ಗಳನ್ನು ವಸೂಲಾತಿಗೆ ಸೂಚಿಸಿದೆ. | **ಈ ಬಗ್ಗೆ ಪರಿನಿಯಮಗಳನ್ನು ರಚಿಸಲು ಕ್ರಮಕೈಗೊಳ್ಳಲಾಗುವುದು.** | | |
| **12** | **05** | **ಬ್ಯಾಂಕ್ ಚಾರ್ಜಸ್ ಮೊತ್ತ ರೂ. 10,962/- ವಸೂಲಾತಿ**<br>2016-17ನೇ ಸಾಲಿಗೆ ರೂ. 10962.00ಗಳು ವಿವಿಧ ಕಾರಣಗಳ ಸಲುವಾಗಿ ಬ್ಯಾಂಕ್ ಚಾರ್ಜಸ್‌ಗಳೆಂದು ಕಟಾಯಿಸಲಾಗಿದ್ದು, ಬ್ಯಾಂಕ್‌ನೊಡನೆ ವ್ಯವಹರಿಸಿ ಸದರಿ ಮೊತ್ತವನ್ನು ಹಿಂಪಡೆಯಲು ಸೂಚಿಸಿ,ಲೆಕ್ಕಪತ್ರ ವಿಚಾರಣಾ ಸಂಖ್ಯೆ: 2/2017-18 ದಿನಾಂಕ:08-11-2017ರಲ್ಲಿ ವಿವರಣೆ ಕೋರಿದ್ದು, ದಿನಾಂಕ: 21-11-2017 ಸಲ್ಲಿಸಿರುವ ವಿವರಣೆಯಲ್ಲಿ ಬ್ಯಾಂಕ್‌ನೊಂದಿಗೆ ಪತ್ರ ವ್ಯವಹಾರ ನಡೆಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ. ಈ ಮೊತ್ತವನ್ನು ಬ್ಯಾಂಕ್‌ನಿಂದ ತೀರುವಳಿ ಪಡೆಯುವ ಸಲುವಾಗಿ ರೂ.10,962/- ಗಳನ್ನು ವಸೂಲಾತಿಗಾಗಿ ಸೂಚಿಸಿದೆ. | **ಈಗಾಗಲೇ ಬ್ಯಾಂಕ್‌ಗೆ ಪತ್ರ ವ್ಯವಹಾರ ಮಾಡಲಾಗಿದೆ.** | | |

| | | | | | |
|---|---|---|---|---|---|
| 13 | 06 | **ಬ್ಯಾಂಕ್ ಪಾಸ್‌ಶೀಟ್‌ನಲ್ಲಿ ನಮೂದಾಗದಿರುವ ಡಿ.ಡಿ.ಗಳ ಮೊತ್ತ ರೂ.2,82,922/– ಆಕ್ಷೇಪಣೆ**<br>2016–17ನೇ ಸಾಲಿಗೆ ಸಂಬಂಧಿಸಿದಂತೆ ರಸೀದಿ ಪುಸ್ತಕಗಳ ಮೂಲಕ ವಸೂಲಿಸಲಾದ ಹಲವಾರು ಡಿಡಿಗಳು ಬ್ಯಾಂಕ್ ಪಾಸ್‌ಶೀಟ್‌ನಲ್ಲಿ ನಮೂದಾಗದಿರುವ ಬಗ್ಗೆ ವಿಚಾರಣೆ ಪತ್ರ ಸಂಖ್ಯೆ: 20/2017–18 ದಿನಾಂಕ: 29.11.2017ರಲ್ಲಿ ವಿವರಣೆ ಕೋರಿದ್ದು, ದಿನಾಂಕ: 21.1.2018ರಲ್ಲಿ ಭಾಗಶ: ವಿವರಣೆ ನೀಡಿರುತ್ತಾರೆ. ಉಳಿದಂತೆ ಅನುಬಂಧದಲ್ಲಿ ಸೂಚಿಸಿರುವ ಡಿಡಿಗಳ ಮೊತ್ತ ರೂ. 2,82,922/–ಗಳು ಬ್ಯಾಂಕ್ ಪಾಸ್‌ಶೀಟ್‌ನಲ್ಲಿ ನಮೂದಾಗಿರುವ ಬಗ್ಗೆ ಮಾಹಿತಿ ನೀಡುವವರೆಗೂ ಆಕ್ಷೇಪಣೆಯಲ್ಲಿ ಇಡಲಾಗಿದೆ. ವಿವರಗಳು ***ಅನುಬಂಧ–7ರಲ್ಲಿ*** ಲಗತ್ತಿಸಿದೆ. | **ಬ್ಯಾಂಕ್ ಪಾಸ್‌ಶೀಟ್‌ನಲ್ಲಿ ನಮೂದಾಗಿರುವ ಮಾಹಿತಿಯನ್ನು ನೀಡಲಾಗಿದೆ.** | | |
| 14 | 07 | **ಅತಿಥಿಗೃಹದ ಮೇಲ್ವಿಚಾರಕರ ಸೇವೆಯ ಸಲುವಾಗಿನ ವೆಚ್ಚ ರೂ. 2,61,781/– ಆಕ್ಷೇಪಣೆ**<br>ವಿಶ್ವವಿದ್ಯಾಲಯದ ಅಧಿಸೂಚನೆ ಸಂಖ್ಯೆ ಕ.ಸಂ.ವಿ/ಆವಿ/ಸಿಬ್ಬಂದಿ–1/2012–13 ದಿನಾಂಕ: 10.1.2013ರಲ್ಲಿ ಶ್ರೀ ಸಿದ್ದಯ್ಯ ಇವರನ್ನು 5200–8200ರ ವೇತನಶ್ರೇಣಿಯಲ್ಲಿ ಅತಿಥಿಗೃಹದ ಮೇಲ್ವಿಚಾರಕರಾಗಿ ನೇಮಕಾತಿ ಮಾಡಲಾಗಿರುತ್ತದೆ. ಆದರೆ ವಿಶ್ವವಿದ್ಯಾಲಯದಲ್ಲಿ ಇದುವರೆವಿಗೂ ಅತಿಥಿಗೃಹ ನಿರ್ಮಾಣವಾಗಿರುವುದಿಲ್ಲ. 2016–17ನೇ ಸಾಲಿಗೆ ಒಟ್ಟು ರೂ. 2,61,781.00 ಗಳು ಇವರಿಗೆ ಪಾವತಿಯಾಗಿದ್ದು, ಅವಶ್ಯಕತೆಯಿರದ ನೇಮಕಾತಿಯನ್ನು ಮಾಡಿ ವಿಶ್ವವಿದ್ಯಾಲಯಕ್ಕೆ ಆರ್ಥಿಕ ನಷ್ಟ ಉಂಟಾಗಿರುವ ಬಗ್ಗೆ ಲೆಕ್ಕತನಿಖೆಯಲ್ಲಿ ವಿಚಾರಣಾ ಪತ್ರ ಸಂಖೆ: 30/2017–18 ದಿನಾಂಕ 30.11.2016ರಲ್ಲಿ ವಿವರಣೆ ಕೋರಿದ್ದು, ದಿನಾಂಕ: 27–12–2017ರಲ್ಲಿ ನೀಡಿರುವ ಮಾಹಿತಿಯು ಸಮಂಜಸವಾಗಿರದ ಕಾರಣ ರೂ.2,61,781/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. | **ಈ ಬಗ್ಗೆ ಈಗಾಗಲೇ ಕ್ರಮಕೈಗೊಂಡು ಸಿಬ್ಬಂದಿಯನ್ನು ಶ್ರೀ ಮಹಾರಾಜಾ ಸಂಸ್ಕೃತ ಕಾಲೇಜು, ಮೈಸೂರು ಇಲ್ಲಿಯ ಹಾಸ್ಟೆಲ್ ಉಸ್ತುವಾರಿ ನೋಡಿಕೊಳ್ಳಲು ನಿಯೋಜಿಸಲಾಗಿದೆ.** | | |
| 15 | 08 | **ವಿಶ್ವವಿದ್ಯಾಲಯದ ಲೆಕ್ಕಪತ್ರಗಳ ತಯಾರಿಕೆಯ ಸಲುವಾಗಿ ಮೆ: ಶಾಂಡಿಲ್ಯ ಇನ್ಫೋಟೆಕ್, ಬೆಂಗಳೂರು ಸಂಸ್ಥೆಗೆ ಪಾವತಿಸಲಾದ ಮೊತ್ತ ರೂ. 3,60,000/– ಆಕ್ಷೇಪಣೆ**<br>ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳ ತಯಾರಿಕೆಯ ಸಲುವಾಗಿ 2014–15ನೇ ಸಾಲಿನಲ್ಲಿ ಮೆ: ಶಾಂಡಿಲ್ಯ ಇನ್ಫೊಟೆಕ್, ಬೆಂಗಳೂರು ಇವರಿಂದ ವಾರ್ಷಿಕ ರೂ. 96000/– ವೇತನಕ್ಕೆ ಸೇವೆಯನ್ನು ಪಡೆಯಲಾಗಿದೆ. ದಿನಾಂಕ: 30.5.2016ರ ಸಿಂಡಿಕೇಟ್ ಸಭೆಯ ನಡಾವಳಿಗಳ ಅನ್ವಯ ಇವರ ಹೊರಗುತ್ತಿಗೆ ಸೇವೆಯನ್ನು 5/2015 ರಿಂದ 1 ವರ್ಷದ ಅವಧಿಗೆ ವಾರ್ಷಿಕ ರೂ. | **ಈ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.** | | |

| | | | | | |
|---|---|---|---|---|---|
| | | 3,60,000/- ವೇತನಕ್ಕೆ ಸೇವೆಯನ್ನು ಪಡೆಯಲಾಗಿದೆ. ಮೆ: ಶಾಂಡಿಲ್ಯ ಇನ್ಫೊಟೆಕ್ ಇವರಿಂದ ಸೇವೆಯನ್ನು ಸುಮಾರು 400% ಹೆಚ್ಚುವರಿ ಮೊತ್ತಕ್ಕೆ ಅಂಗೀಕರಿಸಿರುವ ಬಗ್ಗೆ ವಿಶ್ವವಿದ್ಯಾನಿಲಯದ ಆರ್ಥಿಕ ಪ್ರತ್ಯಾಯೋಜನೆ ಹಾಗೂ ಸದರಿಯವರೊಂದಿಗೆ ಮಡಿಕೊಳ್ಳಲಾದ ಕರಾರು ಮತ್ತೆ ಅವಧಿ ಪೂರ್ಣಗೊಂಡ ನಂತರವೂ ಸೇವೆಯನ್ನು ಮುಂದುವರಿಸಿರುವ ಬಗ್ಗೆ ವಿವರಣೆ ನೀಡಲು ವಿಚಾರಣೆ ಪತ್ರಸಂಖ್ಯೆ: 22/2017-18 ದಿನಾಂಕ: 29.11.2017ರಲ್ಲಿ ಕೋರಿದ್ದು, ಹಣಕಾಸು ಅಧಿಕಾರಿಗಳು ದಿನಾಂಕ: 8.12.2017ರಲ್ಲಿ ನೀಡಿರುವ ವರದಿಯಲ್ಲಿ ಕೋರಲಾದ ಅವಶ್ಯಕ ಮಾಹಿತಿಗಳನ್ನು ನೀಡಿರುವುದಿಲ್ಲ. ಆದ್ದರಿಂದ ಮೆ: ಶಾಂಡಿಲ್ಯ ಇನ್ಫೊಟೆಕ್, ಬೆಂಗಳೂರು ಇವರಿಂದ ಪಡೆಯಲಾದ ಹೊರಗುತ್ತಿಗೆ ಸೇವೆ ಪಾವತಿಯ ಮೊತ್ತ ರೂ. 3,60,000/- ಕೆ.ಟಿ.ಪಿ.ಪಿ ನಿಯಮಗಳ ಉಲ್ಲಂಘನೆಯಾಗಿರುವುದರಿಂದ ಆಕ್ಷೇಪಣೆಯಲ್ಲಿಡಲಾಗಿದೆ. | | | |
| **16** | **09** | **ಎನ್.ಎಸ್.ಎಸ್ ಶಿಬಿರದ ವೋಚರ್‌ಗಳ ಪರಿಶೀಲನೆ: ಆಕ್ಷೇಪಣೆ ರೂ. 2,62,250/-**<br>2016-17ನೇ ಸಾಲಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ರಾಷ್ಟ್ರೀಯ ಭಾವೈಕ್ಯತಾ ಶಿಬಿರಕ್ಕಾಗಿ ರಾಷ್ಟ್ರೀಯ ಸೇವಾ ಯೋಜನಾ ಕೋಶ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ರೂ. 5,00,000/-ಗಳನ್ನು ಚೆಕ್ ಸಂಖ್ಯೆ 149971 ದಿನಾಂಕ: 27.02.2017ರಲ್ಲಿ ಬಿಡುಗಡೆ ಮಾಡಲಾಗಿರುತ್ತದೆ (ದಿ:1.3.2017ರಂದು ವಿಶ್ವವಿದ್ಯಾಲಯದ ನಿಧಿಗೆ ಜಮೆ) ಮಾನ್ಯ ಕುಲಪತಿಗಳ ಮೌಖಿಕ ಆದೇಶದಂತೆ, ಶ್ರೀ ಗುರುಶಾಂತೇಶ್ವರ ಸವೇದ ಸಂಸ್ಕೃತ ಕಾಲೇಜು, ಹುಕ್ಕೇರಿ ಇಲ್ಲಿ ಶಿಬಿರವನ್ನು ನಡೆಸಲು ತೀರ್ಮಾನಿಸಲಾಗಿದ್ದು, ದಿನಾಂಕ: 18.02.2017 ರಿಂದ 24.02.2017ರವರೆಗೆ ಶಿಬಿರವನ್ನು ನಡೆಸಲಾಗಿರುತ್ತದೆ. ಒಟ್ಟು ಮೊತ್ತ ರೂ. 5.00 ಲಕ್ಷಗಳಲ್ಲಿ ರೂ. 3,84,949/-ಗಳನ್ನು ವೆಚ್ಚ ಮಾಡಲಾಗಿದ್ದು, ರೂ.1,15,051/-ಗಳು ಉಳಿಕೆಯಾಗಿದ್ದು, ಉಳಿಕೆ ಮೊತ್ತವನ್ನು ದಿನಾಂಕ:20.06.2016 ರಲ್ಲಿ ಸರ್ಕಾರಕ್ಕೆ ಹಿಂದಿರುತಿಸಲಾಗಿರುತ್ತದೆ. ಕೆಳಕಂಡಂತೆ ವೆಚ್ಚ ಮಾಡಲಾಗಿದ್ದು, ವೆಚ್ಚ ಮಾಡಲಾದ ವೋಚರ್‌ಗಳನ್ನು ಪರಿಶೀಲಿಸಲಾಗಿದೆ.<br>ಶಿಬಿರದಲ್ಲಿ ಪಾಲ್ಗೊಳ್ಳುವ ಸ್ವಯಂಸೇವಕರು ಮತ್ತು ಶಿಬಿರಾರ್ಥಿಗಳು ಒಟ್ಟು 150 ಜನರಿಗೆ ಊಟೋಪಚಾರದ ವ್ಯವಸ್ಥೆಯನ್ನು ಶ್ರೀ ಸಾಯಿ ಭವನ್, ಸಂಕೇಶ್ವರ ಇವರಿಂದ ಮಾಡಿಸಲಾಗಿದ್ದು, ಈ ಕೆಳಕಂಡಂತೆ ಚೆಕ್‌ಗಳನ್ನು ನೀಡಲಾಗಿರುತ್ತದೆ. | **ಇನ್ನು ಮುಂದೆ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.** | | |

<table>
<tr>
<td></td>
<td></td>
<td>
<table>
<tr><th>ಕ್ರ.ಸಂ.</th><th>ವಿವರ</th><th>ಚೆಕ್‌ಸಂಖ್ಯೆ</th><th>ದಿನಾಂಕ</th><th>ಮೊತ್ತ</th></tr>
<tr><td>1.</td><td>ಮಧ್ಯಾಹ್ನದ ಮತ್ತು ರಾತ್ರಿ ಊಟ</td><td>033862</td><td>1.3.2017</td><td>95,500.00</td></tr>
<tr><td>2.</td><td>ಬೆಳಗಿನ ಮತ್ತು ಸಂಜೆಯ ಉಪಹಾರ</td><td>033864</td><td>1.3.2017</td><td>70,250.00</td></tr>
<tr><td>3.</td><td>ವಸತಿಗಾಗಿ</td><td>033863</td><td>1.3.2017</td><td>96,500.00</td></tr>
<tr><td></td><td>ಒಟ್ಟು ಮೊತ್ತ ರೂ.</td><td></td><td></td><td>2,62,250.00</td></tr>
</table>
ಊಟೋಪಚಾರಕ್ಕಾಗಿ ಮತ್ತು ವಸತಿಗಾಗಿ ಪಾವತಿಸಲಾದ ಒಟ್ಟು ಮೊತ್ತ ರೂ. 2,62,250.00 ಆಗಿರುತ್ತದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ಮತ್ತು 2000ರ ಅಧಿನಿಯಮ ಸೆಕ್ಷನ್ 5 ಮತ್ತು 4 (ಇ) ಪ್ರಕಾರ 1 ಲಕ್ಷ ಮೇಲ್ಪಟ್ಟ ಖರೀದಿಗಳು, ಸರಕು ಮತ್ತು ಸೇವೆಗಳಿಗೆ ಟೆಂಡರ್ ಆಹ್ವಾನಿಸಿ ಸೇವೆಯನ್ನು ಪಡೆಯಬೇಕಿರುತ್ತದೆ. ಈ ಬಗ್ಗೆ ವಿವರಣೆ ನೀಡಲು ವಿಚಾರಣಾ ಪತ್ರ ಸಂಖ್ಯೆ:21/17–18 ದಿನಾಂಕ: 29.11.2017ರಲ್ಲಿ ಕೋರಿದ್ದು, ದಿನಾಂಕ: 8.12.2017ರಂದು ನೀಡಿರುವ ಮಾಹಿತಿಯು ಅಪೂರ್ಣವಾಗಿರುತ್ತದೆ.<br>
ಕೆ.ಟಿ.ಪಿ.ಪಿ ನಿಯಮದನ್ವಯ ಟೆಂಡರ್ ಕರೆಯದೇ ಸೇವೆಯನ್ನು ಪಡೆದಿರುವುದರಿಂದ ರೂ. 2,62,2250.00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.
</td>
<td></td>
<td></td>
<td></td>
</tr>
<tr>
<td>17</td>
<td>10</td>
<td>ಮೊಬೈಲ್ ಬಿಲ್ಲುಗಳ ಪಾವತಿ ರೂ. 34,083/– ಆಕ್ಷೇಪಣೆ<br>
2016–17ನೇ ಸಾಲಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳಲ್ಲಿ Telephone/Mobile/Internet Chargesನ Ledger ಪರಿಶೀಲಿಸಲಾಗಿದ್ದು, ವಿಶ್ವವಿದ್ಯಾಲಯದಲ್ಲಿನ ಕುಲಸಚಿವರು/ಉಪನಿರ್ದೇಶಕರುಗಳಿಗೆ ಮೊಬೈಲ್ ಕರೆಗಳ ವೆಚ್ಚವನ್ನು ಪಾವತಿ ಮಾಡಲಾಗಿರುತ್ತದೆ. ಸದರಿ ಪಾವತಿಯನ್ನು ಯಾವ ನಿಯಮ/ಸರ್ಕಾರದ ಆದೇಶಗಳ ಆಧಾರದ ಮೇಲೆ ಮಾಡಲಾಗುತ್ತಿರುವ ಕುರಿತು ಲೆಕ್ಕಪರಿಶೋಧನೆಗೆ ವಿವರಣೆಯನ್ನು ಸಲ್ಲಿಸುವಂತೆ ಲೆಕ್ಕವಿಚಾರಣಾ ಪತ್ರ ಸಂಖ್ಯೆ: 25/2017–18, ದಿನಾಂಕ: 05/12/2017 ರಲ್ಲಿ ಕೋರಲಾಗಿದ್ದು, ವಿವರಣೆ ಸಮಂಜಸವಾಗಿಲ್ಲವಾದ ಕಾರಣ ರೂ. 34,083.00 ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳು <u>ಅನುಬಂಧ–8ರಲ್ಲಿ</u> ಲಗತ್ತಿಸಿದೆ.
</td>
<td>ಈ ಬಗ್ಗೆ ಪರಿನಿಯಮ ಮಾಡಿಕೊಳ್ಳಲಾಗುವುದು.</td>
<td></td>
<td></td>
</tr>
</table>

| | | | | | |
|---|---|---|---|---|---|
| 18 | 11 | **ಅಂಕಪಟ್ಟಿ ಮುದ್ರಣ ಕಾರ್ಯದ ಸಲುವಾಗಿ ಮೆ: ಹೈಟೆಕ್ ಪ್ರಿಂಟರ್ಸ್, ಬೆಂಗಳೂರು ಇವರಿಗೆ ಪಾವತಿಸಲಾದ ಮೊತ್ತ ರೂ. 87,300/– ಹಾಗೂ ಹಿಂಪಾವತಿಸಲಾದ ಇಎಂಡಿ ಮೊತ್ತ ರೂ. 10,000/– ಒಟ್ಟು ಮೊತ್ತ ರೂ. 97,300/– ಆಕ್ಷೇಪಣೆ**<br>2015–16ನೇ ಸಾಲಿನ ಸಂಸ್ಕೃತ ಪರೀಕ್ಷೆಗಳ ಅಂಕಪಟ್ಟಿ ಮುದ್ರಣದ ಸಲುವಾಗಿ ಮೆ: ಹೈಟೆಕ್ ಪ್ರಿಂಟರ್ಸ್ ಇವರನ್ನು ಟೆಂಡರ್‌ನಲ್ಲಿ ಆಯ್ಕೆ ಮಾಡಿ ದಿನಾಂಕ: 8.7.2016ರಲ್ಲಿ ಕಾರ್ಯಾದೇಶವನ್ನು ನೀಡಲಾಗಿದೆ. ಈ ಕಾರ್ಯಾದೇಶದಲ್ಲಿ ಅಂಕಪಟ್ಟಿಗಳ ಮುದ್ರಣದ ಸಲುವಾಗಿ ಪ್ರತಿ ಅಂಕಪಟ್ಟಿಗೆ ರೂ. 2.91 ಹಾಗೂ ಡಾಟಾ ಎಂಟ್ರಿ ಸಲುವಾಗಿ ರೂ.1.00ರಂತೆ ಕಾರ್ಯಾದೇಶವನ್ನು ನೀಡಲಾಗಿದೆ. ಆದರೆ ಮೆ:ಹೈಟೆಕ್ ಪ್ರಿಂಟರ್ಸ್ ಇವರು ಅಂಕಪಟ್ಟಿ ಮುದ್ರಣ ಕಾರ್ಯವನ್ನು ಮಾತ್ರ ಮಾಡಿದ್ದು, ಡಾಟಾ ಎಂಟ್ರಿ ಸೇವೆಯನ್ನು ನಿರ್ವಹಿಸಿರುವುದಿಲ್ಲ. ಅಂಕಪಟ್ಟಿಗಳ ಮುದ್ರಣ ವೆಚ್ಚದ ರೂ. 87,300/– ಮೊತ್ತದ ಬಿಲ್ಲನ್ನು ಪಾವತಿಗಾಗಿ ಸಲ್ಲಿಸಿರುತ್ತಾರೆ. ಈ ಮೊತ್ತವನ್ನು ಚೆಕ್ ಸಂಖ್ಯೆ: 564649 ದಿನಾಂಕ: 31.8.2016ರಲ್ಲಿ ಪಾವತಿಸಲಾಗಿದೆ.<br>ಅಂಕಪಟ್ಟಿ ಮುದ್ರಣ ಕಾರ್ಯದ ಟೆಂಡರ್‌ಗೆ ಬಿಲ್ಲು ಪಾವತಿಗೆ ಸಂಬಂಧಿಸಿದಂತೆ, ಟೆಕ್ನಿಕಲ್ ಬಿಡ್ ಚೆಕ್‌ಲಿಸ್ಟ್/ಪ್ರೋಸೀಡಿಂಗ್ಸ್/ಫೈನಾನ್ಸಿಯಲ್ ಬಿಡ್‌ನ ತುಲನಾತ್ಮಕಪಟ್ಟಿ/ಪ್ರೋಸೀಡಿಂಗ್ಸ್/ಟೆಂಡರ್‌ನ ಷರತ್ತು ಹಾಗೂ ನಿಬಂಧನೆಗಳು/ಟೆಂಡರ್‌ದಾರರೊಂದಿಗೆ ಮಾಡಿಕೊಂಡ ಕರಾರನ್ನು ಲೆಕ್ಕತನಿಖೆಗೆ ಒದಗಿಸಲು ವಿಚಾರಣೆ ಪತ್ರ ಸಂಖ್ಯೆ: 18/2017–18 ದಿನಾಂಕ: 28.11.2017ರಲ್ಲಿ ಕೋರಿದ್ದು, ದಿನಾಂಕ: 1.12.2017ರಲ್ಲಿ ನೀಡಿರುವ ವಿವರಣೆಯಲ್ಲಿ ಟೆಂಡರ್ ಪರಿಶೀಲನೆಗಾಗಿ ಯಾವುದೇ ಕಮಿಟಿಗಳನ್ನು ರಚಿಸಿಕೊಂಡಿರುವುದಿಲ್ಲ ಹಾಗೂ ಟೆಂಡರ್‌ದಾರರೊಂದಿಗೆ ಯಾವುದೇ ಕರಾರನ್ನು ಮಾಡಿಕೊಂಡಿರು ವುದಿಲ್ಲ ಎಂದು ತಿಳಿಸಿರುತ್ತಾರೆ. ಟೆಂಡರ್‌ದಾರರು ಅಂಕಪಟ್ಟಿ ಮುದ್ರಣ ಕಾರ್ಯ ಮಾತ್ರ ಮಾಡಿದ್ದು, ಡಾಟಾ ಎಂಟ್ರಿ ಕಾರ್ಯ ಮಾಡಲು ನಿರಾಕರಿಸಿರುತ್ತಾರೆ ಎಂಬುದಾಗಿ ತಿಳಿಸಿರುತ್ತಾರೆ.<br>ಟೆಂಡರ್ ಷರತ್ತುಗಳನ್ನು ರೂಪಿಸಿಕೊಳ್ಳದೆ ಹಾಗೂ ಟೆಂಡರ್‌ದಾರರೊಂದಿಗೆ ಕರಾರು ಮಾಡಿಕೊಳ್ಳದೆ ಇರುವುದು ಟೆಂಡರ್ ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಆದ್ದರಿಂದ ಮೆ: ಹೈಟೆಕ್ ಪ್ರಿಂಟರ್ಸ್ ಬೆಂಗಳೂರು ಇವರಿಗೆ ಅಂಕಪಟ್ಟಿಗಳ ಮುದ್ರಣದ ಸಲುವಾಗಿ ಪಾವತಿಸಲಾದ ಮೊತ್ತ ರೂ. 87300/– ಹಾಗೂ ಹಿಂದಿರುಗಿಸಲಾದ ಮುಂಗಡ ಹಣದ ಮೊತ್ತ ರೂ. 10,000/– ಒಟ್ಟು ಮೊತ್ತ ರೂ. 97,300/–ಗಳನ್ನು ಆಕ್ಷೇಪಣೆಯಲ್ಲಿ ಇಡಲಾಗಿದೆ. | **ಇನ್ನು ಮುಂದೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.** | | |

## ಸಾಮಾನ್ಯ ಕಂಡಿಕೆಗಳು

| ಕ್ರ. ಸಂ. | ಕಂಡಿಕೆ ಸಂಖ್ಯೆ | ಲೆಕ್ಕಪರಿಶೋಧನಾ ಆಕ್ಷೇಪಣೆ/ವಸೂಲಾತಿ | ಅನುಸರಣೆಗಳು | ಸಹಾಯಕ ನಿಯಂತ್ರಕರ ಶಿಫಾರಸ್ಸು | ನಿಯಂತ್ರಕರ ಷರಾ |
|---|---|---|---|---|---|
| 19 | 01 | **ನಗದು ಪುಸ್ತಕ**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ತನ್ನ ವ್ಯವಹಾರಗಳ ಸಲುವಾಗಿ 8 ಬ್ಯಾಂಕ್ ಖಾತೆಗಳನ್ನು ಹೊಂದಿದ್ದು, ಸದರಿ ಬ್ಯಾಂಕ್ ಖಾತೆಗಳನ್ನು ಸಂಬಂಧಿಸಿದಂತೆ, ಕಂಪ್ಯೂಟರೀಕೃತ ನಗದು ಪುಸ್ತಕವನ್ನು ನಿರ್ವಹಣೆ ಮಾಡಲಾಗಿದೆ. ಈ ನಗದು ಪುಸ್ತಕಗಳನ್ನು ಪ್ರತಿ ತಿಂಗಳಿನಲ್ಲಿ ಅಂತಿಮ ಶಿಲ್ಕನ್ನು ನಮೂದಿಸಬೇಕಾಗಿರುತ್ತದೆ. ಆದರೆ, ಮಾರ್ಚ್ 2017ರ ಅಂತ್ಯಕ್ಕೆ ಮಾತ್ರ ನಗದು ಪುಸ್ತಕವನ್ನು ಮುಕ್ತಾಯ ಮಾಡಲಾಗಿದೆ. | ಕ್ರಮ ಕೈಗೊಳ್ಳಲಾಗುವುದು. | | |
| 20 | 02 | **ಬ್ಯಾಂಕ್ ಖಾತೆಗಳ ವಿವರ:**<br>ವಿಶ್ವವಿದ್ಯಾಲಯದಲ್ಲಿ ನಿರ್ವಹಿಸಲಾದ ಬ್ಯಾಂಕ್ ಖಾತೆಗಳ ಪ್ರಾರಂಭಶಿಲ್ಕು ಹಾಗೂ ಅಂತಿಮ ಶಿಲ್ಕುಗಳ ವಿವರ ಈ ಕೆಳಕಂಡಂತಿದೆ: | | | |

| ಕ್ರ.. ಸಂ. | ಬ್ಯಾಂಕ್ ಖಾತೆ ಸಂಖ್ಯೆ | ದಿನಾಂಕ: 1.4.2016ಕ್ಕೆ ಇದ್ದಂತೆ ಪ್ರಾರಂಭ ಶಿಲ್ಕು | ದಿ: 31.3.2017ಕ್ಕೆ ಇದ್ದಂತೆ ಅಂತಿಮ ಶಿಲ್ಕು |
|---|---|---|---|
| 1. | 64166964630 (NSS A/c) | 2,14,612.00 | 3,44,930.00 |
| 2. | 64187713727<br>(opened on 22-12-15) (Exam sec A/c) | 19,32,561.00 | 33,24,735.50 |
| 3. | 64034730475 (V.C. A/c) | 1,31,145.00 | 2,63,353.50 |
| 4. | 64069994360 (FO A/c) | 3,79,70,339.00 | 5,26,53,797.50 |
| 5. | 64071432534 (Reg Strar A/c) | 17,01,696.00 | 17,86,632.00 |
| 6. | 64088089822 (Director A/c) | 1,488.00 | 11,103.00 |

<table>
<tr><td></td><td></td><td>
<table>
<tr><td>7.</td><td>64140220134 (Block Grant A/c)</td><td>3,39,90,054.00</td><td>2,43,20,879.00</td></tr>
<tr><td>8.</td><td>64181271353<br>(Prasarang A/c op on 08-10-15)</td><td>7,62,744.00</td><td>3,95,970.00</td></tr>
<tr><td>9.</td><td>100200012969<br>Sri Gururaghavendra link Dattinidhi</td><td>2,05,678.00</td><td>--</td></tr>
<tr><td>10.</td><td>005301049676 ICICI Bank<br>(Opened on 01-10-15)</td><td>10,382.00</td><td>--</td></tr>
<tr><td>11.</td><td>SBM New Account</td><td>1,000.00</td><td>--</td></tr>
</table>
ಕ್ರಮ ಸಂಖ್ಯೆ: 9, 10 ಮತ್ತು 11 ರಲ್ಲಿನ ಬ್ಯಾಂಕ್ ಖಾತೆಗಳನ್ನು ಮುಕ್ತಾಯಗೊಳಿಸಲಾಗಿದೆ. 2016–17ನೇ ಸಾಲಿಗೆ ಲೆಕ್ಕ ಹೊಂದಾಣಿಕೆಯನ್ನು ಮಾಡಿರುತ್ತಾರೆ.(Reconciliation)
</td><td></td><td></td><td></td></tr>
<tr><td>21</td><td>03</td><td>ದತ್ತಿನಿಧಿ ಠೇವಣಿಗಳು:<br>ವಿಶ್ವವಿದ್ಯಾನಿಲಯವು ಹೊಂದಿರುವ ದತ್ತಿ ನಿಧಿ ಠೇವಣಿಗಳ ಮಾಹಿತಿಗಳನ್ನು ನೀಡಲು ವಿಚಾರಣೆ ಪತ್ರಸಂಖ್ಯೆ: 11/2017–18 ದಿನಾಂಕ: 8.12.2017ರಲ್ಲಿ ಕೋರಿದ್ದು, ದತ್ತಿನಿಧಿ ಠೇವಣಿಗಳ ಮಾಹಿತಿಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸಿರುತ್ತದೆ. ವಿಶ್ವವಿದ್ಯಾನಿಲಯವು ಒಟ್ಟು 17 ದತ್ತಿನಿಧಿಗಳನ್ನು ಹೊಂದಿದ್ದು, ಇವುಗಳ ನಿಶ್ಚಿತ ಠೇವಣಿಯ ಹೂಡಿಕೆಯ ಮೊತ್ತ ರೂ. 31,32,391/– ಆಗಿರುತ್ತದೆ. ಈ ದತ್ತಿನಿಧಿಗಳಿಂದ ವಾರ್ಷಿಕ ರೂ. 2,66,321/– ಬಡ್ಡಿ ಮೊತ್ತ ಸಂದಾಯವಾಗಿರುತ್ತದೆ.ವಿವರಗಳು <u>ಅನುಬಂಧ–9ರಲ್ಲಿ</u> ಲಗತ್ತಿಸಿದೆ.</td><td></td><td></td><td></td></tr>
<tr><td>22</td><td>04</td><td>ರದ್ದುಪಡಿಸಲಾದ ರಸೀದಿಗಳಿಗೆ ದೃಢೀಕರಣ ಮಾಡದಿರುವ ಬಗ್ಗೆ:<br>2016–17ನೇ ಸಾಲಿಗೆ ಸಂಬಂಧಿಸಿದಂತೆ ರಸೀದಿ ಪುಸ್ತಕಗಳು, ಖರ್ದಿ ಪುಸ್ತಕ ಪರಿಶೀಲಿಸಲಾಗಿ ಕೆಲವೊಂದು ರಸೀದಿಗಳಲ್ಲಿ ಮೊತ್ತವನ್ನು ವಸೂಲಿಸಿದ್ದು, ತದನಂತರ ಸದರಿ ರಸೀದಿಗಳನ್ನು ರದ್ದುಪಡಿಸಲಾಗಿರುತ್ತದೆ. ಸದರಿ ರಸೀದಿಗಳ ರದ್ಧತಿಗೆ ಸೂಕ್ತ ಕಾರಣವಾಗಲೀ ಹಾಗೂ ದೃಢೀಕರಣವಾಗಲೀ ರಸೀದಿಯ ಮೇಲೆ ನಮೂದಿಸಿರುವುದಿಲ್ಲ. ಇನ್ನು ಮುಂದೆ ರದ್ದುಡಿಸಲಾಗುವ ರಸೀದಿ ಮೇಲೆ ಸಕಾರಣವನ್ನು ನಮೂದಿಸಿ, ಸಕ್ಷಮ ಅಧಿಕಾರಿಯ ದೃಢೀಕರಣ ಪಡೆಯಲು ಸೂಚಿಸಲಾಗಿದೆ.</td><td>ಕ್ರಮ ಕೈಗೊಳ್ಳಲಾಗುವುದು.</td><td></td><td></td></tr>
</table>

<table>
<tr><td>23</td><td>05</td><td>ಅನುದಾನ ಮತ್ತು ವೆಚ್ಚದ ವಿವರಗಳು:<br>2016–17ನೇ ಸಾಲಿನಲ್ಲಿ ಕರ್ನಾಟಕ ಸರ್ಕಾರದ ವತಿಯಿಂದ ಬಿಡುಗಡೆಯಾದ ಅನುದಾನ ಹಾಗೂ ವೆಚ್ಚದ ವಿವರಗಳನ್ನು ಪರಿಶೀಲಿಸಲಾಗಿ ದಿನಾಂಕ: 1.4.2016 ರಂದು ಬ್ಲಾಕ್ ಅನುದಾನದಲ್ಲಿ ರೂ.339.90 ಲಕ್ಷ ಅನುದಾನ ಆರಂಭ ಶಿಲ್ಕು ಇದ್ದರೂ ಸಹ 2016–17ನೇ ಸಾಲಿಗೆ ರೂ. 2772.29 ಲಕ್ಷ ಅನುದಾನಕ್ಕೆ ಬೇಡಿಕೆ ಸಲ್ಲಿಸಿ ಅನುದಾನವನ್ನು ಪಡೆಯಲಾಗಿದೆ. ಸದರಿ ಅನುದಾನದಲ್ಲಿ ದಿನಾಂಕ: 31.3.2017ರ ಅಂತ್ಯಕ್ಕೆ ರೂ. 2825.79 ಲಕ್ಷ ಮಾತ್ರ ವೆಚ್ಚ ಭರಿಸಿದ್ದು, ರೂ. 286.40 ಲಕ್ಷ ಅನುದಾನ ಬಾಕಿ ಇರುತ್ತದೆ. ಅನುದಾನದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದಾಗ ಆರಂಭ ಶಿಲ್ಕನ್ನು ಪರಿಗಣಿಸಿ ಬೇಡಿಕೆ ಸಲ್ಲಿಸತಕ್ಕದ್ದು. 2016–17ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನ ವೆಚ್ಚದ ವಿವರಣೆ ಹಾಗೂ ಉಳಿಕೆ ಅನುದಾನದ ವಿವರಗಳನ್ನು <u>ಅನುಬಂಧ–10ರಲ್ಲಿ</u> ಲಗತ್ತಿಸಿದೆ.</td><td>ಮಾರ್ಚ್‌ನಲ್ಲಿ ಉಳಿದಿರುವ ಅನುದಾನವನ್ನು ಎಪ್ರಿಲ್ ತಿಂಗಳಿನಲ್ಲಿ ಪಾವತಿಸಿರುವುದರಿಂದ ಮಾರ್ಚ್ ಅಂತ್ಯದಲ್ಲಿ ಉಳಿಕೆಯಾಗಿರುತ್ತದೆ.</td><td></td><td></td></tr>
<tr><td>24</td><td>06</td><td>ರಸೀದಿ ಪುಸ್ತಕಗಳ ಮುದ್ರಣ ಹಾಗೂ ವಿತರಣೆ ವಿವರಗಳು:<br>2016–17ನೇ ಸಾಲಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಹೆಸರಿನಲ್ಲಿ ಮುದ್ರಿಸಿದ ರಸೀದಿ ಪುಸ್ತಕಗಳು ಹಾಗೂ ಹಣ ಸಂದಾಯ ರಸೀದಿ ಪುಸ್ತಕಗಳು (ವೋಚರುಗಳು) ಮುದ್ರಿಸಿ, ದಾಸ್ತಾನು ವಹಿಯಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ ಹಾಗೂ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ ರಸೀದಿ ಪುಸ್ತಕಗಳನ್ನು ದಾಸ್ತಾನಿಗೆ ತೆಗೆದುಕೊಂಡು ಉಳಿಕೆ ರಸೀದಿ ಪುಸ್ತಕಗಳ ದಾಸ್ತಾನು ಭೌತಿಕ ಪರಿಶೀಲನೆಗೆ ಸಲ್ಲಿಸಲಾಗಿದೆ. ವಿವರ ಕೆಳಕಂಡಂತಿದೆ.
<table>
<tr><th rowspan="2">ಕ್ರ. ಸಂ.</th><th rowspan="2">ರಸೀದಿ ವಿವರ</th><th colspan="3">ಸಂಖ್ಯೆಗಳಲ್ಲಿ</th></tr>
<tr><th>ಆಖೈರು ಶಿಲ್ಕು</th><th>ಬಳಕೆ</th><th>ಉಳಿಕೆ</th></tr>
<tr><td>1.</td><td>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಹೆಸರಿನಲ್ಲಿ ಮುದ್ರಿಸಿದ ರಸೀದಿ ಪುಸ್ತಕಗಳು</td><td>77</td><td>28</td><td>49</td></tr>
<tr><td>2.</td><td>ಹಣಸಂದಾಯ ರಸೀದಿಗಳು</td><td>5</td><td></td><td>5</td></tr>
<tr><td>3.</td><td>ಕರ್ನಾಟಕ ಸಂಸ್ಕೃತ ನಿರ್ದೇಶನಾಲಯದ ಹೆಸರಿನಲ್ಲಿ ಮುದ್ರಿಸಲಾದ ರಸೀದಿಗಳು</td><td>88</td><td>88</td><td>–</td></tr>
</table></td><td></td><td></td><td></td></tr>
</table>

| | | | | | |
|---|---|---|---|---|---|
| 25 | 07 | **ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳ ವೆಚ್ಚ**<br>2016–17ನೇ ಸಾಲಿನ ಪರೀಕ್ಷಾ ಕಾರ್ಯಗಳ ಸಲುವಾಗಿ ಯು.ಜಿ.ಸಿ.ಯೇತರ ವೇತನ ಶ್ರೇಣಿಯ ಅಧ್ಯಾಪಕರುಗಳಿಗೆ ರೂ. 224972/– ಗಳ ಸಂಭಾವನೆ ಹಾಗೂ ಪ್ರಶ್ನೆಪತ್ರಿಕೆ ತಯಾರಿಕೆಗೆ ಸಂಬಂಧಿಸಿದಂತೆ ರೂ. 25040/– ಗಳ ಮೊತ್ತದ ದಿನಭತ್ಯೆ ಹಾಗೂ ಪ್ರಯಾಣ ಭತ್ಯೆಯನ್ನು ಪಾವತಿಸಲಾಗಿದೆ. | | | |
| 26 | 08 | **ಹೊರಗುತ್ತಿಗೆ ನೌಕರರ ಸೇವೆ**<br>ಮೆ: ಕಿಯೋನಿಕ್ಸ್ ಸಂಸ್ಥೆ, ಬೆಂಗಳೂರು ಇವರಿಂದ ಒಟ್ಟು 12 ಮಂದಿ ಹೊರಗುತ್ತಿಗೆ ನೌಕರರ ಸೇವೆಯನ್ನು ಪಡೆಯಲಾಗಿದ್ದು, 5/2016 ರಿಂದ 2/2017ರ ಮಾಹೆವರೆವಿಗೆ ಇವರ ವೇತನದ ಸಲುವಾಗಿ ಒಟ್ಟು ರೂ. 1780299/– ರಲ್ಲಿ ಟಿಡಿಎಸ್ ಮೊತ್ತ ರೂ. 35605/–ಗಳನ್ನು ಕಡಿತಗೊಳಿಸಿ ಉಳಿದಂತೆ ರೂ. 17,44,694/– ಮೊತ್ತವನ್ನು ಸಂಸ್ಥೆಗೆ ಪಾವತಿಸಲಾಗಿದೆ. ಸದರಿ ನೌಕರರ ಪಿಎಫ್ ಹಾಗೂ ಇಎಸ್ಐ ಪಾವತಿಯ ವಿವರಗಳನ್ನು ನೀಡಲು ವಿಚಾರಣೆ ಪತ್ರಸಂಖ್ಯೆ: 17/2017–18 ದಿ: 27.11.2017ರಲ್ಲಿ ಕೋರಿದ್ದು, ದಿನಾಂಕ: 8.12.2017ರಲ್ಲಿ ನೀಡಿರುವ ಮಾಹಿತಿಗಳಲ್ಲಿ ನೌಕರರ ಪಿಎಫ್ ಹಾಗೂ ಇಎಸ್ಐ ಪಾವತಿಯ ವಿವರಗಳನ್ನು ನೀಡಿರುತ್ತಾರೆ. 2016–17ನೇ ಸಾಲಿನಲ್ಲಿ ಹೊರಗುತ್ತಿಗೆ ನೌಕರರ ವೇತನದ ಸಲುವಾಗಿ ರೂ. 17,80,299/– ವೆಚ್ಚವನ್ನು ಭರಿಸಲಾಗಿದೆ. | | | |
| 27 | 09 | **ಯುಜಿಸಿಯೇತರ ಪ್ರಾಧ್ಯಾಪಕರುಗಳಿಗೆ ಪಾವತಿಸಲಾದ ಪರೀಕ್ಷಾ ಸಂಭಾವನೆ ಹಾಗೂ ಪ್ರಯಾಣಭತ್ಯೆ:**<br>ಪರೀಕ್ಷಾ ಕಾರ್ಯಗಳಲ್ಲಿ ಭಾಗವಹಿಸಿದ ಯುಜಿಸಿಯೇತರ ಅಧ್ಯಾಪಕರುಗಳಿಗೆ ಪ್ರಕಾಶನ ಸಮಿತಿಯ ಶಿಫಾರಸ್ಸುಗಳ ಅನ್ವಯ 2016–17ನೇ ಸಾಲಿನಲ್ಲಿ ಒಟ್ಟು ರೂ. 2,24,972/– ಸಂಭಾವನೆ ಹಾಗೂ ರೂ. 25,040/– ಪ್ರಯಾಣ ಭತ್ಯೆಯನ್ನು ಪಾವತಿಸಲಾಗಿದೆ. | | | |
| 28 | 10 | **ಅತಿಥಿ ಉಪನ್ಯಾಸಕರ ನೇಮಕಾತಿ ಹಾಗೂ ವೇತನ ಪಾವತಿಯ ವಿವರಗಳು:**<br>ಸರ್ಕಾರದ ಅಧೀನ ಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆ ಬೆಂಗಳೂರು ಇವರು ತಮ್ಮ ಕಛೇರಿಯ ಪತ್ರ ಸಂಖ್ಯೆ: ಇಡಿ/179/ಯುಬಿವಿ/2016. ದಿನಾಂಕ: 11.08.2018 ರ ಪತ್ರದಲ್ಲು ಅತಿಥಿ ಉಪನ್ಯಾಸಕರುಗಳನ್ನು ಯುಜಿಸಿ ಮಾನದಂಡಗಳ ಅನ್ವಯ ನೇಮಕ ಮಾಡಿಕೊಳ್ಳಲು | | | |

| | | | | | |
|---|---|---|---|---|---|
| | | ವಿಶ್ವವಿದ್ಯಾಲಯಗಳಿಗೆ ಅನುಮತಿಯನ್ನು ನೀಡಿರುತ್ತಾರೆ. ಅದರನ್ವಯ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ 2016–17 ನೇ ಸಾಲಿನಲ್ಲಿ ಅತಿಥಿ ಉಪನ್ಯಾಸಕರ ಸೇವೆಗಳ ಸಲುವಾಗಿ ಪಾವತಿಸಲಾದ ವಿವರಗಳು. | | | |

| ಕ್ರ. ಸಂ. | ಕಾಲೇಜಿನ ಹೆಸರು | 2016–17 ನೇ ಸಾಲಿನಲ್ಲಿ ಪಾವತಿಸಲಾದ ಮೊತ್ತ. |
|---|---|---|
| 1. | ಜಯಚಾಮರಾಜೇಂದ್ರ ಕಾಲೇಜು, ಬೆಂಗಳೂರು | 3,93,619.00 |
| 2. | ಶ್ರೀಮೇಧಾ ದಕ್ಷಿಣಮೂರ್ತಿ ವೇದ ಭವನ ಸಂಸ್ಕೃತ ಕಾಲೇಜು, ಗೋಕರ್ಣ. | 123932.00 |
| 3. | ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು. | 166660.00 |
| | ಒಟ್ಟು ಮೊತ್ತ | 6,94,211.00 |

| | | | | | |
|---|---|---|---|---|---|
| 29 | 11 | **ಉಪಯೋಗಿಸಲಾದ ಹಾಗೂ ರದ್ದುಪಡಿಸಿದ ಚೆಕ್ಕುಗಳ ವಿವರ :**<br>2016–17ನೇ ಸಾಲಿನಲ್ಲಿ ಉಪಯೋಗಿಸಲಾದ ಹಾಗೂ ರದ್ದುಪಡಿಸಲಾದ ಚೆಕ್ಕುಗಳ ವಿವರಗಳನ್ನು ***<u>ಅನುಬಂಧ–11ರಲ್ಲಿ</u>*** ಲಗತ್ತಿಸಲಾಗಿದೆ. | | | |
| 30 | 12 | **ಭಾಗಶ: ಪರಿಶೀಲಿಸಿದ ರಸೀದಿ ಪುಸ್ತಕಗಳ ವಿವರ:**<br>2016–17ನೇ ಸಾಲಿನಲ್ಲಿ ಕೆಲವೊಂದು ರಸೀದಿ ಪುಸ್ತಕಗಳನ್ನು ಭಾಗಶಃ ಉಪಯೋಗಿಸಲಾಗಿದ್ದು, ಸದರಿ ರಸೀದಿ ಪುಸ್ತಕಗಳನ್ನು ಮುಂದಿನ ಲೆಕ್ಕತನಿಖೆಗೆ ಹಾಜರುಪಡಿಸಲು ಸೂಚಿಸಿದೆ. ವಿವರ ಕೆಳಕಂಡಂತಿವೆ. | | | |

| ಕ್ರ. ಸಂ. | ರಸೀದಿ ಪುಸ್ತಕ ಸಂಖ್ಯೆ | ರಸೀದಿ ಸಂಖ್ಯೆ & ದಿನಾಂಕ | | ಷರಾ |
|---|---|---|---|---|
| | | ಇಂದ | ವರೆಗೆ | |
| 1. | 013 | 1203/4.4.16 | 1264/20.9.16 | ಜ್ಯೋತಿಷ್ಯ ಶಾಸ್ತ್ರದ ಮಾನ್ಯತಾ ಶುಲ್ಕ, ವಾರ್ಷಿಕ ಶುಲ್ಕ & ಪರೀಕ್ಷಾ ಶುಲ್ಕ |
| 2. | 015 | 1408/1.4.16 | 1473/7.11.16 | ಕಾಲೇಜು & ಪಾಠಶಾಲೆ ವಿಭಾಗದ ಕ್ರೋಢೀಕೃತ ಅಂಕಪಟ್ಟಿ & ತಿದ್ದುಪಡಿ ಶುಲ್ಕ |
| 3. | 088 | 4351/24.11.16 | 4381/31.3.17 | ಕಾಲೇಜುಗಳ ಕ್ರೋಢೀಕೃತ ಅಂಕಪಟ್ಟಿ |

| | | | | |
|---|---|---|---|---|
| | | | | ತಿದ್ದುಪಡಿ, ವಲಸೆ ಪ್ರಮಾಣಪತ್ರ, ತಾತ್ಕಾಲಿಕ ಪದವಿ ಪ್ರಮಾಣಪತ್ರದ ಶುಲ್ಕ |
| 4. | 091 | 4501/24.11.16 | 4504/8.3.17 | ಸಾಹಿತ್ಯ ಪ್ರಸಿದ್ಧ ಪರೀಕ್ಷೆಯ ಕ್ರೋಢೀಕೃತ ಅಂಕಪಟ್ಟಿ ಶುಲ್ಕ |
| 5. | 018 | 1701/11.8.16 | 1732/20.1.17 | ಬಿಎ & ಎಂಎ ಪ್ರವೇಶಾತಿ ಶುಲ್ಕ |
| 6. | 019 | 1801/14.12.16 | 1893/31.3.17 | ಮಾನ್ಯತೆ ನವೀಕರಣ ಹಾಗೂ ಪ್ರವೇಶಾತಿ ಶುಲ್ಕ |
| 7. | 091 | 4501/27.9.16 | 4504/8.3.17 | ಪಾಠಶಾಲೆಯ ಕ್ರೋಢೀಕೃತ ಮತ್ತು ತಿದ್ದುಪಡಿ ಡಿಡಿಗಳ ವಿವರ |
| 8. | 96 | 4751/20.12.16 | 4793/24.3.17 | ಪಾಠಶಾಲೆಯ ಪರೀಕ್ಷಾ ಶುಲ್ಕದ ಡಿಡಿಗಳ ವಿವರ |
| 9. | 20 | 1901/30.8.16 | 1942/23.3.17 | ಪಠ್ಯಪುಸ್ತಕಗಳ ಮಾರಾಟ |
| 10. | 97 | 4801/26.12.16 | 4808/15.3.17 | ಪಾಠಶಾಲೆ ಪುಸ್ತಕ |

**31** **13**

**14. ಸಾಮಾನ್ಯ ಅಭಿಪ್ರಾಯ:**

- ಲೆಕ್ಕಪತ್ರಗಳ ದಾಖಲೆಗಳ ನಿರ್ವಹಣೆಯಲ್ಲಿ ಸುಧಾರಣೆ ಅಗತ್ಯವಾಗಿರುತ್ತದೆ. ಲೆಕ್ಕ ಪತ್ರಗಳ ದಾಖಲೆಗಳನ್ನು ಕೆ.ಎಫ್.ಸಿ., ಎಂ.ಸಿ.ಇ., ಸ್ಟೋರ್ಸ್ ಮ್ಯಾನೂಯಲ್ ಪ್ರಕಾರ ನಿರ್ವಹಿಸಲು ಸೂಚಿಸಿದೆ. ದಾಸ್ತಾನು ವಿತರಣೆ ನಿರ್ವಹಣೆ ಸಮರ್ಪಕವಾಗಿರುವುದಿಲ್ಲ.
- ಲೆಕ್ಕಪತ್ರ ಸ್ವೀಕೃತಿ ಪಾವತಿಗಳ ಆಧಾರದ ಮೇಲೆ ನಿರ್ವಹಿಸುವುದು ಅಗತ್ಯವಾಗಿರುತ್ತದೆ. ರಾಜಸ್ವ ಸ್ವೀಕೃತಿಗೆ ಸಂಬಂಧಿಸಿದಂತೆ ಡಿ.ಸಿ.ಬಿ.ಯನ್ನು ನಿರ್ವಹಿಸಿರುವುದಿಲ್ಲವಾದ್ದರಿಂದ, ಡಿ.ಸಿ.ಬಿ.ಯನ್ನು ನಿರ್ವಹಿಸಲು ಸೂಚಿಸಿದೆ.
- ಲೆಕ್ಕಪತ್ರ ಸ್ವೀಕೃತಿ ಪಾವತಿಗಳ ಆಧಾರದ ಮೇಲೆ ನಿರ್ವಹಿಸುವುದು ಅಗತ್ಯವಾಗಿರುತ್ತದೆ. ರಾಜಸ್ವ ಸ್ವೀಕೃತಿಗೆ ಸಂಬಂಧಿಸಿದಂತೆ ಡಿ.ಸಿ.ಬಿ.ಯನ್ನು ನಿರ್ವಹಿಸಿರುವುದಿಲ್ಲವಾದ್ದರಿಂದ, ಡಿ.ಸಿ.ಬಿ.ಯನ್ನು ನಿರ್ವಹಿಸಲು ಸೂಚಿಸಿದೆ.
- ಸೇವಾ ವಹಿಗಳನ್ನು ನಿರ್ವಹಿಸುವ ಸಂಬಂಧ ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಪಾಲಿಸಲು ಸೂಚಿಸಲಾದ ನಿರ್ದೇಶನಗಳನ್ನು ಪಾಲಿಸುವುದು.
- ಓಚರ್‌ಗಳ ನಿರ್ವಹಣೆ: ವಿತ್ತಾಧಿಕಾರಿಗಳ ಶಾಖೆಗೆ ಪಾವತಿಗಾಗಿ ಸ್ವೀಕರಿಸಲಾದ ಓಚರ್‌ಗಳಲ್ಲಿ

| | | | | | |
|---|---|---|---|---|---|
| | | ಮೂಲ ಓಚರ್‌ನ್ನು ವಿತ್ತಾಧಿಕಾರಿಗಳ ಶಾಖೆಯಲ್ಲಿಯೂ ಇಡತಕ್ಕದ್ದು. ಒಂದು ಓಚರ್ ಪ್ರತಿಯನ್ನು ಕಡತದೊಂದಿಗೆ ಸಂಬಂಧಪಟ್ಟ ಶಾಖೆಗೆ ಹಿಂದಿರುಗಿಸತಕ್ಕದ್ದು. ಪಾವತಿಸಲಾದ ಓಚರ್‌ಗಳಿಗೆ ಓಚರ್ ಸಂಖ್ಯೆ ನೀಡತಕ್ಕದ್ದು ಹಾಗೂ ಪ್ರತಿ ತಿಂಗಳ ಅಂತ್ಯದವರೆಗೆ ಪಾವತಿಸಲಾದ ಎಲ್ಲಾ ಓಚರ್‌ಗಳನ್ನು ಕ್ರೋಢೀಕರಿಸಿ ಓಚರ್ ಬಂಡಲ್ ತಯಾರಿಸಿ ವಿತ್ತಾಧಿಕಾರಿಗಳ ಶಾಖೆಯಲ್ಲಿಯೇ ಇಡತಕ್ಕದ್ದು.<br>➢ ನಗದು ಪುಸ್ತಕವನ್ನು ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 328 ರಿಂದ 331ರ ರೀತ್ಯಾ ನಿರ್ವಹಿಸತಕ್ಕದ್ದು.<br>➢ ಟೆಂಡರ್ ಕಡತಗಳಲ್ಲಿ ಎಲ್ಲಾ ಅವಶ್ಯ ಮಾಹಿತಿಗಳನ್ನು ಇಡತಕ್ಕದ್ದು. ತಾಂತ್ರಿಕ ಬಿಡ್‌ಗೆ ಸಂಬಂಧಿಸಿದಂತೆ ಚೆಕ್‌ಲಿಸ್ಟ್, ಪ್ರೋಸಿಡಿಂಗ್ಸ್ ಹಾಗೂ ಹಣಕಾಸು ಬಿಡ್‌ಗೆ ಸಂಬಂಧಿಸಿದಂತೆ ತುಲನಾತ್ಮಕ ಪಟ್ಟಿ, ಪ್ರೋಸಿಡಿಂಗ್ಸ್ ಹಾಗೂ ಸೇವೆಗಳು/ಸರಬರಾಜಿಗೆ ಸಂಬಂಧಿಸಿದ ಕರಾರಿನಲ್ಲಿ ಎಲ್ಲಾ ಅವಶ್ಯ ಮಾಹಿತಿಗಳನ್ನು ಕಡ್ಡಾಯವಾಗಿ ಇಡತಕ್ಕದ್ದು.<br>➢ ಕೊಟೇಶನ್ ತೆರೆಯುವ ಸಂಬಂಧಪಟ್ಟ ಲಕೋಟೆ ಮೇಲೆ "Opened by me" ಎಂದು ನಮೂದಿಸಿ, ದೃಢೀಕರಿಸತಕ್ಕದ್ದು.<br>➢ ನೇಮಕಾತಿ ಶುಲ್ಕ, ನೋಂದಣಿ ಶುಲ್ಕ ಹಾಗೂ ಪರೀಕ್ಷಾ ಶುಲ್ಕಕ್ಕೆ ಸಂಬಂಧಿಸಿದಂತೆ ಡಿ.ಸಿ.ಬಿ ರಿಜಿಸ್ಟರ್ ನಿರ್ವಹಿಸತಕ್ಕದ್ದು.<br>➢ ಪ್ರಶ್ನೆಪತ್ರಿಕೆ ಮುದ್ರಣ ಕಾರ್ಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಅನುಮತಿಯೊಂದಿಗೆ (4ಜಿ ವಿನಾಯಿತಿ) ಗೌಪ್ಯತೆ ಕಾಪಾಡತಕ್ಕದ್ದು.<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮ 2009 ಕಲಂ (39) ರಲ್ಲಿ ತಿಳಿಸಿರುವಂತೆ, ನಿಧಿಯ ಬಳಕೆಯ ಉದ್ದೇಶಗಳಲ್ಲಿ ಸ್ಪಷ್ಟತೆ ತರಲು ಅಗತ್ಯವಾದ ಪರಿನಿಯಮಗಳನ್ನು ರಚಿಸಿಕೊಳ್ಳುವ ಅವಶ್ಯವಿದೆ.ಸರ್ಕಾರದಿಂದ ಬಿಡುಗಡೆಯಾದ ಅನುದಾನಗಳನ್ನು ಉದ್ದೇಶಿತ ಕಾರ್ಯಗಳಿಗೆ ಸಮರ್ಪಕವಾಗಿ ಬಳಸಿಕೊಳ್ಳುವುದು. | | | |

**-sd/-**
**ಅಪರ ನಿರ್ದೇಶಕರು,**
**ಬೆಂಗಳೂರು ಪ್ರಾಂತೀಯ ಕಛೇರಿ,**
<td>ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ, ಪ್ರವರ್ಗ–1 ರ ವಿದ್ಯಾರ್ಥಿಗಳಿಗೆ ವಿತರಣೆ ಆಗದೇ ಉಳಿದ ಉಚಿತ ಪಠ್ಯಪುಸ್ತಕಗಳ ಮೊತ್ತ ರೂ. 5,88,103/–ಗಳ ಆಕ್ಷೇಪಣೆ<br>2017–18ನೇ ಸಾಲಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ರಾಜ್ಯ ಅನುದಾನಿತ ಸಂಸ್ಕೃತ ಪಾಠಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಪ್ರವರ್ಗ–1 ರ ಒಟ್ಟು 9,951 ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತದ ವಿತರಿಸುವ ಸಲುವಾಗಿ ಪ್ರಶಾಸನ ಸಮಿತಿಯ ಅನುಮೋದನೆಯಂತೆ ತರಗತಿವಾರು ವಿವರಗಳಿಗನುಸಾರವಾಗಿ ಮಾಹಿತಿ ನಿರ್ದೇಶಕರಿಂದ ರೂ. 6,26,743/– ಬಂದಿದ್ದು, ಚೆಕ್ ಸಂಖ್ಯೆ: 172495/ 22.11.2017 ರಂತೆ ಪ್ರಸಾರಾಂಗ ಖಾತೆಗೆ ಹಣ ವರ್ಗಾಯಿಸಲಾಗಿದೆ. ಆದರೆ ಈವರೆಗೆ ಕೆಲವು ವಿದ್ಯಾರ್ಥಿಗಳಿಗೆ ಮಾತ್ರ ರೂ. 38,640/– ಗಳ ಮೌಲ್ಯದ ಪಠ್ಯಪುಸ್ತಕಗಳನ್ನು ವಿತರಿಸಿದ್ದು, ಈ ಕುರಿತು ವಿಚಾರಿಸಲಾಗಿ ಜಾತಿ ಪ್ರಮಾಣ ಪತ್ರ ಪಡೆದುಕೊಂಡು ವಿತರಿಸುವುದಾಗಿ ತಿಳಿಸಿರುತ್ತಾರೆ. 2017–18ನೇ ಶೈಕ್ಷಣಿಕ ಸಾಲಿನಲ್ಲಿಯೇ ವಿತರಿಸಬೇಕಿದ್ದ ಪುಸ್ತಕಗಳನ್ನು ಈವರೆಗೂ ವಿತರಿಸದೇ ಉಳಿಸಿಕೊಳ್ಳಲಾಗಿದೆ. ಇದರಿಂದ ವಿಶ್ವವಿದ್ಯಾಲಯಕ್ಕೆ ಹಾಗೂ ವಿದ್ಯಾರ್ಥಿಗಳಿಗೆ ನಷ್ಟವಾಗಿರುತ್ತದೆ. ಅಲ್ಲದೆ, ಮುಂದಿನ ಶೈಕ್ಷಣಿಕ ಸಾಲಿನ</td>
<td>2019–20ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ವಿತರಣೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.</td>
<td></td>
<td></td>
</tr>
</table>

| | | | | | |
|---|---|---|---|---|---|
| | | ಪಠ್ಯಕ್ರಮ ಬದಲಾವಣೆಯಾದಲ್ಲಿ ಪುಸ್ತಕಗಳು ಅನುಪಯುಕ್ತವಾಗುತ್ತದೆ ಮತ್ತು ಮುದ್ರಣ ವೆಚ್ಚವು ನಷ್ಟವಾಗುತ್ತದೆ. ಆದ ಕಾರಣ ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ವಿಶ್ವವಿದ್ಯಾಲಯವು ಪುಸ್ತಕಗಳ ವಿತರಣೆಗೆ ಸೂಕ್ತ ಕ್ರಮಕೈಗೊಳ್ಳಬೇಕಿತ್ತು. ಆದರೆ ಈವರೆಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಇದಕ್ಕೆ ಸೂಕ್ತ ಕ್ರಮ ಕೈಗೊಂಡು ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವವರೆಗೆ ಉಳಿಕೆ ಪುಸ್ತಕಗಳ ಮೊತ್ತ **ರೂ.5,88,103/–**ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು **ಅನುಬಂಧ–10** ರಲ್ಲಿ ತೋರಿಸಲಾಗಿದೆ. | | | |
| **15** | **15** | **ವೇತನ**<br>**ಅ) ಗಳಿಕೆ ರಜೆ ನಗದೀಕರಣದ ಮೊತ್ತ ರೂ. 55,676/– ವಸೂಲಾತಿ**<br>ಕೆ.ಸಿ.ಎಸ್.ಆರ್ ನಿಯಮ 118ರನ್ವಯ ರಜಾ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುವ ಸರ್ಕಾರಿ ನೌಕರರಿಗೆ/ಬೋಧಕರಿಗೆ ಗಳಿಕೆ ರಜೆ ನಗದೀಕರಣಕ್ಕೆ ಅವಕಾಶವಿಲ್ಲದಿದ್ದರೂ ಸಹ ಪ್ರೊ॥ ವಿ. ಗಿರೀಶ್‌ಚಂದ್ರ ಇವರಿಗೆ ಚೆಕ್ 497352 ದಿನಾಂಕ: 21.07.2017ರ ಮೂಲಕ ರೂ. 55676/– ಗಳನ್ನು ಗಳಿಕೆ ರಜೆ ನಗದೀಕರಣಕ್ಕಾಗಿ ಪಾವತಿಸಲಾಗಿದೆ. ಆದ್ದರಿಂದ **ರೂ. 55,676/–** ಗಳನ್ನು ವಸೂಲಾತಿಗಿಡಲಾಗಿದೆ.<br>**ಆ) ಶಾಂಡಿಲ್ಯ ಸಾಫ್ಟೆಕ್ ಪ್ರೈ.ಲಿ ನವರಿಗೆ ಪಾವತಿಸಿರುವ ಮೊತ್ತ ರೂ. 3,63,822/– ಆಕ್ಷೇಪಣೆ**<br>2017–18ನೇ ಸಾಲಿನಲ್ಲಿ ಸಂಸ್ಕೃತ ವಿಶ್ವವಿದ್ಯಾಲಯವು ಶಾಂಡಿಲ್ಯ ಸಾಫ್ಟೆಕ್ ಪ್ರೈ.ಲಿ ನವರಿಗೆ ಚಾರ್ಟೆಡ್ ಅಕೌಂಟರನ್ನು ಹೊರಗುತ್ತಿಗೆ ಪಡೆದಿದ್ದಕ್ಕೆ ರೂ.3,63,822/–(352800 ವೇತನ + 11,022/– ಆದಾಯ ತೆರಿಗೆ ಸೇರಿ)ಗಳನ್ನು ಪಾವತಿಸಿರುತ್ತಾರೆ. ಈ ಕುರಿತು ದಿ:13.08.2018 ರಂದು ನೀಡಲಾದ ವಿಚಾರಣ ಪತ್ರ ಸಂಖ್ಯೆ–27/2017–18 ನ್ನು ನೀಡಲಾಗಿದ್ದು, ದಿ:16.08.2018 ರಂದು ಅನುಸರಣೆಯನ್ನು ಸಲ್ಲಿಸಿರುತ್ತಾರೆ. ಆದರೆ ಅನುಸರಣೆಯಲ್ಲಿ ಹೊರಗುತ್ತಿಗೆ ಪಡೆದಿದಕ್ಕೆ ನೀಡಲಾಗಿರುವ ವಿವರಗಳು ಸಮಂಜಸವಾಗಿರುವುದಿಲ್ಲ. 2018–19 ನೇ ಸಾಲಿಗೆ ಸಂಬಂಧಿಸಿದ ಟೆಂಡರ್‌ನ ವಿವರಗಳನ್ನು ಒದಗಿಸಿದ್ದು, 13.05.2018 ರಂದು ಟೆಂಡರ್ ಕರೆದಿರುತ್ತಾರೆ. ಹಾಗೂ ದಿ:11.06.2018 ರಂದು ದಿ:01.06.2018 ರಿಂದ ಪೂರ್ವಾನ್ವಯವಾಗುವಂತೆ 1 ವರ್ಷ ಅಂದರೆ 31.05.2019 ರವರೆಗೆ ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ. ಆದರೆ ಇದು 2017–18ರ ಸಾಲಿಗೆ ಸಂಬಂಧಿಸಿದ ಟೆಂಡರ್ ಆಗಿಲ್ಲದಿರುವುದರಿಂದ **ರೂ.3,63,822/–** ಗಳನ್ನು ಆಕ್ಷೇಪಣೆಗಿಡಲಾಗಿದೆ. | **ಇವರು ರಜಾ ಅವಧಿಯಲ್ಲಿ (Non vacation) ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಗಳಿಕೆರಜೆ ನಗದೀಕರಣ ಪಾವತಿಸಲಾಗಿದೆ.**<br><br>**2018–19 ನೇ ಸಾಲಿನಲ್ಲಿ ಮ್ಯಾನುಯಲ್ ಟೆಂಡರ್ ಮೂಲಕ ಕ್ರಮ ವಹಿಸಲಾಗಿದೆ.** | | |

| | | | | | |
|---|---|---|---|---|---|
| | | **ಇ) ಗೃಹ ಪರಿಚಾರಿಕೆ ಭತ್ಯೆ ಮೊತ್ತ ರೂ.72,000/– ವಸೂಲಾತಿ:**<br>ಗೃಹ ಪರಿಚಾರಿಕೆಗಾಗಿ ಮಾನ್ಯ ಕುಲಪತಿಯವರಿಗೆ ಮಾತ್ರ ಪಾವತಿಸಲು ಅವಕಾಶವಿರುತ್ತದೆ. ಆದರೆ, 2017–18ನೇ ಸಾಲಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಕುಲಸಚಿವರಿಗೆ ಹಾಗೂ ಆರ್ಥಿಕ ಅಧಿಕಾರಿಗಳಿಗೂ ಸಹ ಮಾಸಿಕವಾಗಿ ತಲಾ ರೂ. 3,000/– ಗಳಂತೆ ಪಾವತಿಸಲಾಗಿದೆ. ಇದು ನಿಯಮ ಬಾಹಿರವಾಗಿರುವುದರಿಂದ ಒಟ್ಟು **ರೂ.72,000/–** ಗಳನ್ನು ವಸೂಲಾತಿಗಿಡಲಾಗಿದೆ. | **ಈ ಬಗ್ಗೆ ಪರಿನಿಯಮವನ್ನು ರಚಿಸಲು ಕ್ರಮ ಕೈಗೊಳ್ಳಲಾಗಿದೆ.** | | |
| 16 | 16 | **ಪ್ರಯಾಣ ಭತ್ಯೆ:**<br>**ಅ) ಪರೀಕ್ಷಾ ಸಂಬಂಧಿ ಪ್ರವಾಸ ಭತ್ಯೆ/ದಿನ ಭತ್ಯೆ & ಗೌರವ ಸಂಭಾವನೆ ಮೊತ್ತ ರೂ. 15,49,903/– ಆಕ್ಷೇಪಣೆ**<br>2017–18ನೇ ಸಾಲಿನಲ್ಲಿ ಪರೀಕ್ಷಾ ಸಂಬಂಧಿ ಕಾರ್ಯಗಳಿಗೆ ಸಂಬಂಧಿಸದ ಪ್ರಯಾಣ ಭತ್ಯೆ/ದಿನ ಭತ್ಯೆ & ಗೌರವ ಸಂಭಾವನೆಯಾಗಿ ರೂ. 15,49,903/– ಗಳನ್ನು ಪಾವತಿಸಲಾಗಿದೆ. ಪ್ರಯಾಣ ಭತ್ಯೆ ಪಡೆಯಲು ಬಸ್ ಟಿಕೆಟ್/ರೈಲು ಟಿಕೆಟ್ & ದಿನ ಭತ್ಯೆ ಪಡೆಯಲು ವೇತನ ಪ್ರಮಾಣಪತ್ರ ಕಡ್ಡಾಯವೆಂದು ವಿಶ್ವವಿದ್ಯಾಲಯದ ಆದೇಶ ಪತ್ರದಲ್ಲಿ ನಮೂದಿಸಿದ್ದರೂ ಸಹ ಈ ಆದೇಶವನ್ನು ಪಾಲಿಸದೆ ಟಿಎ/ಡಿಎ & ಗೌರವ ಸಂಭಾವನೆಯನ್ನು ನೀಡಲಾಗಿದೆ. ಆದ್ದರಿಂದ ಇದಕ್ಕೆ ಸೂಕ್ತ ಸ್ಪಷ್ಟೀಕರಣ ನೀಡುವವರೆಗೆ ರೂ.15,49,903/–ಗಳನ್ನು ಆಕ್ಷೇಪಣೆಗಿಡಲಾಗಿದೆ.<br>**ಆ) ವಲಯ ಸಂಯೋಜಕರಿಗೆ ಪಾವತಿಸಿರುವ ಪ್ರಯಾಣ ಭತ್ಯೆ ರೂ.68,982/– ಆಕ್ಷೇಪಣೆ**<br>2017–18 ನೇ ಸಾಲಿನಲ್ಲಿ ವಲಯ ಸಂಯೋಜಕರು ಮತ್ತು ವಿಷಯ ಪರಿವೀಕ್ಷಕರ (ಒಟ್ಟು 12 ಜನ) ಪ್ರಯಾಣ ಭತ್ಯೆಗಾಗಿ ಒಟ್ಟು ರೂ. 68,982/– ಗಳನ್ನು ಪಾವತಿಸಲಾಗಿದೆ. ಇದಕ್ಕೆ ಸಂಬಂಧಪಟ್ಟವರು ಸಲ್ಲಿಸಿರುವ ಪ್ರಮಾಣ ಭತ್ಯೆ ಬಿಲ್ಲುಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿದೆ:<br>• ಅಧಿಕಾರಿ/ ನೌಕರರ ಮೂಲ ವೇತನ ನಮೂದಿಸಿರುವುದಿಲ್ಲ.<br>• ದಿನಾಂಕವಾರು ತಯಾರಿಸಿರುವುದಿಲ್ಲ.<br>• ಒಂದೊಂದು ಮಾಹೆಗೆ ಒಂದೊಂದು ಬಿಲ್ಲನ್ನು ತಯಾರಿಸಬೇಕು, ಆದರೆ ಎಲ್ಲಾ ಮಾಹೆಗಳ ಬಿಲ್ಲನ್ನು ಒಂದೇ ಬಿಲ್ಲಿನಲ್ಲಿ ತಯಾರಿಸಲಾಗಿದೆ. | **ಈ ಬಗ್ಗೆ ಮುಂದಿನ ದಿನಗಳಲ್ಲಿ ಸರಿಪಡಿಸಿ ಕೊಳ್ಳಲಾಗುವುದು.**<br><br>**ಈ ಬಗ್ಗೆ ಮುಂದಿನ ದಿನಗಳಲ್ಲಿ ಸರಿಪಡಿಸಿ ಕೊಳ್ಳಲಾಗುವುದು.** | | |

| | | | | | |
|---|---|---|---|---|---|
| | | • ಎಲ್ಲಿಂದ ಎಲ್ಲಿಗೆ, ಹಾಗೂ ಎಷ್ಟು ಕಿ.ಮೀ ನಮೂದಿಸಿರುವುದಿಲ್ಲ.<br>• ಪ್ರಯಾಣಿಸಿದ ವಿಧಾನ (ರೈಲು/ಬಸ್/ಕಾರು) ತಿಳಿದುಬರುತ್ತಿಲ್ಲ.<br>• ಯಾವ ಉದ್ದೇಶಕ್ಕಾಗಿ ಪ್ರಯಾಣಿಸಿರುವುದೆಂದು ತಿಳಿದುಬರುತ್ತಿಲ್ಲ.<br>• ಪ್ರಮಾಣ ಪತ್ರಗಳನ್ನು ನಮೂದಿಸಿರುವುದಿಲ್ಲ.<br>ಆದ್ದರಿಂದ, **ರೂ.68,982/–** ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. | | | |
| **17** | **17** | **ವೈದ್ಯಕೀಯ ವೆಚ್ಚ ಮರುಪಾವತಿ ಮೊತ್ತ ರೂ.43,370/– ವಸೂಲಾತಿ (ರೂ.4,840+38,530)**<br>(ಅ) ಶ್ರೀಮತಿ ಶಿಲ್ಪ, ಕುಲಸಚಿವರಾಗಿ ಹೆಚ್ಚಿನ ಪ್ರಭಾರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ತಮ್ಮ ವೇತನವನ್ನು ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಪಡೆಯುತ್ತಿದ್ದಾರೆ. ನಿಯಮಾನುಸಾರ ಯಾವುದೇ ಅಧಿಕಾರಿ/ನೌಕರರು ಎಲ್ಲಿ ವೇತನ ಪಡೆಯುತ್ತಿರುತ್ತಾರೋ, ಅಲ್ಲಿಯೇ ವೈದ್ಯಕೀಯ ವೆಚ್ಚ ಮರುಪಾವತಿಯನ್ನು ಪಡೆಯಬೇಕಾಗಿರುತ್ತದೆ. ಆದ್ದರಿಂದ **ರೂ. 4,840/–** ಗಳನ್ನು ಶ್ರೀಮತಿ ಶಿಲ್ಪ, ಕುಲಸಚಿವರಿಂದ ವಸೂಲಾತಿಗಿಡಲಾಗಿದೆ.<br>(ಆ) ಮಾನ್ಯ ಕುಲಪತಿಯವರಿಗೆ 2017–18ನೇ ಸಾಲಿನಲ್ಲಿ ಒಟ್ಟು ವೈದ್ಯಕೀಯ ವೆಚ್ಚ ಮರುಪಾವತಿಗಾಗಿ ರೂ. 38,530/– ಗಳನ್ನು ಪಾವತಿಸಲಾಗಿದೆ. ಆದರೆ, ಸಂಬಂಧಪಟ್ಟ ಬಿಲ್ಲುಗಳನ್ನು ಪರಿಶೀಲಿಸಿದಾಗ ಯಾವ ಕಾಯಿಲೆಗಾಗಿ ವೆಚ್ಚ ಭರಿಸಿರುತ್ತಾರೆ ಹಾಗೂ ಬಿಲ್ಲಿನಲ್ಲಿರುವ ಯಾವುದೇ ರಶೀದಿಗಳಿಗೆ ವೈದ್ಯರ ಚೀಟಿ ಇರುವುದಿಲ್ಲ ಮತ್ತು ಎಷ್ಟು ಅವಧಿ ಎಂದು ಸಹ ತಿಳಿದುಬಂದಿರುವುದಿಲ್ಲ. ಒಂದೇ ತಿಂಗಳಲ್ಲಿ (ಮೇ–2017) 2 ಬಿಲ್ಲನ್ನು ಸಲ್ಲಿಸಿರುತ್ತಾರೆ. ಆದ್ದರಿಂದ **ರೂ.38,530/–** ಗಳನ್ನು ವಸೂಲಾತಿಗಿಡಲಾಗಿದೆ. | **(ಅ) ಇವರು ಕಾಲೇಜು ಶಿಕ್ಷಣ ಇಲಾಖೆಯಲ್ಲಿ ವೈದ್ಯಕೀಯ ವೆಚ್ಚವನ್ನು ಪಡೆಯದಿರುವುದಕ್ಕೆ ದೃಢೀಕರಣ ನೀಡಿರುತ್ತಾರೆ. ಆದ್ದರಿಂದ ವಿಶ್ವವಿದ್ಯಾಲಯದಿಂದ ಭರಿಸಲಾಗಿದೆ.<br>(ಆ) ಇವರು ಹೃದಯ ಸಂಬಂಧಿ ಖಾಯಿಲೆ ಮತ್ತು ಡಯಾಬಿಟಿಸ್ ಹೊಂದಿದ್ದರಿಂದ ಹಿಂದಿನಂತೆ ಪುನರಾವರ್ತನೆ ಆಗಿದೆ.** | | |
| **18** | **18** | **ಬ್ಯಾಂಕ್ ಪಾಸ್‌ಶೀಟ್‌ನಲ್ಲಿ ನಮೂದಾಗದಿರುವ ಡಿ.ಡಿ ಗಳ ಮೊತ್ತ ರೂ. 23,975/– ಆಕ್ಷೇಪಣೆ:**<br>2017–18ನೇ ಸಾಲಿಗೆ ಸಂಬಂಧಿಸಿದಂತೆ ರಸೀದಿ ಪುಸ್ತಕಗಳಲ್ಲಿರುವಂತೆ ವಸೂಲಿಸಲಾದ ರೂ. 23,975/– ಮೊತ್ತದ ಕೆಲವು ಡಿ.ಡಿಗಳು ಬ್ಯಾಂಕ್ ಪಾಸ್‌ಶೀಟ್‌ನ್ಲಲಿ ನಮೂದಾಗಿರುವುದಿಲ್ಲ. ಆದ್ದರಿಂದ ಇದಕ್ಕೆ ಸೂಕ್ತ ಮಾಹಿತಿ ಒದಗಿಸುವವರೆಗೆ **ರೂ.23,975/–** ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು **ಅನುಬಂಧ–11** ರಲ್ಲಿ ತೋರಿಸಲಾಗಿದೆ. | **ಈ ಬಗ್ಗೆ ಬ್ಯಾಂಕ್‌ನೊಂದಿಗೆ ವ್ಯವಹರಿಸಿ ಕ್ರಮ ವಹಿಸಲಾಗುತ್ತಿದೆ.** | | |

<table>
<tr>
<td>19</td>
<td>19</td>
<td>

**ಕೆ.ಟಿ.ಪಿ.ಪಿ ನಿಯಮದ ಉಲ್ಲಂಘನೆ:**

ಕೆ.ಟಿ.ಪಿ.ಪಿ ನಿಯಮಗಳ ಅನುಸಾರ ರೂ. 1,00,000/–ಕ್ಕೂ ಮೇಲ್ಪಟ್ಟ ಖರೀದಿಗೆ ಟೆಂಡರ್ ಕರೆಯುವುದು ಕಡ್ಡಾಯವಾಗಿರುತ್ತದೆ. ಟೆಂಡರ್/ದರಪಟ್ಟಿ ಕರೆಯುವುದನ್ನು ತಪ್ಪಿಸಲು ಬಿಲ್‌ಗಳನ್ನು ವರ್ಗೀಕರಸಲಾಗಿದೆ.

**ಅ) ಟೆಂಡರ್ ಕರೆಯದೆ ಖರೀದಿ ಮಾಡಿರುವ ಮೊತ್ತ ರೂ. 6,17,625/– ಆಕ್ಷೇಪಣೆ**

<table>
<tr><th>ಕ್ರ. ಸಂ</th><th>ಸಂಸ್ಥೆಯ ಹೆಸರು</th><th>ಬಿಲ್ ಸಂ. & ದಿನಾಂಕ</th><th>ಚೆಕ್ ಸಂ. & ದಿನಾಂಕ</th><th>ಮೊತ್ತ</th><th>ಷರಾ/ಉದ್ದೇಶ</th></tr>
<tr><td>1.</td><td>ಗಣೇಶ್ ಜುವೆಲರ್ಸ್</td><td>ಬಿಲ್ ಸಂ. ಇಲ್ಲ</td><td>211296/ 28.06.2017</td><td>1,08,596.00</td><td>ರೂ.92,884/– & ರೂ.15,712/– ಗಳ ಮೊತ್ತದ 3 ಬಿಲ್‌ಗಳಲ್ಲಿಯೂ ಬಿಲ್ ಸಂ. & ದಿನಾಂಕ ನಮೂದಾಗಿರುವುದಿಲ್ಲ.<br>ಪಂಚಮ ದೀಕ್ಷಾಂತ ಘಟಕೋತ್ಸವಕ್ಕೆ ಒಟ್ಟು 14 ಚಿನ್ನ & ಬೆಳ್ಳಿ ಪದಕಗಳ ಖರೀದಿಸಲು (30.8 ಗ್ರಾಂ ಚಿನ್ನ & 161 ಗ್ರಾಂ ಬೆಳ್ಳಿ)</td></tr>
<tr><td rowspan="2">2.</td><td rowspan="2">ಜಯಲಕ್ಷ್ಮಿ ಜುವೆಲರ್ಸ್</td><td>157/ 05.03.2018</td><td rowspan="2">832834/ 26.03.2018</td><td rowspan="2">2,23,580.00</td><td rowspan="2">(ರೂ.41,107 & ರೂ.1,82,473) ಷಷ್ಠಿ ದೀಕ್ಷಾಂತ ಘಟಕೋತ್ಸವಕ್ಕೆ 27 ಚಿನ್ನದ & 27 ಬೆಳ್ಳಿಯ ನಾಣ್ಯಗಳ ಖರೀದಿಗೆ 59.94 ಗ್ರಾಂ ಚಿನ್ನ & 302.40 ಗ್ರಾಂ ಬೆಳ್ಳಿ.</td></tr>
<tr><td>158/ 05.03.2018</td></tr>
<tr><td>3.</td><td>ಕಿರಣ್ ಎಂಟರ್‌ಪ್ರೈಸಸ್</td><td>0098/ 13.11.2017</td><td></td><td>96,760.00</td><td>ಪ್ರಶ್ನೆ ಪತ್ರಿಕೆಗಳನ್ನು ಮುದ್ರಿಸಲು & ಡಿಟಿಪಿ</td></tr>
</table>

</td>
<td>(ಅ) ಈ ಬಗ್ಗೆ ಎಚ್ಚರ ವಹಿಸಲಾಗುವುದು.</td>
<td></td>
<td></td>
</tr>
</table>

| | | | | | |
|---|---|---|---|---|---|
| 4. | ಕಿರಣ್ ಎಂಟರ್‌ಪ್ರೈಸಸ್ | 0099/ 13.11.2017 | | 14,364.00 | ಮಾಡಲು ಬಿಲ್ ನಂ. 0098 & 0099 ಗಳನ್ನು ದಿ: 13.11.2017 ರಂದೇ ಖರೀದಿಸಿದ್ದು, ಕೆ.ಟಿ.ಪಿ.ಪಿ ನಿಯಮದ ಪ್ರಕಾರ ಟೆಂಡರ್ ಕರೆದು ಖರೀದಿಸಬಹುದಿತ್ತು, ಆದರೆ ಇಲ್ಲಿ ಬಿಲ್ಲನ್ನು ವರ್ಗೀಕರಿಸಿ ಖರೀದಿಸಲಾಗಿದೆ. |
| 5. | ಮೆಹ್ರಾ ಕಂಪ್ಯೂಟರ್ಸ್ | 046/ 05.03.2018 | 348812/ 21.03.2018 | 1,74,325.00 | ಪ್ರಸಿದ್ಧ ಪರೀಕ್ಷೆಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ಪರೀಕ್ಷಾ ಕೇಂದ್ರಗಳಿಗೆ ತಲುಪಿಸಲು. |
| | | | **ಒಟ್ಟು ಮೊತ್ತ** | **6,17,625.00** | |

ಆದ್ದರಿಂದ **ರೂ. 6,17,625/–** ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**ಆ) ಶಿಲ್ಪ ಸಾಗರ್ ಎಂಟರ್‌ಪ್ರೈಸಸ್, ಬೆಂಗಳೂರು ಇವರಿಗೆ ಪಾವತಿಸಿರುವ ಮೊತ್ತ ರೂ.1,77,748/– ಆಕ್ಷೇಪಣೆ**

ಶಿಲ್ಪ ಸಾಗರ್ ಎಂಟರ್‌ಪ್ರೈಸಸ್, ಶ್ರೀರಾಮಪುರ ಬೆಂಗಳೂರು, ಇವರಿಗೆ 2017–18 ನೇ ಸಾಲಿನಲ್ಲಿ ಲ್ಯಾಪ್‌ಟಾಪ್, ಕಂಪ್ಯೂಟರ್ ಹಾಗೂ ಯುಪಿಎಸ್‌ಗಳ ರಿಪೇರಿ ಮತ್ತು ನಿರ್ವಹಣೆಗಾಗಿ ಮಾಸಿಕವಾಗಿ ರೂ.11,450/–ರಂತೆ ವಾರ್ಷಿಕವಾಗಿ ರೂ.1,37,400/–ಗಳನ್ನು ಪಾವತಿಸಿರುತ್ತಾರೆ. ಸದರಿ ಸಂಸ್ಥೆಯವರಿಗೆ ಇತರೆ ಬಿಡಿಭಾಗಗಳ ಖರೀದಿ ಹಾಗೂ ಖರ್ಚುಗಳು ಸೇರಿ ಒಟ್ಟು ರೂ.1,77,748/– ಗಳನ್ನು ಪಾವತಿ ಮಾಡಲಾಗಿದೆ. ರೂ. 1 ಲಕ್ಷ ಮೀರಿರುವುದರಿಂದ **ರೂ.1,77,748/–** ಗಳಷ್ಟು ಆಕ್ಷೇಪಣೆಯಲ್ಲಿಡಲಾಗಿದೆ.

**(ಆ) ಈ ಬಗ್ಗೆ 2018–19ನೇ ಸಾಲಿನಲ್ಲಿ ಕ್ರಮ ವಹಿಸಲಾಗಿದೆ.**

**ಇ) ಕಿರಣ್ ಎಂಟರ್‌ಪ್ರೈಸಸ್ ಮತ್ತು ಮೆಹ್ರಾ ಕಂಪ್ಯೂಟರ್ಸ್ ಸಿಸ್ಟಮ್ ಲಿಮಿಟೆಡ್ ಇವರಿಗೆ ಪಾವತಿಸಿರುವ ಮೊತ್ತ ರೂ.36,33,632/– ಆಕ್ಷೇಪಣೆ**

2017–18 ನೇ ಸಾಲಿನಲ್ಲಿ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಪ್ರಶ್ನೆಪತ್ರಿಕೆ, ಉತ್ತರ ಪತ್ರಿಕೆಗಳ ಮುದ್ರಣ ಕಾರ್ಯಕ್ಕಾಗಿ ಕಿರಣ್ ಎಂಟರ್‌ಪ್ರೈಸಸ್‌ರವರಿಗೆ ಒಟ್ಟು ರೂ.1,01,208/– ಗಳನ್ನು

**(ಇ) ಈ ಬಗ್ಗೆ ಎಚ್ಚರ ವಹಿಸಲಾಗುವುದು.**

<table>
<tr>
<td></td>
<td></td>
<td>
ಪಾವತಿಸಲಾಗಿದೆ. ಕೆಟಿಪಿಪಿ ನಿಯಮ 5ರ ಪ್ರಕಾರ ರೂ.1 ಲಕ್ಷಕ್ಕೂ ಮೇಲ್ಪಟ್ಟ ಖರೀದಿಗೆ ಟೆಂಡರ್ ಕರೆಯುವುದು ಅಗತ್ಯವಿರುತ್ತದೆ. ಆದರೆ ವಿಶ್ವವಿದ್ಯಾಲಯವು ಟೆಂಡರ್ ಕರೆಯದೇ ಕೊಟೇಷನ್ ಕರೆಯುವ ಮೂಲಕ ಖರೀದಿ ಪ್ರಕ್ರಿಯೆ ನಡೆಸಿರುತ್ತದೆ.<br><br>
2017–18 ನೇ ಸಾಲಿನಲ್ಲಿ ಪರೀಕ್ಷಾ ಸಂಬಂಧಿ ಮುದ್ರಣ ಕಾರ್ಯಗಳಿಗೆ ರೂ.32,76,623/– ಗಳನ್ನು ಹಾಗೂ ವಾಹನಗಳನ್ನು ಬಾಡಿಗೆ ಪಡೆಯಲು ರೂ.2,55,801/– ಗಳನ್ನು ಸೇರಿ ಒಟ್ಟು ರೂ.35,32,424/– ಗಳನ್ನು ಮೆಹ್ರಾ ಕಂಪ್ಯೂಟರ್ಸ್ ಸಿಸ್ಟಮ್ ಲಿ. ರವರಿಗೆ ಪಾವತಿಸಲಾಗಿದೆ. ಟೆಂಡರ್ ಕರೆಯದೇ ಕೊಟೇಷನ್ ಕರೆದು ಖರೀದಿ ಪ್ರಕ್ರಿಯೆ ನಡೆಸಲಾಗಿದೆ.<br><br>
ಆದ್ದರಿಂದ ಕಿರಣ್ ಎಂಟರ್‌ಪ್ರೈಸಸರವರಿಗೆ ಪಾವತಿಸಿರುವ ರೂ.1,01,208/– ಗಳು ಮತ್ತು ಮೆಹ್ರಾ ಕಂಪ್ಯೂಟರ್ಸ್ ಸಿಸ್ಟಮ್ ಲಿ. ರವರಿಗೆ ಪಾವತಿಸಿರುವ ರೂ.35,32,424/– ಗಳು ಸೇರಿ ಒಟ್ಟು ಮೊತ್ತ ರೂ.36,33,632/– ಗಳನ್ನು ಆಕ್ಷೇಪಣೆಗಿಡಲಾಗಿದೆ. ವಿವರಗಳನ್ನು ಅನುಬಂಧ–12 ರಲ್ಲಿ ತೋರಿಸಿದೆ.
</td>
<td></td>
<td></td>
<td></td>
</tr>
<tr>
<td>20</td>
<td>20</td>
<td>
ದರಪಟ್ಟಿ ಕರೆಯದೆ ಖರೀದಿಸಿರುವುದು<br><br>
ಅ) ಪೀಠೋಪಕರಣಗಳ ಖರೀದಿ ಮೊತ್ತ ರೂ. 7,370/– ಆಕ್ಷೇಪಣೆ<br><br>
ದರಪಟ್ಟಿ ಕರೆಯದೆ ಪೀಠೋಪಕರಣಗಳ ಖರೀದಿ ಪ್ರಕ್ರಿಯೆ ಮಾಡಿರುವ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ.</th><th>ಯಾರಿಗೆ ಪಾವತಿಸಲಾಗಿದೆ</th><th>ಚೆಕ್ ಸಂಖ್ಯೆ & ದಿನಾಂಕ</th><th>ಮೊತ್ತ (ರೂ.ಗಳಲ್ಲಿ)</th><th>ಉದ್ದೇಶ</th></tr>
<tr><td>1.</td><td>Cartridge Kart</td><td>832746/ 13.03.2018</td><td>7,370.00</td><td>Towards payment for the purchase of 2 No. Cartridge for the printers ear an 2525 of KSU office & printer of PA to the Registrar.</td></tr>
<tr><td colspan="3">ಒಟ್ಟು ಮೊತ್ತ</td><td>7,370.00</td><td></td></tr>
</table>
ಈ ಮೇಲಿನ ಪೀಠೋಪಕರಣಗಳನ್ನು ಖರೀದಿಸಿರುವುದಕ್ಕೆ ದರಪಟ್ಟಿ ಕರೆದಿರುವುದಿಲ್ಲ. ಆದ್ದರಿಂದ ಸೂಕ್ತ ಸಮಜಾಯಿಷಿ ನೀಡುವವರೆಗೆ ರೂ. 7,370/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.
</td>
<td>(ಅ) ಮುಂದಿನ ದಿನಗಳಲ್ಲಿ ನಿಯಮಾನುಸಾರ ಸರಿಪಡಿಸಿ ಕೊಳ್ಳಲಾಗುವುದು.</td>
<td></td>
<td></td>
</tr>
</table>

ಆ) ರೂ.5,000/– ಮೀರಿದ ಖರೀದಿಗೆ ದರಪಟ್ಟಿ ಕರೆಯದೆ ಖರೀದಿಸಿರುವ ಮೊತ್ತ ರೂ. 68,335/– ಆಕ್ಷೇಪಣೆ

| ಕ್ರ. ಸಂ. | ಸಂಕೀರ್ಣ ಹೆಸರು | ಸಂಸ್ಥೆಯ ಹೆಸರು | ಬಿಲ್ಲಿನ ಸಂಖ್ಯೆ & ದಿನಾಂಕ | ಖರೀದಿಸಿದ ಸಾಮಗ್ರಿ | ಮೊತ್ತ | ಒಟ್ಟು ಮೊತ್ತ |
|---|---|---|---|---|---|---|
| 1 | ಅವಧೂತ ಪರಂಪರೆ | R.K.Arts & Graphics, Ramanagar, Dharwad | 963<br>965<br>16.01.2018 | Invitation<br>Banners<br>Momentos | 3600<br>4900 | 8,500 |
| 2 | ನಾಥ ಪರಂಪರೆ | Sharika Printers, Mayasandra | 1201<br>1202<br>1203<br>1204<br>02.01.2018 | Seminar Bags | 4300<br>4300<br>4300<br>4300 | 17,200 |
| 3 | Fine Arts in Sanskrit & Packrat ltd., | Patel Gemstones, Belagam Galli Cross, Hubli | 421/17.12.2017<br>398/19.12.2017 | Piano<br>Bags | 4725<br>4725 | 25,700<br>9,450 |
| 4 | Fine Arts in Sanskrit & Packrat ltd., | Nagareshwara Graphics, Subhash road, Dharwad | 96/08.12.2017<br>97/12.12.2017 | Invitation Covers, Badges, Certificates, etc., | 4500<br>2985 | 7,485 |
| **ಒಟ್ಟು ಮೊತ್ತ** | | | | | | **68,335** |

ಆದ್ದರಿಂದ **ರೂ. 68,335/–** ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**ಇ) ವರ್ಷ ಟೂರ್ಸ್ & ಟ್ರಾವೆಲ್ಸ್‌ನವರಿಗೆ ಪಾವತಿಸಿರುವ ಮೊತ್ತ ರೂ.44,451/– ಆಕ್ಷೇಪಣೆ**

2017–18 ನೇ ಸಾಲಿನ ಸಂಸ್ಕೃತ ವಿಶ್ವವಿದ್ಯಾಲಯವು ದರಪಟ್ಟಿಯನ್ನು ಕರೆಯದೇ ವರ್ಷ ಟೂರ್ಸ್ & ಟ್ರಾವೆಲ್ಸ್‌ನವರಿಂದ ಹಲವು ಬಾರಿ ವಾಹನಗಳನ್ನು ಬಾಡಿಗೆ ಪಡೆದಿರುತ್ತದೆ. ಇದರ ವಿವರಗಳು ಈ ಕೆಳಕಂಡಂತಿವೆ.

**(ಆ) ಸಂಬಂಧಿಸಿದ ಸಂಸ್ಥೆಗಳಿಗೆ ಈಗಾಗಲೇ ಮಾಹಿತಿ ನೀಡಿ ನಿಯಮಾನುಸಾರ ಕ್ರಮ ವಹಿಸಲು ಸೂಚಿಸಲಾಗಿದೆ.**

**(ಇ) ಸರ್ಕಾರಕ್ಕೆ ಬೆಳಗಾವಿ ಅಧಿವೇಶನಕ್ಕಾಗಿ ಅತಿ ತುರ್ತು ವಾಹನ**

| ಕ್ರ. ಸಂ. | ಬಿಲ್ ನಂ. & ದಿನಾಂಕ | ವಿಭಾಗ | ಚೆಕ್ ಸಂಖ್ಯೆ & ದಿನಾಂಕ | ಮೊತ್ತ | ಷರಾ |
|---|---|---|---|---|---|
| 1. | 4873/ 18.11.2017 | ಆಡಳಿತಾಂಗ | 172511/ 11.12.2017 | 19,638/– | ಬೆಳಗಾವಿಯ ಸುವರ್ಣ ಸೌಧದ ವಿಧಾನ ಮಂಡಲ ಅಧಿವೇಶನಕ್ಕೆ ಸರ್ಕಾರದ ಆದೇಶದಂತೆ ಕಾರ ಕಳುಹಿಸಿರುವುದು. |
| 2. | | ಎನ್.ಎಸ್.ಎಸ್ | | 7,534/– | ಎನ್.ಎಸ್.ಎಸ್ ಪೂರ್ವಾಭಾವಿ ಸಭೆಗೆ ಮೇಲುಕೋಟೆಗೆ ತೆರಳಲು. |
| 3. | 516/ 30.01.2018 | ನಿರ್ದೇಶನಾಲಯ | 573010/ 03.02.2018 | 17,279/– | 4 ದಿನಗಳ ಕಾಲ ತಪಾಸಣೆ ಮಾಡುವ ಸಲುವಾಗಿ. |
| **ಒಟ್ಟು ಮೊತ್ತ** | | | | **44,451/–** | |

ಆದ್ದರಿಂದ ಉಳಿದ **ರೂ.44,451/–** ಗಳನ್ನು ಆಕ್ಷೇಪಣೆಗಿಡಲಾಗಿದೆ.

**ಒದಗಿಸಿದ್ದರಿಂದ ಪರೀಕ್ಷಾಂಗ ವಿಭಾಗದಲ್ಲಿ ನಿಯಮಾನುಸಾರ ಕ್ರಮ ಕೈಗೊಂಡಿದ್ದನ್ನು ಇಲ್ಲಿ ಅನುಸರಿಸಿದ್ದೇವೆ. ಮುಂದಿನ ದಿನಗಳಲ್ಲಿ ಸರಿಪಡಿಸಿ ಕೊಳ್ಳಲಾಗುವುದು.**

**ಈ) ದರಪಟ್ಟಿ ಕರೆಯದೇ ಖರೀದಿಸಿರುವುದು & ಖರೀದಿ ಸಮಿತಿ ರಚಿಸದೆ ಖರೀದಿ ಮಾಡಿರುವ ಮೊತ್ತ ರೂ.48,991/– ಆಕ್ಷೇಪಣೆ**

2017–18ನೇ ಸಾಲಿನ ಖರೀದಿ ಪ್ರಕ್ರಿಯೆಗಳಿಗೆ ದರಪಟ್ಟಿ ಕರೆಯದೆ ಯಾವುದೇ ಖರೀದಿ ಸಮಿತಿಗಳನ್ನು ರಚಿಸದೆ ಪರೀಕ್ಷಾಂಗದ ಮುಖ್ಯಸ್ಥರೇ ಪರಿಶೀಲಿಸಿ ಖರೀದಿ ಪ್ರಕ್ರಿಯೆಗೆ ಅನುಮತಿ ನೀಡಿರುತ್ತಾರೆ.

ಆದ್ದರಿಂದ **ರೂ. 48,991/–** ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**(ಈ) ಮುಂದಿನ ದಿನಗಳಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದು.**

<table>
<tr>
<td>21</td>
<td>21</td>
<td>

**ವೋಚರ್‌ಗಳನ್ನು ಲೆಕ್ಕತನಿಖೆಗೆ ಒದಗಿಸದೇ ಇರುವುದು:**

**ಅ) ಬಿಲ್ ಇಲ್ಲದ ಖರೀದಿಗಳು & ದರಪಟ್ಟಿ ಇಲ್ಲದ ಖರೀದಿಗಳ ಮೊತ್ತ ರೂ. 11,767/– ಆಕ್ಷೇಪಣೆ**

<table>
<tr><th>ಕ್ರ. ಸಂ</th><th>ವಿವರಗಳು</th><th>ಒಟ್ಟು ಮೊತ್ತ</th><th>ಷರಾ/ಉದ್ದೇಶ</th></tr>
<tr><td>1.</td><td>ನಿರ್ವಾಣ ಸ್ವಾಮಿ ಸಂಸ್ಕೃತ ಕಾಲೇಜು, ಕನಕಪುರ</td><td>570.00</td><td>ಪೂರ್ವ ಸಿದ್ದತಾ ಸಭೆಯ ಖರ್ಚು & ಪ್ರಯಾಣ ಭತ್ಯೆಗೆ ಸಂಬಂಧಿಸಿದ ಬಿಲ್ಲಗಳು ಇರುವುದಿಲ್ಲ.</td></tr>
<tr><td>2.</td><td>ಪೂರ್ಣ ಪ್ರಜ್ಞಾ ವಿದ್ಯಾಪೀಠ ಸಂಸ್ಕೃತ ಕಾಲೇಜು</td><td>200.00</td><td>ಆಟೋಗೆ ನೀಡಿರುವ ಮೊತ್ತಕ್ಕೆ ದೃಢೀಕರಣ ನೀಡಿರುವುದಿಲ್ಲ.</td></tr>
<tr><td>3.</td><td>ಶ್ರೀ ಮಲೇ ಮಹಾದೇಶ್ವರ ಸ್ವಾಮಿ ಸಂಸ್ಕೃತ ಮಹಾ ಪಾಠಶಾಲೆ.</td><td>600.00</td><td>ಬಸ್ ಟಿಕೆಟ್ ಇರುವುದಿಲ್ಲ.</td></tr>
<tr><td>4.</td><td>ಕಾಲ ಭೈರವೇಶ್ವರ ಸಂಸ್ಕೃತ ವೇದಾಗಮ ಕಾಲೇಜು</td><td>3,000.00</td><td>ಪ್ರಯಾಣ ವೆಚ್ಚದ ಬಿಲ್ ಇರುವುದಿಲ್ಲ.</td></tr>
<tr><td>5.</td><td>ಸದ್ಗುರು ಕಬೀರಾನಂದ ಸಂಸ್ಕೃತ ಕಾಲೇಜು</td><td>950.00</td><td>ಜೆರಾಕ್ಸ್ & ಉತ್ತರ ಪತ್ರಿಕೆಗಳ ರವಾನೆಯ ಅಂಚೆ ಬಿಲ್ ಇರುವುದಿಲ್ಲ.</td></tr>
<tr><td>6.</td><td>ಎಂ.ಎ ಆಚಾರ್ಯ I & II ನೇ ಸೆಮಿಸ್ಟರ್ ಬಿಲ್</td><td>397.00</td><td>ಟಪಾಲು, ಪರೀಕ್ಷಾ ಸಾಮಾಗ್ರಿಗಳ ಖರೀದಿಗೆ ಬಿಲ್ ನೀಡಿರುವುದಿಲ್ಲ.</td></tr>
<tr><td>7.</td><td>ಕಾಲ ಭೈರವೇಶ್ವರ ಸಂಸ್ಕೃತ ವೇದಾಗಮ ಕಾಲೇಜು– ಆದಿಚುಂಚನಗಿರಿ</td><td>5,000.00</td><td>ಬೆಂಗಳೂರಿಗೆ ಕಾರಿನಲ್ಲಿ ಪ್ರಯಾಣಿಸಲು ನೀಡಿರುವ ಮೊತ್ತ ಟ್ರಿಪ್‌ಶೀಟ್ ಮಾತ್ರ ಇದ್ದು, ಬಿಲ್ ಇರುವುದಿಲ್ಲ ಹಾಗೂ 5,000/– ಗಳಿಗೆ ಕೊಟೇಷನ್ ಕರೆದಿರುವುದಿಲ್ಲ.</td></tr>
</table>

</td>
<td>(ಅ) ಮುಂದಿನ ದಿನಗಳಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದು.</td>
<td></td>
<td></td>
</tr>
</table>

<table>
<tr>
<td></td>
<td></td>
<td>
<table>
<tr><td>8.</td><td>ಎನ್.ಟಿ.ಜಿ.ಎಲ್ ಸ್ಕೂಲ್ ಬಂಗಾರಪೇಟೆ</td><td>370.00</td><td>ಕೊರಿಯರ್ ಬಿಲ್ ಇರುವುದಿಲ್ಲ.</td></tr>
<tr><td>9.</td><td>ಬಾಸ್ಕರಾಚಾರ್ಯ ಜ್ಯೋತಿರ್ವಿದ್ಯಾ ಪ್ರತಿಷ್ಠಾನ</td><td>680.00</td><td>ಬಸ್ ಟಿಕೆಟ್ ಇಲ್ಲ.</td></tr>
<tr><td colspan="2">ಒಟ್ಟು ಮೊತ್ತ ರೂ.</td><td>11,767.00</td><td></td></tr>
</table>
ಬಿಲ್‌ಗಳಿಲ್ಲದ ಹಾಗೂ ಬಿಲ್‌ಗಳನ್ನು ವರ್ಗೀಕರಿಸಿ ಖರೀದಿಸಲಾದ ಖರೀದಿಗಳು ರೂ.11,767/– ಗಳಿದ್ದು, ಸದರಿ ಮೊತ್ತವನ್ನು ಸೂಕ್ತ ಸಮಜಾಯಿಷಿ ನೀಡುವವರೆಗೆ ಆಕ್ಷೇಪಣೆಯಲ್ಲಿಡಲಾಗಿದೆ.<br>
ಆ) ನಕಲಿ ಬಿಲ್‌ಗಳ ಮೊತ್ತ ರೂ. 4,324/– ವಸೂಲಾತಿ<br>
ಶ್ರೀ ಶಂಕರ ವಿಲಾಸ ಸಂಸ್ಕೃತ ಕಾಲೇಜು, ಮೈಸೂರು ಇವರು ಪ್ರಶ್ನೆ ಪತ್ರಿಕೆಗಳನ್ನು ಜೆರಾಕ್ಸ್ ಮಾಡಿಸಿರುವುದಕ್ಕೆ ರೂ.4,474/– ಗಳಿಗೆ ಗಣೇಶ ಎಂಟರ್‌ಪ್ರೈಸಸ್‌ರವರ ಒಂದೇ ಬಿಲ್ ಸಂಖ್ಯೆಯ 4 ಬಿಲ್‌ಗಳನ್ನು ಲಗತ್ತಿಸಿರುತ್ತಾರೆ. ಇದರಲ್ಲಿ ರೂ.150/– ಗಳಿಗೆ ಸಂಬಂಧಿಸಿದ ಬಿಲ್ ಸಂಖ್ಯೆ–1607 ಮಾತ್ರ ಅಸಲಿಯಾಗಿದ್ದು, ಉಳಿದ 3 ಬಿಲ್‌ಗಳು ಜೆರಾಕ್ಸ್ ಪ್ರತಿಗಳಾಗಿದ್ದು, ನಕಲಿ ಬಿಲ್‌ಗಳಾಗಿವೆ. ಬಿಲ್ ಸಂಖ್ಯೆ: 1607 ನ್ನು ಪಡೆದು ಜೆರಾಕ್ಸ್ ಮಾಡಿ ತದನಂತರ ಹೆಚ್ಚಿನ ಮೊತ್ತದ ಬಿಲ್‌ಗಳನ್ನು ತಯಾರಿಸಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ. (ರೂ.246/– ರೂ.2,878/– & ರೂ.1,200/– ಗಳ 3 ಬಿಲ್‌ಗಳನ್ನು ಪ್ರಶ್ನೆ ಪತ್ರಿಕೆ ಜೆರಾಕ್ಸ್ ಮಾಡಿಸಲು ಎಂದು ಈ ಬಿಲ್‌ಗಳಲ್ಲಿ ನಮೂದಿಸಲಾಗಿರುತ್ತದೆ. ಆದರೆ ಪ್ರಶ್ನೆ ಪತ್ರಿಕೆಗಳು ವಿಶ್ವವಿದ್ಯಾಲಯದಿಂದ ಅಲ್ಲಿನ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಕಳುಹಿಸಲ್ಪಟ್ಟಿವೆ.) ಆದಕಾರಣ ರೂ.4,324/– ಗಳನ್ನು ವಸೂಲಾತಿಗಿಡಲಾಗಿದೆ. ಹಾಗೂ ಈ ರೀತಿ ನಕಲಿ ಬಿಲ್‌ಗಳನ್ನು ತಯಾರಿಸಿರುವುದು ಅಪರಾಧವಾಗಿರುತ್ತದೆ.
</td>
<td>(ಆ) ಸಂಬಂಧಿಸಿದ ಸಂಸ್ಥೆಗೆ ಈ ಬಗ್ಗೆ ಸ್ಪಷ್ಟೀಕರಣಕ್ಕಾಗಿ ಸೂಚನೆ ನೀಡಲಾಗಿದೆ.</td>
<td></td>
<td></td>
</tr>
<tr>
<td>22</td>
<td>22</td>
<td>ವಿದ್ಯಾರ್ಥಿವೇತನ ಉಳಿಕೆಯಾದ ಮೊತ್ತ ರೂ.35,48,500/– ಆಕ್ಷೇಪಣೆ:<br>
2017–18 ನೇ ಸಾಲಿಗೆ ವಿದ್ಯಾರ್ಥಿ ವೇತನ ಪಾವತಿ ಬಗ್ಗೆ ಪರಿಶೀಲಿಸಲಾಗಿ ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಇವರ ಪತ್ರ ಸಂ:ಇಆ:297:UNE:2016 Date:11.05.2017 ರಲ್ಲಿ ಸಂಸ್ಕೃತ ವಿಶ್ವವಿದ್ಯಾಲಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲು ರೂ.80.00 ಲಕ್ಷ ಅನುದಾನ</td>
<td>2019–20ನೇ ಸಾಲಿನಲ್ಲಿ ಸಂಬಂಧಿಸಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಪಾವತಿ</td>
<td></td>
<td></td>
</tr>
</table>

| | | | | | |
|---|---|---|---|---|---|
| | | ಬಿಡುಗಡೆ ಮಾಡಲಾಗಿದೆ. ಅದರಂತೆ 2016–17ನೇ ಸಾಲಿನ ನಿಯಮಿತ ವಿದ್ಯಾರ್ಥಿಗಳಿಗೆ ಅನುದಾನ ರಹಿತ ಮತ್ತು ಅನುದಾನ ಸಹಿತ 20 ಕಾಲೇಜುಗಳ ಪದವಿ ಮತ್ತು ಸ್ನಾತಕೋತ್ತರ ತರಗತಿಗಳ ವಿದ್ಯಾರ್ಥಿಗಳಿಗೆ ನೀಡಿರುವ ಒಟ್ಟು ವಿದ್ಯಾರ್ಥಿ ವೇತನ ರೂ.21,69,000/– ಹಾಗೂ 207 ಅನುದಾನಿತ ಸಂಸ್ಕೃತ ಪಾಠಶಾಲೆಯ 13703 ವಿದ್ಯಾರ್ಥಿಗಳಿಗೆ ನೀಡಿರುವ ವಿದ್ಯಾರ್ಥಿವೇತನ ರೂ.22,82,500/– ರಂತೆ ಒಟ್ಟು ರೂ.44,51,500/– ಆಗಿದ್ದು ಉಳಿದ ಮೊತ್ತ ರೂ.35,48,500/– ಗೆ ಹಿಂತಿರುಗಿಸಲಾಗಿದೆಯೇ? ಅಥವಾ ಮುಂದಿನ ವರ್ಷಕ್ಕೆ ನೀಡಲಾಗುವುದೇ? ಎಂಬುದರ ಬಗ್ಗೆ ವಿವರ ನೀಡುವವರೆಗೆ **ರೂ.35,48,500/–** ಆಕ್ಷೇಪಣೆಗಿಡಲಾಗಿದೆ. | **ಮಾಡಲಾಗುವುದು.** | | |
| 23 | 23 | **ದೂರವಾಣಿ ಬಿಲ್‌ಗಳ ಮೊತ್ತ ರೂ. 2,21,041/– ವಸೂಲಾತಿ**<br>2017–18ನೇ ಸಾಲಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ದೂರವಾಣಿ/ಅಂತರ್ಜಾಲ/ ಮೊಬೈಲ್‌ಗಳಿಗಾಗಿ ಒಟ್ಟು ರೂ.2,21,041/– ಗಳಷ್ಟು ವೆಚ್ಚ ಭರಿಸಲಾಗಿದೆ. ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿದಾಗ, ಕುಲಸಚಿವರು, ಉಪಕುಲಸಚಿವರುಗಳಿಗೆ ಮೊಬೈಲ್ ಕರೆಗಳ ವೆಚ್ಚಗಳನ್ನು ಪಾವತಿಸಲಾಗಿದೆ. ಮೊಬೈಲ್ ವ್ಯವಸ್ಥೆ ಮಾನ್ಯ ಕುಲಪತಿಯವರಿಗೆ ಮಾತ್ರ ಇರುವುದರಿಂದ ಉಳಿದವರಿಗೆ ಯಾವ ನಿಯಮ/ ಸರ್ಕಾರಿ ಆದೇಶದ ಮೇರೆಗೆ ಪಾವತಿ ಮಾಡಲಾಗಿದೆ ಎಂದು ಲೆಕ್ಕತನಿಖೆಗೆ ತಿಳಿದುಬರುತ್ತಿಲ್ಲ. ಆದ್ದರಿಂದ **ರೂ. 2,21,041/–** ಗಳನ್ನು ವಸೂಲಾತಿಗಿಡಲಾಗಿದೆ. | **ಈ ಬಗ್ಗೆ ಪರಿನಿಯಮ ಸಮಿತಿ ರಚಿಸಲಾಗಿದ್ದು, ಕರಡು ತಯಾರಿಯ ಹಂತದಲ್ಲಿದೆ.** | | |
| 24 | 24 | **ವಕೀಲರಿಗೆ ಪಾವತಿಸಿರುವ ಮೊತ್ತ ರೂ. 11,000/– ಆಕ್ಷೇಪಣೆ ಮತ್ತು ರೂ. 1,65,000/– ವಸೂಲಾತಿ**<br>**ಅ)** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಯಲದಲ್ಲಿ 2017–18ನೇ ಸಾಲಿನಲ್ಲಿ ನೇಮಕಗೊಂಡ ವಕೀಲರು ಹಾಗೂ ಇನ್ನಿತರ ಮಾಹಿತಿ ನೀಡುವಂತೆ ವಿಚಾರಣೆ ಪತ್ರ ಸಂ.17 ದಿ:09.08.2018 ಅದಕ್ಕೆ ಉತ್ತರವಾಗಿ ಕಸಂವಿ.ಲೆಪಆಉಕ: 15/2018–19 ದಿ:16.08.2018 ಸಲ್ಲಿಸಿರುತ್ತಾರೆ. ಅನುಸರಣೆಯಲ್ಲಿ ಒಟ್ಟು ರೂ.2,88,000/–ಗಳನ್ನು ಪಾವತಿಸಲಾಗಿದೆ ಎಂದು ತಿಳಿಸಿರುತ್ತಾರೆ. ಆದರೆ, ಲೆಡ್ಜರ್ ಖಾತೆಯಲ್ಲಿ ರೂ.2,99,000/– ಎಂದಿರುತ್ತದೆ. ಇವುಗಳ ವ್ಯತ್ಯಾಸ ರೂ. 11,000/– ಬಗ್ಗೆ ವಿವರ ನೀಡುವವರೆಗೆ ರೂ.11,000/– ಆಕ್ಷೇಪಣೆಗಿಡಲಾಗಿದೆ. | **(ಅ) ಅನುಸರಣೆಯಲ್ಲಿ ಮಾಹಿತಿ ನೀಡುವಾಗ 2,84,000/–ರೂ. ಎಂದು ನೀಡುವುದಕ್ಕೆ ಬದಲು 2,88,000/– ರೂ. ಎಂದು ಮಾಹಿತಿ ನೀಡಲಾಗಿದೆ. ಆದ್ದರಿಂದ ಲೆಡ್ಜರ್ ಖಾತೆಗೂ ಇದಕ್ಕೀ 15,000/– ವ್ಯತ್ಯಾಸವಾಗಿದೆ.** | | |

| | | | | | |
|---|---|---|---|---|---|
| | | ಆ) ಶ್ರೀ ಸಿ.ವೆಂಕಟೇಶ್, ವಕೀಲರು ಇವರಿಗೆ ಮಾಸಿಕ ರೂ.15,000/–ಗಳಂತೆ 2017–18ನೇ ಸಾಲಿನಲ್ಲಿ ಒಟ್ಟು ರೂ.1,65,000/– ಗಳಷ್ಟು ಗೌರವ ಸಂಭಾವನೆಯನ್ನು ಪಾವತಿಸಲಾಗಿದೆ. ಈ ಸಂಭಾವನೆ ಪಾವತಿಸಲು ಪ್ರಶಾಸನ ಸಮಿತಿಯಲ್ಲಿ ನಿರ್ಣಯಗೊಂಡಿರುವುದಾಗಿ ತಿಳಿಸಿರುತ್ತಾರೆ. ಮಾಸಿಕವಾಗಿ ಪಾವತಿಸಲು ಮಂಜೂರಾದ ಯಾವುದೇ ಹುದ್ದೆ ಇರುವುದಿಲ್ಲ. ಇದಕ್ಕೆ ಸರ್ಕಾರದ ಯಾವುದೇ ಆದೇಶವಿರುವುದಿಲ್ಲ. ಆದ್ದರಿಂದ, **ರೂ. 1,65,000/–** ಗಳನ್ನು ವಸೂಲಾತಿಗಿಡಲಾಗಿದೆ. | ವಿಚಾರಣೆಗೆ ಉತ್ತರ ಕೊಡುವಾಗ ಅನೂಪ್ ದೇಶಪಾಂಡೆ, ವಕೀಲರು ಧಾರವಾಡ ಇವರಿಗೆ ಚೆಕ್ ನಂ. 497379 ರಲ್ಲಿ 15,000/– ರೂ.ಗಳನ್ನು ಪಾವತಿ ಮಾಡಲಾಗಿರುತ್ತದೆ. ವಿಚಾರಣೆಗೆ ಉತ್ತರ ಕೊಡುವಾಗ ಇದು ಬಿಟ್ಟುಹೋಗಿರುತ್ತದೆ. ಆದ್ದರಿಂದ ವ್ಯತ್ಯಾಸವಾಗಿರುವುದನ್ನು ಗಮನಿಸಿ ಸರಿಪಡಿಸಿದೆ.<br>(ಆ) ವಿಶ್ವವಿದ್ಯಾಲಯದ ಹಾಗೂ ಕಾಲೇಜು ಮತ್ತು ಪಾಠಶಾಲೆಗಳ ಕೋರ್ಟ್ ಕೇಸ್‌ಗಳ ಬಗ್ಗೆ ಕಾನೂನು ಸಲಹೆಗಾರರ ಅವಶ್ಯಕತೆ ಇದ್ದು ಈ ಬಗ್ಗೆ ಪ್ರಶಾಸನ ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆದು ಕ್ರಮ ವಹಿಸಲಾಗಿದೆ. | | |
| 25 | 25 | **'Suspense' ಖಾತೆಯ ಮೊತ್ತ ರೂ. 43,150/– ಆಕ್ಷೇಪಣೆ** | ಬ್ಯಾಂಕ್‌ನೊಂದಿಗೆ ಪತ್ರ | | |

| | | | | | |
|---|---|---|---|---|---|
| | | 2017–18 ನೇ ಸಾಲಿನಲ್ಲಿ ಪರೀಕ್ಷಾಂಗ ಖಾತೆ ಹಾಗೂ ಹಣಕಾಸು ಅಧಿಕಾರಿಗಳ ಖಾತೆಯಲ್ಲಿ ಒಟ್ಟು ಮೊತ್ತ ರೂ.43,150/– ಗಳಿಗೆ ಸ್ಪಷ್ಟ ವಿವರ ಇಲ್ಲವಾದುದರಿಂದ ಅದನ್ನು 'Suspense' ಖಾತೆಯಲ್ಲಿ ತೋರಿಸಿದ್ದು, ವಿವರ ಒದಗಿಸುವವರೆಗೆ **ರೂ.43,150/–** ಆಕ್ಷೇಪಣೆಯಲ್ಲಿಡಲಾಗಿದೆ. | **ವ್ಯವಹಾರ ನಡೆಸಿ ಕ್ರಮ ಕೈಗೊಳ್ಳಲಾಗುವುದು.** | | |
| **26** | **26** | **ವಾಹನಗಳ ಲಾಗ್ ಪುಸ್ತಕಗಳು**<br>**ಅ) ಹೊಸ ಟೈರ್‌ಗಳ ಮೊತ್ತ ರೂ. 23,728/– ಆಕ್ಷೇಪಣೆ**<br>ಸ್ವಿಫ್ಟ್ ಡಿಸೈರ್ ಕಾರಿನ 5 ಟೈರ್‌ಗಳನ್ನು ವೋರಾ ಟೈರ್ಸ್, ಬೆಂಗಳೂರು ಇವರಿಂದ ಇನ್‌ವಾಯ್ಸ್ ನಂ. 15055 ಮೊತ್ತ ರೂ. 23,728/– ಗಳಿಗೆ ಖರೀದಿಸಿದ್ದು, ಹಳೆಯ ಟೈರ್‌ಗಳನ್ನು ಏನು ಮಾಡಲಾಗಿದೆ? ಎಂಬುದರ ಕುರಿತು ಯಾವುದೇ ಮಾಹಿತಿ ನೀಡಿರುವುದಿಲ್ಲ. ಆದ್ದರಿಂದ ಈ ಕುರಿತು ಸೂಕ್ತ ಮಾಹಿತಿ ನೀಡುವವರೆಗೆ **ರೂ. 23,728/–** ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.<br>**ಆ) ಲಾಗ್ ಪುಸ್ತಕ ಪರಿಶೀಲನೆಯಲ್ಲಿ ಕಂಡುಬಂದ ನ್ಯೂನತೆಗಳು:**<br>❖ ಇಂಧನವನ್ನು ಖರೀದಿಸದ ಬಿಲ್ ಸಂಖ್ಯೆಯನ್ನು ಲಾಗ್ ಪುಸ್ತಕದಲ್ಲಿ ಕೆಲವೊಮ್ಮೆ ನಮೂದಿಸಿರುವುದಿಲ್ಲ.<br>❖ ಕಿ.ಮೀ ಗಳನ್ನು ಲೆಕ್ಕ ಹಾಕುವಾಗ ಕೆಲವೊಮ್ಮೆ ತಪ್ಪಾಗಿ ಲೆಕ್ಕ ಹಾಕಲಾಗಿದೆ. | **(ಅ) ಹಳೆ ಟೈಯರ್‌ಗಳನ್ನು ಕಛೇರಿಯಲ್ಲಿ ಕಾಯ್ದಿರಿಸಲಾಗಿದೆ.**<br>**(ಆ) ಸರಿಪಡಿಸಿ ಕೊಳ್ಳಲಾಗುವುದು.** | | |
| **27** | **27** | **ಸೇವಾವಹಿ ಪರಿಶೀಲನೆ:**<br>2017–18 ನೇ ಸಾಲಿನಲ್ಲಿ ಭೋಧಕ ಮತ್ತು ಭೋಧಕೇತರ ನೌಕರರ ಸೇವಾವಹಿಗಳನ್ನು ಪರಿಶೀಲಿಸಿದ್ದು, ಈ ಕೆಳಗಿನಂತೆ ಕೆಲವೊಂದು ನ್ಯೂನತೆಗಳಿದ್ದು ಸರಿಪಡಿಸುವಂತೆ ಸೂಚಿಸಿದೆ.<br>1. ಹೆಚ್.ಕೆ. ಶ್ರುತಿ ಯೊ.ಸ — 1. ಹುಟ್ಟಿದ ವರ್ಷ ಶತ ವರ್ಷದಲ್ಲಿರಬೇಕು. 2. ಪ.ಜಾತಿ/ಪಂಗಡವಾಗಿದ್ದರೆ ಮೂಲ ಪ್ರಮಾಣಪತ್ರ ಎಸ್.ಆರ್ ಗೆ ಅಂಟಿಸಬೇಕು.<br>2. ನಾರಾಯಣಸ್ವಾಮಿ ಎಮ್.ಎಸ್ — ವೈದ್ಯಕೀಯ ಪರೀಕ್ಷೆ ಪ್ರಮಾಣಿಕರಿಸುವ ಅಧಿಕಾರಿಯ ಸಹಿ ಮತು ಪದನಾಮ ಇರಬೇಕು.<br>3. ಡಾ.ವೀರನಾರಾಯಣ ಎನ್.ಕೆ ಪಾಂಡುರಂಗ — | **ಸರಿಪಡಿಸಲಾಗಿದೆ.** | | |

<table>
<tr><td></td><td></td><td>
<table>
<tr><td>4.</td><td>ಡಾ.ಶಿವಾನಿ</td><td>ಫೋಟೊ ಅಂಟಿಸಿಲ್ಲ</td></tr>
<tr><td>5.</td><td>ಡಾ.ಕೃಷ್ಣ ಜೋಷಿ</td><td rowspan="2">1. ಹುಟ್ಟಿದ ವರ್ಷ ಶತ ವರ್ಷದಲ್ಲಿರಬೇಕು.<br>2. ಪ.ಜಾತಿ/ಪಂಗಡವಾಗಿದ್ದರೆ ಮೂಲ ಪ್ರಮಾಣಪತ್ರ ಎಸ್.ಆರ್ ಗೆ ಅಂಟಿಸಬೇಕು.</td></tr>
<tr><td>6.</td><td>ಡಾ.ಶರತ್ ಚಂದ್ರಸ್ವಾಮಿ</td></tr>
<tr><td>7.</td><td>ಡಾ. ವಿನಯ.ಪಿ</td><td rowspan="2">ವೈಯಕ್ತಿಕ ಗುರುತಿನ ಚಿಹ್ನೆ, ಖಾಯಂ ಮನೆ ವಿಳಾಸ ಬರಿಬೇಕು</td></tr>
<tr><td>8.</td><td>ಭಾಸ್ಕರ ಭಟ್ಟ ಜೋಷಿ</td></tr>
<tr><td>9.</td><td>ಡಾ.ರೇಖಾದೇವಿ. ಹೆಚ್.ಎಸ್</td><td>ಎಸ್.ಟಿ ಗೆ ಸೇರಿರುವುದರಿಂದ ಪ್ರಮಾಣಪತ್ರ ಎಸ್ಆರ್‌ಗೆ ಅಂಟಿಸಬೇಕು. ಚಿಹ್ನೆ, ಖಾಯಂ ಮನೆ ವಿಳಾಸ ಬರಿಬೇಕು</td></tr>
<tr><td>10.</td><td>ಪರಿತೋಷ್ ದಾಸ್</td><td>1. ಎಸ್.ಸಿ ಗೆ ಸೇರಿರುವುದರಿಂದ ಪ್ರಮಾಣಪತ್ರ ಎಸ್.ಆರ್ ಗೆ ಅಂಟಿಸಬೇಕು.<br>2. ವೈಯಕ್ತಿಕ ಗುರುತಿನ ಚಿಹ್ನೆ, ಖಾಯಂ ಮನೆ ವಿಳಾಸ ನಮೂದಿಸುವುದು.</td></tr>
<tr><td>11.</td><td>ಋಷಿದೇವ್ ಭಾರ್ಗವ್. ಎನ್</td><td>ಖಾಯಂ ಮನೆ ವಿಳಾಸ ನಮೂದಿಸುವುದು.</td></tr>
</table>
</td><td></td><td></td><td></td></tr>
<tr><td>28</td><td>28</td><td>ವೇತನೇತರ ಬಿಲ್ಲುಗಳಲ್ಲಿನ ನ್ಯೂನತೆಗಳು<br>ವೇತನೇತರ ಬಿಲ್ಲುಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿದೆ:<br>• ನಿಗದಿತ ನಮೂನೆಯಲ್ಲಿ ತಯಾರಿಸಿರುವುದಿಲ್ಲ.<br>• ಎ.ಸಿ, ಡಿ.ಸಿ ಅಥವಾ ಎನ್.ಡಿ.ಸಿ ಬಿಲ್ಲುಗಳು ಎಂದು ತಿಳಿದು ಬರುವುದಿಲ್ಲ.<br>• ಒಂದೇ ಕಡೆ ಒಂದೇ ದಿನ ಖರೀದಿಸಿ, 3–4 ರಶೀದಿಗಳಿರುತ್ತವೆ. ಎಲ್ಲಾ ಬಿಲ್ಲುಗಳು ಸೇರಿದರೆ ರೂ.5,000/– ಗಳು ಮೀರಿರುತ್ತದೆ. ಇದಕ್ಕೆ ಕೊಟೇಷನ್ ಕರೆದಿರುವುದಿಲ್ಲ.<br>• ರೂ.5,000/– ಮೀರಿರುವುದಕ್ಕೆ ಕೆ.ಟಿ.ಪಿ.ಪಿ ನಿಯಮಾನುಸಾರ ಕೊಟೇಷನ್ ಕರೆದಿರುವುದಿಲ್ಲ. ಕರೆದಿದ್ದರೂ ಸಹ, ಸಮಿತಿ ರಚನೆ ಮಾಡಿರುವುದಿಲ್ಲ. ತುಲನಾತ್ಮಕ ಪಟ್ಟಿಯಲ್ಲಿ ಯಾವ ಕಂಪನಿ/ದರಪಟ್ಟಿ ಒಪ್ಪಿಗೆಯಾಗಿರುತ್ತದೆ ಎಂದು ನಮೂದಿಸಿರುವುದಿಲ್ಲ.</td><td>ಸರಿಪಡಿಸಿ ಕೊಳ್ಳಲಾಗುವುದು</td><td></td><td></td></tr>
</table>

| | | | | | |
|---|---|---|---|---|---|
| | | • ಒಂದೊಂದು ಸಾಮಾಗ್ರಿಗೆ ಒಂದೊಂದು ಬಿಲ್ಲನ್ನು ತಯಾರಿಸಿ ಚೆಕ್ ಅನ್ನು ತಯಾರಿಸಲಾಗಿದೆ.<br>• ಎ.ಸಿ ಬಿಲ್ಲುಗಳನ್ನು (ಮುಂಗಡ ಬಿಲ್ಲಿಗೆ) ತಯಾರಿಸಿ ಚೆಕ್ ಅನ್ನು ವಿತರಿಸಿದ ಒಂದು ತಿಂಗಳೊಳಗೆ ಎನ್.ಡಿ.ಸಿ ಬಿಲ್ಲನ್ನು ತಯಾರಿಸಿರುವುದಿಲ್ಲ.<br>• ಬಿಲ್ಲನ್ನು ತಯಾರಿಸಿದ್ದರೂ ಸಹ ಓಚರ್‌ವಾರು/ ದಿನಾಂಕವಾರು ಪಟ್ಟಿಯನ್ನು ತಯಾರಿಸಿರುವುದಿಲ್ಲ ಹಾಗೂ ನಿಗದಿತ ಬಿಲ್ಲಿನಲ್ಲಿ ಬಿಲ್ಲನ್ನು ತಯಾರಿಸಿರುವುದಿಲ್ಲ.<br>• ಯಾವುದೇ ಬ್ಯಾಂಕ್ ಖಾತೆಗೆ ಸಂಬಂಧಿಸಿದಂತೆ ನಗದು ಪುಸ್ತಕವನ್ನು ನಿರ್ವಹಿಸಿರುವುದಿಲ್ಲ. ಸರ್ಕಾರದಿಂದ ನಿಗದಿಪಡಿಸಿರುವ ನಗದು ಪುಸ್ತಕವನ್ನು ನಿರ್ವಹಿಸಿರುವುದಿಲ್ಲ. ಸರ್ಕಾರದಿಂದ ನಿಗದಿಪಡಿಸಿರುವ ನಗದು ಪುಸ್ತಕವನ್ನು ನಿರ್ವಹಿಸಲು ಸೂಚಿಸಿದೆ (ಬ್ಯಾಂಕ್ ಖಾತೆವಾರು). | | | |
| **29** | **29** | **ವೈದ್ಯಕೀಯ ವೆಚ್ಚ ಮರುಪಾವತಿ ಕುರಿತು:**<br>• 2017–18ನೇ ಸಾಲಿನಲ್ಲಿ ವೋಚರ್‌ಗಳ ಲೆಕ್ಕತನಿಖೆ ಕೈಗೊಂಡಿರುವಾಗ ವೈದ್ಯಕೀಯ ವೆಚ್ಚ ಮರುಪಾವತಿ ಸಲ್ಲಿಸುವಾಗ, ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಪರಿಶೀಲಿಸಬೇಕಾಗಿದೆ.<br>• ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಮರು ಪಾವತಿಯಾಗಿದೆ ಎಂದು ನಮೂದಿಸಿರಬೇಕು.<br>• ಯಾವ ಕಾಯಿಲೆಗೆ ವೈದ್ಯಕೀಯ ಮರುಪಾವತಿ ಕೋರಿರುತ್ತಾರೆ ಎಂದು ಸರಿಯಾಗಿ ನಮೂದಿಸಿರಬೇಕು.<br>• ಯಾರಿಗೆ (ಸ್ವಂತಃ/ಗಂಡ/ಹೆಂಡತಿ/ತಂದೆ/ತಾಯಿ/ಮಕ್ಕಳು) ವೈದ್ಯಕೀಯ ಮರುಪಾವತಿಯನ್ನು ಕ್ಲೇಮು ಮಾಡಿರುತ್ತಾರೆಂದು ಸ್ಪಷ್ಟವಾಗಿ ನಮೂದಿಸಿರಬೇಕು.<br>• ಅವಲಂಬಿತ ಪ್ರಮಾಣ ಪತ್ರ ವನ್ನು ತಂದೆ/ತಾಯಿ/ಗಂಡ/ಹೆಂಡತಿ/ಮಕ್ಕಳು ಅರ್ಜಿ ಜೊತೆಗೆ ಲಗತ್ತಿಸಿರಬೇಕು.<br>• ಅರ್ಜಿ ಸಲ್ಲಿಕೆ ದಿನಾಂಕವನ್ನು ನಮೂದಿಸಿದ್ದು, ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ವೈದ್ಯಕೀಯ ಕ್ಲೇಮು ಪಡೆದಿರುತ್ತಾರೆಂದು ನಮೂದಿಸಬೇಕು.<br>• ಔಷಧಿ ಖರೀದಿಸಿರುವುದಕ್ಕೆ ವೈದ್ಯರಿಂದ ಪಡೆದ ಚೀಟಿಯನ್ನು ಲಗತ್ತಿಸಿ ಎಷ್ಟು ಪ್ರಮಾಣ & | **ಸರಿಪಡಿಸಿ ಕೊಳ್ಳಲಾಗುವುದು** | | |

| | | | | | |
|---|---|---|---|---|---|
| | | ದಿನಕ್ಕೆ ಎಷ್ಟು ಬಾರಿ ಹಾಗೂ ಎಷ್ಟು ದಿನಕ್ಕೆ ಎಂದು ನಮೂದಿಸಿರಬೇಕು.<br>• ಆಸ್ಪತ್ರೆಗೆ ದಾಖಲಾಗಿದ್ದ ಪಕ್ಷದಲ್ಲಿ ಡಿಸ್‌ಚಾರ್ಜ್ ಸಮರಿ ಲಗತ್ತಿಸಿರಬೇಕು.<br>• ಹೊರ ರೋಗಿಗಳ (ಓಪಿಡಿ) ವೈದ್ಯರ ಫೀಸು ಪ್ರತಿ ದಿನಕ್ಕೆ ರೂ.135/- ಮೊತ್ತ ಹಾಗೂ ಒಳರೋಗಿಗಳ ವೈದ್ಯರ ಫೀಸು ಪ್ರತಿ ದಿನಕ್ಕೆ ರೂ.270/- ಮಾತ್ರ ಮರುಪಾವತಿಸಬೇಕು.<br>• ಕ್ಲೇಮು ಮಾಡಿರುವ ಪಾವತಿಸಿದ ಪಟ್ಟಿಯನ್ನು ಲಗತ್ತಿಸಿರಬೇಕು.(ರಶೀದಿ, ಪ್ರಿಸ್ಕ್ರಿಪ್ಷನ್ ವೈಸ್ ಮತ್ತು ದಿನಾಂಕವಾರು)<br>• ಮರುಪಾವತಿಸಲು ಅವಕಾಶ ಇಲ್ಲದಿದ್ದ ರಶೀದಿಗಳಿಗೆ ಮರುಪಾವತಿಸಬಾರದು.<br>• ಮರುಪಾವತಿಗೆ ಅವಕಾಶವಿಲ್ಲದ ಬಿಲ್ಲುಗಳು ಕೆಂಪು ಶಾಹಿಯಲ್ಲಿ ಕಡತಗೊಳಿಸಿರಬೇಕು.<br>• ಸರ್ಕಾರದಿಂದ ಮಾನ್ಯತೆ ಪಡೆಯದ ಆಸ್ಪತ್ರೆಗಳಿಂದ ಚಿಕಿತ್ಸೆ ಪಡೆದಿದ್ದ ವರ್ಷದಲ್ಲಿ ಮರುಪಾವತಿಸಲು ಬರುವುದಿಲ್ಲ.<br>• ದೀರ್ಘಾವಧಿ ಕಾಯಿಲೆ (Chronic Disease) ಇದ್ದಲ್ಲಿ, ಸದರೀ ಕಾಯಿಲೆಯ ಪ್ರಮಾಣಪತ್ರವನ್ನು ಸರ್ಕಾರದ/ಅಧಿಕೃತ ವೈದ್ಯರಿಂದ ಪ್ರಮಾಣಿಸಿರಬೇಕು.<br>• ವೈದ್ಯಕೀಯ ವೆಚ್ಚ ಮರುಪಾವತಿಯನ್ನು 3 ತಿಂಗಳೊಳಗೆ ಕಛೇರಿಗೆ ಸಲ್ಲಿಸಬೇಕು ಮತ್ತು ಅವುಗಳನ್ನು ಮಾತ್ರ ಪರಿಗಣಿಸಬೇಕು ನಂತರ ಸಲ್ಲಿಸಿದ ಬಿಲ್ಲುಗಳು ಸ್ವೀಕೃತವಾಗಿದ್ದು, ಮಂಜೂರಾತಿ ನೀಡಲಾಗಿದೆ. ಇದಕ್ಕೆ ವಿಳಂಬ ಮನ್ನಣೆ ಪತ್ರ ಲಗತ್ತಿಸಿರಬೇಕು.<br>• ವಿಳಂಬ ಮನ್ನಣೆಗೆ ಅನುಮೋದನೆ ಅಧಿಕಾರಿಗಳು ಇವರಿಗೆ ಎಷ್ಟು ಮೊತ್ತದವರೆಗೆ ಮಂಜೂರು ಮಾಡಬಹುದು ಹಾಗೂ ಎಷ್ಟು ದಿನದವರೆಗೂ ವಿಳಂಭ ಮನ್ನಣೆ ಮಾಡಬಹುದೆಂದು ತಿಳಿದು, ಹೆಚ್ಚಿನ ಮೊತ್ತ ಇದ್ದಲ್ಲಿ ಮಂಜೂರಾತಿಯನ್ನು ಸರ್ಕಾರದಿಂದ ಪಡೆಯಬೇಕಾಗುತ್ತದೆ.<br>• ತಯಾರಿಸಿದ ಬಿಲ್ಲಿಗೆ ಬಿಲ್ಲಿನ ಸಂಖ್ಯೆ ನಮೂದಿಸಿರಬೇಕು.<br>• ಅಧಿಕಾರಿ/ನೌಕರರು ಶಸ್ತ್ರ ಚಿಕಿತ್ಸೆಗೆ ಮುಂಗಡವನ್ನು ಕ್ಲೇಮು ಮಾಡಲಾಗಿದ್ದು, ಅದಕ್ಕೆ ಶೇ.80 ರಷ್ಟು ಮಾತ್ರ ಪಾವತಿಸಬೇಕಾಗಿರುತ್ತದೆ.<br>• ಮುಂಗಡ ಹಣ ಪಡೆದು ಚಿಕಿತ್ಸೆ ಮುಗಿದ ಕೂಡಲೇ ಅಂತಿಮ ಬಿಲ್ಲನ್ನು ಒಂದು ತಿಂಗಳೊಳಗೆ ಸಲ್ಲಿಸಿರುಬೇಕು.<br>ಮೇಲಿನ ಎಲ್ಲಾ ಅಂಶಗಳನ್ನು ಪೂರೈಸಿದ್ದಲ್ಲಿ, ಬಿಲ್ಲುಗಳನ್ನು ಪರಿಶೀಲಿಸುವಾಗ ಒಂದೊಂದು | | | |

| | | | | | |
|---|---|---|---|---|---|
| | | ರಸೀದಿಗಳನ್ನೂ ಸಹ ಪರಿಶೀಲಿಸಿ, ಅವಕಾಶವಿಲ್ಲದ ಔಷಧಿಗಳನ್ನು ಹಾಗೂ ದರಪಟ್ಟಿ ಪ್ರಕಾರ ಮೊತ್ತಗಳನ್ನು ಕೆಂಪು ಶಾಹಿಯಲ್ಲಿ ನಮೂದಿಸಿ, ಒಟ್ಟು ಮೊತ್ತವನ್ನು ಅಕ್ಷರಗಳೊಂದಿಗೆ ಕೆಂಪು ಶಾಹಿಯಲ್ಲಿ ನಮೂದಿಸಿ, ಮಂಜೂರಾತಿ ನೀಡುವ ಅಧಿಕಾರಿಗಳು ಸಹಿ ಮಾಡಿರಬೇಕು. | | | |
| **30** | **30** | **ದಾಸ್ತಾನು ವಹಿಯ ಪರಿಶೀಲನೆ ವೇಳೆ ಕಂಡು ಬಂದ ನ್ಯೂನತೆಗಳು:**<br>• ಲೇಖನಾ ಸಾಮಾಗ್ರಿಗಳನ್ನು ಖರೀದಿಸಿದ ಬಿಲ್‌ಗಳಿಗೆ ದಾಸ್ತಾನು ವಹಿಯ ಪುಟ ಸಂಖ್ಯೆಯನ್ನು ನಮೂದಿಸದೇ ಹಣಕಾಸು ಅಧಿಕಾರಿಗಳಿಂದ ಸಹಿ ಪಡೆಯಲಾಗಿದೆ.<br>• ಎಲ್ಲಾ ಬಿಲ್‌ಗಳಲ್ಲಿ ಕೇವಲ ಸಹಿಯನ್ನು ಮಾತ್ರ ಮಾಡಲಾಗಿದ್ದು, ಯಾವುದೇ ಮೊಹರು ಇರುವುದಿಲ್ಲ.<br>• ಖರೀದಿಗಳನ್ನು ಪ್ರತ್ಯೇಕವಾಗಿ ನಮೂದಿಸುವ ಖರೀದಿ ವಹಿಯನ್ನು ನಿರ್ವಹಿಸಿರುವುದಿಲ್ಲ.<br>• ಸಾಮಾಗ್ರಿಗಳನ್ನು ಪಡೆದವರ ಸಹಿಯನ್ನು ಪಡೆದಿರುವುದಿಲ್ಲ.<br>• ಸಾಮಗ್ರಿಗಳನ್ನು ನೀಡಲು ಯಾವುದೇ ಲಿಖಿತ ಬೇಡಿಕೆ ಪತ್ರಗಳನ್ನು ಪಡೆದಿರುವುದಿಲ್ಲ. | **ಸರಿಪಡಿಸಿ ಕೊಳ್ಳಲಾಗುವುದು** | | |
| **31** | **31** | **ಸಾಮಾನ್ಯ ಅಭಿಪ್ರಾಯ:**<br>• ಡಿ.ಸಿ.ಬಿ ವಹಿಗಳನ್ನು ನಿರ್ವಹಿಸದಿರುವುದು ಮತ್ತು ಸ್ವೀಕೃತಿಗಳು ಬ್ಯಾಂಕ್ ಖಾತೆಗೆ ಜಮೆ ಆಗಿರುವುದನ್ನು ಖಚಿತಪಡಿಸಿಕೊಳ್ಳಲು ಕಡ್ಡಾಯವಾಗಿ ಸಮನ್ವಯ (Reconciliation) ಕಾರ್ಯವನ್ನು ಕೈಗೊಳ್ಳುವುದು ಅಗತ್ಯವಿದೆ.<br>• ವಿಶ್ವವಿದ್ಯಾಲಯದ ಸಿಂಡಿಕೇಟ್ ಸಮಿತಿಯು ಹಾಗೂ ನಿರ್ವಹಣೆ ಮತ್ತು ವೆಚ್ಚಗಳ ಮೇಲೆ ತನ್ನ ನಿಗಾ ಹೊಂದಿರುತಕ್ಕದ್ದು.<br>• ವಿಶ್ವವಿದ್ಯಾಲಯವು 9 ಬ್ಯಾಂಕ್ ಖಾತೆಗಳನ್ನು ಹೊಂದಿದ್ದು, ಈ ಬ್ಯಾಂಕ್ ಖಾತೆಗಳನ್ನು ಕನಿಷ್ಠ ಸಂಖ್ಯೆಗೆ ಮಿತಿಗೊಳಿಸಿ ತನ್ನ ವ್ಯವಹಾರಗಳನ್ನು ನಿರ್ವಹಿಸತಕ್ಕದ್ದು.<br>• ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಕಲಂ 46(3)ರ ನಿರ್ದೇಶನುಸಾರ, ನಿಧಿಯ ಬಳಕೆಯ ಉದ್ದೇಶಗಳಲ್ಲಿ ಸ್ಪಷ್ಟನೆ ತರಲು ಅಗತ್ಯವಾದ ಎಲ್ಲಾ ಪರಿನಿಯಮಗಳನ್ನು ರಚಿಸಿಕೊಳ್ಳುವುದು ಅಗತ್ಯವಿದೆ. | **ಮುಂದಿನ ದಿನಗಳಲ್ಲಿ ಅನುಸರಿಸಲಾಗುವುದು.** | | |

| | | | | | |
|---|---|---|---|---|---|
| | | • ಹಣಕಾಸಿನ ವಹಿವಾಟು ನಡೆಸುವ ಎಲ್ಲಾ ನಗದು ವಹಿಯನ್ನು ಕಡ್ಡಾಯವಾಗಿ ನಿರ್ವಹಿಸತಕ್ಕದ್ದು.<br>• ಲೆಕ್ಕಪತ್ರಗಳನ್ನು ಸಕಾಲದಲ್ಲಿ ಕ್ರೂಢೀಕರಿಸಿ ಹಣಕಾಸು ಸಮಿತಿ ಮತ್ತು ಸಿಂಡಿಕೇಟ್ ಅನುಮೋದನೆ ಪಡೆದು ಲೆಕ್ಕಪರಿಶೋಧನೆಗೆ ಸಲ್ಲಿಸತಕ್ಕದ್ದು.<br>• ಲೆಕ್ಕಪರಿಶೋಧನೆ ದಾಖಲಾತಿಗಳನ್ನು ಸಲ್ಲಿಸದಿರುವುದು/ ಅಪೂರ್ಣ ದಾಖಲೆಗಳನ್ನು ಸಲ್ಲಿಸುವುದರಿಂದ ಲೆಕ್ಕಪರಿಶೋಧನೆಯಲ್ಲಿ ಉಂಟಾಗುವ ಅಡಚಣೆಯನ್ನು ಗಮನಿಸಿ, ಈ ಸಮಸ್ಯೆಯನ್ನು ಪರಿಹರಿಸುವಲ್ಲಿ ಪರಿಣಾಮಕಾರಿ ಆಡಳಿತಾತ್ಮಕ ಕ್ರಮಕೈಗೊಳ್ಳತಕ್ಕದ್ದು.<br>• ಲೆಕ್ಕಪತ್ರಗಳ ನಿರ್ವಹಣೆಯಲ್ಲಿ & ಹಣಕಾಸು ವಹಿವಾಟುಗಳಲ್ಲಿ ಲೆಕ್ಕಪರಿಶೋಧನೆ ಗಮನಿಸಿ ವರದಿ ಮಾಡಲಾದ ನ್ಯೂನತೆಗಳನ್ನು ಸರಿಪಡಿಸಿಕೊಂಡು ಹಣಕಾಸು ನಿರ್ವಹಣೆಯಲ್ಲಿ ಶಿಸ್ತು ರೂಢೀಸುವುದು ಅಗತ್ಯವಿದೆ.<br>• ವಿಶ್ವವಿದ್ಯಾಲಯ ಹಣಕಾಸು ಲೆಕ್ಕಪತ್ರದಲ್ಲಿ ಎಲ್ಲಾ ಸ್ವೀಕೃತಿಗಳು ಹಾಗೂ ಪಾವತಿಗಳನ್ನು ಸೇರ್ಪಡೆಗೊಳಿಸಲು ಆದ್ಯತೆ ನೀಡಬೇಕಿದೆ. ಚಾಲ್ತಿ ಹೊಣೆಗಾರಿಕೆ & ಆಸ್ತಿಗಳ ಮೊಬಲಗು ಬಾಬ್ತು ಏರುಪೇರುಗಳಿಲ್ಲದಂತೆ ಲೆಕ್ಕತೋರಿಸುವ ಅಗತ್ಯವಿದೆ.<br>• ಕಛೇರಿಯಲ್ಲಿ ದಾಖಲೆಗಳ ನಿರ್ವಹಣೆಯಲ್ಲಿ ಸಾಕಷ್ಟು ಸುಧಾರಣೆಯಾಗಬೇಕಾಗಿದೆ. | | | |

**Sd/-**
**ಅಪರ ನಿರ್ದೇಶಕರು,**
**ಬೆಂಗಳೂರು ಪ್ರಾಂತೀಯ ಕಛೇರಿ,**
**ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು**
**ಲೆಕ್ಕಪತ್ರ ಇಲಾಖೆ, ಬೆಂಗಳೂರು**

## ಅನುಬಂಧ–1

## 2016–17ನೇ ಸಾಲಿಗೆ ಸಂಸ್ಕೃತ ವಿಶ್ವವಿದ್ಯಾಲಯದ ವರದಿಯಲ್ಲಿ ಕೈಬಿಟ್ಟ ಕಂಡಿಕೆಗಳ ವಿವರ

| ಕ್ರ.ಸಂ. | ವರದಿಯ ಸಾಲು | ಕಂಡಿಕೆ ಸಂಖ್ಯೆ | ವಿವರ | ಆಕ್ಷೇಪಣಾ ಮೊತ್ತ (ರೂ.) | ವಸೂಲಾತಿ ಮೊತ್ತ | ಷರಾ |
|---|---|---|---|---|---|---|
| 1. | ಯಾವುದು ಇರುವುದಿಲ್ಲ | | | | | |

**Sd/-**
ಅಪರ ನಿರ್ದೇಶಕರು,
ಬೆಂಗಳೂರು ಪ್ರಾಂತೀಯ ಕಛೇರಿ,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು
ಲೆಕ್ಕಪತ್ರ ಇಲಾಖೆ, ಬೆಂಗಳೂರು

## ಅನುಬಂಧ–2

### ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2008–09 ರಿಂದ 2016–17ನೇ ಸಾಲಿನವರೆಗೆ ಬಾಕಿ ಇರುವ ಆಕ್ಷೇಪಣೆ ಮೊತ್ತ ಮತ್ತು ವಸೂಲಾತಿ ಮೊತ್ತದ ಕಂಡಿಕೆಯ ವಿವರಗಳ ತಃಖ್ತೆ

| ಕ್ರ.ಸಂ. | ವರ್ಷ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|
| **1** | **2** | **3** | **4** |
| **1.** | 2008–09 ರಿಂದ 2010–11 | 21,07,369.00 | 24,000.00 |
| **2.** | 2011–12 | 99,12,345.00 | 70,368.00 |
| **3.** | 2012–13 ರಿಂದ 2014–15 | 25,23,23,437.00 | 29,16,029.00 |
| **4.** | 2015–16 | 8,61,71,747.00 | 4,35,533.00 |
| **5.** | 2016–17 | 20,51,433.00 | 21,58,738.00 |
| | ಒಟ್ಟು ಮೊತ್ತ ರೂ. | **35,25,66,331.00** | **56,04,668.00** |

**Sd/-**
ಅಪರ ನಿರ್ದೇಶಕರು,
ಬೆಂಗಳೂರು ಪ್ರಾಂತೀಯ ಕಛೇರಿ,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು
ಲೆಕ್ಕಪತ್ರ ಇಲಾಖೆ, ಬೆಂಗಳೂರು

## ಅನುಬಂಧ–3

### ಲೆಕ್ಕ ಸಮನ್ವಯದಲ್ಲಿ ಕಂಡುಬಂದಿರುವ ವ್ಯತ್ಯಾಸ

| ಕ್ರ.ಸಂ. | ಬ್ಯಾಂಕ್ ಖಾತೆ ಸಂಖ್ಯೆ | ವಾರ್ಷಿಕ ಲೆಕ್ಕಪತ್ರದನ್ವಯ ಅಂತಿಮ ಶಿಲ್ಕು | ಬ್ಯಾಂಕ್ ಖಾತೆಯಲ್ಲಿನ ಅಂತಿಮ ಶಿಲ್ಕು | ವ್ಯತ್ಯಾಸ |
|---|---|---|---|---|
| **1.** | SBI Exam section A/C- 64187713727 | 26,44,517.75 | 25,17,416.75 | 1,27,101.00 |
| **2.** | SBI Prasaranga A/C No- 64181271353 | 14,94,566.00 | 14,77,901.00 | 16,665.00 |
| **3.** | SBI-SB A/C No- 64034730475 | 1,65,465.00 | 4,07,573.00 | -2,42,108.00 |
| **4.** | SBI-SB A/C No- 64088089822 | 21,356.50 | 21,356.50 | - |
| **5.** | SBI-SB A/C N0- 64069994360 | 4,23,35,877.95 | 4,59,63,915.95 | -36,28,038.00 |
| **6.** | SBI-SB NSS A/C No-64166964630 | 81,316.50 | 93,624.50 | -12,308.00 |
| **7.** | SBI Block Current - 64140220134 | 6,389,694.50 | 63,89,644.50 | 50.00 |
| | ಒಟ್ಟು ಮೊತ್ತ ರೂ. | **5,62,73,619** | **6,00,12,257** | **37,38,638.00** |

**Sd/-**
ಅಪರ ನಿರ್ದೇಶಕರು,
ಬೆಂಗಳೂರು ಪ್ರಾಂತೀಯ ಕಛೇರಿ,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು
ಲೆಕ್ಕಪತ್ರ ಇಲಾಖೆ, ಬೆಂಗಳೂರು

## ಅನುಬಂಧ-4

## ನಿಶ್ಚಿತ ಠೇವಣಿಗಳಲ್ಲಿನ ವ್ಯತ್ಯಾಸ

| ಕ್ರ. ಸಂ. | ನಿಶ್ಚಿತ ಠೇವಣಿಯ ಖಾತೆ ಸಂಖ್ಯೆ | ಬ್ಯಾಂಕಿನ ಹೆಸರು | ಬಡ್ಡಿ ಶೇಕಡವಾರು (%) | ವಾರ್ಷಿಕ ಲೆಕ್ಕಪತ್ರದನ್ವಯ ಅಂತಿಮ ಶಿಲ್ಕು | ಬ್ಯಾಂಕಿನ ಠೇವಣಿಯ ಕರಾರು ಪತ್ರದನ್ವಯ ಮೊತ್ತ (ರೂ.) | ವ್ಯತ್ಯಾಸ |
|---|---|---|---|---|---|---|
| **1.** | 64216128421 | ಎಸ್.ಬಿ.ಎಮ್ | 6.90 | 4000758.00 | 4283224.00 | 2,82,466.00 |
| **2.** | 6421612512 | ಎಸ್.ಬಿ.ಎಮ್ | 6.90 | 4000758.00 | 4283224.00 | 2,82,466.00 |
| **3.** | 64216128534 | ಎಸ್.ಬಿ.ಎಮ್ | 6.90 | 2000379.00 | 2141612.00 | 1,41,233.00 |
| **4.** | 6419102536 | ಎಸ್.ಬಿ.ಎಮ್ | 4.25 | 17485361.00 | 18052141.00 | 5,66,780.00 |
| **5.** | 64093495259 | ಎಸ್.ಬಿ.ಎಮ್ | 6.50 | 2571941.00 | 2583698.00 | 11,757.00 |
| **6.** | 64114146015 | ಎಸ್.ಬಿ.ಎಮ್ | 6.50 | 3602222.00 | 3695885.00 | 93,663.00 |
| **7.** | 64117904044 | ಎಸ್.ಬಿ.ಎಮ್ | 6.50 | 7145934.00 | 7440713.00 | 2,94,779.00 |
| **8.** | 64135611115 | ಎಸ್.ಬಿ.ಎಮ್ | 6.50 | 5489921.00 | 5765260.00 | 2,75,339.00 |
| **9.** | 64141741533 | ಎಸ್.ಬಿ.ಎಮ್ | 6.50 | 5370446.00 | 5639795.00 | 2,69,349.00 |
| **10.** | 64153058529 | ಎಸ್.ಬಿ.ಎಮ್ | 6.50 | 4554978.00 | 4783428.00 | 2,28,450.00 |
| **11.** | 64162364285 | ಎಸ್.ಬಿ.ಎಮ್ | 6.75 | 4534257.00 | 4605453.00 | 71,196.00 |
| **12.** | 64169083886 | ಎಸ್.ಬಿ.ಎಮ್ | 6.90 | 4446266.00 | 4466646.00 | 26,380.00 |
| **13.** | 64186432216 | ಎಸ್.ಬಿ.ಎಮ್ | 6.90 | 3028147.00<br>988000.00 | 4284112.00 | 2,67,965.00 |
| **14.** | 64126098871 | ಎಸ್.ಬಿ.ಎಮ್ | 6.50 | 6181845.00 | 6491888.00 | 3,10,043.00 |
| **15.** | 64131930940 | ಎಸ್.ಬಿ.ಎಮ್ | 6.50 | 5562208.00 | 5841176.00 | 2,78,968.00 |

| | | | | | | |
|---|---|---|---|---|---|---|
| **16.** | 64093495191 | ಎಸ್.ಬಿ.ಎಮ್ | 6.50 | 927145.00 | 945023.00 | 17,878.00 |
| **17.** | 64096519813 | ಎಸ್.ಬಿ.ಎಮ್ | 6.50 | 3510320.00 | 3656354.00 | 1,46,034.00 |
| **18.** | 64114146117 | ಎಸ್.ಬಿ.ಎಮ್ | 6.50 | 1353478.00 | 1414920.00 | 61,442.00 |
| **19.** | 64117904215 | ಎಸ್.ಬಿ.ಎಮ್ | 6.50 | 2678944.00 | 2807998.00 | 1,29,054.00 |
| **20.** | 64126098735 | ಎಸ್.ಬಿ.ಎಮ್ | 6.50 | 1478126.00 | 1552255.00 | 74,129.00 |
| **21.** | 64176196700 | ಎಸ್.ಬಿ.ಎಮ್ | 6.50 | 4265847.00 | 4399884.00 | 1,34,037.00 |
| | | | | | ಒಟ್ಟು ಮೊತ್ತ ರೂ. | **39,63,408.00** |

**Sd/-**
**ಅಪರ ನಿರ್ದೇಶಕರು,**
**ಬೆಂಗಳೂರು ಪ್ರಾಂತೀಯ ಕಛೇರಿ,**
**ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು**
**ಲೆಕ್ಕಪತ್ರ ಇಲಾಖೆ, ಬೆಂಗಳೂರು**

## ಅನುಬಂಧ–5

## ದತ್ತಿನಿಧಿ ಠೇವಣಿಗಳಲ್ಲಿನ ವ್ಯತ್ಯಾಸ

| ಕ್ರ.ಸಂ. | ನಿಶ್ಚಿತ ಠೇವಣಿಯ ಖಾತೆ ಸಂಖ್ಯೆ | ಬ್ಯಾಂಕಿನ ಹೆಸರು | ಬಡ್ಡಿ ಶೇಕಡವಾರು (%) | ವಾರ್ಷಿಕ ಲೆಕ್ಕಪತ್ರದನ್ವಯ ಠೇವಣಿಯ ಶಿಲ್ಕು |
|---|---|---|---|---|
| 1. | 64196724910 | ಎಸ್.ಬಿ.ಎಮ್ | 7.50 | 1,00,000.00 |
| 2. | 64196720278 | ಎಸ್.ಬಿ.ಎಮ್ | 7.50 | 1,00,000.00 |
| 3. | 64196720290 | ಎಸ್.ಬಿ.ಎಮ್ | 7.50 | 1,00,000.00 |
| 4. | 64196724987 | ಎಸ್.ಬಿ.ಎಮ್ | 7.50 | 1,00,000.00 |
| 5. | 64196725006 | ಎಸ್.ಬಿ.ಎಮ್ | 7.50 | 1,00,000.00 |
| 6. | 64196725028 | ಎಸ್.ಬಿ.ಎಮ್ | 7.50 | 1,00,000.00 |
| 7. | 64196725051 | ಎಸ್.ಬಿ.ಎಮ್ | 7.50 | 3,32,391.00 |
| 8. | 64196725335 | ಎಸ್.ಬಿ.ಎಮ್ | 7.50 | 25,000.00 |
| 9. | 64196725084 | ಎಸ್.ಬಿ.ಎಮ್ | 7.50 | 50,000.00 |
| 10. | 64196725095 | ಎಸ್.ಬಿ.ಎಮ್ | 7.50 | 1,00,000.00 |
| 11. | 64196725302 | ಎಸ್.ಬಿ.ಎಮ್ | 7.50 | 25,000.00 |
| 12. | 64141741419 | ಎಸ್.ಬಿ.ಎಮ್ | 9.00 | 5,00,000.00 |
| 13. | 64141741442 | ಎಸ್.ಬಿ.ಎಮ್ | 9.00 | 5,00,000.00 |
| 14. | 64141741497 | ಎಸ್.ಬಿ.ಎಮ್ | 9.00 | 5,00,000.00 |
| 15. | 64141741747 | ಎಸ್.ಬಿ.ಎಮ್ | 9.00 | 5,00,000.00 |
| 16. | 64200133209 | ಎಸ್.ಬಿ.ಎಮ್ | 7.50 | 1,00,000.00 |
| 17. | 64245007053 | ಎಸ್.ಬಿ.ಎಮ್ | 6.50 | 1,00,001.00 |
| 18. | 37006207188 | ಎಸ್.ಬಿ.ಎಮ್ | 6.25 | 1,00,000.00 |
| 19. | 37541667612 | ಎಸ್.ಬಿ.ಎಮ್ | 6.00 | 1,00,000.00 |
| | | | ಒಟ್ಟು ಮೊತ್ತ | **35,32,392.00** |

**ವಲಪರ ನಿರ್ದೇಶಕರು,**
**ಬೆಂಗಳೂರು ಪ್ರಾಂತೀಯ ಕಛೇರಿ,**
**ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು**
**ಲೆಕ್ಕಪತ್ರ ಇಲಾಖೆ, ಬೆಂಗಳೂರು**

## ಅನುಬಂಧ–8

## ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2017–18ನೇ ಸಾಲಿನ ಕ್ರಿಯಾ ಯೋಜನೆ ಏಪ್ರಿಲ್ 2017 ರಿಂದ ಮಾರ್ಚ್–2018

| | | | | |
|---|---|---|---|---|
| 1 | ಸರ್ಕಾರದಅನುದಾನ | ಲೆಕ್ಕಶೀರ್ಷಿಕೆ | ಮೊತ್ತ (ರೂ) | ಸ್ವೀಕೃತಿಗಳು |
| | ಸಹಾಯಾನುದಾನ ವೇತನಗಳು | 2202–05–103–0–23–101 | 3,76,00,000.00 | 3,76,00,000.00 |
| | ಸಹಾಯಾನುದಾನ–ಸಾಮಾನ್ಯ | 2202–05–103–0–23–103 | 2,00,00,000.00 | 2,00,00,000.00 |
| | ಪಿಂಚಣಿ ನಿಧಿ | 2202–05–103–0–01–118 | 17,00,000.00 | 17,00,000.00 |
| | ಎನ್.ಎಸ್.ಎಸ್. ಅನುದಾನ | – | 4,75,000.00 | 5,50,000.00 |
| | | **ಒಟ್ಟು ಮೊತ್ತ** | **5,97,75,000.00** | **5,98,50,000.00** |
| 2 | ಪರೀಕ್ಷಾ ಶುಲ್ಕ (ಅಂದಾಜು ಮೊತ್ತ) | | | |
| | ಸಂಸ್ಕೃತ ಪ್ರಥಮಾ, ಕಾವ್ಯ, ಸಾಹಿತ್ಯ ಮತ್ತು ವೇದ ಪ್ರಥಮಾ, ಪ್ರವೇಶ ಮತ್ತು ಮೂಲ | | 23,00,000.00 | 23,69,026.00 |
| | ಬಿ.ಎ ವಿದ್ವನ್ಮಧ್ಯಮಾ ಮತ್ತು ಎಂ.ಎ ವಿದ್ವದುತ್ತಮಾ ಹಾಗೂ ಇತರೆ | | 11,00,000.00 | 26,80,291.00 |
| | | **ಒಟ್ಟು ಮೊತ್ತ** | **34,00,000.00** | **50,49,317.00** |
| 3 | ಪಿ.ಎಚ್‌ಡಿ, ಎಂ.ಫಿಲ್ ಪರೀಕ್ಷಾ ಶುಲ್ಕ/ಪರೀಕ್ಷಾ ಶುಲ್ಕ ಹಾಗೂ ಇತರೆ | | **8,00,000.00** | **6,71,580.00** |
| 4 | ಸಂಜೆಕಾಲೇಜಿನ ಪ್ರವೇಶ/ಬೋಧನ/ಪರೀಕ್ಷಾ ಶುಲ್ಕ ಹಾಗೂ ಕಾರ್ಯಾಗಾರ | | **5,00,000.00** | **75,000.00** |
| 5 | ಸಂಸ್ಕೃತ ಪಾಠಶಾಲೆಗಳು ಮತ್ತು ಕಾಲೇಜುಗಳ ಮಾನ್ಯತಾ ಶುಲ್ಕ | | **2,00,000.00** | **1,96,900.00** |
| 6 | ಜ್ಯೋತಿಷ್ಯಡಿಪ್ಲೊಮೊ ಹಾಗೂ ಸಿರ್ಟಫಿಕೇಟ್ ಕೋರ್ಸ್‌ಗಳ ಶುಲ್ಕ ಹಾಗೂ ಇತರೆ | | **18,00,000.00** | **19,07,190.00** |
| 7 | ಘಟಿಕೋತ್ಸವ ಪ್ರಮಾಣಪತ್ರ ಶುಲ್ಕ ಹಾಗೂ ಇತರೆ | | **2,00,000.00** | **7,10,445.00** |
| 8 | ಪ್ರಸಾರಾಂಗ ಪುಸ್ತಕಗಳ ಮಾರಾಟದಿಂದ ಬಂದ ಮೊತ್ತ | | **6,00,000.00** | **5,42,662.00** |
| 9 | ಬ್ಯಾಂಕಿನಖಾತೆಯಲ್ಲಿರುವ ಮೊತ್ತ (ಉಳಿತಾಯ ಖಾತೆ) | 8,21,55,085 | **8,44,86,562.00** | **5,99,44,189.00** |
| | ಬ್ಯಾಂಕ್ ಬಡ್ಡಿ ಸ್ವೀಕೃತಿ (ಉಳಿತಾಯ ಖಾತೆ) | 23,31,477 | | |

| | | | | |
|---|---|---|---|---|
| 10 | ಎಸ್.ಬಿ.ಎಂ. ನ ಸ್ಥಿರನಿಧಿ ಠೇವಣಿ ಮೊತ್ತ | 1,60,89,699 | **1,73,73,361.00** | **1,82,94,482.00** |
| | ಎಸ್.ಬಿ.ಎಂ ನ ಸ್ಥಿರನಿಧಿ ಠೇವಣಿಯಿಂದ ಬಂದ ಬಡ್ಡಿ ಸ್ವೀಕೃತಿ | 12,83,662 | | |
| 11 | ಸ್ಥಿರನಿಧಿ ಠೇವಣಿ (ವಿಶೇಷ ಘಟಕ ಮತ್ತುಗಿರಿಜನಉಪಯೋಜನೆ) | 6,27,40,105 | **6,73,25,553.00** | **6,73,25,553.00** |
| | ಬಡ್ಡಿ ಸ್ವೀಕೃತಿ (ವಿಶೇಷ ಘಟಕ ಮತ್ತುಗಿರಿಜನಉಪಯೋಜನೆ) | 45,85,448 | | |
| 12 | ದತ್ತಿನಿಧಿ ಸ್ಥಾಪಿಸಿದ ಸಂಸ್ಥೆಗಳು ಮತ್ತು ಮೊತ್ತದ ಬಡ್ಡಿ ಸ್ವೀಕೃತಿ | | | |
| | ಶ್ರೀ ಅವಧೂತದತ್ತಪೀಠ, ಮೈಸೂರು | 1,00,000 | | |
| | ಮುಂಡರಗಿ ಶ್ರೀ ಜ. ಅನ್ನದಾನೀಶ್ವರ ಮಠ | 50,000 | | |
| | ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ | 1,00,000 | | |
| | ಧರ್ಮಸ್ಥಳ ಮಂಜುನಾಥಸ್ವಾಮಿದತ್ತಿನಿಧಿ | 1,00,000 | | |
| | --“-- | 1,00,000 | | |
| | ಪಂಡಿತರತ್ನಂ ಶಿರಸಿ ಗುರುಶಾಂತಶಾಸ್ತ್ರಿ ದತ್ತಿನಿಧಿ | 25,000 | | |
| | ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿದ್ದದತ್ತಿನಿಧಿ | 3,32,391 | | |
| | ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳು, ಪೇಜಾವರ ಮಠ | 1,00,000 | | |
| | ಶ್ರೀ ಉತ್ತರಾದಿ ಮಠ, ಬೆಂಗಳೂರು | 1,00,000 | | |
| | ಇನ್‌ಫೋಸಿಸ್ ಫ಼ಂಡೇಶನ್ | 20,00,000 | | |
| | ಶ್ರೀ ಹೊಂಬುಜಜೈನ ಮಠ, ಹುಂಚ ದತ್ತಿನಿಧಿ | 1,00,000 | | |
| | ಶ್ರೀ ಪರಿಸರಆಸ್ಟ್ರೋ ಸೆಂಟರ್ ಫಾರ್ಎಜ್ಯುಕೇಷನ್ | 25,000 | | |
| | ಸ್ವಾಮಿ ವಿಜ್ಞಾನ ಸ್ವರೂಪದಾಸ್‌ಜಿ ಭುಜಕಚ್ಛಗುಜರಾತ್‌ದತ್ತಿನಿಧಿ | 1,00,000 | | |
| | ಶ್ರೀ ಕೋಡಿಹಳ್ಳಿ ಲಕ್ಷ್ಮೀನಾರಾಯಣರಾಯರ ಸ್ಮಾರಕದತ್ತಿ | 1,00,000 | | |
| | ದತ್ತಿ ನಿಧಿ ಒಟ್ಟು ಮೊತ್ತ | **33,32,392** | | |
| | ದತ್ತಿನಿಧಿ ಮೊತ್ತದ ಮೇಲಿನ ಒಟ್ಟು ಬಡ್ಡಿ ಸ್ವೀಕೃತಿ (2017–18) | | **2,57,581.00** | **2,57,581.00** |

| | | | | |
|---|---|---|---|---|
| | ಘೋಷ್ವರೆ | | | |
| | ಕ್ರ.ಸಂ. 1ರ ಒಟ್ಟು ಮೊತ್ತ | | 5,97,75,000.00 | 5,98,50,000.00 |
| | ಕ್ರ.ಸಂ. 2ರ ಒಟ್ಟು ಮೊತ್ತ | | 34,00,000.00 | 50,49,317.00 |
| | ಕ್ರ.ಸಂ. 3ರ ಒಟ್ಟು ಮೊತ್ತ | | 8,00,000.00 | 6,71,580.00 |
| | ಕ್ರ.ಸಂ. 4ರ ಒಟ್ಟು ಮೊತ್ತ | | 5,00,000.00 | 75,000.00 |
| | ಕ್ರ.ಸಂ. 5ರ ಒಟ್ಟು ಮೊತ್ತ | | 2,00,000.00 | 1,96,900.00 |
| | ಕ್ರ.ಸಂ. 6ರ ಒಟ್ಟು ಮೊತ್ತ | | 18,00,000.00 | 19,07,190.00 |
| | ಕ್ರ.ಸಂ. 7ರ ಒಟ್ಟು ಮೊತ್ತ | | 2,00,000.00 | 7,10,445.00 |
| | ಕ್ರ.ಸಂ. 8ರ ಒಟ್ಟು ಮೊತ್ತ | | 6,00,000.00 | 5,42,662.00 |
| | ಕ್ರ.ಸಂ. 9ರ ಒಟ್ಟು ಮೊತ್ತ | | 8,44,86,562.00 | 5,99,44,189.00 |
| | ಕ್ರ.ಸಂ. 10ರ ಒಟ್ಟು ಮೊತ್ತ | | 1,73,73,361.00 | 1,82,94,482.00 |
| | ಕ್ರ.ಸಂ. 11ರ ಒಟ್ಟು ಮೊತ್ತ | | 6,73,25,553.00 | 6,73,25,553.00 |
| | ಕ್ರ.ಸಂ. 12ರ ಒಟ್ಟು ಮೊತ್ತ | | 2,57,581.00 | 2,57,581.00 |
| | **ಒಟ್ಟು ಮೊತ್ತ** | | **23,67,18,057.00** | **21,48,24,899.00** |

**Sd/-**
**ಅಪರ ನಿರ್ದೇಶಕರು,**
**ಬೆಂಗಳೂರು ಪ್ರಾಂತೀಯ ಕಛೇರಿ,**
**ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು**
**ಲೆಕ್ಕಪತ್ರ ಇಲಾಖೆ, ಬೆಂಗಳೂರು**

## ಅನುಬಂಧ–09

## ಆಯ–ವ್ಯಯದ ಭಿನ್ನತೆ

| ಅಂದಾಜು ಆಯ ಮತ್ತು ವಾಸ್ತವಿಕ ಸ್ವೀಕೃತಿಗಳ ವಿವರ | | | | | |
|---|---|---|---|---|---|
| ಕ್ರ.ಸಂ. | ವಿವರಗಳು | ಅಂದಾಜು ಆಯ | ವಾಸ್ತವಿಕ ಸೀಕೃತಿಗಳು | ವ್ಯತ್ಯಾಸ | ಶೇಕಡಾ (%) |
| 1 | ಸರ್ಕಾರದ ಅನುದಾನಗಳು | 5,97,75,000 | 5,98,50,000 | (+)75000 | (+)0.12 |
| 2 | ಶುಲ್ಕಗಳು (ದಾಖಲಾತಿ, ಪರೀಕ್ಷೆ, ಘಟಿಕೋತ್ಸನ ಇತ್ಯಾದಿ) | 69,00,000 | 86,10,432 | (+)17,10,432 | (+)24.78 |
| 3 | ಪ್ರಸಾರಾಂಗ | 6,00,000 | 5,42,662 | (–)57,338 | (–)90 |
| 4 | ಬ್ಯಾಂಕಿನಲ್ಲಿರುವ ನಗದು & ಬಡ್ಡಿಯ ಮೊತ್ತ | 8,44,86,562 | 5,99,44,189 | (–)2,45,42,373 | (–)70.9 |
| 5 | ಠೇವಣಿಗಳು & ಬಡ್ಡಿಯ ಮೊತ್ತ | 8,49,56,495 | 8,58,77,616 | (+)9,21,121 | (+)1.08 |
| | **ಒಟ್ಟು ಮೊತ್ತ ರೂ.** | **23,67,18,057** | **21,48,24,899** | **(–)2,18,93,158** | |
| | | | | | |
| **ಅಂದಾಜು ವ್ಯಯ ಮತ್ತು ವೆಚ್ಚಗಳ ವಿವರ** | | | | | |
| ಕ್ರ.ಸಂ. | ವಿವರಗಳು | ಅಂದಾಜು ವ್ಯಯ | ವಾಸ್ತವಿಕ ವೆಚ್ಚಗಳು | ವ್ಯತ್ಯಾಸ | ಶೇಕಡಾ (%) |
| 1 | ವೇತನಗಳು | 9,30,00,000 | 5,04,17,192 | (–)4,25,82,808 | (–)54.2 |
| 2 | ಆಡಳಿತಾಂಗ | 4,72,83,000 | 1,52,49,234 | (–)3,20,33,766 | (–)67.7 |
| 3 | ಅಧ್ಯಯನಾಂಗ | 97,00,000 | 10,50,274 | (–)86,49,726 | (–)89.17 |
| 4 | ನಿರ್ದೇಶನಾಲಯ | 44,50,000 | 6,58,151 | (–)37,91,849 | (–)85.21 |
| 5 | ಪರೀಕ್ಷಾಂಗ | 1,05,00,000 | 13,67,845 | (–)91,32,155 | (–)86.97 |
| 6 | ಪ್ರಸಾರಾಂಗ | 41,01,923 | 1,04,973 | (–)39,96,950 | (–)97.44 |
| 7 | ದತ್ತಿ ಪುರಸ್ಕಾರ | 2,57,581 | 3,32,176 | (+)74,595 | (+)28.95 |
| 8 | ಎಸ್.ಸಿ.ಪಿ &ಟಿ.ಎಸ್.ಪಿ | 6,73,25,553 | – | (–)6,73,25,553 | (–)100 |
| | **ಒಟ್ಟು ಮೊತ್ತರೂ.** | **23,66,18,057** | **6,91,79,845** | **(–)16,74,38,212** | |

**ಅಪರ ನಿರ್ದೇಶಕರು,**
**ಬೆಂಗಳೂರು ಪ್ರಾಂತೀಯ ಕಛೇರಿ,**
**ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು**
**ಲೆಕ್ಕಪತ್ರ ಇಲಾಖೆ, ಬೆಂಗಳೂರು**

## ಅನುಬಂಧ–11

### ಬ್ಯಾಂಕ್ ಪಾಸ್‌ಶೀಟ್‌ನಲ್ಲಿ ಸಿಗದಿರುವ ಡಿ.ಡಿ./ಚೆಕ್‌ಗಳ ವಿವರ

| ಕ್ರ.ಸಂ. | ರಸೀದಿ ಪುಸ್ತಕದ ಸಂಖ್ಯೆ | ರಸೀದಿ ಸಂಖ್ಯೆ& ದಿನಾಂಕ | ಡಿ.ಡಿ/ಚೆಕ್ ಸಂಖ್ಯೆ & ದಿನಾಂಕ | ಮೊತ್ತ (ರೂ. ಗಳಲ್ಲಿ) |
|---|---|---|---|---|
| 1 | 13 | 1246/02.08.2017 | 325600/20.07.2017 | 6,200 |
| 2 | 13 | 1405/07.09.2017 | 083051/14.08.2017 | 4,200 |
| 3 | 15 | 1429/12.09.2017 | 920104/01.08.2017 | 250 |
| 4 | 15 | 1481/16.09.2017 | 030579/30.08.2017 | 300 |
| 5 | 15 | 1481/16.09.2017 | 030581/30.08.2017 | 200 |
| 6 | 08 | 1558/09.10.2017 | 302671/27.09.2017 | 500 |
| 7 | 08 | 730/03.11.2017 | 928667/24.10.2017 | 1,000 |
| 8 | 08 | 735/03.11.2017 | 980793/16.10.2017 | 650 |
| 9 | 08 | 739/03.11.2017 | 947765/19.10.2017 | 650 |
| 10 | 20 | 795/01.12.2017 | 267810/27.11.2017 | 200 |
| 11 | 20 | 1963/25.05.2017 | 331298/12.04.2017 | 3,000 |
| 12 | 20 | 1991/04.07.2017 | 760408/03.07.2017 | 1,050 |
| 13 | 20 | 1975/15.06.2017 | 417062/15.06.2017 | 5,775 |
| | | | ಒಟ್ಟು ಮೊತ್ತ ರೂ. | **23,975** |

**Sd/-**
ಅಪರ ನಿರ್ದೇಶಕರು,
ಬೆಂಗಳೂರು ಪ್ರಾಂತೀಯ ಕಛೇರಿ,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು
ಲೆಕ್ಕಪತ್ರ ಇಲಾಖೆ, ಬೆಂಗಳೂರು

## ಅನುಬಂಧ–12

## 2017–18ನೇ ಸಾಲಿನಲ್ಲಿ ಪರೀಕ್ಷಾಂಗದ ವತಿಯಿಂದ ಕಿರಣ್ ಎಂಟರ್‌ಪ್ರೈಸಸ್ ಮತ್ತು ಮೆಹ್ರಾ ಕಂಪ್ಯೂಟರ್ಸ್ ಸಿಸ್ಟಮ್ ಲಿಮಿಟೆಡ್‌ರವರಿಗೆ ಪಾವತಿಸಲಾದ ಮೊತ್ತ

| ಕ್ರ.ಸಂ. | ಸಂಸ್ಥೆಯ ಹೆಸರು | ದಿನಾಂಕ | ಚೆಕ್ ನಂಬರ್ | ಮೊತ್ತ | ಟಿಡಿಎಸ್ 2% |
|---|---|---|---|---|---|
| 1 | ಕಿರಣ್ಎಂಟರ್ ಪ್ರೈಸಸ್ | 26.09.2017 | 348755 | 17230 | 352 |
| | | 20.09.2017 | 348752 | 27134 | 577 |
| | | 20.06.2017 | 024001 | 54797 | 1118 |
| ಒಟ್ಟು ಮೊತ್ತ | | | | **99,161** | **2,047** |
| 2 | ಮೆಹ್ರಾ ಕಂಪ್ಯೂಟರ್ಸ್ ಸಿಸ್ಟಮ್ ಲಿಮಿಟೆಡ್ | 13.10.2017 | 348769 | 358297 | 7312 |
| | | 15.12.2017 | 348783 | 35411 | 723 |
| | | 16.03.2018 | 348810 | 91414 | 1866 |
| | | 16.03.2018 | 832771 | 23128 | 472 |
| | | 31.05.2017 | 023976 | 489000 | – |
| | | 20.07.2017 | 024059 | 79846 | 1630 |
| | | 02.02.2018 | 348799 | 2191759 | 44730 |
| | | 16.03.2018 | 348811 | 31861 | 650 |
| | | 21.03.2018 | 348812 | 170838 | 3487 |
| ಒಟ್ಟು ಮೊತ್ತ | | | | **34,71,554** | **60,870** |

**1. ಕಿರಣ್ ಎಂಟರ್‌ಪ್ರೈಸಸ್ – 99,161 + 2,041 = 1,01,208**

**2. ಮೆಹ್ರಾ ಕಂಪ್ಯೂಟರ್ಸ್ ಸಿಸ್ಟಮ್ ಲಿಮಿಟೆಡ್ – 34,71,554 + 60,870 = 35,32,424**

**36,33,632**

**ಅಪರ ನಿರ್ದೇಶಕರು,**
**ಬೆಂಗಳೂರು ಪ್ರಾಂತೀಯ ಕಛೇರಿ,**
**ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು**
**ಲೆಕ್ಕಪತ್ರ ಇಲಾಖೆ, ಬೆಂಗಳೂರು**

**Criterion 7 - Institutional Values and Best Practices**

**7.1 Institutional Values and Social Responsibilities**

**7.1.18 The institution maintains complete transparency in its financial, academic, administrative and auxiliary functions**

**Link to Audit report**

**https://ksu.ac.in/wp-content/uploads/2023/04/ALLAUDITFILES.pdf**

**Link to supporting document**

**https://ksu.ac.in/wp-content/uploads/2023/04/7.1.18.jpeg**